ಶನಿವಾರ, ಮಾರ್ಚ್ 12, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರೀತಿಯ ಅಪ್ಪುಗೆ
ಯುದ್ಧಪೀಡಿತ ಉಕ್ರೇನ್‌ನಿಂದ ನವದೆಹಲಿಯ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶುಕ್ರವಾರ ಬಂದಿಳಿದ ವಿದ್ಯಾರ್ಥಿನಿಯನ್ನು ಸಂಬಂಧಿಯೊಬ್ಬರು ಬರಮಾಡಿಕೊಂಡರು



ವಿಧಾನಸಭೆಯಲ್ಲಿ ಯಡಿಯೂರಪ್ಪ – ಸಿದ್ದರಾಮಯ್ಯ ಪರಸ್ಪರ ಸವಾಲು

‘2023: ರಾಜ್ಯದಲ್ಲಿ ಯಾರಿಗೆ ಅಧಿಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ರಾಜ್ಯಗಳ ಚುನಾವಣಾ ಫಲಿತಾಂಶ ರಾಜ್ಯ ವಿಧಾನ ಸಭೆಯಲ್ಲಿ ಶುಕ್ರವಾರ ಸ್ವಾರಸ್ಯಕರ ಚರ್ಚೆಗೆ ವೇದಿಕೆಯಾಯಿತು. 2023 ರಲ್ಲಿ ನಡೆಯಲಿರುವ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ತಮ್ಮ ಪಕ್ಷಗಳೇ ಗೆದ್ದು ಅಧಿಕಾರ ಹಿಡಿಯುವುದಾಗಿ ಬಿಜೆಪಿಯ ಬಿ.ಎಸ್. ಯಡಿಯೂರಪ್ಪ ಮತ್ತು ಸಿದ್ದರಾಮಯ್ಯ ಪರಸ್ಪರ ಸವಾಲೆಸೆದರು.

ಈ ಚರ್ಚೆ ಲಘು ಧಾಟಿಯಲ್ಲಿ ಸಾಗಿದ್ದರಿಂದ ಕಾಂಗ್ರೆಸ್–ಬಿಜೆಪಿ ಸದಸ್ಯರ ಮಧ್ಯೆ ಹಾಸ್ಯ, ಕಿಚಾಯಿಸುವಿಕೆಗೂ ಕಾರಣವಾಯಿತು.

ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ಯಡಿಯೂರಪ್ಪ ಅವರು, ‘ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದೇ ಬಿಟ್ಟಿದ್ದೇವೆ ಎಂಬ ಭ್ರಮೆಯಲ್ಲಿ ಇದ್ದಾರೆ. ಬಸವರಾಜ ಬೊಮ್ಮಾಯಿ ಮಂಡಿಸಿದ ಬಜೆಟ್ ಹಿಡಿದುಕೊಂಡು ರಾಜ್ಯದಾದ್ಯಂತ ಪ್ರವಾಸ ಮಾಡಿ 130 ರಿಂದ 150 ಸ್ಥಾನಗಳನ್ನು ಗೆಲ್ಲಿಸಿಕೊಂಡು ಬರುತ್ತೇವೆ. ನಿಮ್ಮನ್ನು ದೂಳೀಪಟ ಮಾಡುತ್ತೇವೆ’ ಎಂದು ಸಿದ್ದರಾಮಯ್ಯ ಅವರನ್ನು ಉದ್ದೇಶಿಸಿ ಹೇಳಿದರು.

ಈ ಮಾತಿಗೆ ತಿರುಗೇಟು ನೀಡಿದ ಸಿದ್ದರಾಮಯ್ಯ, ‘ಅವಧಿಗೆ ಮುನ್ನವೇ ಮುಖ್ಯಮಂತ್ರಿ ಸ್ಥಾನದಿಂದ ಮುಕ್ತಗೊಳಿಸಿರುವುದರಿಂದ ಯಡಿಯೂರಪ್ಪ ಅವರು ನೋವಿನಿಂದ ತಮ್ಮ ಪಕ್ಷದವರ ಬಗ್ಗೆಯೇ ವ್ಯಂಗ್ಯದ ಮಾತುಗಳನ್ನು ಆಡಿರಬೇಕು. ಏಕೆಂದರೆ ರಾಜೀನಾಮೆ ನೀಡುವಾಗ ಕಣ್ಣೀರು ಹಾಕಿದ್ದರು. ಆ ನೋವಿನಿಂದಲೇ ಅವರು ರಾಜ್ಯ ಪ್ರವಾಸ ಮಾಡುತ್ತೇನೆಂದು ಹೇಳಿರಬೇಕು’ ಎಂದು ಕಾಲೆಳೆದರು.

‘ಅಧಿಕಾರಕ್ಕೆ ಬಂದೇ ಬಿಟ್ಟಿದ್ದೇವೆ ಎಂಬ ಭ್ರಮೆಯಲ್ಲಿ ಇಲ್ಲ. ಜನ ಮತ್ತೆ ನಮ್ಮನ್ನು ಅಧಿಕಾರಕ್ಕೆ ತರುತ್ತಾರೆ. ಕಾಂಗ್ರೆಸ್ ಪಕ್ಷದ ಸಿದ್ಧಾಂತ ಮತ್ತು ಕಾರ್ಯಕ್ರಮಗಳನ್ನು ಜನ ಒಪ್ಪಿದ್ದಾರೆ. ಬಿಜೆಪಿಯನ್ನು ಹೊರ ಹಾಕಲು ಜನ ತೀರ್ಮಾನ ಮಾಡಿದ್ದಾರೆ. ಅಧಿಕಾರದಲ್ಲಿದ್ದ ನಾಲ್ಕು ರಾಜ್ಯಗಳಲ್ಲಿ ಮತ್ತೆ ಗೆದ್ದಿದ್ದೀರಿ. ಪಂಜಾಬ್‌ನಲ್ಲಿ ನಮ್ಮ ತಪ್ಪಿನಿಂದ ಅಧಿಕಾರ ಕಳೆದುಕೊಂಡಿದ್ದೇವೆ. ಆದರೆ, ಕರ್ನಾಟಕದ ಸ್ಥಿತಿಯೇ ಬೇರೆ’ ಎಂದು ಸಿದ್ದರಾಮಯ್ಯ ಹೇಳಿದರು.

‘ಬಿಜೆಪಿಯನ್ನು ಸೋಲಿಸಲು ಜನ ತೀರ್ಮಾನ ಮಾಡಿದ್ದಾರೆ. ಜನರ ನಾಡಿ ಮಿಡಿತ ನಮಗೆ ಗೊತ್ತು.ನೀವಂತೂ (ಯಡಿಯೂರಪ್ಪ)ಸಿಎಂ ಆಗಲ್ಲ, ನಾವೇ ಅಧಿಕಾರಕ್ಕೆ ಬರೋದು. ನಿಮ್ಮ ಕನಸು ನನಸಾಗಲ್ಲ. ಆದರೆ ನಮ್ಮ ಕನಸು ನೈಜವಾದುದು’ ಎಂದರು.

‘ನಾನು ಮುಖ್ಯಮಂತ್ರಿ ಸ್ಥಾನಕ್ಕೆ ಸ್ವಯಂ ಪ್ರೇರಣೆಯಿಂದ ರಾಜೀನಾಮೆ ನೀಡಿದೆ. ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಮಾಡಿದೆವು. ಇದರಲ್ಲಿ ಯಾವುದೇ ಒತ್ತಡವಿಲ್ಲ. ಬೊಮ್ಮಾಯಿ ಮಂಡಿಸಿದ ಬಜೆಟ್ ಅನ್ನು ಹಿಡಿದುಕೊಂಡು ಹಳ್ಳಿ ಹಳ್ಳಿಗೂ ಹೋಗುತ್ತೇವೆ’ ಎಂದರು ಯಡಿಯೂರಪ್ಪ.

‘ಸಿದ್ದರಾಮಯ್ಯ ಹೇಳಿದ್ದು ಸತ್ಯ ಆಗಲ್ಲ’



‘ಸಿದ್ದರಾಮಯ್ಯ ಏನು ಹೇಳುತ್ತಾರೊ ಅದಕ್ಕೆ ತದ್ವಿರುದ್ಧವಾಗಿ ಎಲ್ಲವೂ ನಡೆಯುತ್ತವೆ. 2018 ರ ಚುನಾವಣೆ ಸಂದರ್ಭದಲ್ಲಿ ಅವರಪ್ಪನಾಣೆಗೂ ಎಚ್.ಡಿ.ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ಮುಖ್ಯಮಂತ್ರಿ ಆಗುವುದಿಲ್ಲ. ಕಾಂಗ್ರೆಸ್ ಪಕ್ಷವೇ ಅಧಿಕಾರಕ್ಕೆ ಬರುತ್ತದೆ ಎಂದಿದ್ದರು. ಈ ಇಬ್ಬರೂ ಮುಖ್ಯಮಂತ್ರಿ ಆಗಿದ್ದು ಸತ್ಯ. ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಬರಲಿಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಿಚಾಯಿಸಿದರು.

‘ಬಿಜೆಪಿ ಅಧಿಕಾರಕ್ಕೆ ಬರಲ್ಲ ಎಂದೇ ಹೇಳುತ್ತಿದ್ದೀರಿ. ನಿಮ್ಮ ಮಾತು ಸುಳ್ಳಾಗಿ ಬಿಜೆಪಿಯೇ ಅಧಿಕಾರಕ್ಕೆ ಬರುತ್ತದೆ. ನಮ್ಮ ನಾಯಕ ಯಡಿಯೂರಪ್ಪ ಅವರ ಶ್ರಮ ಮತ್ತು ಪ್ರಯತ್ನದ ಮೂಲಕ ಮತ್ತೆ ಅಧಿಕಾರಕ್ಕೆ ಬರುತ್ತೇವೆ’ ಎಂದರು.

ಕರ್ನಾಟಕದಲ್ಲಿ ನಮ್ಮದು ಮಾತ್ರ ಪ್ರಾದೇಶಿಕ ಪಕ್ಷ. 2023 ರಲ್ಲಿ ಜನ ನಮ್ಮ ಪಕ್ಷವನ್ನೇ ಅಧಿಕಾರಕ್ಕೆ ತರುತ್ತಾರೆ. ನಮ್ಮವರೇ ಮುಖ್ಯಮಂತ್ರಿ ಆಗುತ್ತಾರೆ

ಬಂಡೆಪ್ಪ ಕಾಶೆಂಪೂರ, ಜೆಡಿಎಸ್ ಶಾಸಕ



ವಿಜಯದ ಸಂಕೇತ

ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಿದ ಬೆನ್ನಲ್ಲೇ ಶುಕ್ರವಾರ ತವರು ರಾಜ್ಯ ಗುಜರಾತ್‌ಗೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಅಹಮದಾಬಾದ್‌ನಲ್ಲಿ ರೋಡ್ ಷೋ ನಡೆಸಿ ಕಾರ್ಯಕರ್ತರತ್ತ ವಿಜಯದ ಸಂಕೇತ ತೋರಿದರು –ಎಎಫ್‌ಪಿ ಚಿತ್ರ

ಸುದ್ದಿ 12

ಆಕಸ್ಮಿಕವಾಗಿ ಪಾಕ್ ನೆಲಕ್ಕೆ ಅಪ್ಪಳಿಸಿದ ಭಾರತದ ಸೂಪರ್‌ಸಾನಿಕ್ ಕ್ಷಿಪಣಿ

ನವದೆಹಲಿ(ಪಿಟಿಐ): ಭಾರತ ಸೇನೆಯ ಶರವೇಗದ ಸೂಪರ್ ಸಾನಿಕ್ ಕ್ಷಿಪಣಿಯೊಂದು ನಿರ್ವಹಣೆ ಮಾಡುವಾಗ ಆಕಸ್ಮಿಕವಾಗಿ ಸಿಡಿದು ಪಾಕಿಸ್ತಾನದ ನೆಲದ ಮೇಲೆ ಈಚೆಗೆ ಬಿದ್ದಿದೆ.

ಮಾರ್ಚ್ 9ರಂದು ಸಂಜೆ 6.43ಕ್ಕೆ (ಸ್ಥಳೀಯ ಕಾಲಮಾನ) ಭಾರತದ ಸೂರತ್‌ಗಡದಿಂದ ಹಾರಿದ ‘ಸೂಪರ್ ಸಾನಿಕ್ ಫ್ಲೈಯಿಂಗ್ ಆಬ್ಜೆಕ್ಟ್’ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಮಿಯಾನ್ ಚುನ್ನು ನಗರದ ಸಮೀಪ ನೆಲಕ್ಕೆ ಅಪ್ಪಳಿಸಿದೆ.

ದಿನನಿತ್ಯದ ನಿರ್ವಹಣೆಯ ಸಂದರ್ಭದಲ್ಲಿ ತಾಂತ್ರಿಕ ದೋಷದಿಂದ ಆಕಸ್ಮಿಕವಾಗಿ ಕ್ಷಿಪಣಿ ಹಾರಿದೆ ಎಂದು ಭಾರತದ ರಕ್ಷಣಾ ಸಚಿವಾಲಯ ಶುಕ್ರವಾರ ಸ್ಪಷ್ಟನೆ ನೀಡಿದೆ.

‘ಸಾಮಾನ್ಯ ನಿರ್ವಹಣೆ ಹಂತದಲ್ಲಿ ಆಗಿರುವ ತಾಂತ್ರಿಕ ದೋಷದಿಂದಾಗಿ ಬುಧವಾರ ಪಾಕಿಸ್ತಾನದ ಭೂ ಪ್ರದೇಶಕ್ಕೆ ಕ್ಷಿಪಣಿ ಚಿಮ್ಮಿದೆ. ಇದು ತುಂಬಾ ವಿಷಾದನೀಯ. ಈ ಘಟನೆಯನ್ನು ನಾವು ಗಂಭೀರವಾಗಿ ಪರಿಗಣಿಸಿದ್ದು, ಉನ್ನತ ಮಟ್ಟದ ತನಿಖೆಗೆ ಆದೇಶಿಸಿದ್ದೇವೆ’ ಎಂದು ರಕ್ಷಣಾ ಸಚಿವಾಲಯದ ಪ್ರಕಟಣೆ ಹೇಳಿದೆ.

ಇದಕ್ಕೂ ಮೊದಲು, ಭಾರತದ ಕ್ಷಿಪಣಿ ತನ್ನ ವಾಯು-ಪ್ರದೇಶವನ್ನು ಉಲ್ಲಂಘಿಸಿದೆ ಎಂದು ಪಾಕಿಸ್ತಾನ ದೂರಿತ್ತು. ಈ ಸಂಬಂಧ ಪಾಕ್ ರಾಜತಾಂತ್ರಿಕ ಅಧಿಕಾರಿಗಳು ವಿದೇಶಾಂಗ ಕಚೇರಿಗೆ ಭಾರತೀಯ ರಾಜತಾಂತ್ರಿಕರನ್ನು ಕರೆಸಿಕೊಂಡು, ತೀವ್ರ ಪ್ರತಿರೋಧ ವ್ಯಕ್ತಪಡಿಸಿದ್ದರು. ಈ ಘಟನೆಯ ಬಗ್ಗೆ ಪಾರದರ್ಶಕ ಮತ್ತು ವಸ್ತುನಿಷ್ಠ ತನಿಖೆಯಾಗಬೇಕು ಎಂದು ಒತ್ತಾಯಿಸಿದ್ದರು.

ಸುಮಾರು 40 ಸಾವಿರ ಅಡಿ ಎತ್ತರದಲ್ಲಿ ಹಾರಿ ಬಂದಿರುವ ಈ ಸೂಪರ್ ಸಾನಿಕ್ ಕ್ಷಿಪಣಿಯು, 3 ನಿಮಿಷ ಮತ್ತು 44 ಸೆಕೆಂಡುಗಳಲ್ಲಿ ಪಾಕಿಸ್ತಾನದೊಳಗೆ 124 ಕಿಲೋಮೀಟರ್ ದೂರಕ್ಕೆ ಬಂದು ಬಿದ್ದಿದೆ ಎಂದು ಪಾಕಿಸ್ತಾನದ ವಾಯುಪಡೆಯ ವೈಸ್ ಮಾರ್ಷಲ್ ತಾರಿಕ್ ಜಿಯಾ ಹೇಳಿದ್ದಾರೆ.

ಮಹದೇಶ್ವರ ಬೆಟ್ಟ ಹುಲಿ ಸಂರಕ್ಷಿತ ಪ್ರದೇಶ




ಬೆಂಗಳೂರು: ಚಾಮರಾಜನಗರ ಜಿಲ್ಲೆಯ ‘ಮಲೆ ಮಹದೇಶ್ವರ ವನ್ಯಜೀವಿ ಧಾಮ’ವನ್ನು ‘ಮಲೆ ಮಹದೇಶ್ವರ ಹುಲಿ ಸಂರಕ್ಷಿತ ಪ್ರದೇಶ’ವೆಂದು ಘೋಷಿಸಲು ಶುಕ್ರವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಮಹದೇಶ್ವರ ಬೆಟ್ಟ, ಹನೂರು, ಯಡೆಯಾರಳ್ಳಿ ರಕ್ಷಿತ ಅರಣ್ಯವನ್ನು ಒಗ್ಗೂಡಿಸಿ 906 ಚದರ ಕಿ.ಮೀ ವಿಸ್ತೀರ್ಣವನ್ನು ಇದರ ವ್ಯಾಪ್ತಿಗೆ ತರಲಾಗುವುದು. ಈ ಸಂಬಂಧ 2018 ರ ಹುಲಿ ಗಣತಿಯ ಸಂದರ್ಭದಲ್ಲಿ ರಾಜ್ಯ ಸರ್ಕಾರ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ರಾಜ್ಯದಲ್ಲಿ ಒಟ್ಟು 5 ಹುಲಿ ಸಂರಕ್ಷಿತ ಪ್ರದೇಶಗಳಿದ್ದು, ಮಲೆ ಮಹದೇಶ್ವರ ಹುಲಿ ಸಂರಕ್ಷಿತ ಆರನೆಯದಾಗಿದೆ. ಇಲ್ಲಿ ಸುಮಾರು 18 ರಿಂದ 20 ಹುಲಿಗಳಿವೆ.

ಒಬಿಸಿ ಮೀಸಲಾತಿಯೊಂದಿಗೇ ಚುನಾವಣೆ: ಕೆ.ಎಸ್. ಈಶ್ವರಪ್ಪ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಇರುವ ರಾಜಕೀಯ ಮೀಸಲಾತಿಯನ್ನು ಖಾತರಿಪಡಿಸಿದ ಬಳಿಕವೇ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಜೆಡಿಎಸ್‌ನ ಮರಿತಿಬ್ಬೇಗೌಡರ ಪ್ರಶ್ನೆಗೆ ಉತ್ತರಿಸಿದ ಅವರು, ‘ಮೂರು ಹಂತದ ಪರಿಶೀಲನೆ ಬಳಿಕವೇ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಬೇಕು ಎಂದು ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ. ಅದನ್ನು ಪಾಲಿಸುವುದು ಅನಿವಾರ್ಯ. ಈ ವಿಚಾರದಲ್ಲಿ ಹಿಂದುಳಿದ ವರ್ಗಗಳಿಗೆ ಅನ್ಯಾಯ ಆಗಲು ಸರ್ಕಾರ ಬಿಡುವುದಿಲ್ಲ’ ಎಂದರು.

ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣೆಗೆ ಸರ್ಕಾರ ಸಿದ್ಧತೆ ನಡೆಸಿತ್ತು. ಆದರೆ, ಕ್ಷೇತ್ರ ಮರುವಿಂಗಡಣೆ ಪ್ರಶ್ನಿಸಿ 888 ಆಕ್ಷೇಪಣೆಗಳು ಸಲ್ಲಿಕೆಯಾಗಿದ್ದವು. ಈ ಕಾರಣದಿಂದ ನಿವೃತ್ತ ಐಎಎಸ್ ಅಧಿಕಾರಿ ಎಂ.ಲಕ್ಷ್ಮೀನಾರಾಯಣ್ ನೇತೃತ್ವದಲ್ಲಿ ಕ್ಷೇತ್ರ ಮರುವಿಂಗಡಣೆ ಆಯೋಗ ರಚಿಸಲಾಯಿತು. ಅದು ಪ್ರಕ್ರಿಯೆ ನಡೆಸುತ್ತಿರುವಾಗಲೇ ಹಿಂದುಳಿದ ವರ್ಗಗಳ ಮೀಸಲಾತಿಗೆ ಸಂಬಂಧಿಸಿದ ತೊಡಕು ಎದುರಾಗಿದೆ. ಈ ಸಮಸ್ಯೆ ಬಗೆಹರಿಯದೇ ಚುನಾವಣೆ ನಡೆಸುವುದು ಸಾಧ್ಯವಿಲ್ಲ ಎಂದು ಹೇಳಿದರು.

ಈಗಲೇ ಚುನಾವಣೆ ನಡೆಸಿದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮಾತ್ರ ಮೀಸಲಾತಿ ನೀಡಲು ಸಾಧ್ಯ. ಹಿಂದುಳಿದ ವರ್ಗಗಳಿಗೆ ಮೀಸಲಾದ ಸ್ಥಾನಗಳನ್ನು ಸಾಮಾನ್ಯ ಎಂದು ಘೋಷಿಸಬೇಕಾಗುತ್ತದೆ. ಆ ರೀತಿ ಹಿಂದುಳಿದ ವರ್ಗಗಳಿಗೆ ಅನ್ಯಾಯ ಮಾಡುವುದಿಲ್ಲ. ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಖಾತರಿಪಡಿಸಿದ ಬಳಿಕವೇ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸುತ್ತೇವೆ ಎಂದು ಈಶ್ವರಪ್ಪ ಭರವಸೆ ನೀಡಿದರು.

ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ಜಾತಿ ಗಣತಿ ವರದಿಯಲ್ಲಿನ ಅಂಕಿಅಂಶಗಳನ್ನು ಬಳಸಿಕೊಂಡು ಮೀಸಲಾತಿ ಖಾತರಿಪಡಿಸಬೇಕು ಎಂದು ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಒತ್ತಾಯಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಈಶ್ವರಪ್ಪ, ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿಗೆ ಸಂಬಂಧಿಸಿದಂತೆ ಮೂರು ಹಂತದ ಪರಿಶೀಲನೆಗೆ ಪ್ರತ್ಯೇಕ ಆಯೋಗ ನೇಮಿಸಲಾಗುವುದು ಎಂದರು.

‘ಮ್ಯಾಚ್ ಫಿಕ್ಸಿಂಗ್ ಗೊತ್ತಾಗಲ್ಲ’

‘ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜು ಸಲ್ಲಿಸಿರುವ ಜಾತಿ ಗಣತಿ ವರದಿಯನ್ನು ಸ್ವೀಕರಿಸಿ, ಮೀಸಲಾತಿ ಬಿಕ್ಕಟ್ಟು ಪರಿಹಾರಕ್ಕೆ ಬಳಸಬೇಕು’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಆಗ್ರಹಿಸಿದರು.

‘ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗಲೇ ಜಾತಿ ಗಣತಿ ವರದಿ ಸಿದ್ಧವಾಗಿತ್ತು. ಆಗ ಏಕೆ ಸ್ವೀಕಾರ ಮಾಡಲಿಲ್ಲ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಪ್ರಶ್ನೆ ಹಾಕಿದರು.

‘ಸಿದ್ದರಾಮಯ್ಯ–ಈಶ್ವರಪ್ಪ ನಡುವಿನ ಮ್ಯಾಚ್ ಫಿಕ್ಸಿಂಗ್ ನಮಗೆ ಗೊತ್ತಾಗುವುದಿಲ್ಲ’ ಎಂದು ಹರಿಪ್ರಸಾದ್ ಕಾಲೆಳೆದರು. ‘ಅದು ನಿಮಗೆ ಗೊತ್ತಾಗಲು ಸಾಧ್ಯವೇ ಇಲ್ಲ ಬಿಡಿ’ ಎಂದು ಈಶ್ವರಪ್ಪ ಪ್ರತ್ಯುತ್ತರ ನೀಡಿದರು.

ಪರಿವರ್ತಿತ 19 ಹುದ್ದೆ ಭರ್ತಿಗೆ ಮಾತ್ರವೇ ತಡೆ

ಬೆಂಗಳೂರು: ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಪದವಿ ಕಾಲೇಜುಗಳಲ್ಲಿ ಖಾಲಿಯಿರುವ ಒಟ್ಟು 1,242 ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಶನಿವಾರ ಮತ್ತು ಭಾನುವಾರ (ಮಾ.12 ಮತ್ತು 13ರಂದು) ನಡೆಯುತ್ತಿರುವ ಪರೀಕ್ಷೆಗೆ ಹೈಕೋರ್ಟ್ ಹಸಿರು ನಿಶಾನೆ ತೋರಿದೆ.

ಖಾಲಿ ಇರುವ ಪ್ರಾಣಿಶಾಸ್ತ್ರ ಹಾಗೂ ಸಸ್ಯಶಾಸ್ತ್ರ ವಿಷಯಗಳಿಗೆ ಪರಿವರ್ತಿಸಲಾದ ಮನೋವಿಜ್ಞಾನ ವಿಭಾಗದ 19 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡದಂತೆ ಮಧ್ಯಂತರ ತಡೆ ನೀಡಿದೆ.

ಕೆ.ವಿಶ್ವನಾಥ್ ಮತ್ತು ಇತರರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಜಿ.ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿ ‘ಮನೋವಿಜ್ಞಾನ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಮಾತ್ರ ತಡೆ ನೀಡಲಾಗಿದೆ’ ಎಂದು ಹೇಳಿದೆ. ವಿಚಾರಣೆಯನ್ನು ಏಪ್ರಿಲ್ 4 ಕ್ಕೆ ಮುಂದೂಡಿದೆ.

ಕುಲ್ಗಾಂ: ಮತ್ತೊಬ್ಬ ಸರಪಂಚನ ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿ ಶುಕ್ರವಾರ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಸರಪಂಚ (ಗ್ರಾಮ ಪಂಚಾಯಿತಿ ಮುಖ್ಯಸ್ಥ)ರೊಬ್ಬರು ಉಗ್ರರ ಗುಂಡಿಗೆ ಬಲಿಯಾಗಿದ್ದಾರೆ. ಶಬೀರ್ ಅಹ್ಮದ್ ಮಿರ್ ಹತ್ಯೆಯಾದವರು.

ಪಂಜಾಬ್: 16ರಂದು ಮಾನ್ ಪ್ರಮಾಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟವಾದ ಬೆನ್ನಿಗೆ ಸರ್ಕಾರ ರಚನೆಯ ಪ್ರಯತ್ನಗಳು ತೆರೆಮರೆಯಲ್ಲಿ ಆರಂಭವಾಗಿವೆ. ಪಂಜಾಬ್‌ನಲ್ಲಿ ಎಎಪಿ ಭಾರಿ ಬಹುಮತದಿಂದ ಗೆದ್ದಿದೆ. ಎಎಪಿಯ ಮುಖ್ಯಮಂತ್ರಿ ಅಭ್ಯರ್ಥಿ ಭಗವಂತ ಮಾನ್ ಅವರು ಇದೇ 16ರಂದು ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಉತ್ತರ ಪ್ರದೇಶ, ಮಣಿಪುರ, ಉತ್ತರಾಖಂಡ ಮತ್ತು ಗೋವಾದಲ್ಲಿ ಬಿಜೆಪಿ ಗೆದ್ದಿದೆ. ಇದೇ 18ರವರೆಗೆ ಈ ಯಾವುದೇ ರಾಜ್ಯದಲ್ಲಿ ಮುಖ್ಯಮಂತ್ರಿಯ ಪ್ರಮಾಣವಚನ ನಡೆಯುವುದಿಲ್ಲ ಎಂದು ಬಿಜೆಪಿಯ ಮೂಲಗಳು ಹೇಳಿವೆ. 18ರಂದು ಹೋಳಿ ಹಬ್ಬ ಇದೆ. ಅಲ್ಲಿಯವರೆಗೆ ಶುಭಕಾರ್ಯ ನಡೆಸುವುದು ಸೂಕ್ತವಲ್ಲ ಎಂಬುದು ಇದಕ್ಕೆ ಕಾರಣ.

ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥ ಮತ್ತು ಮಣಿಪುರದಲ್ಲಿ ಬಿರೆನ್ ಸಿಂಗ್ ಅವರು ಮುಖ್ಯಮಂತ್ರಿಗಳಾಗಿ ಮುಂದುವರಿಯುವುದು ಬಹುತೇಕ ಖಚಿತವಾಗಿದೆ. ಈಶಾನ್ಯದಲ್ಲಿ ಮಿತ್ರ ಪಕ್ಷಗಳ ನೆರವು ಇಲ್ಲದೆ ಬಿಜೆಪಿ ಅಧಿಕಾರಕ್ಕೆ ಬಂದ ಎರಡನೇ ರಾಜ್ಯ ಮಣಿಪುರ. ಹಾಗಾಗಿ, ಬಿರೆನ್ ಅವರು ಸ್ಥಾನ ಉಳಿಸಿಕೊಳ್ಳುವುದು ಖಚಿತ ಎನ್ನಲಾಗಿದೆ. ಅರುಣಾಚಲ ಪ್ರದೇಶದಲ್ಲಿಯೂ ಬಿಜೆಪಿ ಸ್ವಂತ ಬಲದಿಂದ ಅಧಿಕಾರದಲ್ಲಿದೆ.

ಕಳೆದ ಅವಧಿಯಲ್ಲಿ ಉತ್ತರಾಖಂಡದಲ್ಲಿ ಬಿಜೆಪಿ ಮೂವರು ಮುಖ್ಯಮಂತ್ರಿಗಳನ್ನು ಬದಲಾಯಿಸಿತ್ತು. ಚುನಾವಣೆ ಸಂದರ್ಭದಲ್ಲಿ ಪುಷ್ಕರ್ ಸಿಂಗ್ ಧಾಮಿ ಅವರು ಮುಖ್ಯಮಂತ್ರಿಯಾಗಿದ್ದರು. ಧಾಮಿ ಅವರು ಸೋತಿದ್ದಾರೆ. ಹಾಗಿದ್ದರೂ ಧಾಮಿ ಅವರನ್ನು ಮುಖ್ಯಮಂತ್ರಿಯಾಗಿ ಮುಂದುವರಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಗೋವಾದಲ್ಲಿ ಪ್ರಮೋದ್ ಸಾವಂತ್ ಮುಖ್ಯಮಂತ್ರಿಯಾಗಿ ಮುಂದುವರಿಯುವ ಸಾಧ್ಯತೆ ಇದೆ. ವಿಶ್ವಜಿತ್ ರಾಣೆ ಅವರಿಗೆ ಮುಖ್ಯಮಂತ್ರಿ ಸ್ಥಾನ ಸಿಕ್ಕರೂ ಅಚ್ಚರಿ ಇಲ್ಲ ಎಂದು ಕೇಂದ್ರ ಸಚಿವರೊಬ್ಬರು ಹೇಳಿದ್ದಾರೆ.

ಶನಿವಾರ, ಮಾರ್ಚ್ 12, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 71 | ಪುಟ 22

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಬಿಸಿಲಿನ ತಾಪ ಹೆಚ್ಚಿದಂತೆ ಮಹಿಳೆಯರಲ್ಲಿ ಹಲವು ಬಗೆಯ ಆರೋಗ್ಯ ಸಮಸ್ಯೆಗಳು ಬಾಧಿಸುತ್ತವೆ. ಬೇಸಿಗೆ ಆರಂಭದಲ್ಲೇ ಈ ಬಗ್ಗೆ ಮುನ್ನೆಚ್ಚರಿಕೆ ವಹಿಸಿದರೆ ಉತ್ತಮ



ಚರ್ಚೆ ರಾಜ್ಯದ ವಿವಿಧ ಭಾಗಗಳಲ್ಲಿ ರೋಪ್ ವೇ ನಿರ್ಮಾಣ ಯೋಜನೆ ಸರಿಯಾದ ನಿರ್ಧಾರವೇ? 9

ಸೇನಾ ಹೆಲಿಕಾಪ್ಟರ್ ಪತನ ಸಹ ಪೈಲಟ್ ದುರ್ಮರಣ 12

‘₹75 ಸಾವಿರ ಕೋಟಿ ಬಿಲ್ ಬಾಕಿ’ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,550 ▲	16,630 ▲	₹53,620 (ಬೆಂಗಳೂರು) ▼	₹70,900 (ಬೆಂಗಳೂರು) ▼	76.44 ▼



ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ಆರ್‌ಬಿಐ ನಿರ್ಬಂಧ 10

ಚಿನಕುರಳಿ

ಪ್ರಕಾಶ್ ಶೆಟ್ಟಿ



5963 ಗ್ರಾಮಗಳಲ್ಲಿ ಸೇವೆ ಲಭ್ಯ • ಬಜೆಟ್ ಘೋಷಣೆ ಜಾರಿಗೆ ಒಪ್ಪಿಗೆ

ಇಡೀ ರಾಜ್ಯಕ್ಕೆ ‘ಗ್ರಾಮ ಒನ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಒನ್’, ‘ಕರ್ನಾಟಕ ಒನ್’ ಮಾದರಿಯಲ್ಲೇ ಸರ್ಕಾರಿ ಸೇವೆಗಳನ್ನು ಗ್ರಾಮಸ್ಥರಿಗೆ ತಲುಪಿಸುವ ‘ಗ್ರಾಮ ಒನ್’ ಯೋಜನೆಯನ್ನು ರಾಜ್ಯ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಜಾರಿಗೊಳಿಸಲು ಶುಕ್ರವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಈಗಾಗಲೇ ಮೊದಲ ಹಂತದಲ್ಲಿ 12 ಜಿಲ್ಲೆಗಳ 3,026 ಗ್ರಾಮ ಪಂಚಾಯಿತಿಗಳಲ್ಲಿ ಈ ಯೋಜನೆಗೆ ಜನವರಿಯಲ್ಲಿ ಚಾಲನೆ ನೀಡಲಾಗಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇತ್ತೀಚೆಗೆ ಮಂಡಿಸಿದ ಬಜೆಟ್‌ನಲ್ಲಿ ಈ ಯೋಜನೆ ರಾಜ್ಯ ವ್ಯಾಪಿ ಜಾರಿಗೊಳಿಸುವುದಾಗಿ ಪ್ರಕಟಿಸಿದ್ದರು. ಇದರಿಂದ ಹೊಸದಾಗಿ 2,937 ಗ್ರಾಮ ಪಂಚಾಯಿತಿಗಳಲ್ಲಿ ಯೋಜನೆ ಜಾರಿ ಆಗಲಿದೆ. ಒಟ್ಟು 5963 ಗ್ರಾಮ ಪಂಚಾಯಿತಿಗಳು ಈ ಯೋಜನೆ ವ್ಯಾಪ್ತಿಗೆ ಒಳಪಡಲಿವೆ.

ಗ್ರಾಮ ಒನ್ ಸೇವೆಯಲ್ಲಿ ಸೇವಾ ಸಿಂಧುವಿನ ಎಲ್ಲ 750 ಕ್ಕೂ ಹೆಚ್ಚು ಸೇವೆಗಳೂ ಸಿಗುತ್ತವೆ. ಸಕಾಲ ಸೇವೆಗಳು, ಆರ್‌ಟಿಐ ಸೇವೆಗಳು, ಸಿಎಂಆರ್‌ಎಫ್ ಸೇವೆಗಳು, ಮೈಕ್ರೋ ಬ್ಯಾಂಕಿಂಗ್ ಸೇವೆಗಳು (ಅಲ್ಪಾವಧಿ ಠೇವಣಿ, ಹಿಂಪಡೆಯುವಿಕೆ, ಬಾಕಿ ವಿಚಾರಣೆ, ಆಧಾರ್ ನವೀಕರಣ ಸೇರಿ ವಿವಿಧ ಬ್ಯಾಂಕಿಂಗ್ ಸೇವೆಗಳು ಲಭ್ಯವಿರುತ್ತವೆ). ಆಯುಷ್ಮಾನ್ ಭಾರತ, ಆರ್‌ಟಿಸಿ, ಸಂಧ್ಯಾ ಸುರಕ್ಷಾ ಕಾರ್ಡ್, ರಹವಾಸಿ ಪ್ರಮಾಣಪತ್ರ ಮುಂತಾದ ಪ್ರಮಾಣ ಪತ್ರಗಳನ್ನೂ ಪಡೆಯಬಹುದು.

ಕರ್ನಾಟಕ ವಿದ್ಯುತ್ ನಿಗಮಕ್ಕೆ ₹2,500 ಕೋಟಿ ಬ್ಯಾಂಕ್ ಪಡೆಯಲು ಸರ್ಕಾರದಿಂದ ಖಾತರಿ ನೀಡುವುದಕ್ಕೂ ಸಂಪುಟ ಸಭೆ ಒಪ್ಪಿಗೆ ನೀಡಿತು.

ವಿತ್ತೀಯ ಹೊಣೆಗಾರಿಕೆ ಮಸೂದೆಗೆ ಅಸ್ತು: ರಾಜ್ಯ ಸರ್ಕಾರ ಜಿಎಸ್‌ಡಿಪಿಯ ಮಿತಿ ಶೇ 25 ನ್ನೂ ಮೀರಿ ಹೆಚ್ಚು ಸಾಲವನ್ನು ಪಡೆಯುವ ಉದ್ದೇಶಕ್ಕಾಗಿ ‘ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಮಸೂದೆ-2022 ಕ್ಕೆ ಒಪ್ಪಿಗೆ ನೀಡಲಾಯಿತು. ಸದ್ಯಕ್ಕೆ ಆ ಮಿತಿ ಶೇ 27 ಇದೆ. ರಾಜ್ಯ ಸರ್ಕಾರ ಕಳೆದ ವರ್ಷವೂ ಹೆಚ್ಚು ಸಾಲ ಪಡೆಯಲು ಮಸೂದೆಗೆ ತಿದ್ದುಪಡಿ ಮಾಡಿತ್ತು.

ಕೃಷಿ ಪಂಪ್‌ಸೆಟ್‌ಗೆ ಸೌರಶಕ್ತಿ : ಸಂಪುಟ ಸಭೆ ಒಪ್ಪಿಗೆ

ರಾಜ್ಯದಲ್ಲಿ ಜಾಲಮುಕ್ತ ಸೌರ ಪಂಪ್‌ಸೆಟ್ ಯೋಜನೆ ಜಾರಿಗೊಳಿಸಲು ಪಿಎಂ ಕುಸುಮ್-ಬಿ ಗೆ (ಕಿಸಾನ್ ಊರ್ಜಾ ಸುರಕ್ಷಾ ಏವಂ ಉತ್ಥಾನ್ ಮಹಾ ಅಭಿಯಾನ್) ಸಂಪುಟ ಸಭೆ ಒಪ್ಪಿಗೆ ನೀಡಿದೆ. 10 ಸಾವಿರ ರೈತರಿಗೆ ಇದರ ಸೌಲಭ್ಯ ಸಿಗುತ್ತದೆ.ರೈತರ ಹೊಲದಲ್ಲಿ ಸೋಲಾರ್ ಪ್ಯಾನಲ್ ಅಳವಡಿಸಿ ಅಲ್ಲಿ ಉತ್ಪಾದನೆಯಾದ ವಿದ್ಯುತ್ ಅನ್ನು ಪಂಪ್‌ಸೆಟ್‌ಗಳಿಗೆ ಬಳಸಬೇಕಾಗುತ್ತದೆ. ಹೀಗಾಗಿ ಇದಕ್ಕೆ ಯಾವುದೇ ವಿದ್ಯುತ್ ಜಾಲದಿಂದ ಸಂಪರ್ಕ ಪಡೆಯಬೇಕಾದ ಅಗತ್ಯವಿಲ್ಲ. ಯೋಜನೆ ಜಾರಿಗೆ ₹307.23 ಕೋಟಿ ವೆಚ್ಚವಾಗಲಿದ್ದು, ರಾಜ್ಯ ಸರ್ಕಾರ ₹106.97 ಕೋಟಿ ಭರಿಸಲಿದೆ. ಉಳಿದ ಹಣವನ್ನು ಕೇಂದ್ರ ಸರ್ಕಾರ ನೀಡುತ್ತದೆ ಎಂದು ಮೂಲಗಳು ತಿಳಿಸಿವೆ. ಈ ಯೋಜನೆ ಹೊಸ ಪಂಪ್‌ಸೆಟ್‌ಗಳಿಗೆ ಮಾತ್ರ ಅನ್ವಯವಾಗುತ್ತದೆ. 3 ಎಚ್‌ಪಿ ಹೊಂದಿರುವ 250, 5 ಎಚ್‌ಪಿ ಹೊಂದಿರುವ 750 ಹಾಗೂ 7.5 ಎಚ್‌ಪಿ ಪಂಪ್‌ಸೆಟ್ ಹೊಂದಿರುವ 9,000 ರೈತರಿಗೆ ಈ ಸೌಲಭ್ಯ ನೀಡಲಾಗುತ್ತದೆ. ಫಲಾನುಭವಿಗಳನ್ನು ಕ್ರೆಡೆಲ್ ಸಂಸ್ಥೆಯ ಮೂಲಕ ಆನ್‌ಲೈನ್ ಮೂಲಕ ಆಯ್ಕೆ ಮಾಡಲಾಗುತ್ತದೆ. ಯೋಜನೆಯ ಶೇ 30 ರಷ್ಟು ರಾಜ್ಯ ಸರ್ಕಾರ, ಶೇ 30 ಕೇಂದ್ರ ಸರ್ಕಾರ ಹಾಗೂ ಶೇ 40 ರಷ್ಟನ್ನು ರೈತರು ಬ್ಯಾಂಕ್ ಸಾಲದ ಮೂಲಕ ಭರಿಸಬೇಕಾಗುತ್ತದೆ.

ಕೈಗಾರಿಕೆಗೆ ಭೂಮಿ: ಹೆಚ್ಚು ಪರಿಹಾರ

ಬೆಂಗಳೂರು: ಕೈಗಾರಿಕಾ ಉದ್ದೇಶಕ್ಕಾಗಿ ‘ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ’ಗೆ ಭೂಮಿ ಬಿಟ್ಟು ಕೊಡುವವರಿಗೆ ಹೆಚ್ಚಿನ ಪರಿಹಾರ ನೀಡುವ ಉದ್ದೇಶದ ಮಸೂದೆಗೆ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಈ ಮಸೂದೆಯನ್ನು ಇದೇ ಅಧಿವೇಶನದಲ್ಲಿ ಮಂಡಿಸಲಾಗುವುದು. ನ್ಯಾಯಯುತ ಪರಿಹಾರ ಹಕ್ಕು, ಭೂಸ್ವಾದೀನದಲ್ಲಿ ಪಾರದರ್ಶಕತೆ, ಪುನರ್ವಸತಿ ಕಾಯ್ದೆ 2013 ಅನ್ವಯ ಭೂಮಾಲೀಕರಿಗೆ ‘ಸೂಕ್ತ ಪರಿಹಾರ’ ನೀಡಿದರೆ ಅನಗತ್ಯ ವ್ಯಾಜ್ಯ ತಪ್ಪಿಸಬಹುದು. ಇದರಿಂದ ಮಸೂದೆ ತರಲಾಗಿದೆ ಎಂದು ಮೂಲಗಳು ಹೇಳಿವೆ. ಕಾಯ್ದೆ ಜಾರಿ ಆದಾಗ ಉತ್ತಮ ಪರಿಹಾರ ಸಿಗಲಿದೆ. ಭೂಸ್ವಾದೀನ ಪ್ರಕ್ರಿಯೆಯೂ ಚುರುಕುಗೊಳ್ಳುತ್ತದೆ. ನ್ಯಾಯಾಲಯದ ಮೊರೆ ಹೋಗುವವರ ಸಂಖ್ಯೆಯೂ ಕಡಿಮೆ ಆಗುತ್ತದೆ. 30 ದಿನಗಳಲ್ಲಿ ಭೂಸ್ವಾದೀನ ಪೂರ್ಣಗೊಳಿಸಬಹುದು. ಈ ಮೂಲಕ 1 ತಿಂಗಳಲ್ಲಿ ಪರಿಹಾರ ವಿತರಿಸಿ ಸ್ವಾದೀನ ಪ್ರಕ್ರಿಯೆ ಮುಗಿಸುವ ಗುರಿ ಹಾಕಿಕೊಳ್ಳಲಾಗಿದೆ. ಇದರಿಂದಾಗಿ ಯೋಜನೆ ಮತ್ತು ಕಾಮಗಾರಿಗಳಿಂದಾಗಿ ಆಗುವ ವಿಳಂಬವನ್ನು ತಡೆಯಬಹುದು. ವೆಚ್ಚವೂ ಹೆಚ್ಚಾಗುವುದಿಲ್ಲ ಎಂದು ಮೂಲಗಳು ತಿಳಿಸಿವೆ.

ಆರು ನೂತನ ನಗರಗಳ ನಿರ್ಮಾಣ: ಬೊಮ್ಮಾಯಿ

‘ಡಿಎಚ್ ಬೆಂಗಳೂರು 2040 ಶೃಂಗ’ದಲ್ಲಿ ಸಿ.ಎಂ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನವ ಕರ್ನಾಟಕದಿಂದ ನವಭಾರತದ ನಿರ್ಮಾಣದ ಆಶಯದೊಂದಿಗೆ ಸಮಗ್ರ ಸೌಲಭ್ಯಗಳನ್ನು ಹೊಂದಿರುವ ಆರು ನೂತನ ನಗರಗಳನ್ನು ನಿರ್ಮಿಸಲು ಸರ್ಕಾರ ಉದ್ದೇಶಿಸಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಗರ ಭವಿತವ್ಯದ ರೂಪರೇಷೆಗಳನ್ನು ವಿಶ್ಲೇಷಿಸುವ ಕಳಕಳಿಯೊಂದಿಗೆ, ‘ಪ್ರಜಾವಾಣಿ’ ಸೋದರ ಪತ್ರಿಕೆಯಾದ ಡೆಕ್ಕನ್ ಹೆರಾಲ್ಡ್ ಶುಕ್ರವಾರ ಆಯೋಜಿಸಿದ್ದ ‘ಡಿಎಚ್ ಬೆಂಗಳೂರು 2040 ಶೃಂಗ’ದಲ್ಲಿ ಬೊಮ್ಮಾಯಿ ಅವರು, ಬೆಂಗಳೂರು ನಗರದ ಅಭಿವೃದ್ಧಿಗಾಗಿ ತಮ್ಮ ಯೋಜನೆಗಳು, ಕನಸುಗಳು ಮತ್ತು ಭವಿಷ್ಯದಲ್ಲಿ ಹೇಗಿರಬೇಕು ಎನ್ನುವ ಕಲ್ಪನೆಗಳನ್ನು ಬಿಚ್ಚಿಟ್ಟರು.

‘ರಾಜ್ಯ ಸರ್ಕಾರದ ಭೂಮಿಯಲ್ಲೇ ಈ ನಗರಗಳನ್ನು ನಿರ್ಮಿಸಲಾಗುವುದು. ಈ ನಗರಗಳಿಗೆ ಪೂರಕವಾಗಿ ನಾಲ್ಕು ಸ್ಯಾಟಲೈಟ್ ಟೌನ್ ರಿಂಗ್ ರಸ್ತೆಗಳನ್ನು (ಎಸ್‌ಟಿಆರ್) ಸಹ ಅಭಿವೃದ್ಧಿಪಡಿಸಲಾಗುವುದು’ ಎಂದು ವಿವರಿಸಿದರು.

‘ಸದ್ಯ ನಗರದ ಜನಸಂಖ್ಯೆ 1.3 ಕೋಟಿ ಇದೆ. 2040ರ ವೇಳೆಗೆ ಈ ಜನಸಂಖ್ಯೆ 3ರಿಂದ 4 ಕೋಟಿಗೆ ತಲುಪಲಿದೆ. 2040ರ ವೇಳೆಗೆ ಕನಿಷ್ಠ ನಾಲ್ಕು ನವ ಬೆಂಗಳೂರು ನಗರಗಳನ್ನು ನಿರ್ಮಿಸಬೇಕಾಗಿದೆ. ಬೆಂಗಳೂರಿನ ಒಳಗೆ ಹಲವು ಬೆಂಗಳೂರು ನಗರಗಳನ್ನು ಸೃಷ್ಟಿಸಬೇಕಾಗಿದೆ. ಈ ನಗರಗಳಲ್ಲಿ ಜನರು ಸುಲಲಿತ ವ್ಯಾಪಾರ, ಕೆಲಸ ಮತ್ತು ಬದುಕು ಸಾಗಿಸುವಂತಾಗಬೇಕು’ ಎಂದರು.



ಬಸವರಾಜ ಬೊಮ್ಮಾಯಿ

> ಮೇಕೆದಾಟು ಯೋಜನೆಗೆ ಪರಿಸರ ಇಲಾಖೆ ಅನುಮೋದನೆ ಪಡೆದು ಇದೇ ವರ್ಷ ಜಾರಿಗೊಳಿಸಲಾಗುವುದು. ಇದರಿಂದ, ನಗರಕ್ಕೆ ಅನುಕೂಲವಾಗಲಿದೆ
>
> **ಬಸವರಾಜ ಬೊಮ್ಮಾಯಿ**
> ಮುಖ್ಯಮಂತ್ರಿ

ದೇವನಹಳ್ಳಿಯಿಂದ ಮೈಸೂರಿಗೆ ಸ್ಯಾಟಲೈಟ್ ಟೌನ್ ರಿಂಗ್ ರಸ್ತೆ ನಿರ್ಮಾಣ

‘ಅತಿ ವೇಗದಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇವನಹಳ್ಳಿಗೆ ಸಂಪರ್ಕ ಕಲ್ಪಿಸುವ ಎಸ್‌ಟಿಆರ್‌ಆರ್ ಯೋಜನೆಯು ಈ ವರ್ಷವೇ ಆರಂಭವಾಗಲಿದೆ. ಕೆಲವು ವಿನಾಯಿತಿಗಳನ್ನು ನೀಡುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಶೀಘ್ರದಲ್ಲಿ ಕೇಂದ್ರ ಸರ್ಕಾರದ ಜತೆ ಒಪ್ಪಂದ ಮಾಡಿಕೊಳ್ಳಲಿದ್ದೇವೆ’ ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

‘ಬೆಂಗಳೂರು ನಗರದಲ್ಲಿ ಉತ್ತಮ ರಸ್ತೆಗಳು, ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಕ್ರಮಕೈಗೊಳ್ಳಲಾಗಿದೆ. ಜತೆಗೆ, 12 ಅತಿ ದಟ್ಟಣೆಯ ಕಾರಿಡಾರ್‌ಗಳನ್ನು ಗುರುತಿಸಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿತ್ತು. ಆದರೆ, ಅಕ್ರಮಗಳು ನಡೆದಿದ್ದರಿಂದ ಸ್ಥಗಿತಗೊಳಿಸಲಾಯಿತು. ಅಭಿವೃದ್ಧಿ ಹೆಸರಿನಲ್ಲಿ ಅಕ್ರಮಗಳಿಗೆ ಅವಕಾಶ ನೀಡುವುದಿಲ್ಲ’ ಎಂದರು. ‘ಉಪನಗರ ರೈಲು ಯೋಜನೆಗೂ ಶೀಘ್ರ ಪ್ರಧಾನಮಂತ್ರಿ ಅವರು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ’ ಎಂದು ವಿವರಿಸಿದರು.

3ನೇ ಪುಟ ನೋಡಿ



ಕೆ.ಆರ್. ಮಾರುಕಟ್ಟೆಯಿಂದ ಮೈಸೂರು ರಸ್ತೆಗೆ ಸಂಪರ್ಕ ಬೆಸೆಯುವ 30 ಅಡಿ ರಸ್ತೆಯ ದುಸ್ಥಿತಿ

ಹದಗೆಟ್ಟ ರಸ್ತೆಯಲ್ಲಿ ಸಾಗಲು ಹರಸಾಹಸ

• ಜಿ.ಶಿವಕುಮಾರ

ಬೆಂಗಳೂರು: ಅಲ್ಲಲ್ಲಿ ಕಿತ್ತು ಹೋಗಿರುವ ಡಾಂಬರು. ಮಾರುದ್ದದವರೆಗೂ ಕಾಣುವ ಗುಂಡಿಗಳು. ಗಾಳಿ ಬೀಸಿದರೆ ಕಣ್ಣಿಗೆ ರಾಚುವ ದೂಳು. ನಡು ರಸ್ತೆಯಲ್ಲೇ ನಿಂತಿರುವ ತಳ್ಳುಗಾಡಿಗಳು...

ಕೆ.ಆರ್. ಮಾರುಕಟ್ಟೆಯಿಂದ ಮೈಸೂರು ರಸ್ತೆಗೆ ಸಂಪರ್ಕ ಬೆಸೆಯುವ 30 ಅಡಿ ರಸ್ತೆಯ ದುಸ್ಥಿತಿ ಇದು.

ಈ ಮಾರ್ಗದಲ್ಲಿ ನಿತ್ಯವೂ ನೂರಾರು ವಾಹನಗಳು ಸಂಚರಿಸುತ್ತವೆ. ಗುಂಡಿಮಯವಾಗಿರುವ ಹಾದಿಯಲ್ಲಿ ಅವು ಮಂದಗತಿಯಲ್ಲಿ ಸಾಗುವುದರಿಂದ ದಟ್ಟಣೆ ಸಮಸ್ಯೆ ತಲೆದೋರುತ್ತಿದೆ. ಇದರಿಂದ ಸವಾರರ ಜೊತೆಗೆ ಸ್ಥಳೀಯರೂ ಕಿರಿಕಿರಿ ಅನುಭವಿಸುವಂತಾಗಿದೆ.

‘ಸೊಪ್ಪು, ತರಕಾರಿ ಹಾಗೂ ಹಣ್ಣುಗಳನ್ನು ತುಂಬಿಕೊಂಡು ಮಾರುಕಟ್ಟೆಗೆ ಬರುವ ಗೂಡ್ಸ್ ವಾಹನಗಳು, ಬಿಬಿಎಂಪಿಯ ಕಸ ಸಂಗ್ರಹಣಾ ವಾಹನಗಳು ಹಾಗೂ ಆಟೊಗಳು ಸಾಲುಗಟ್ಟಿ ನಿಂತಿರುತ್ತವೆ. ರಸ್ತೆಯ ಅರ್ಧಭಾಗವನ್ನು ಅವು ಆಕ್ರಮಿಸಿಕೊಂಡಿರುತ್ತವೆ. ಉಳಿದ ಜಾಗದಲ್ಲಿ ವಾಹನಗಳು ಓಡಾಡುವ ಪರಿಸ್ಥಿತಿ ಇದೆ. ಇದರಿಂದಾಗಿ ದಟ್ಟಣೆ ಸಮಸ್ಯೆ ಹೆಚ್ಚುತ್ತಲಿದೆ. ಶಾಲೆ, ಕಾಲೇಜು, ಆಸ್ಪತ್ರೆ ಸೇರಿದಂತೆ ನಿತ್ಯದ ಕೆಲಸ ಕಾರ್ಯಗಳಿಗೆ ಓಡಾಡುವವರಿಗೆ ತುಂಬಾ ತೊಂದರೆಯಾಗುತ್ತಿದೆ’ ಎಂದು ಟಿಪ್ಪುನಗರದ ಸಲೀಂ ದೂರಿದರು.



ಪಾದಚಾರಿ ಮಾರ್ಗ ಹಾಳಾಗಿರುವುದರಿಂದ ವಿದ್ಯಾರ್ಥಿಗಳು ರಸ್ತೆಯಲ್ಲೇ ನಡೆದುಕೊಂಡು ಹೋಗುತ್ತಿರುವುದು –ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

‘ರಸ್ತೆ ಬದಿಯಲ್ಲೇ ಕೊಳೆತು ನಾರುತ್ತಿದ್ದ ತ್ಯಾಜ್ಯವನ್ನು ಹಲವು ಬಾರಿ ಮನವಿ ಮಾಡಿದರೂ ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿರಲಿಲ್ಲ. ಆಗ ರಸ್ತೆಯ ಮೇಲೆ ಚರಂಡಿ ನೀರು ಹರಿಯುತ್ತಿತ್ತು. ಅದು ಗುಂಡಿಗಳಲ್ಲಿ ಸಂಗ್ರಹವಾಗಿ ದ್ವಿಚಕ್ರವಾಹನ ಸವಾರರಿಗೆ ಸಂಕಷ್ಟ ತಂದೊಡ್ಡಿತ್ತು. ಗುಂಡಿ ತಪ್ಪಿಸುವ ಭರದಲ್ಲಿ ಹಲವರು ಆಯತಪ್ಪಿ ಬಿದ್ದು ಗಾಯಗೊಂಡಿದ್ದರು. ಕೆಲ ದಿನಗಳ ಹಿಂದೆ ಪ್ರತಿಭಟನೆ ನಡೆಸಿದ್ದೆವು. ಬಳಿಕ ಒಳಚರಂಡಿ ಸಮಸ್ಯೆ ಬಗೆಹರಿದಿದೆ. ಆದರೆ ರಸ್ತೆ ಗುಂಡಿ ಮುಚ್ಚುವ ಕೆಲಸ ಇನ್ನೂ ಆಗಿಲ್ಲ’ ಎಂದು ಆನಂದಪುರದ ಸೆಲ್ವರಾಜ್ ಅಸಮಾಧಾನ ವ್ಯಕ್ತಪಡಿಸಿದರು.

‘ರಸ್ತೆಯ ಇಕ್ಕೆಲಗಳಲ್ಲಿ ಕೊಳೆಗೇರಿ ಇದೆ. ಪಾದಚಾರಿ ಮಾರ್ಗ ಹದಗೆಟ್ಟಿರುವುದರಿಂದ ಬಡಾವಣೆಯ ಮಕ್ಕಳು ವಾಹನಗಳ ನಡುವೆ ನುಸುಳಿಕೊಂಡೇ ಶಾಲೆ– ಕಾಲೇಜುಗಳಿಗೆ ಹೋಗಬೇಕಾದ ಅನಿವಾರ್ಯತೆ ಇದೆ. ಕಿರಾಣಿ ಅಂಗಡಿ, ಔಷಧ ಅಂಗಡಿಗಳಿಗೆ ಹೋಗುವುದಕ್ಕೂ ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದು ಅಳಲು ತೋಡಿಕೊಂಡರು.

‘ಮೈಸೂರು ರಸ್ತೆಯೆಡೆ ಸಾಗುವವರ ಪೈಕಿ ಹಲವರು ಬಾಲಗಂಗಾಧರನಾಥ ಸ್ವಾಮೀಜಿ ಮೇಲ್ಸೇತುವೆಯನ್ನು ಬಳಸುತ್ತಾರೆ. ಮೇಲ್ಸೇತುವೆ ದುರಸ್ತಿ ಕಾಮಗಾರಿ ವೇಳೆ ಎಲ್ಲರೂ 30 ಅಡಿ ರಸ್ತೆಯನ್ನು ಆಶ್ರಯಿಸುವುದು ಅನಿವಾರ್ಯ. ಆಗ ವಾಹನಗಳು ಸಿರ್ಸಿ ವೃತ್ತದಿಂದ ಸಿಸಿಬಿ ಕಚೇರಿವರೆಗೂ ಸಾಲುಗಟ್ಟಿ ನಿಲ್ಲುತ್ತವೆ. ಶಾಸಕರು, ಅಧಿಕಾರಿಗಳು ಈ ಮಾರ್ಗದಲ್ಲೇ ಹಾದು ಹೋಗುತ್ತಾರೆ. ಹೀಗಿದ್ದರೂ ಅವರಿಗೆ ಸಮಸ್ಯೆಯ ಅರಿವಾಗಿಲ್ಲ. ರಸ್ತೆ ಸರಿಪಡಿಸಲೂ ಕ್ರಮ ಕೈಗೊಂಡಿಲ್ಲ’ ಎಂದು ಶಿವರಂಜನ್ ಬೇಸರ ವ್ಯಕ್ತಪಡಿಸಿದರು.

‘ಕೋಳಿ ತುಂಬಿದ ಗಾಡಿಗಳನ್ನು ನಿಲ್ಲಿಸುವುದು ತಪ್ಪಬೇಕು’

‘ರಸ್ತೆಯ ಇಕ್ಕೆಲಗಳಲ್ಲಿ ಮಾಂಸದ ಅಂಗಡಿಗಳಿವೆ. ಕೋಳಿ ಪೂರೈಸಲು ಬರುವವರು ವಾಹನಗಳನ್ನು ರಸ್ತೆಯಲ್ಲೇ ನಿಲುಗಡೆ ಮಾಡುತ್ತಾರೆ. ಪ್ರಾರ್ಥನೆಗಾಗಿ ಮಸೀದಿಗೆ ಹೋಗುವವರೂ ರಸ್ತೆ ಬದಿಯಲ್ಲೇ ವಾಹನ ನಿಲ್ಲಿಸುತ್ತಾರೆ. ದಟ್ಟಣೆ ಸಮಸ್ಯೆಗೆ ಇದು ಕೂಡ ಕಾರಣ’ ಎಂದು ಆನಂದಪುರದ ಜೋಸೆಫ್ ಕುಮಾರ್ ತಿಳಿಸಿದರು.

‘ಒಳಚರಂಡಿ ಸ್ವಚ್ಛಗೊಳಿಸುವ ವೇಳೆ ಕಾರ್ಮಿಕರು ತ್ಯಾಜ್ಯವನ್ನು ರಸ್ತೆ ಮೇಲೆ ರಾಶಿ ಹಾಕಿರುತ್ತಾರೆ. ಭಾರಿ ವಾಹನಗಳು ಸಂಚರಿಸುವುದರಿಂದಲೂ ರಸ್ತೆ ಹಾಳಾಗುತ್ತಿದೆ. ಕೆಲವೊಬ್ಬರು ಇಕ್ಕಟ್ಟಾಗಿರುವ ಈ ಸ್ಥಳದಲ್ಲೇ ವಾಹನವನ್ನು ಹಿಮ್ಮುಖವಾಗಿ ಚಲಾಯಿಸಲು ಪ್ರಯತ್ನಿಸುತ್ತಾರೆ’ ಎಂದು ಹೇಳಿದರು.

ಪ್ರಯಾಣ ಪ್ರಯಾಸ

ಶಾಂತವೇರಿ ಗೋಪಾಲಗೌಡ ಜನ್ಮಶತಮಾನೋತ್ಸವ 14ಕ್ಕೆ

ಬೆಂಗಳೂರು: ಶಾಂತವೇರಿ ಗೋಪಾಲಗೌಡ ಜನ್ಮಶತಮಾನೋತ್ಸವ ಆಚರಣೆ ಸಮಿತಿಯು ಇದೇ 14ರಂದು ಬೆಳಿಗ್ಗೆ 10 ಗಂಟೆಗೆ ಶಾಂತವೇರಿ ಗೋಪಾಲಗೌಡ ಜನ್ಮಶತಮಾನೋತ್ಸವದ ಉದ್ಘಾಟನಾ ಕಾರ್ಯಕ್ರಮವನ್ನು ವಿಧಾನಸೌಧದ ಎದುರು ಇರುವ ಶಾಂತವೇರಿ ಗೋಪಾಲಗೌಡ ವೃತ್ತದಲ್ಲಿ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಕಾರ್ಯದರ್ಶಿ ರಾಮಮನೋಹರ ಶಾಂತವೇರಿ, ‘ಇದೇ 14ರಿಂದ 2023ರ ಮಾರ್ಚ್ 14ರವರೆಗೆ ಶಾಂತವೇರಿ ಗೋಪಾಲಗೌಡ ಜನ್ಮಶತಮಾನೋತ್ಸವ ವರ್ಷವನ್ನಾಗಿ ಆಚರಿಸಲು ಉದ್ದೇಶಿಸಲಾಗಿದೆ’ ಎಂದರು.

‘ಜನ್ಮಶತಮಾನೋತ್ಸವವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. ಸಮಿತಿಯ ಅಧ್ಯಕ್ಷರೂ ಆಗಿರುವ ಗೃಹ ಸಚಿವ ಆರಗ ಜ್ಞಾನೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಭಾಗವಹಿಸಲಿದ್ದಾರೆ. ಜನ್ಮಶತಮಾನೋತ್ಸವದ ಅಂಗವಾಗಿ ನಾನಾಕಾರ್ಯಕ್ರಮಗಳು ನಡೆಯಲಿವೆ’ ಎಂದು ಮಾಹಿತಿ ನೀಡಿದರು.

ರಷ್ಯಾ-ನ್ಯಾಟೊ ರಾಷ್ಟ್ರಗಳ ಸಂಘರ್ಷ 3ನೇ ಮಹಾಯುದ್ಧಕ್ಕೆ ನಾಂದಿ: ಬೈಡನ್

ವಾಷಿಂಗ್ಟನ್ (ಎಎಫ್‌ಪಿ/ರಾಯಿಟರ್ಸ್): ಉಕ್ರೇನ್ ಮೇಲಿನ ರಷ್ಯಾ ದಾಳಿಯನ್ನು ತಡೆಯಲು ಅಮೆರಿಕ ನೇರವಾಗಿ ಯತ್ನಿಸುವ ಯಾವುದೇ ಸಾಧ್ಯತೆಯನ್ನು ಅಧ್ಯಕ್ಷ ಜೋ ಬೈಡನ್ ನಿರಾಕರಿಸಿದ್ದಾರೆ.

ಒಂದು ವೇಳೆ ಇಂಥ ಪ್ರಯತ್ನಕ್ಕೆ ಕೈ ಹಾಕಿದ್ದಲ್ಲಿ ರಷ್ಯಾ ಮತ್ತು ನ್ಯಾಟೊ ದೇಶಗಳ ಮಧ್ಯೆ ಹೊಸ ಸಂಘರ್ಷ ಏರ್ಪಡಲಿದ್ದು, ಅದು 3ನೇ ಮಹಾ ಯುದ್ಧಕ್ಕೆ ನಾಂದಿಯಾಗಲಿದೆ ಎಂದು ಅವರು ಹೇಳಿದ್ದಾರೆ.

ಉಕ್ರೇನ್ ವಿರುದ್ಧ ರಾಸಾಯನಿಕ ಅಸ್ತ್ರಗಳನ್ನು ಬಳಸಿದರೆ ರಷ್ಯಾ ಗಂಭೀರ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ರಷ್ಯಾದ ಯುದ್ಧವನ್ನು ತಡೆಯಲು ನ್ಯಾಟೊ ರಾಷ್ಟ್ರಗಳು ಮಧ್ಯಸ್ಥಿಕೆ ವಹಿಸಬೇಕು ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಕೋರಿಕೊಳ್ಳುತ್ತಿರುವ ನಡುವೆಯೇ, ನಾವು ಯುದ್ಧಕ್ಕೆ ಇಳಿಯುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಇದೇ ವೇಳೆ, ನಾವು ಉಕ್ರೇನ್ ಜನರ ಜೊತೆ ಇದ್ದೇವೆ. ನಿರಂಕುಶವಾದಿಗಳು ಜಗತ್ತಿನ ದಿಕ್ಕನ್ನು ಬದಲಿಸಲು ಬಿಡುವುದಿಲ್ಲ. ಈ ಪರಿಸ್ಥಿತಿಯನ್ನು ಎದುರಿಸಲು ಜಗತ್ತಿನ ಪ್ರಜಾಪ್ರಭುತ್ವಗಳು ಒಟ್ಟಾಗಿವೆ ಎಂದು ಅವರು ಹೇಳಿದ್ದಾರೆ.

ರಷ್ಯಾದ ಸರಕುಗಳ ಮೇಲೆ ಅಮೆರಿಕ ನಿಷೇಧ: ರಷ್ಯಾವನ್ನು ಏಕಾಂಗಿಯನ್ನಾಗಿ ಮಾಡಲು ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳುವುದಾಗಿ ಹೇಳಿರುವ ಬೈಡನ್, ರಷ್ಯಾದಿಂದ ಅಮೆರಿಕ ಆಮದು ಮಾಡಿಕೊಳ್ಳುವ, ರಷ್ಯಾಕ್ಕೆ ರಫ್ತು ಮಾಡುವ ಹಲವು ಸರಕುಗಳ ಮೇಲೆ ನಿಷೇಧ ಹೇರಿದ್ದಾರೆ. ಅಲ್ಲದೆ ರಷ್ಯಾದಲ್ಲಿ ಹೊಸ ಹೂಡಿಕೆಗಳನ್ನು ಮಾಡದಿರಲೂ ಅಮೆರಿಕ ನಿರ್ಧರಿಸಿದೆ.

ನಗರದಲ್ಲಿ ಇಂದು

ದಾಸವರೇಣ್ಯರ ಮತ್ತು ತ್ಯಾಗರಾಜರ ಆರಾಧನಾ ಮಹೋತ್ಸವ: ತ್ಯಾಗರಾಜರ ಗೋಷ್ಠಿ ಗಾಯನ–ಆರ್.ಕೆ.ಪದ್ಮನಾಭ, ಆಯೋಜನೆ–ವಿಜಯನಗರ ಸಂಗೀತಸಭಾ ಟ್ರಸ್ಟ್, ಸ್ಥಳ–ವಿದ್ಯಾಗಣಪತಿ ದೇವಸ್ಥಾನ, ಹಂಪಿನಗರ, ಬೆಳಿಗ್ಗೆ 8.30ರಿಂದ

ಶೈಕ್ಷಣಿಕ ಸಮಾವೇಶ ಮತ್ತು ಸನ್ಮಾನ: ಉದ್ಘಾಟನೆ–ರಾಮಲಿಂಗಾರೆಡ್ಡಿ, ಪ್ರಶಸ್ತಿ ಪ್ರದಾನ–ಪುಟ್ಟಣ್ಣ, ಸನ್ಮಾನ–ತೇಜಸ್ವಿನಿ ಅನಂತಕುಮಾರ್, ಪ್ರಿಯಕೃಷ್ಣ, ಅ.ದೇವೇಗೌಡ, ರಾಮೋಜಿಗೌಡ, ಅಧ್ಯಕ್ಷತೆ–ಕೆ.ಮುನಿಸ್ವಾಮಿ, ಆಯೋಜನೆ–ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಸ್ಥಳ–ಶಿಕ್ಷಕರ ಸದನ, ಕೆ.ಜಿ. ರಸ್ತೆ, ಬೆಳಿಗ್ಗೆ 10/9900565672

ಪ್ರತಿಭಾ ಸಂಭ್ರಮ: ಉದ್ಘಾಟನೆ–ಸಚಿವ ಆರ್.ಅಶೋಕ, ಅತಿಥಿಗಳು–ಎಂ.ವೆಂಕಟಸ್ವಾಮಿ, ಎನ್.ಆರ್.ರಮೇಶ್, ಎಲ್.ಲಕ್ಷ್ಮಣರೆಡ್ಡಿ, ಅಧ್ಯಕ್ಷತೆ–ವೆಂಕಟೇಶ, ಆಯೋಜನೆ–ಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸ್ಥಳ–ಎಚ್.ಎನ್.ಕಲಾಕ್ಷೇತ್ರ, ನ್ಯಾಷನಲ್ ಕಾಲೇಜು, ಜಯನಗರ, ಬೆಳಿಗ್ಗೆ 10

ದಂಡಿನ ಉಪ್ಪಿನ ಸತ್ಯಾಗ್ರಹ ದಿನಾಚರಣೆ ಹಾಗೂ ಧ್ವಜಾರೋಹಣ, ಆಯೋಜನೆ–ಲೋಕಮಾನ್ಯ ಸಂಘ, ಮೈಸೂರು ಪೌರ ಮತ್ತು ಸಾಮಾಜಿಕ ಪ್ರಗತಿ ಸಂಘ ಹಾಗೂ ವಿವಿಧ ಸಂಘಗಳು, ಸ್ಥಳ–ಸಜ್ಜನ್‌ರಾವ್ ವೃತ್ತ, ವಿವಿ ಪುರ, ಬೆಳಿಗ್ಗೆ 10

ಶಾಂತವೇರಿ ಗೋಪಾಲಗೌಡ ಪ್ರಶಸ್ತಿ ಪ್ರದಾನ: ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಪುರಸ್ಕೃತರು–ಏಕಾಂತಯ್ಯ, ಅತಿಥಿಗಳು–ವೈ.ಎಸ್.ವಿ.ದತ್ತ, ಮಲ್ಲಿಕಾರ್ಜುನಪ್ಪ, ಅಧ್ಯಕ್ಷತೆ–ಸಿ.ಕೆ.ರಾಮೇಗೌಡ, ಆಯೋಜನೆ–ಕನ್ನಡ ಜನಶಕ್ತಿ ಕೇಂದ್ರ, ಸ್ಥಳ–ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ಉದ್ಯೋಗ ಮೇಳ: ಆಯೋಜನೆ–ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, ಸ್ಥಳ–ಸರ್ಕಾರಿ ಮಾದರಿ ಐಟಿಐ ಕಾಲೇಜು, ಹೊಸೂರು ಮುಖ್ಯ ರಸ್ತೆ, ಡೈರಿ ಸರ್ಕಲ್, ಕೌಶಲ್ಯ ಭವನ, ಬೆಳಿಗ್ಗೆ 10

ರಾಷ್ಟ್ರೀಯ ಮಹಿಳಾ ದಿನ ಹಾಗೂ ವಿಚಾರ ಸಂಕಿರಣ: ಅಧ್ಯಕ್ಷತೆ–ಬಿ.ಟಿ.ಲಲಿತಾ ನಾಯಕ್, ಅತಿಥಿಗಳು–ನಾಗಲಕ್ಷ್ಮಿಬಾಯಿ, ವಿವೇಕಾನಂದ, ವಿಷಯ ಮಂಡನೆ–ಎನ್.ನಾಗೇಶ್, ಎಚ್.ಕೆ.ಸುಮಿತ್ರ, ಆಯೋಜನೆ–ಜನತಾ ಪಾರ್ಟಿ, ಸ್ಥಳ–ಸಮ್ಮೇಳನ ಸಭಾಂಗಣ, ಶಾಸಕರ ಭವನ–2, ಬೆ.11

ಕಲರವ–2022: ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಪಿಯು ಕಾಲೇಜು ವಾರ್ಷಿಕೋತ್ಸವ ಮತ್ತು ಬಹುಮಾನ ವಿತರಣೆ: ಅತಿಥಿಗಳು–ಸಿ.ಎಲ್.ಆನಂದ್, ಕೆ.ಎಸ್.ವಿಮಲಾ, ಅಧ್ಯಕ್ಷತೆ–ಕೆ.ಜೈರಾಜ್, ಸ್ಥಳ–ಕಾಲೇಜು ಆವರಣ, ಮಲ್ಲೇಶ್ವರ, ಬೆಳಿಗ್ಗೆ 11

ಜಾಣಗೆರೆ ವೆಂಕಟರಾಮಯ್ಯ ಅವರ ‘ಭೂಮ್ತಾಯಿ’ ಪುಸ್ತಕ ಬಿಡುಗಡೆ: ಕೆ.ಈ.ರಾಧಾಕೃಷ್ಣ, ಉದ್ಘಾಟನೆ–ಎಸ್.ಜಿ.ಸಿದ್ಧರಾಮಯ್ಯ, ಅಧ್ಯಕ್ಷತೆ–ಬಿ.ಎಂ.ಹನೀಫ್, ಅತಿಥಿಗಳು–ಎಚ್.ದಂಡಪ್ಪ, ಪ್ರೇಂಕುಮಾರ್ ಹರಿಯಬ್ಬೆ, ಕೃಷ್ಣ ಮಾಸಡಿ, ಆಯೋಜನೆ–ಸಾಹಿತ್ಯ ಸಂಗಮ ಟ್ರಸ್ಟ್, ಸ್ಥಳ–ಗಾಂಧಿಭವನ, ಬೆಳಿಗ್ಗೆ 11/9343798078

ಗುರುವಂದನಾ: 300 ಶಿಕ್ಷಕರಿಗೆ ಸನ್ಮಾನ: ಅತಿಥಿಗಳು–ಡಿ.ವಿ.ಸದಾನಂದ ಗೌಡ, ಸಿ.ಎನ್.ಅಶ್ವತ್ಥನಾರಾಯಣ, ಪುಟ್ಟಣ್ಣ, ಕೆ.ಗೋಪಾಲಯ್ಯ, ಹೇಮಲತಾ ಕೆ.ಗೋಪಾಲಯ್ಯ, ಆಯೋಜನೆ–ಮಹಾಲಕ್ಷ್ಮಿ ಎಜುಕೇಷನಲ್ ಟ್ರಸ್ಟ್, ಸ್ಥಳ–ಶಾಸಕರ ಭವನ, ನಾಗಪುರ, ಬೆಳಿಗ್ಗೆ 11.30

ವೀರಪ್ಪ ಮೊಯಿಲಿ ಅವರ ಆತ್ಮಕಥೆ ‘ನನ್ನ ಬೊಗಸೆಯ ಆಕಾಶ’ ಪುಸ್ತಕ ಬಿಡುಗಡೆ: ಶಾಸಕ ಜಿ.ಪರಮೇಶ್ವರ್, ಅಧ್ಯಕ್ಷತೆ–ಎನ್.ಆರ್.ಶೆಟ್ಟಿ, ಅತಿಥಿಗಳು–ಕೆ.ರೆಹಮಾನ್ ಖಾನ್, ಸಿ.ಎನ್.ರಾಮಚಂದ್ರನ್, ಕೆ.ಈ.ರಾಧಾಕೃಷ್ಣ, ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಆಯೋಜನೆ–ಸಪ್ನ ಬುಕ್ ಹೌಸ್, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 4

‘ಕರುನಾಡ ಬೆಳಕು’ ಸಾಂಸ್ಕೃತಿಕ ಕಾರ್ಯಕ್ರಮ: ಅತಿಥಿಗಳು–ಮಹೇಶ ಜೋಶಿ, ವತ್ಸಲಾ ಮೋಹನ್, ಅನೂಪ್ ಗೌಡ, ಪಳನಿ ಸೇತುಪತಿ, ಭರತನಾಟ್ಯ–ಪ್ರಿಯಾಂಕ ತಳವಾರ, ಕಥಕ್ ಪ್ರದರ್ಶನ–ರಿಯಾ ಶರ್ಮ, ಆಯೋಜನೆ–ಕಾರ್ಪೊರೇಟ್ ಕನ್ನಡಿಗರು, ಸ್ಥಳ–ನಯನ ರಂಗಮಂದಿರ, ಕನ್ನಡ ಭವನ, ಸಂಜೆ 5

‘ಬೆಂಗಳೂರು ನಾಗರತ್ನಮ್ಮ’ ನಾಟಕ ಪ್ರದರ್ಶನ: ನಿರ್ದೇಶನ–ಟಿ.ಎಸ್.ನಾಗಾಭರಣ, ಅತಿಥಿ–ಶಾಂತ ರಂಗಸ್ವಾಮಿ, ಆಯೋಜನೆ–ಕಲಾ ಪ್ರೇಮಿ ಫೌಂಡೇಷನ್, ಸ್ಥಳ–ಸೇವಾಸದನ, ಮಲ್ಲೇಶ್ವರ, ಸಂಜೆ 6

ಭಜನಾಮೃತ: ಶೇಷಾದ್ರಿಪುರದ ಸುಶಮೀಂದ್ರ ಭಜನಾ ಮಂಡಳಿಯ ಸದಸ್ಯರಿಂದ, ಸಹಕಾರ–ದಾಸವಾಣಿ ಸಮೂಹ, ಸ್ಥಳ–ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.30

‘ಬೀಚಿ ರಸಾಯನ’ ಮತ್ತು ‘ಬೀಚಿ ಹೌಸ್’ ನಾಟಕಗಳ ಪ್ರದರ್ಶನ: ಆಯೋಜನೆ–ಡ್ರಾಮಾಟ್ರಿಕ್ಸ್, ಸ್ಥಳ–ಅಶ್ವಥ್ ಕಲಾಭವನ, ಎನ್.ಆರ್.ಕಾಲೊನಿ, ಸಂಜೆ 4.30 ಮತ್ತು ಸಂಜೆ 7

ಬರಗೂರು ರಾಮಚಂದ್ರಪ್ಪ ಅವರ ‘ಬೆವರು ನನ್ನ ದೇವರು’ ಸಮಗ್ರ ಸಾಹಿತ್ಯ ಸಂಪುಟಗಳ ಬಿಡುಗಡೆ (ಬೆ.11): ಎಚ್.ಎಸ್.ರಾಘವೇಂದ್ರ ರಾವ್, ಅತಿಥಿ–ಬಸವರಾಜ ಕಲ್ಗುಡಿ, ಅಧ್ಯಕ್ಷತೆ–ಎಚ್.ಎನ್.ನಾಗಮೋಹನ್ ದಾಸ್, ಮಧ್ಯಾಹ್ನ 2.30ಕ್ಕೆ ಮಹಿಳಾ ಕವಿಗೋಷ್ಠಿ, ಭಾಗವಹಿಸುವವರು–ತಾರಿಣಿ ಶುಭದಾಯಿನಿ, ದು.ಸರಸ್ವತಿ, ಸಂಜೆ 4.30ಕ್ಕೆ ರಾಜಲಕ್ಷ್ಮಿ ಬರಗೂರು ಪುಸ್ತಕ ಪ್ರಶಸ್ತಿ ಪ್ರದಾನ, ಪುರಸ್ಕೃತರು–ಎಚ್.ಟಿ.ಪೋತೆ ಮತ್ತು ಕೆ.ಕೇಶವ ಶರ್ಮ, ಮಲ್ಲಿಕಾರ್ಜುನ ಹಿರೇಮಠ, ಅತಿಥಿಗಳು–ನಟ ಸುಂದರ್ ರಾಜ್, ಎಚ್.ಎಲ್.ಪುಷ್ಪ, ಅಧ್ಯಕ್ಷತೆ–ಮುರಳೀಧರ ಹಾಲಪ್ಪ, ಆಯೋಜನೆ–ಅಭಿರುಚಿ ಪ್ರಕಾಶನ, ಬರಗೂರು ಪ್ರತಿಷ್ಠಾನ, ಸ್ಥಳ–ಗಾಂಧಿಭವನ/9980560013

‘ಲತಿಕಾ’ ಕಥಕ್ ರಂಗಪ್ರವೇಶ: ಭಾವನಾ ಪರಾಶರ್, ಅತಿಥಿ–ಅರ್ಜುನ್ ಭಾರದ್ವಾಜ್, ಆಯೋಜನೆ–ಅಭಿನವ ನೃತ್ಯ ಸಂಸ್ಥೆ, ಸ್ಥಳ–ಪ್ರಭಾತ್ ಕಲಾದ್ವಾರಕ ಸಭಾಂಗಣ, ಕೋರಮಂಗಲ 6ನೇ ಬ್ಲಾಕ್, ಸಂಜೆ 6



ಭಾವನಾ

ಭಾವಾಂತರಂಗ ನಾಟಕೋತ್ಸವ: ನಾಟಕ–ಕಾಮರೂಪಿಗಳ್, ತಂಡ–ಸಂಚಯ, ಆಯೋಜನೆ–ಭಾಗವತರು, ಸ್ಥಳ–ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.15

‘ಮಿಸ್.ಸದಾರಮೆ’ ನಾಟಕದ ಪ್ರಯೋಗ: ತಂಡ–ಸಮಷ್ಟಿ, ನಿರ್ದೇಶನ–ಮಂಜುನಾಥ್ ಎಲ್.ಬಡಿಗೇರ್, ಸ್ಥಳ–ರಂಗಶಂಕರ, ಸಂಜೆ 3.30 ಮತ್ತು 7.30ಕ್ಕೆ



ಮಿಸ್.ಸದಾರಮೆ

ಬೆಂಗಳೂರು ಆಡಳಿತ ಸಮಗ್ರವಾಗಿ ಬದಲಾಗಬೇಕು: ಶಾಸಕ ರಿಜ್ವಾನ್ ಅರ್ಷದ್

‘ನಾಗರಿಕರಿಗೆ ಹೊರೆಯಾದ ಬಿಬಿಎಂಪಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ’ಬಿಬಿಎಂಪಿ ನಾಗರಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಬದಲು ಹೊರೆಯಾಗಿ ಪರಿಣಮಿಸಿದೆ’ ಎಂದು ಶಾಸಕ ರಿಜ್ವಾನ್ ಅರ್ಷದ್ ಟೀಕಿಸಿದರು.

ಡೆಕ್ಕನ್ ಹೆರಾಲ್ಡ್ ಶುಕ್ರವಾರ ಆಯೋಜಿಸಿದ್ದ ‘ಡಿಎಚ್ ಬೆಂಗಳೂರು 2040 ಶೃಂಗ’ದಲ್ಲಿ ಮಾತನಾಡಿದ ಅವರು, ಬಿಬಿಎಂಪಿಯ ಸ್ವರೂಪವನ್ನು ಸಮಗ್ರವಾಗಿ ಬದಲಾಯಿಸಬೇಕು ಎಂದು ಪ್ರತಿಪಾದಿಸಿದರು.

‘2020ರಲ್ಲಿ ಅನುಮೋದನೆ ನೀಡಲಾದ ಬಿಬಿಎಂಪಿ ಕಾಯ್ದೆಯ ಬಗ್ಗೆ ಸಾಕಷ್ಟು ಸಮಾಲೋಚನೆ ಪ್ರಕ್ರಿಯೆಗಳು ನಡೆಯಲಿಲ್ಲ. ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಹೆಚ್ಚಿಸುವ ಪ್ರಸ್ತಾವವನ್ನು ಕಾಯ್ದೆಯಲ್ಲಿ ಪ್ರಸ್ತಾಪಿಸಲಾಗಿತ್ತು. ಬಿಬಿಎಂಪಿಯನ್ನು ಮತ್ತಷ್ಟು ವಿಕೇಂದ್ರೀಕರಣಗೊಳಿಸಬೇಕು. ವಾರ್ಡ್ ಸಮಿತಿಗಳನ್ನು ಮತ್ತಷ್ಟು ಬಲಪಡಿಸಬೇಕು’ ಎಂದು ಹೇಳಿದರು.

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, ‘ಬೆಂಗಳೂರು ನಗರದ ಆಡಳಿತಕ್ಕಾಗಿ ಸರ್ಕಾರ ರೂಪಿಸಿರುವ ನೂತನ ಕಾನೂನಿನಲ್ಲಿ ಹಲವು ಕೊರತೆಗಳಿವೆ’ ಎಂದು ಹೇಳಿದರು.

‘ಬೆಂಗಳೂರಿನ ಮೇಯರ್ ಅನ್ನು ನೇರವಾಗಿ ಆಯ್ಕೆ ಮಾಡುವ ವ್ಯವಸ್ಥೆ ರೂಪಿಸಬೇಕು. ಪ್ರಸ್ತುತ ವ್ಯವಸ್ಥೆಯಲ್ಲಿ ಆಯ್ಕೆಯಾಗುವ ಮೇಯರ್ ಒಂದು ವರ್ಷದ ಅವಧಿಗೆ ಇರುತ್ತಾರೆ. ಇದರಲ್ಲಿ ಆರು ತಿಂಗಳು ಅವರು ಸನ್ಮಾನದ ಕಾರ್ಯಕ್ರಮಗಳಲ್ಲಿ ಕಳೆದು ಹೋಗುತ್ತದೆ. ಬಲಿಷ್ಠವಾಗಿರುವ ಮೇಯರ್ ಹುದ್ದೆಯನ್ನು ಸೃಷ್ಟಿಸುವುದು ಯಾವ ಪಕ್ಷಕ್ಕೂ ಬೇಡವಾಗಿದೆ. ಆದರೆ, ನನ್ನ ಪಕ್ಷದಲ್ಲಿ ಕೆಲವು ನಾಯಕರು ಈ ಕಲ್ಪನೆಗೆ ಸಹಮತ ವ್ಯಕ್ತಪಡಿಸಿದ್ದಾರೆ’ ಎಂದು ವಿವರಿಸಿದರು.

‘ಎಂಟು ಸ್ಯಾಟಲೈಟ್ ನಗರ ನಿರ್ಮಿಸಿ’:



‘ಡಿಎಚ್ ಬೆಂಗಳೂರು 2040 ಶೃಂಗ’ದಲ್ಲಿಯ ಸಂವಾದದಲ್ಲಿ ಸಂಸದ ತೇಜಸ್ವಿ ಸೂರ್ಯ, ಶಾಸಕ ರಿಜ್ವಾನ್ ಅರ್ಷದ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

‘ಮನೆಯಿಂದ ಕೆಲಸ ಸ್ಥಗಿತಗೊಳಿಸಿ’

ಬೆಂಗಳೂರು: ‘ಕೋವಿಡ್ ಸಾಂಕ್ರಾಮಿಕ ಕಾಯಿಲೆ ಈಗ ಬಹುತೇಕ ಕಡಿಮೆಯಾಗಿದೆ. ಹೀಗಾಗಿ, ಮನೆಯಿಂದ ಕೆಲಸ ಮಾಡುವ ಅವಕಾಶವನ್ನು ಕಂಪನಿಗಳು ಇನ್ನು ಮುಂದೆ ಸ್ಥಗಿತಗೊಳಿಸಬೇಕು’ ಎಂದು ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಪ್ರತಿಪಾದಿಸಿದರು.

‘ಮನೆಯಿಂದ ಕೆಲಸ ಮಾಡುವುದು ನನಗಂತೂ ಇಷ್ಟ ಇಲ್ಲ. ಮನೆಯಿಂದ ಉದ್ಯೋಗಿಗಳು ಕೆಲಸ ಮಾಡಿದರೆ ಕೆಲಸದಲ್ಲಿ ಉತ್ಕೃಷ್ಟತೆ, ಸೃಜನಶೀಲತೆಯೂ ಸಾಧ್ಯವಾಗುವುದಿಲ್ಲ. ಕೆಲಸದ ಗುಣಮಟ್ಟದ ಮೇಲೆಯೂ ಪರಿಣಾಮ ಬೀರುತ್ತದೆ’ ಎಂದು ಅಭಿಪ್ರಾಯಪಟ್ಟರು.


DH BENGALURU 2040 SUMMIT

‘ಸುಲಲಿತ ಬದುಕು: ಉತ್ತಮ ಬೆಂಗಳೂರಿಗಾಗಿ, ಉತ್ತಮ ನಗರ ಯೋಜನೆ’ ಶೀರ್ಷಿಕೆ ಅಡಿಯಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ಮಾತನಾಡಿ, ‘10 ವರ್ಷಗಳಲ್ಲಿ ಬೆಂಗಳೂರಿನ ಜನಸಂಖ್ಯೆ 84 ಲಕ್ಷದಿಂದ 1.35 ಕೋಟಿಗೆ ತಲುಪಿದೆ. ಇದರಿಂದ, ಮೂಲಸೌಕರ್ಯಗಳನ್ನು ಕಲ್ಪಿಸುವುದು ಸವಾಲಿನ ಕಾರ್ಯವಾಗಿದೆ. ಸಾರಿಗೆ, ನೀರು ಮತ್ತು ಇತರ ಸೌಲಭ್ಯಗಳ ಹೊಸ ವಸತಿ ಟೌನ್‌ಶಿಪ್‌ಗಳನ್ನು ವಿನ್ಯಾಸಗೊಳಿಸುವುದು ಅಗತ್ಯವಿದೆ’ ಎಂದು ಅಭಿಪ್ರಾಯಪಟ್ಟರು.

ನಗರ ಯೋಜನಾ ತಜ್ಞ ನರೇಶ್ ನರಸಿಂಹನ್ ಮಾತನಾಡಿ, ‘ಬೆಂಗಳೂರಿನ ಸುತ್ತ ಕನಿಷ್ಠ ಎಂಟು ಸ್ಯಾಟಲೈಟ್ ನಗರಗಳನ್ನು ನಿರ್ಮಿಸುವುದು ಅಗತ್ಯವಿದೆ. ಬೆಂಗಳೂರಿನ ಅಡ್ಡಾದಿಡ್ಡಿ ಬೆಳವಣಿಗೆಗೆ ಮತ್ತು ಜನಸಂಖ್ಯೆ ಹೆಚ್ಚಳಕ್ಕೆ ಕಡಿವಾಣ ಹಾಕಬೇಕು’ ಎಂದು ಪ್ರತಿಪಾದಿಸಿದರು.

ಸೈಬರ್ ಅಪರಾಧಗಳು ಹೆಚ್ಚಳ: ಡಿಜಿಪಿ

ಬೆಂಗಳೂರು: ‘ತಂತ್ರಜ್ಞಾನ ಅಭಿವೃದ್ಧಿಯಾದಂತೆ ಸೈಬರ್ ಅಪರಾಧಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಮುಂದಿನ 10 ವರ್ಷಗಳಲ್ಲಿ 100 ಪಟ್ಟು ಹೆಚ್ಚಾಗಬಹುದು’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಪ್ರವೀಣ್ ಸೂದ್ ಎಚ್ಚರಿಕೆ ನೀಡಿದರು.



ಪ್ರವೀಣ್ ಸೂದ್

‘ಡಿಎಚ್ ಬೆಂಗಳೂರು 2040 ಶೃಂಗ’ದಲ್ಲಿ ಮಾತನಾಡಿದ ಅವರು, ‘ವರ್ಚುವಲ್ ಸ್ವರೂಪದ ಅಪರಾಧಗಳು ಹೆಚ್ಚುತ್ತಿವೆ. ಮುಖ ಮತ್ತು ಹೆಸರು ಇಲ್ಲದೆಯೇ ಜಗತ್ತಿನ ಯಾವುದೋ ಸ್ಥಳದಲ್ಲಿ ಕುಳಿತು ಅಪರಾಧ ಮಾಡುವವರನ್ನು ಪತ್ತೆ ಮಾಡುವುದು ಸಹ ಕಷ್ಟಸಾಧ್ಯವಾಗಿದೆ’ ಎಂದರು.

‘ಬೀದಿ ವ್ಯಾಪಾರಿಗಳ ಮೇಲೇಕೆ ಕಣ್ಣು?’: ‘ಸಂಚಾರಕ್ಕೆ ತೊಡಕಾಗಿದ್ದಾರೆ ಎಂದು ಬೀದಿ ವ್ಯಾಪಾರಿಗಳ ಮೇಲೆ ದೂರುವುದು ಸಹಜವಾಗಿದೆ. ಆದರೆ, ಬೆಂಗಳೂರು ನಗರದಲ್ಲಿ ರಸ್ತೆಯಲ್ಲೇ ಸಾವಿರಾರು ವಾಹನಗಳನ್ನು ಪಾರ್ಕಿಂಗ್ ಮಾಡಲಾಗಿದೆ. ಇವುಗಳ ಬಗ್ಗೆ ಯಾರು ದೂರುವುದಿಲ್ಲ. ಬೀದಿ ವ್ಯಾಪಾರಿಗಳನ್ನು ಮಾತ್ರ ಸುಲಭವಾಗಿ ಗುರಿ ಮಾಡುತ್ತಾರೆ’ ಎಂದು ಅವರು ಹೇಳಿದರು.



ಎಸ್.ಆರ್. ದೇವರಾಜ್ ಮತ್ತು ಕುಟುಂಬದವರಿಗೆ ಸೀರೆಯನ್ನು ಮಳಿಗೆಯ ಅಧಿಕಾರಿ ಹಸ್ತಾಂತರಿಸಿದರು


ವಿವಾಹದ ಸೀರೆ, ಆಭರಣಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ಚೆನ್ನೈ ಸಿಲ್ಕ್ಸ್ ಮತ್ತು ಶ್ರೀ ಕುಮಾರನ್ ಜ್ಯುವೆಲರಿ ಜಂಟಿಯಾಗಿ ಲಲಿತ್ ಅಶೋಕ್ ಹೋಟೆಲ್‌ನಲ್ಲಿ ಇದೇ ಭಾನುವಾರದವರೆಗೆ (ಮಾ.13) ವಿವಾಹದ ಸೀರೆ, ಆಭರಣಗಳ ಪ್ರದರ್ಶನ ಮತ್ತು ಮಾರಾಟ ಮೇಳ ಹಮ್ಮಿಕೊಂಡಿದೆ.


ನಾಲ್ಕು ದಿನಗಳ ಈ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಗುರುವಾರ ಚಾಲನೆ ದೊರೆತಿದೆ. ‘ವಿವಾಹ’ ಹೆಸರಿನ ಮಳಿಗೆಯನ್ನು ಹೋಟೆಲ್‌ನಲ್ಲಿ ತೆರೆಯಲಾಗಿದ್ದು, ಬೆಳಿಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ಮಳಿಗೆ ತೆರೆದಿರಲಿದೆ.

ಈ ಪ್ರದರ್ಶನ ಮತ್ತು ಮಾರಾಟಕ್ಕೆ ಮುಖ್ಯ ಅತಿಥಿಗಳಾಗಿ ಬಂದ ಎಸ್.ಆರ್. ದೇವರಾಜ್ ಮತ್ತು ಕುಟುಂಬದವರು ಮೊದಲಿಗರಾಗಿ ಸೀರೆಗಳನ್ನು ಖರೀದಿಸಿದ್ದು, ಅವುಗಳ ಮೌಲ್ಯ ₹ 70,186. ವೈವಿಧ್ಯಮಯ ಸೀರೆ ಮತ್ತು ಆಭರಣಗಳು ಲಭ್ಯವಿವೆ ಎಂದು ಪ್ರಕಟಣೆ ತಿಳಿಸಿದೆ.



ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪರಸ್ಪರ ಅಂತರ ಕಾಯ್ದುಕೊಳ್ಳಿ



ಪರಿಷತ್ ಚುನಾವಣೆ: ಬಿಜೆಪಿ ಟಿಕೆಟ್ ಘೋಷಣೆ

ನವದೆಹಲಿ: ಕರ್ನಾಟಕದ ವಿಧಾನ ಪರಿಷತ್‌ಗೆ ನಡೆಯಲಿರುವ ಮೂರು ಸ್ಥಾನಗಳ ಚುನಾವಣೆಯ ಅಭ್ಯರ್ಥಿಗಳನ್ನು ಬಿಜೆಪಿ ಶುಕ್ರವಾರ ಘೋಷಿಸಿದೆ.

ಹಾಲಿ ಸದಸ್ಯರಾದ ಅರುಣ್ ಶಹಾಪುರ, ಹಣಮಂತ ನಿರಾಣಿ ಅವರಿಗೆ ಕ್ರಮವಾಗಿ ವಾಯವ್ಯ ಶಿಕ್ಷಕರ ಕ್ಷೇತ್ರ, ವಾಯವ್ಯ ಪದವೀಧರರ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ. ದಕ್ಷಿಣ ಪದವೀಧರರ ಕ್ಷೇತ್ರದಿಂದ ಎಂ.ವಿ. ರವಿಶಂಕರ್ ಅವರಿಗೆ ಟಿಕೆಟ್ ನೀಡಲಾಗಿದೆ. ಮಾಜಿ ಸದಸ್ಯ ಗೋ.ಮಧುಸೂದನ, ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಇ.ಸಿ. ಲಿಂಗರಾಜಗೌಡ ಈ ಕ್ಷೇತ್ರದಿಂದ ಟಿಕೆಟ್ ಬಯಸಿದ್ದರು.

ಆರು ನೂತನ ನಗರಗಳ ನಿರ್ಮಾಣ: ಬೊಮ್ಮಾಯಿ

ಒಂದನೇ ಪುಟದಿಂದ

ಬೆಂಗಳೂರಿನ ಇತಿಹಾಸವನ್ನು ಸ್ಮರಿಸಿದ ಅವರು, ‘ಈ ನಗರವು ಯೋಜನಾರಹಿತವಾಗಿ ಬೆಳೆಯಿತು. ಇದರಿಂದಾಗಿ, ನಗರದ ಮೇಲೆ ಒತ್ತಡ ಹೆಚ್ಚಾಗಿದೆ. ಮೊದಲು ಹಳೆ ಬೆಂಗಳೂರು ಇತ್ತು. ನಂತರ, ಕೇಂದ್ರ ವಾಣಿಜ್ಯ ಪ್ರದೇಶ (ಸಿಬಿಡಿ) ಅಭಿವೃದ್ಧಿಯಾಯಿತು. ಬಳಿಕ 110 ಹಳ್ಳಿಗಳನ್ನು ಸೇರ್ಪಡೆ ಮಾಡಲಾಯಿತು. ಈ ಸೇರ್ಪಡೆಯ ಜತೆ ಅಲ್ಲಿನ ಸಮಸ್ಯೆಗಳು ಸಹ ನಗರದ ಜತೆ ವಿಲೀನಗೊಂಡಿವೆ. ರಸ್ತೆ, ನೀರು ಸೇರಿದಂತೆ ಉತ್ತಮ ಮೂಲಸೌಕರ್ಯಗಳನ್ನು ಒದಗಿಸಬೇಕಾಗಿದೆ. ಯೋಜನಾಬದ್ಧವಾಗಿ ನಗರವನ್ನು ಅಭಿವೃದ್ಧಿಪಡಿಸುವುದು ಅತಿ ದೊಡ್ಡ ಸವಾಲು’ ಎಂದು ವಿವರಿಸಿದರು.

‘ವಾಣಿಜ್ಯ ಮಳಿಗೆಗಳಲ್ಲಿ ತ್ಯಾಜ್ಯ ನಿರ್ವಹಣೆ ಕಡ್ಡಾಯ’

‘ಎಲ್ಲ ವಾಣಿಜ್ಯ ಮಳಿಗೆಗಳಲ್ಲಿ 100 ಕೆ.ಜಿ.ಯಿಂದ 200 ಕೆ.ಜಿ. ತ್ಯಾಜ್ಯ ಸಂಸ್ಕರಣೆ ಮಾಡುವ ಘಟಕದ ಸ್ಥಾಪನೆಯನ್ನು ಕಡ್ಡಾಯಗೊಳಿಸಲಾಗುವುದು’ ಎಂದು ಮುಖ್ಯಮಂತ್ರಿ ತಿಳಿಸಿದರು.

‘ಮಾಲ್‌ಗಳು, ದೊಡ್ಡ ರೆಸ್ಟೋರೆಂಟ್‌ಗಳು, ಕಲ್ಯಾಣ ಮಂಟಪಗಳು, ಆಸ್ಪತ್ರೆಗಳಲ್ಲಿ ಸ್ಥಾಪಿಸಬಹುದಾದ ಅತ್ಯಾಧುನಿಕ ತಂತ್ರಜ್ಞಾನ ಹೊಂದಿದ ಈ ಘಟಕಗಳ ಸ್ಥಾಪನೆಯಿಂದ ಸ್ಥಳೀಯವಾಗಿಯೇ ತ್ಯಾಜ್ಯ ಸಂಸ್ಕರಣೆ ಕೈಗೊಳ್ಳಬಹುದು. ಈ ಘಟಕವು ಜನರೇಟರ್‌ನಷ್ಟು ಗಾತ್ರ ಹೊಂದಿದೆ. ಇದರಿಂದ ಉತ್ಪತ್ತಿಯಾಗುವ ಸಾವಯವ ಗೊಬ್ಬರವನ್ನು ಕೃಷಿಗೆ ಬಳಸಿಕೊಳ್ಳಬಹುದಾಗಿದೆ’ ಎಂದರು.

‘ಅಡುಗೆ ಎಣ್ಣೆ ಅನಧಿಕೃತ ದಾಸ್ತಾನು ವಿರುದ್ಧ ಕ್ರಮ’

ಪ್ರಜಾವಾಣಿ ವಾರ್ತೆ



ಮಂಜುನಾಥ್

ಬೆಂಗಳೂರು: ‘ರಷ್ಯಾ–ಉಕ್ರೇನ್ ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿ ಲಾಭ ಮಾಡಿಕೊಳ್ಳಲು ಅಡುಗೆ ಎಣ್ಣೆಯನ್ನು ಅನಧಿಕೃತ ದಾಸ್ತಾನು ಮಾಡಿಕೊಂಡು ಕಾಳಸಂತೆಯಲ್ಲಿ ಮಾರಾಟಕ್ಕೆ ಯತ್ನಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಎಚ್ಚರಿಸಿದರು.

‘ಅಕ್ರಮ ದಾಸ್ತಾನು ಮಾಡಿ ಕಾಳಸಂತೆಯಲ್ಲಿ ಮಾರಾಟ ಆಗಲಿದೆಯೇ ಎಂಬುದರ ಬಗ್ಗೆ ಜಿಲ್ಲಾಡಳಿತ ನಿಗಾ ವಹಿಸಲಿದೆ. ದರ ಹೆಚ್ಚಳದ ಬಗ್ಗೆಯೂ ಮಾಹಿತಿ ಬಂದಿದ್ದು, ಆ ಬಗ್ಗೆಯೂ ಪರಿಶೀಲನೆ ನಡೆಸಲಾಗುವುದು’ ಎಂದು ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮನೆ ಬಾಗಿಲಿಗೆ ಕಂದಾಯ ದಾಖಲೆ:

‘ಕಂದಾಯ ದಾಖಲೆಗಳನ್ನು ಮನೆ ಬಾಗಿಲಿಗೆ ತಲುಪಿಸುವ ಯೋಜನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶನಿವಾರ ಚಾಲನೆ ನೀಡಲಿದ್ದಾರೆ. ಬೆಂಗಳೂರು ಜಿಲ್ಲೆಯ 5 ತಾಲ್ಲೂಕುಗಳಲ್ಲಿ ಯೋಜನೆ ಜಾರಿ ಮಾಡಲಾಗುತ್ತಿದೆ. 97,209 ಪಹಣಿ, 11,513 ನಕ್ಷೆ, 31,232 ಜಾತಿ ಮತ್ತು ಆದಾಯ ದೃಢೀಕರಣ ಪತ್ರಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 52,285 ರೈತ ಕುಟುಂಬಗಳಿಗೆ ಇದರಿಂದ ಅನುಕೂಲ ಆಗಲಿದೆ’ ಎಂದು ವಿವರಿಸಿದರು.

‘ಬಿಬಿಎಂಪಿ ಚುನಾವಣೆ ನಡೆಸಲು ವಾರ್ಡ್ ಮರು ವಿಂಗಡಣೆ ಕುರಿತಂತೆ ಸಭೆ ನಡೆಸಲಾಗಿದೆ. 2011ರ ಜನಗಣತಿ ಆಧಾರದಲ್ಲಿ ಚುನಾವಣೆ ನಡೆಸಲು ಸಿದ್ಧತೆ ನಡೆಯುತ್ತಿದೆ. ಮತದಾರರ ಪಟ್ಟಿಯ ಕರಡು ಕೂಡ ಸಿದ್ಧವಿದೆ. ಚುನಾವಣೆ ನಡೆಸಲು ಆಯೋಗ ಸೂಚನೆ ನೀಡಿದರೆ ನಾವು ಸಿದ್ಧರಿದ್ದೇವೆ’ ಎಂದರು.

‘ಬಿಬಿಎಂಪಿಗೆ ಸೇರಿಸಬೇಕೆಂಬ ಉದ್ದೇಶದಿಂದ ಕೆಲ ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆದಿಲ್ಲ. ಈ ಕುರಿತು ನಗರಾಭಿವೃದ್ಧಿ ಇಲಾಖೆ ಸೂಕ್ತ ನಿರ್ಧಾರ ಕೈಗೊಳ್ಳಲಿದೆ. ಕೆಲವು ಗ್ರಾ. ಪಂ.ಗಳನ್ನು ಬಿಬಿಎಂಪಿಗೆ ಸೇರಿಸುವ ವಿಷಯ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. ವಿಧಾನಸಭಾ ಕ್ಷೇತ್ರವಾರು ಎಷ್ಟು ವಾರ್ಡ್‌ಗಳಿವೆ ಎಂಬುದರ ಪಟ್ಟಿ ಸಿದ್ಧಪಡಿಸಲಾಗುತ್ತಿದೆ. 243 ವಾರ್ಡ್‌ಗಳಾಗಿ ವಿಂಗಡಿಸಿ ಚುನಾವಣೆ ನಡೆಸಲಾಗುವುದು’ ಎಂದು ಜೆ. ಮಂಜುನಾಥ್ ಹೇಳಿದರು.

ಬಿಬಿಎಂಪಿ ಶಿಕ್ಷಕರು, ಉಪನ್ಯಾಸಕರ ವೇತನ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸಿದ ಬಿಬಿಎಂಪಿ ಶಾಲಾ ಕಾಲೇಜುಗಳ 340ಕ್ಕೂ ಹೆಚ್ಚು ಶಿಕ್ಷಕರು ಮತ್ತು ಉಪನ್ಯಾಸಕರ ಎರಡು ತಿಂಗಳ ವೇತನವನ್ನು ಬಿಬಿಎಂಪಿ ಬಾಕಿ ಉಳಿಸಿಕೊಂಡಿದೆ.

‘2020ರ ಜೂನ್ ಮತ್ತು ಜುಲೈನಲ್ಲಿ ಕೋವಿಡ್ ಇದ್ದರೂ ಉಪನ್ಯಾಸಕರು ಮತ್ತು ಶಿಕ್ಷಕರನ್ನು ಕರ್ತವ್ಯಕ್ಕೆ ಹಾಜರಾಗಲು ಸೂಚಿಸಲಾಗಿತ್ತು. ಶಾಲಾ–ಕಾಲೇಜುಗಳು ಮುಚ್ಚಿದ್ದರಿಂದ ಕೋವಿಡ್ ನಿರ್ವಹಣೆ ಕೆಲಸಕ್ಕೆ ನೇಮಿಸಿಕೊಳ್ಳಲಾಗಿತ್ತು. ಮನೆ–ಮನೆ ಸರ್ವೆ ಸೇರಿ ವಹಿಸಿದ ಎಲ್ಲ ಕೆಲಸಗಳನ್ನು ಶಿಕ್ಷಕರು ಮಾಡಿದ್ದಾರೆ. ಆದರೆ, ವೇತನ ಮಾತ್ರ ಬಂದಿಲ್ಲ’ ಎಂದು ಶಿಕ್ಷಕರು ಬೇಸರ ವ್ಯಕ್ತಪಡಿಸುತ್ತಾರೆ.

‘ಕೋವಿಡ್ ಪರಿಸ್ಥಿತಿ ಉತ್ತುಂಗದಲ್ಲಿ ಇದ್ದ ಆ ಸಂದರ್ಭದಲ್ಲಿ ಮನೆ ಬಿಟ್ಟು ಹೊರಗೆ ಬರಲು ಜನ ಭಯಪಡುತ್ತಿದ್ದರು. ಜೀವಭಯವನ್ನೂ ತೊರೆದು ಕೋವಿಡ್ ನಿಯಂತ್ರಣಕ್ಕೆ ಶ್ರಮಿಸಿದ್ದೆವು. ದುಡಿಸಿಕೊಂಡ ಬಿಬಿಎಂಪಿ ನಮ್ಮನ್ನು ಮರೆತುಬಿಟ್ಟಿದೆ’ ಎಂದು ಶಿಕ್ಷಕರೊಬ್ಬರು ‘ಪ್ರಜಾವಾಣಿ’ ಜತೆ ಅಳಲು ತೋಡಿಕೊಂಡರು.

‘2020ರ ನವೆಂಬರ್‌ನಲ್ಲಿ ಹಾಜರಾತಿ ಒದಗಿಸಲು ಬಿಬಿಎಂಪಿ ಅಧಿಕಾರಿಗಳು ಕೇಳಿದ್ದರು. ಮೊದಲಿಗೆ ಹಾಜರಾತಿ ಒದಗಿಸಿದ 108 ಶಿಕ್ಷಕರಿಗೆ ಮಾತ್ರ ಸಂಬಳ ನೀಡಲಾಗಿದೆ. ನಂತರ ಹಾಜರಾತಿ ತಲುಪಿಸಿದ ಉಳಿದ 340ಕ್ಕೂ ಹೆಚ್ಚು ಶಿಕ್ಷಕರಿಗೆ ವೇತನವೇ ಬಂದಿಲ್ಲ. ಬಿಬಿಎಂಪಿ ಶಿಕ್ಷಣ ವಿಭಾಗದಿಂದ ಪಾಲಿಕೆಯ ಹಣಕಾಸು ವಿಭಾಗ ಮತ್ತು ಮುಖ್ಯ ಆಯುಕ್ತರ ಕಚೇರಿಗೆ ಕಳುಹಿಸುವ ಕಡತವನ್ನು ಪದೇ ಪದೇ ವಾಪಸ್ ಕಳುಹಿಸಲಾಗುತ್ತಿದೆ. ಮುಖ್ಯ ಆಯುಕ್ತರೂ ನಮ್ಮ ಮನವಿಗೆ ಸ್ಪಂದಿಸುತ್ತಿಲ್ಲ’ ಎಂದರು.

‘ಶಿಕ್ಷಕರು ಮತ್ತು ಉಪನ್ಯಾಸಕರು ಕೋವಿಡ್ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ಕಳುಹಿಸಿದ್ದ ಕಡತವನ್ನು ಹಣಕಾಸು ವಿಭಾಗದವರು ಎರಡು ಬಾರಿ ವಾಪಸ್ ಕಳುಹಿಸಿ ಕೆಲವು ದಾಖಲೆಗಳನ್ನು ಕೇಳಿದ್ದರು. ಅವೆಲ್ಲವನ್ನೂ ಈಗ ಒದಗಿಸಿದ್ದೇವೆ. ಈಗ ಮುಖ್ಯ ಆಯುಕ್ತರ ಮುಂದೆ ಕಡತ ಇದೆ. ಅವರು ನಿರ್ಧಾರ ಕೈಗೊಳ್ಳಲಿದ್ದಾರೆ’ ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ಸಹಾಯಕ ಆಯುಕ್ತ ಉಮೇಶ್ ‘ಪ್ರಜಾವಾಣಿ’ಗೆ ಸ್ಪಷ್ಟಪಡಿಸಿದರು.

ಒಂಟಿ ಸಲಗ ದಾಳಿ: ಇಬ್ಬರು ಕಾರ್ಮಿಕರ ಸಾವು

ಪ್ರಜಾವಾಣಿ ವಾರ್ತೆ

ಬೇಲೂರು: ತಾಲ್ಲೂಕಿನ ಕಡೇಗರ್ಜೆ ಗ್ರಾಮದ ಶಾರದಾ ಕಾಫಿ ಎಸ್ಟೇಟ್‌ನಲ್ಲಿ ಶುಕ್ರವಾರ ಒಂಟಿ ಸಲಗದ ದಾಳಿಗೆ ಕಾರ್ಮಿಕರಾದ ಚಿಕ್ಕಯ್ಯ (50) ಹಾಗೂ ಚಿಕ್ಕಯ್ಯ ಅಲಿಯಾಸ್ ಮಾರಿಗುಡ್ಡಿ (52) ಮೃತಪಟ್ಟರು. ಓಡಿ ಪಾರಾಗಲು ಕಾರ್ಮಿಕರು ಯತ್ನಿಸಿದರೂ ಸಾಧ್ಯವಾಗಲಿಲ್ಲ.


ಘಟನೆ ಖಂಡಿಸಿ ಸಾರ್ವಜನಿಕರು ಬೇಲೂರು, ಸಕಲೇಶಪುರ ಮಾರ್ಗದ ರಸ್ತೆ ಬಂದ್ ಮಾಡಿ, ಟೈರ್‌ಗಳಿಗೆ ಬೆಂಕಿ ಹಚ್ಚಿ, ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಡಿಸಿದರು. ಕೆಲ ಕಾಲ ವಾಹನ ಸಂಚಾರ ಸ್ಥಗಿತಗೊಂಡಿತ್ತು.

ಸ್ಥಳಕ್ಕೆ ಭೇಟಿ ನೀಡಿದ್ದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎನ್. ಬಸವರಾಜ್, ಮೃತರ ಕುಟುಂಬಕ್ಕೆ ತಲಾ ₹2.50 ಲಕ್ಷ ಪರಿಹಾರದ ಚೆಕ್ ನೀಡಿದರು. 'ಉಳಿದ ₹ 5 ಲಕ್ಷ ಮೊತ್ತವನ್ನು ಕುಟುಂಬದವರ ಖಾತೆಗೆ ಜಮಾ ಮಾಡಲಾಗುತ್ತದೆ' ಎಂದು ತಿಳಿಸಿದರು.

ಮಳಖೇಡದಲ್ಲಿ 'ಶ್ರೀಮನ್ನ್ಯಾಯಸುಧಾ ಮಂಗಳ ಮಹೋತ್ಸವ'

ಸುಧಾ ಪರೀಕ್ಷಾಸತ್ರ ದೀಕ್ಷಿತರಿಗೆ ಅನುಗ್ರಹ

ಪ್ರಜಾವಾಣಿ ವಾರ್ತೆ



ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡದಲ್ಲಿ ಆಯೋಜಿಸಿದ 'ಶ್ರೀಮನ್ನ್ಯಾಯಸುಧಾ ಮಂಗಳ ಮಹೋತ್ಸವ'ದಲ್ಲಿ ಶುಕ್ರವಾರ ವಿದ್ಯಾಪ್ರಸನ್ನ ತೀರ್ಥರು, ವಿದ್ಯಾಧೀಶ ತೀರ್ಥರು, ಸತ್ಯಾತ್ಮ ತೀರ್ಥರು, ವಿದ್ಯಾವಲ್ಲಭ ತೀರ್ಥರು, ರಘುವಿಜಯ ತೀರ್ಥರು 20 ಸುಧಾಪರೀಕ್ಷಾಸತ್ರ ದೀಕ್ಷಿತರಿಗೆ ಅನುಗ್ರಹ ನೀಡಿದರು
ಪ್ರಜಾವಾಣಿ ಚಿತ್ರ

ಮಳಖೇಡ (ಕಲಬುರಗಿ ಜಿಲ್ಲೆ): ಇಲ್ಲಿನ ಜಯತೀರ್ಥರ ಮೂಲ ವೃಂದಾವನ ಸನ್ನಿಧಾನದಲ್ಲಿ ಆಯೋಜಿಸಿರುವ 'ಶ್ರೀಮನ್ನ್ಯಾಯಸುಧಾ ಮಂಗಳ ಮಹೋತ್ಸವ'ದ ಎರಡನೇ ದಿನವಾದ ಶುಕ್ರವಾರ, ಅಧ್ಯಾತ್ಮ ವಿಚಾರಗೋಷ್ಠಿ ಹಾಗೂ ಸುಧಾನುವಾದ ಕಾರ್ಯಕ್ರಮದಲ್ಲಿ ಐವರು ಮಠಾಧೀಶರು ಒಂದೇ ವೇದಿಕೆಯಲ್ಲಿ ಸಮಾಗಮವಾದರು.

ಪಲಿಮಾರು ಮಠದ ಪೀಠಾಧಿಪತಿ ವಿದ್ಯಾಧೀಶ ತೀರ್ಥರು, ಸುಬ್ರಹ್ಮಣ್ಯದ ಮಠಾಧೀಶರಾದ ವಿದ್ಯಾಪ್ರಸನ್ನ ತೀರ್ಥರು, ಉತ್ತರಾದಿ ಮಠದ ಸತ್ಯಾತ್ಮ ತೀರ್ಥರು, ಕಾಣಿಯೂರು ಮಠಾಧೀಶರಾದ ವಿದ್ಯಾವಲ್ಲಭ ತೀರ್ಥರು, ಕೂಡಲಿಯ ಆರ್ಯಅಕ್ಷೋಭ್ಯತೀರ್ಥರ ಮಠಾಧಿಪತಿ ರಘುವಿಜಯ ತೀರ್ಥರ ಏಕಕಾಲಕ್ಕೆ ದರ್ಶನ ನೀಡಿದರು.

ಭದ್ರಾಚಲಂ, ಮೋತಂಪಲ್ಲಿ, ಮುತ್ತಿಗಿ, ಶೂರ್ಪಾಲಯ, ಯಲಗೂರ ಮುಂತಾದ ಕ್ಷೇತ್ರಗಳಿಂದ ಪ್ರಧಾನ ಅರ್ಚಕರು ಕ್ಷೇತ್ರ ಮೂರ್ತಿಗಳ ಪ್ರಸಾದವನ್ನು ಸತ್ಯಾತ್ಮತೀರ್ಥ ಶ್ರೀಪಾದಂಗಳವರಿಗೆ ಸಮರ್ಪಿಸಿದರು. ಪರಸ್ಪರ ಎಲ್ಲ ಶ್ರೀಗಳವರಿಗೆ ಮರ್ಯಾದೆ ಸಲ್ಲಿಸಲಾಯಿತು. 'ಜಯತೀರ್ಥರ ಪೂರ್ಣ ಸನ್ನಿಧಾನ ಮಳಖೇಡದಲ್ಲಿದೆ ಎಂಬುದಕ್ಕೆ ಎರಡು ಮಾತಿಲ್ಲ. ವ್ಯಾಸರಾಜರ 'ತರ್ಕತಾಂಡವ' ವ್ಯಾಖ್ಯಾನ ಇಲ್ಲಿ ಬಿಡುಗಡೆ ಆದದ್ದು ಸಹ ಜಯತೀರ್ಥರ ಮೂಲ ಬೃಂದಾವನ ಸನ್ನಿಧಿ ಇಲ್ಲಿದೆ ಎಂಬ ಕಾರಣದಿಂದಲೇ' ಎಂದು ಪಲಿಮಾರು ಮಠಾಧೀಶ ವಿದ್ಯಾಧೀಶ ತೀರ್ಥರು ಪ್ರತಿಪಾದಿಸಿದರು.

ನಂತರ, ಸುಧಾ ಪರೀಕ್ಷಾಸತ್ರ ದೀಕ್ಷಿತರಾದ ಎಲ್ಲ 20 ವಿದ್ಯಾರ್ಥಿಗಳಿಗೂ ಮಠಾಧಿಪತಿಗಳು ಅನುಗ್ರಹ ಸಂದೇಶ ನೀಡಿದರು. ಸಭಾಂಗಣದಿಂದ ಜೈಕಾರ ಮೊಳಗಿದವು. ವಿವಿಧ ವಿದ್ಯಾಪೀಠಗಳಿಂದ ಬಂದ ವಿದ್ವಾಂಸರು, ಉತ್ತರಾದಿ ಮಠದ ಶಿಷ್ಯರು, ಮಹಿಳೆಯರು ಮತ್ತು ಮಕ್ಕಳು ಕಿಕ್ಕಿರಿದು ಸೇರಿದ್ದರು.

ಶನಿವಾರ (ಮಾರ್ಚ್ 12) ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ 'ಶ್ರೀಮನ್ನ್ಯಾಯಸುಧಾ ರಥೋತ್ಸವ' ಹಾಗೂ 'ಅರ್ಚತ- ಪ್ರಾರ್ಚತ' ಸಂಸ್ಥಾನ ಪೂಜಾ ಕಾರ್ಯಗಳು ನೆರವೇರಲಿವೆ. ರಾತ್ರಿ ಸಂಗೀತ ಸಮಾರಾಧನೆಯೊಂದಿಗೆ ಕಾರ್ಯಕ್ರಮಕ್ಕೆ ತೆರೆಬೀಳಲಿದೆ.

ಕ್ವಾರಿ ಕುಸಿತ; ಗುತ್ತಿಗೆದಾರನ ಬಂಧನ

ಗುಂಡ್ಲುಪೇಟೆ: ತಾಲ್ಲೂಕಿನ ಮಡಹಳ್ಳಿ ಬಿಳಿ ಕಲ್ಲು ಕ್ವಾರಿ ಗುಡ್ಡ ಕುಸಿತ ಪ್ರಕರಣದ ಮೊದಲ ಆರೋಪಿ, ಕ್ವಾರಿ ಗುತ್ತಿಗೆದಾರ ಮಹೇಂದ್ರಪ್ಪ ಅವರನ್ನು ಶುಕ್ರವಾರ ತನಿಖಾ ತಂಡವು ಬಂಧಿಸಿದೆ. ಗುಡ್ಡ ಕುಸಿದ ವಾರದ ನಂತರ ಈ ಬೆಳವಣಿಗೆ ನಡೆದಿದೆ.

'ಕ್ವಾರಿ ಉಸ್ತುವಾರಿಯಾಗಿದ್ದ ನವೀದ್ ಅನ್ನು ಬಂಧಿಸಲಾಗಿತ್ತು. ಇನ್ನೊಬ್ಬ ಆರೋಪಿ ಪತ್ತೆಗೆ ಕಾರ್ಯಾಚರಣೆ ನಡೆದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಅಕ್ರಮ ಕಟ್ಟಡಗಳ ತೆರವು



ನಕ್ಷೆ ಉಲ್ಲಂಘಿಸಿ ನಿರ್ಮಾಣವಾಗುತ್ತಿದ್ದ ಕಟ್ಟಡದ ತೆರವು ಕಾರ್ಯಾಚರಣೆ ನಡೆಸಲಾಯಿತು.

ಬೊಮ್ಮನಹಳ್ಳಿ: ನಿಯಮ ಉಲ್ಲಂಘಿಸಿ ನಿರ್ಮಿಸಿದ್ದ ಕಟ್ಟಡಗಳನ್ನು ತೆರವುಗೊಳಿಸುವ ಕಾರ್ಯಕ್ಕೆ ಬಿಬಿಎಂಪಿ ಬೊಮ್ಮನಹಳ್ಳಿ ವಲಯದ ಅಧಿಕಾರಿಗಳು ಮುಂದಾಗಿದ್ದಾರೆ.

ಶುಕ್ರವಾರ ವಸಂತಪುರ ವಾರ್ಡ್‌ನ ಕಲ್ಯಾಣಿ ನಗರ, ಬೇಗೂರು ವಾರ್ಡ್‌ನ ಅಕ್ಷಯ ನಗರ, ಸಿಂಗಸಂದ್ರ ವಾರ್ಡ್‌ನ ಎಇಸಿಎಸ್ ಬಡಾವಣೆ ಎ ಬ್ಲಾಕ್, ಗೊಟ್ಟಿಗೆರೆ ವಾರ್ಡ್‌ನ ಕಾಳೇನ ಅಗ್ರಹಾರ ಹಾಗೂ ಕೊತ್ತನೂರು, ಅಂಜನಾಪುರ ವಾರ್ಡ್‌ನ ಆದಿತ್ಯ ಬಡಾವಣೆಗಳಲ್ಲಿ ಏಕಕಾಲಕ್ಕೆ ಜೆಸಿಬಿ ಯಂತ್ರಗಳೊಂದಿಗೆ ತೆರವು ಕಾರ್ಯಾಚರಣೆ ನಡೆಸಿದರು.

ತೆರವು ಕಾರ್ಯಾಚರಣೆ ವೇಳೆ ಕಟ್ಟಡದ ಮಾಲೀಕರು ಅಡ್ಡಿಪಡಿಸಿದರು. ಹೈಕೋರ್ಟ್ ಆದೇಶದಂತೆ ತೆರವು ಕಾರ್ಯಾಚರಣೆ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದರು.

'ಸಾರ್ವಜನಿಕ ಉದ್ದೇಶಕ್ಕೆ ಮೀಸಲಿಟ್ಟ ಜಾಗದಲ್ಲಿ ನಿಯಮಗಳನ್ನು ಉಲ್ಲಂಘಿಸಿ, ಮನೆಗಳ ನಿರ್ಮಾಣ ಮಾಡಲಾಗುತ್ತಿದ್ದು, ಈ ಬಗ್ಗೆ ವಿಚಾರಣೆ ನಡೆಸಿದ ಹೈಕೋರ್ಟ್ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸುವಂತೆ ಆದೇಶಿಸಿದೆ. ಅದರಂತೆ ನಾವು ಕಾರ್ಯಾಚರಣೆ ಕೈಗೊಂಡಿದ್ದೇವೆ' ಎಂದು ಅಧಿಕಾರಿಗಳು ಪ್ರತಿಕ್ರಿಯಿಸಿದರು.

'ನಕ್ಷೆ ಉಲ್ಲಂಘಿಸಿ ಚಕ್ಕುಬಂದಿ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮಾಡಲಾಗಿದೆ, ಈ ಕುರಿತಂತೆ ಕಟ್ಟಡ ಮಾಲೀಕರಿಗೆ ನೋಟಿಸ್ ನೀಡಿ ತೆರವು ಮಾಡಿಕೊಡುವಂತೆ ಸೂಚಿಸಲಾಗಿತ್ತು. ಆದರೆ, ಕಟ್ಟಡದ ಮಾಲೀಕರು ಸ್ಪಂದಿಸಲಿಲ್ಲ. ಆದ್ದರಿಂದ ತೆರವು ಕಾರ್ಯಾಚರಣೆ ಅನಿವಾರ್ಯವಾಯಿತು' ಎಂದು ಎಂದು ಬಿಬಿಎಂಪಿ ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತ ಎಂ.ರಾಮಕೃಷ್ಣ ಹೇಳಿದರು.

ಮುಖ್ಯ ಎಂಜಿನಿಯರ್ ಶಶಿಕುಮಾರ್ 'ನಿಯಮಾನುಸಾರ ಕಟ್ಟಿದ ಕಟ್ಟಡಗಳಿಗೆ ಯಾವುದೇ ತೊಂದರೆ ಆಗುವುದಿಲ್ಲ. ಸಾರ್ವಜನಿಕರು ಗೊಂದಲಕ್ಕೆ ಒಳಗಾಗಬೇಕಿಲ್ಲ. ಕೆಲವರು ರಸ್ತೆಗಳನ್ನೇ ಒತ್ತುವರಿ ಮಾಡಿ ಕಟ್ಟಿದ್ದಾರೆ. ಅಂತಹ ಕಟ್ಟಡಗಳ ತೆರವು ಅನಿವಾರ್ಯ' ಎಂದರು. ಕಾರ್ಯನಿವಾಹಕ ಎಂಜಿನಿಯರ್ ಪ್ರಮೋದ್ ಇದ್ದರು.

ಬಿಬಿಎಂಪಿ ಆವರಣದ ಅನೆಕ್ಸ್ –3 ಕಟ್ಟಡದ 6ನೇ ಮಹಡಿಯಲ್ಲಿ ಈ ಕೇಂದ್ರ

ನಗರ ಅಭಿವೃದ್ಧಿ: ಐಸಿಸಿಸಿ ತೆರೆಯಲು ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿರುವ 14 ಸರ್ಕಾರಿ ಸಂಸ್ಥೆಗಳನ್ನು ಒಂದೇ ಸೂರಿನಡಿ ತರುವ ನಿಟ್ಟಿನಲ್ಲಿ ಇಂಟಿಗ್ರೇಟೆಡ್ ಕಮಾಂಡ್ ಕಂಟ್ರೋಲ್ ಸೆಂಟರ್ (ಐಸಿಸಿಸಿ) ತೆರೆಯಲು ಸಿದ್ಧತೆ ಆರಂಭವಾಗಿದೆ.

ಬಿಬಿಎಂಪಿ ಆವರಣದ ಅನೆಕ್ಸ್ –3 ಕಟ್ಟಡದ 6ನೇ ಮಹಡಿಯಲ್ಲಿ ಈ ಕೇಂದ್ರ ತೆರೆಯಲಾಗುತ್ತಿದ್ದು, ಇನ್ನು 100 ದಿನಗಳಲ್ಲಿ ಕೇಂದ್ರ ಸಿದ್ಧವಾಗಲಿದೆ. ಮೊಬೈಲ್ ಆ್ಯಪ್ ಮತ್ತು ವೆಬ್‌ಸೈಟ್‌ಗಳನ್ನೂ ಈ ಕೇಂದ್ರ ಒಳಗೊಳ್ಳಲಿದೆ. ನಗರದಲ್ಲಿ ನಡೆಯುತ್ತಿರುವ ಎಲ್ಲ ಸಾರ್ವಜನಿಕ ಯೋಜನೆಗಳ ವಿವರ ಒಂದೆಡೆಯೇ ದೊರಕಲಿದೆ.

ಒಂದು ಸಂಸ್ಥೆ ಕಾಮಗಾರಿ ನಿರ್ವಹಿಸಿರುವ ಅರಿವಿಲ್ಲದೆ ಇನ್ನೊಂದು ಸಂಸ್ಥೆಯೂ ಅದೇ ರೀತಿಯ ಯೋಜನೆ ರೂಪಿಸುವುದನ್ನು ತಡೆಯಲು ಇದು ಸಹಾಯವಾಗಲಿದೆ. ಈ ಕೇಂದ್ರವು ಎಲ್ಲ ಸಂಸ್ಥೆಗಳ ಮೇಲ್ವಿಚಾರಣೆ ಮಾಡುವ ನಿರೀಕ್ಷೆ ಇದೆ ಎಂದು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ತಿಳಿಸಿದರು.



ಇಂಟಿಗ್ರೇಟೆಡ್ ಕಮಾಂಡ್ ಆ್ಯಂಡ್ ಕಂಟ್ರೋಲ್ ಸೆಂಟರ್ ಬಗ್ಗೆ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಮಾಹಿತಿ ನೀಡಿದರು. ವಿಶೇಷ ಆಯುಕ್ತ(ಆರೋಗ್ಯ) ಕೆ.ವಿ. ತ್ರಿಲೋಕಚಂದ್ರ ಇದ್ದರು

'ಈ 14 ಸಂಸ್ಥೆಗಳ ಬಗ್ಗೆ ಕುಂದು ಕೊರತೆಗಳನ್ನು ಸಲ್ಲಿಸಲು ನಾಗರಿಕರಿಗೂ ಇಲ್ಲಿ ಅವಕಾಶ ಲಭ್ಯವಾಗಲಿದೆ. ಸಹಾಯವಾಣಿಗೆ ಕರೆ ಮಾಡಿ ದೂರು ನೀಡಿದರೆ, ಬೆನ್ನತ್ತಿ ಪರಿಶೀಲನೆ ನಡೆಸಲಾಗುತ್ತಿದೆ. ಸಮಸ್ಯೆ ಪರಿಹರಿಸದೆ ಯಾವುದೇ ದೂರುನ್ನೂ ವಿಲೇವಾರಿ ಮಾಡುವುದಿಲ್ಲ' ಎಂದರು.

'ಐಸಿಸಿಸಿ ಸ್ಥಾಪಿಸುವ ಪ್ರಸ್ತಾವನೆ ಮೂರು ವರ್ಷಗಳಿಂದ ಚರ್ಚೆಯಲ್ಲಿತ್ತು. ಸರ್ಕಾರದ 14 ಸಂಸ್ಥೆಗಳ ದತ್ತಾಂಶ ಸಂಯೋಜಿಸುವುದು ಕಷ್ಟದ ಕೆಲಸ. ಹೇಗೆ ಮಾಡಬಹುದು ಎಂಬುದರ ಬಗ್ಗೆ ಎಲ್ಲಾ ಇಲಾಖೆಗಳ ಜತೆ ನಿರಂತರ ಮಾತುಕತೆ ನಡೆಸಿ ತೀರ್ಮಾನಕ್ಕೆ ಬರಲಾಗಿದೆ' ಎಂದು ಚೋಳನ್ ಹೇಳಿದರು.

'ನಗರದ ಸಮಗ್ರ ಯೋಜನೆಗಾಗಿ ವಿವಿಧ ಇಲಾಖೆಗಳಿಂದ ಮಾಹಿತಿ ಸಂಗ್ರಹಿಸಿ ಅವುಗಳನ್ನು ಒಟ್ಟುಗೂಡಿಸಿ ವಿಶ್ಲೇಷಿಸುವ ವ್ಯವಸ್ಥೆಯನ್ನೂ ಸಾಫ್ಟ್‌ವೇರ್ ಒಳಗೊಳ್ಳಲಿದೆ. ಈ ವ್ಯವಸ್ಥೆಯು ನಗರದ ಬೆಳವಣಿಗೆಗೆ ಸಮಗ್ರ ನೋಟ ಒದಗಿಸುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

'ನಗರದ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳ ದತ್ತಾಂಶವು ಈಗ ಆಯಾ ಇಲಾಖೆಗಳಲ್ಲಿ ಮಾತ್ರ ಲಭ್ಯವಿದೆ. ಮುಂದಿನ ದಿನಗಳಲ್ಲಿ ಐಸಿಸಿಸಿಯಲ್ಲಿ ಎಲ್ಲಾ ಇಲಾಖೆಗಳ ಮಾಹಿತಿ ಒಂದೇ ವೇದಿಕೆಯಲ್ಲಿ ಲಭ್ಯವಾಗಲಿದೆ. ನಗರದ ಅಭಿವೃದ್ಧಿಗೆ ಸಂಬಂಧಿಸಿದ ನಿರ್ಧಾರಗಳನ್ನು ಕೈಗೊಳ್ಳಲು ಇದು ನೆರವಾಗಲಿದೆ' ಎಂದರು.

'ಈ ಯೋಜನೆಗೆ ₹90 ಕೋಟಿ ಮೊತ್ತ ಬೇಕಾಗಲಿದೆ ಎಂದು ಅಂದಾಜಿಸಲಾಗಿದೆ. ಬಿಬಿಎಂಪಿ, ಜಲ ಮಂಡಳಿ, ಬೆಂಗಳೂರು ನಗರ ಪೊಲೀಸ್, ಬೆಂಗಳೂರು ಸಂಚಾರ ಪೊಲೀಸ್, ಬಿಎಂಟಿಸಿ, ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಸೇರಿ 14 ಇಲಾಖೆಗಳು ಇಲ್ಲಿ ಸಂಯೋಜನೆಗೊಳ್ಳಲಿವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸರ್ಕಾರಿ ಸಂಸ್ಥೆಗಳನ್ನು ಈ ವೇದಿಕೆಗೆ ತರುವ ಉದ್ದೇಶ ಇದೆ' ಎಂದರು.

ಸುದ್ದಿ 2 ನಿಮಿಷ

ಯೋಗಿ ಪ್ರಧಾನಿ ಪಟ್ಟದ ಭವಿಷ್ಯದ ಭರವಸೆ: ರಾಘವೇಶ್ವರ ಶ್ರೀ

ಹೊಸನಗರ: ಉತ್ತರ ಪ್ರದೇಶದಲ್ಲಿ ಬಿಜೆಪಿಯು ಯೋಗಿ ಆದಿತ್ಯನಾಥ ನೇತೃತ್ವದಲ್ಲಿ ಚುನಾವಣೆ ಎದುರಿಸಿ ಗೆದ್ದಿರುವುದಕ್ಕೆ ಹೊಸನಗರ ರಾಮಚಂದ್ರಪುರ ಮಠದ ಪೀಠಾಧೀಶ ರಾಘವೇಶ್ವರ ಭಾರತೀ ಸ್ವಾಮೀಜಿ ಹರ್ಷ ವ್ಯಕ್ತಪಡಿಸಿದರು.

'ಯೋಗಿ ಆದಿತ್ಯನಾಥ ಅವರು ನುಡಿದಂತೆ ನಡೆದ ನಿಜ ನಾಯಕ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಅವರಿಗೆ ಪ್ರಧಾನಿ ಆಗಿ ರಾಷ್ಟ್ರ ಕಾಯುವ ಜ್ಯೇಷ್ಠತೆ, ಅರ್ಹತೆ ಎರಡೂ ಇದೆ' ಎಂದರು.

'ದೇಶದ ಗೋ ಸಂತತಿ ಬಗೆಗಿನ ಅವರ ಪ್ರೇಮ, ಹಿಂದುತ್ವದ ಮೇಲಿದ್ದ ಶ್ರದ್ಧೆ ಅವರನ್ನು ರಾಷ್ಟ್ರನಾಯಕರನ್ನಾಗಿ ಗುರುತಿಸಿದೆ. ಉತ್ತರ ಪ್ರದೇಶದಲ್ಲಿನ ಅವರ ಆಡಳಿತ ಇಡೀ ರಾಷ್ಟ್ರಕ್ಕೆ ಮಾದರಿ ಆಗಿದೆ. ಯೋಗಿ ಅವರು ಸಂತ ಕುಲಕ್ಕೆ ಭೂಷಣರಾಗಿದ್ದಾರೆ' ಎಂದರು.



'ಇಲ್ಲಿಯ ಗೋಲೋಕ ನಮಗೆ ಪ್ರೇರಣಾ ಭೂಮಿಯಾಗಿದೆ. ಮಠವನ್ನು ಇನ್ನಷ್ಟು ಪ್ರೇಕ್ಷಣೀಯ ಸ್ಥಳವಾಗಿಸುವ ಚಿಂತನೆ ನಡೆದಿದೆ. ಈ ಹಿಂದೆ ವಿಶ್ವ ಗೋ ಸಮ್ಮೇಳನ ಮತ್ತು ರಾಮಸತ್ರ ವಿಶಿಷ್ಟ ಕಾರ್ಯಕ್ರಮ ಆಯೋಜಿಸಿ ರಾಷ್ಟ್ರಮಟ್ಟದಲ್ಲಿ ಹೆಸರು ಬಂದಿತ್ತು. ಈಗಲೂ ವೈಶಿಷ್ಟ್ಯಪೂರ್ಣ ಕಾರ್ಯ ನಡೆಯುತ್ತಿದೆ. ಮುಂದಿನ ದಿನದಲ್ಲಿ ಮತ್ತಷ್ಟು ಮಹತ್ವಾಕಾಂಕ್ಷಿ ಕಾರ್ಯ ನಡೆಸಲು ಸಂಕಲ್ಪಿಸಲಾಗಿದೆ' ಎಂದು ಹೇಳಿದರು.

13ರಂದು ಕೃಷ್ಣಾರ್ಪಣಂ: ಇಲ್ಲಿಯ ಮಹಾನಂದಿ ಗೋಲೋಕದಲ್ಲಿನ ಗೋವರ್ಧನ ಗಿರಿಧಾರಿ ಗೋಪಾಲಕೃಷ್ಣ ದೇವಾಲಯದಲ್ಲಿ 13ರಂದು 'ಕೃಷ್ಣಾರ್ಪಣಂ' ಎಂಬ ಸಮರ್ಪಣೆ ಭಾವದ ಕಾರ್ಯಕ್ರಮ ನಡೆಯಲಿದೆ.

ಬೈಜುಸ್: ₹ 6 ಸಾವಿರ ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಆನ್‌ಲೈನ್ ಮೂಲಕ ಶಿಕ್ಷಣ ನೀಡುವ ಬೈಜುಸ್ ಕಂಪನಿಯು ₹ 6 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಿರುವುದಾಗಿ ಶುಕ್ರವಾರ ತಿಳಿಸಿದೆ. ಕಂಪನಿಯ ಸಿಇಒ ಬೈಜು ರವೀಂದ್ರನ್ ಅವರು ಈ ಮೊತ್ತದಲ್ಲಿ ಸರಿಸುಮಾರು ಅರ್ಧದಷ್ಟನ್ನು ತಾವೇ ಹೂಡಿಕೆ ಮಾಡಿದ್ದಾರೆ.

ಸುಮೇರು ವೆಂಚರ್ಸ್, ವಿಟ್ರುವಿಯನ್ ಪಾರ್ಟ್ನರ್ಸ್ ಮತ್ತು ಬ್ಲಾಕ್‌ರಾಕ್ ಕಂಪನಿಗಳು ಬಂಡವಾಳ ಸಂಗ್ರಹಣೆ ಸುತ್ತಿನಲ್ಲಿ ಪಾಲ್ಗೊಂಡಿದ್ದವು. ಕಂಪನಿಯು ಆರಂಭಿಕ ಸಾರ್ವಜನಿಕ ಕೊಡುಗೆ ಮೂಲಕ ತನ್ನ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸಲು ಸಜ್ಜಾಗುತ್ತಿದ್ದು, ಈ ಸಂದರ್ಭದಲ್ಲಿಯೇ ಈ ಮೊತ್ತದ ಬಂಡವಾಳ ಸಂಗ್ರಹ ಮಾಡಿದೆ. ಇನ್ನು ಒಂದು ವರ್ಷದಲ್ಲಿ ಕಂಪನಿ ಐಪಿಒ ನಡೆಸಲಿದೆ ಎನ್ನಲಾಗಿದೆ.

ಈಗಿನ ಹೂಡಿಕೆಯ ಪರಿಣಾಮವಾಗಿ ರವೀಂದ್ರನ್ ಅವರು ಕಂಪನಿಯಲ್ಲಿ ಹೊಂದಿರುವ ಷೇರುಪಾಲು ಶೇಕಡ 23ರಿಂದ ಶೇ 25ಕ್ಕೆ ಏರಿಕೆ ಆಗಿದೆ.

ಬಿಡಿಎ ನಿವೇಶನಗಳ ಅಕ್ರಮ ಪರಭಾರೆ: ಬಂಧನ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಸೇರಿದ್ದ ಬಹುಕೋಟಿ ಮೌಲ್ಯದ ನಿವೇಶನಗಳನ್ನು ಅಕ್ರಮವಾಗಿ ಪರಭಾರೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರು ಮಂದಿಯನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬಿಡಿಎ ಅಧೀಕ್ಷಕಿ ಎಚ್.ಡಿ.ಕಮಲಮ್ಮ, ನಿವೃತ್ತ ನೌಕರೆ ಮಂಜುಳಾ ಬಾಯಿ, ಏಜೆಂಟ್‌ಗಳಾದ ಕೃಷ್ಣೋಜಿರಾವ್, ಮೈಸೂರಿನ ಪ್ರಕಾಶ್, ಗೌಸ್‌ಖಾನ್ ಹಾಗೂ ಸೈಯದ್ ಮೋಸುದ್ದೀನ್ ಬಂಧಿತರು. ಇವರಿಂದ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡು ತನಿಖೆ ನಡೆಸುತ್ತಿದ್ದೇವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಬಿಡಿಎಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮತ್ತಷ್ಟು ಸಿಬ್ಬಂದಿ ಹಾಗೂ ಮಧ್ಯವರ್ತಿಗಳೂ ಹಗರಣದಲ್ಲಿ ಭಾಗಿಯಾಗಿದ್ದು ಅವರೆಲ್ಲಾ ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದಿದ್ದಾರೆ.

'ಆರೋಪಿಗಳು ಕೆಂಗೇರಿಯ ವಿಶ್ವೇಶ್ವರಯ್ಯ ಲೇಔಟ್ ಹಾಗೂ ಎಚ್‌ಬಿಆರ್ ಬಡಾವಣೆಗೆ ಸೇರಿದ ಕೋಟ್ಯಂತರ ಮೌಲ್ಯದ ಒಟ್ಟು 14 ನಿವೇಶನಗಳನ್ನು ಅಕ್ರಮವಾಗಿ ಪರಭಾರೆ ಮಾಡಿದ್ದರು. ಈ ನಿವೇಶನಗಳ ನಕಲಿ ದಾಖಲೆಗಳನ್ನು ಸೃಷ್ಟಿಸಿ ಅವುಗಳನ್ನು ಮಾರುಕಟ್ಟೆ ಮೌಲ್ಯಕ್ಕಿಂತಲೂ ಕಡಿಮೆ ದರಕ್ಕೆ ಮಾರಾಟ ಮಾಡಿದ್ದರು. 30X40 ವಿಸ್ತೀರ್ಣದ ನಿವೇಶನಕ್ಕೆ ₹70 ಲಕ್ಷದಿಂದ ₹ 80 ಲಕ್ಷ ಹಾಗೂ 60X40 ವಿಸ್ತೀರ್ಣದ ನಿವೇಶನಕ್ಕೆ ₹1.5 ಕೋಟಿ ಮೌಲ್ಯಕ್ಕೆ ಮಾರಾಟ ಮಾಡಿದ್ದರು. 2015ರಿಂದ 2018ರ ಅವಧಿಯಲ್ಲಿ ಈ ಹಗರಣ ನಡೆದಿತ್ತು' ಎಂದು ಮಾಹಿತಿ ನೀಡಿದ್ದಾರೆ.

'ಹಗರಣ ಬೆಳಕಿಗೆ ಬಂದೊಡನೆಯೇ ಕಮಲಮ್ಮ ನಗರ ತೊರೆದಿದ್ದರು. ಮೊಬೈಲ್ ಕರೆಗಳ ಆಧಾರದಲ್ಲಿ ಅವರನ್ನು ತುಮಕೂರಿನ ಗುಬ್ಬಿಯಲ್ಲಿ ಬಂಧಿಸಲಾಯಿತು. ಇತರ ಆರೋಪಿಗಳನ್ನೂ ಮೊಬೈಲ್ ಕರೆಗಳ ಆಧಾರದಲ್ಲೇ ಪತ್ತೆಹಚ್ಚಿ ಬಂಧಿಸಲಾಗಿದೆ. ಎಲ್ಲರೂ ತಪ್ಪೊಪ್ಪಿಕೊಂಡಿದ್ದಾರೆ' ಎಂದು ತಿಳಿಸಿದ್ದಾರೆ.

'ಪರ್ಯಾಯ ರಾಜಕಾರಣದತ್ತ ರೈತ ಸಂಘ ಚಿತ್ತ'

ಬಾಗಲಕೋಟೆ: 'ರಾಜ್ಯದಲ್ಲಿ ಬಿಜೆಪಿಗೆ ಪರ್ಯಾಯ ಕಾಂಗ್ರೆಸ್ ಎಂದು ನಾವು ಭಾವಿಸಿಲ್ಲ. ಮುಂದಿನ ದಿನಗಳಲ್ಲಿ ರಾಜ್ಯ ರೈತ ಸಂಘ ಕೂಡ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಲಿದೆ' ಎಂದು ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತ ಶಕ್ತಿಯ ಜೊತೆಗೆ ಈ ನಾಡಿನ ಯುವಕರು, ನಾಗರಿಕರ ಶಕ್ತಿ ಒಗ್ಗೂಡಬೇಕು ಎಂಬ ನಿಟ್ಟಿನಲ್ಲಿ ಸಂಘಟನೆ ಕೆಲಸ ಮಾಡಲಿದೆ ಎಂದರು.

ಭ್ರಷ್ಟಾಚಾರದ ಬಗ್ಗೆ ನೈತಿಕತೆ ಇಟ್ಟುಕೊಂಡು ಮಾತಾಡುವ ಸ್ಥಿತಿಯಲ್ಲಿ ಯಾರಾದರೂ ನಾಯಕರು ಇದ್ದಾರೆಯೇ ಎಂದು ಪ್ರಶ್ನಿಸಿದ ಕೋಡಿಹಳ್ಳಿ ಚಂದ್ರಶೇಖರ, ಪರ್ಯಾಯ ರಾಜಕಾರಣದ ಬಗ್ಗೆ ಆಮ್ ಆದ್ಮಿ ಪಕ್ಷದೊಂದಿಗೆ ಸೇರುವ ಬಗ್ಗೆ ಇನ್ನೂ ಚರ್ಚೆ ನಡೆಸಿಲ್ಲ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ರಾಜ್ಯದಲ್ಲಿ ರೈತ ವಿರೋಧಿ ಮೂರು ಕೃಷಿ ಕಾಯ್ದೆಗಳ ಜಾರಿಗೆ ಆಗಿನ ಮುಖ್ಯಮಂತ್ರಿ ವಿಧಾನಸಭೆಯಲ್ಲಿ ಅನುಮೋದನೆ ಪಡೆದುಕೊಂಡರು. ಆದರೆ ವಿಧಾನಪರಿಷತ್‌ನಲ್ಲಿ ಬಿಜೆಪಿಗೆ ಬೆಂಬಲ ಸಿಗದೇ ಇದ್ದಾಗ ಜೆಡಿಎಸ್ ನಾಯಕ ಕುಮಾರಸ್ವಾಮಿ ಬೆಂಬಲಕ್ಕೆ ನಿಂತಿದ್ದರು. ಹೀಗಾಗಿ ಎಲ್ಲರೂ ರೈತರ ವಿರೋಧಿಗಳು' ಎಂದರು.

'ಉದ್ಯೋಗ ಖಾತರಿ: ಹೆಚ್ಚುವರಿ ಮಾನವ ದಿನ'

ಬೆಂಗಳೂರು: ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ (ನರೇಗಾ) ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರವು ರಾಜ್ಯಕ್ಕೆ ಹೆಚ್ಚುವರಿಯಾಗಿ 1.60 ಕೋಟಿ ಮಾನವ ದಿನಗಳನ್ನು ಮಂಜೂರು ಮಾಡಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಮಂಜುನಾಥ ಭಂಡಾರಿ ಪ್ರಶ್ನೆಗೆ ಶುಕ್ರವಾರ ಉತ್ತರಿಸಿದ ಅವರು, '2022–23ನೇ ಆರ್ಥಿಕ ವರ್ಷದಲ್ಲಿ ರಾಜ್ಯಕ್ಕೆ 13 ಕೋಟಿ ಮಾನವ ದಿನಗಳನ್ನು ಮಂಜೂರು ಮಾಡಲಾಗಿತ್ತು. ಆ ಗುರಿಯನ್ನು ಡಿಸೆಂಬರ್‌ನಲ್ಲೇ ತಲುಪಿದ್ದೆವು. ಬಳಿಕ 1.40 ಕೋಟಿ ಮಾನವ ದಿನಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲಾಯಿತು. ಈ ಗುರಿಯನ್ನೂ ತಲುಪಿದ್ದು, 2ನೇ ಬಾರಿಗೆ ಹೆಚ್ಚುವರಿ ಮಾನವ ದಿನಗಳನ್ನು ಮಂಜೂರು ಮಾಡಲಾಗಿದೆ' ಎಂದರು. ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದೊಳಗೆ ಒಟ್ಟು 16 ಕೋಟಿ ಮಾನವ ದಿನಗಳ ಕೆಲಸವನ್ನು ಸೃಜಿಸಲಾಗುವುದು. ರಾಜ್ಯದಲ್ಲಿ ಕೂಲಿ ಅರಸಿ ಬಂದ ಒಬ್ಬ ಬಡವರನ್ನೂ ವಾಪಸ್ ಕಳುಹಿಸಿಲ್ಲ. ಮಾರ್ಚ್ ಅಂತ್ಯದೊಳಗೆ ಹೆಚ್ಚುವರಿ ಗುರಿಯನ್ನೂ ಸಾಧಿಸಲಾಗುವುದು. ನರೇಗಾ ಯೋಜನೆಯ ಮೂಲಕ ಸಾರ್ವಜನಿಕ ಮತ್ತು ಖಾಸಗಿ ಆಸ್ತಿ ನಿರ್ಮಾಣದ ಕೆಲಸ ಮುಂದುವರಿಸಿದೆ ಎಂದರು.

ಅಲ್ತಾಫ್ ಕುಟುಂಬಕ್ಕೆ ಪರಿಹಾರಕ್ಕೆ ಆಗ್ರಹ

ಬೆಂಗಳೂರು: ಕಾಶ್ಮೀರದಲ್ಲಿ ಇತ್ತೀಚೆಗೆ ಹುತಾತ್ಮರಾದ ಕೊಡಗಿನ ಯೋಧ ಅಲ್ತಾಫ್ ಅವರ ಕುಟುಂಬಕ್ಕೆ ಪರಿಹಾರ ನೀಡದೇ ತಾರತಮ್ಯ ಮಾಡಲಾಗಿದೆ ಎಂದು ವಿರೋಧ ಪಕ್ಷದ ಉಪನಾಯಕ ಯು.ಟಿ. ಖಾದರ್ ಬೇಸರ ವ್ಯಕ್ತಪಡಿಸಿದರು.

ಅಲ್ತಾಫ್ ಕುಟುಂಬಕ್ಕೆ ಒಂದು ತಿಂಗಳಾದರೂ ಪರಿಹಾರ ನೀಡಿಲ್ಲ. ₹25 ಲಕ್ಷ ಪರಿಹಾರ ನೀಡಬೇಕು ಎಂದು ವಿಧಾನಸಭೆಯಲ್ಲಿ ಒತ್ತಾಯಿಸಿದರು.

ಸೂರಜ್ ರೇವಣ್ಣಗೆ ಹೈಕೋರ್ಟ್ ಸಮನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಾಸನ ಕ್ಷೇತ್ರದ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿರುವ ಜೆಡಿಎಸ್‌ನ ಡಾ. ಸೂರಜ್ ರೇವಣ್ಣ ಅವರ ಆಯ್ಕೆಯನ್ನು ಅಸಿಂಧು ಎಂದು ಘೋಷಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಸೂರಜ್ ಅವರಿಗೆ ಸಮನ್ಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಹೊಳೆನರಸೀಪುರ ತಾಲ್ಲೂಕಿನ ಕಾಮಸಮುದ್ರ ಗ್ರಾಮದ ಎಲ್.ಹನುಮೇಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅವಧಿ ಮುಂದೂಡಿದ ಅಕಾಲಿಕ ಮಳೆ ● ಇಳುವರಿ ಬಹುತೇಕ ಕಡಿಮೆ

ಮಾರುಕಟ್ಟೆಗೆ ಮಾವು ತಡ: ಉತ್ತಮ ಬೆಲೆ ನಿರೀಕ್ಷೆ

● ಮನೋಹರ್ ಎಂ.

ಬೆಂಗಳೂರು: ಅಕಾಲಿಕ ಮಳೆಯಿಂದಾಗಿ ರಾಜ್ಯದಲ್ಲಿ ಈ ವರ್ಷ ಮಾವು ಬರುವುದು ತಡವಾಗಲಿದೆ. ಇತ್ತೀಚಿನ ಹವಾಮಾನ ವೈಪರೀತ್ಯದಿಂದ ಮಾವು ಬೆಳೆ ಪ್ರಕ್ರಿಯೆ ನಿಧಾನವಾಗಿದ್ದು, ಮಾರುಕಟ್ಟೆಗಳಿಗೆ ಮಾವು ತಡವಾಗಿ ಬರಲಿದೆ.

ಕಳೆದ ವರ್ಷ ಸುರಿದ ಭಾರಿ ಮಳೆ ಮಾವು ಫಸಲಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಇದರಿಂದ ಮಾವು ಸಾಮಾನ್ಯ ಅವಧಿಗಿಂತ ತುಸು ವಿಳಂಬವಾಗಿ ಮಾವು ಪ್ರಿಯರ ಕೈಸೇರಲಿದೆ. ಆದರೆ, ಇಳುವರಿ ತಗ್ಗುವುದರಿಂದ ಮಾವಿಗೆ ಉತ್ತಮ ಬೆಲೆ ಸಿಗಲಿದೆ ಎಂದೂ ನಿರೀಕ್ಷಿಸಲಾಗಿದೆ.

'ಕಳೆದ ವರ್ಷ ಡಿಸೆಂಬರ್‌ವರೆಗೆ ಮಳೆ ಸುರಿಯಿತು. ಮಾವು ಬೆಳೆಯುವ ಪ್ರದೇಶಗಳು ಮಳೆಯಿಂದ ತಿಂಗಳುಗಟ್ಟಲೆ ತೇವಾಂಶದಿಂದ ಕೂಡಿದ್ದವು. ಹೂಬಿಡಲು ಪೂರಕ ವಾತಾವರಣ ಸಿಕ್ಕರೂ ಹವಾಮಾನ ವೈಪರೀತ್ಯದಿಂದ ಹೂ ಬಿಡುವ ಸಮಯ ಹಾಗೂ 'ಕಾಯಿ ಕಟ್ಟುವ ಪ್ರಕ್ರಿಯೆ'ಗಳು ವಿಳಂಬವಾಗಿವೆ. ಇದರಿಂದ ಈ ವರ್ಷದ ಮಾವು ಇಳುವರಿ ಬಹುತೇಕ ಕಡಿಮೆ. ಇದನ್ನು 'ಮಾವಿನ ಆಫ್ ಸೀಸನ್' ಎನ್ನಬಹುದು' ಎಂದು ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ (ಕೆಎಸ್‌ಎಂಡಿಎಂಸಿ) ವ್ಯವಸ್ಥಾಪಕ ನಿರ್ದೇಶಕ ಸಿ.ಜಿ. ನಾಗರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

ಅಂಕಿ–ಅಂಶಗಳು

1.76 ಲಕ್ಷ ಹೆಕ್ಟೇರ್ – ರಾಜ್ಯದಲ್ಲಿ ಮಾವು ಬೆಳೆಯುವ ಪ್ರದೇಶ

14 ಲಕ್ಷ ಟನ್ – ವಾರ್ಷಿಕ ಮಾವು ಇಳುವರಿ ಪ್ರಮಾಣ

8 ಲಕ್ಷ ಟನ್ – ಈ ವರ್ಷದ ಮಾವು ಇಳುವರಿ ನಿರೀಕ್ಷೆ

ಪ್ರಜಾವಾಣಿ ವಿಶೇಷ



'ಸಾಮಾನ್ಯವಾಗಿ ಫೆಬ್ರುವರಿ ಮೊದಲ ವಾರದಲ್ಲಿ ಹೂಬಿಡುವ ಪ್ರಕ್ರಿಯೆ ಶುರುವಾಗಿ, ಏಪ್ರಿಲ್ ಎರಡನೇ ವಾರದಿಂದ ಜುಲೈವರೆಗೆ ಮಾವು ಲಭ್ಯ ಇರುತ್ತದೆ. ಈ ಬಾರಿ ಬೆಳೆ ನಿಧಾನವಾಗಿರುವುದರಿಂದ ಮಾವು ಮಾರುಕಟ್ಟೆಗೆ ಬರುವ ಸಮಯವೂ ತಡವಾಗಲಿದೆ. ರಾಜ್ಯದಲ್ಲಿ ಶೇ 60ರಷ್ಟು ಇಳುವರಿ ನಿರೀಕ್ಷಿಸಲಾಗಿದೆ. ಇಳುವರಿ ಕಡಿಮೆಯಾಗುವುದರಿಂದ ಬೆಳೆಗಾರರಿಗೆ ಉತ್ತಮ ದರ ಸಿಗುವ ಸಾಧ್ಯತೆ ಇದೆ' ಎಂದು ವಿವರಿಸಿದರು.

'2018ರಲ್ಲಿ ಮಾವು ಇಳುವರಿ ಭಾರಿ ಏರಿಕೆ ಕಂಡಿತ್ತು. ಅದಕ್ಕೆ ತದ್ವಿರುದ್ಧವಾಗಿ ಈ ವರ್ಷ ಇಳುವರಿ ಕುಸಿಯಲಿದೆ. ಒಟ್ಟು ಇಳುವರಿಯಲ್ಲಿ ಶೇ 40ರಷ್ಟು ಮಾವು ಮಾತ್ರ ರಾಜ್ಯದಲ್ಲಿ ಮಾರಾಟ ಆಗುತ್ತದೆ. ಉಳಿದ ಮಾವನ್ನು ವಿವಿಧ ಉದ್ದೇಶಗಳಿಗಾಗಿ ಬಳಸಲಾಗುತ್ತದೆ. ಶೇ 50ರಷ್ಟು ಮಾವು ಪಾನೀಯ ತಯಾರಿಗೆ ಬಳಕೆಯಾಗುತ್ತದೆ' ಎಂದು ಅವರು ಹೇಳಿದರು.

ಜಿಲ್ಲಾವಾರು ಮಾವು ಮೇಳ: 'ಕೋವಿಡ್‌ನಿಂದಾಗಿ ಕಳೆದ ವರ್ಷ ಮಾವು ಮೇಳ ನಡೆಯಲಿಲ್ಲ. ಈ ವರ್ಷ ಮೇಳ ಆಯೋಜನೆಗೆ ಎಲ್ಲ ತಯಾರಿ ನಡೆಸುತ್ತಿದ್ದೇವೆ. ಬೆಂಗಳೂರು ಸೇರಿದಂತೆ ಜಿಲ್ಲಾವಾರು ಮಾವು ಮೇಳ ಆಯೋಜಿಸಲಿದ್ದೇವೆ' ಎಂದರು.

ಬೆಂಗಳೂರಿನಲ್ಲೇ 45 ಸಾವಿರ ಗ್ರಾಹಕರು

'ಮನೆಬಾಗಿಲಿಗೆ ಮಾವು ತಲುಪಿಸಲು ನಿಗಮ ಆರಂಭಿಸಿದ ಆನ್‌ಲೈನ್ ಸೇವೆ ಬೆಂಗಳೂರಿನಾದ್ಯಂತ ಯಶಸ್ಸು ಕಂಡಿದೆ. ಎರಡೇ ವರ್ಷಗಳಲ್ಲಿ ಬೆಂಗಳೂರಿನ ಗ್ರಾಹಕರ ಸಂಖ್ಯೆ 45 ಸಾವಿರಕ್ಕೆ ಏರಿದೆ. ನಿಗಮದ ಪೋರ್ಟಲ್‌ಗೆ 10 ಲಕ್ಷಕ್ಕೂ ಹೆಚ್ಚು ಮಂದಿ ಲಾಗಿನ್ ಆಗಿದ್ದಾರೆ' ಎಂದು ನಾಗರಾಜ್ ಹೇಳಿದರು.

'ಆನ್‌ಲೈನ್ ಸೇವೆಯ ಮೂಲಕ ನಿಗಮವು 75 ಟನ್ ಮಾವು ಮಾರಾಟ ಮಾಡಿದೆ. ಅಂಚೆ ಇಲಾಖೆ ಸಹಯೋಗದಲ್ಲಿ ಮಾವು ಖರೀದಿಸುವ ವ್ಯವಸ್ಥೆ ಈ ಬಾರಿಯೂ ಇರಲಿದೆ. ನಗರದ ಅಪಾರ್ಟ್‌ಮೆಂಟ್ ಸಮುಚ್ಚಯಗಳಿಗೆ ರೈತರಿಂದ ನೇರವಾಗಿ ಮಾವು ತಲುಪಿಸಲು ಬೆಂಗಳೂರು ಅಪಾರ್ಟ್‌ಮೆಂಟ್ ಸಮುಚ್ಚಯಗಳ ಒಕ್ಕೂಟವು (ಬಿಎಎಫ್) ನಿಗಮದ ಜತೆಗೂಡಿ ಸೇವೆ ನೀಡಲಿದೆ' ಎಂದರು.

'ಇಮಾಮ್ ಪಸಂದ್' ದುಬಾರಿ ಮಾವು

'ಮಾವಿನ ವಿವಿಧ ತಳಿಗಳ ಪೈಕಿ 'ಇಮಾಮ್ ಪಸಂದ್' ತಳಿ ಇತ್ತೀಚಿನ ವರ್ಷಗಳಲ್ಲಿ ಗ್ರಾಹಕರ ಮೆಚ್ಚುಗೆಗೆ ಪಾತ್ರವಾಗುತ್ತಿದೆ. ಈ ತಳಿ ಹಳದಿಯಿಂದಾಗಿ ಅತ್ಯುತ್ತಮ ಸಿಹಿರುಚಿ, ಸುವಾಸನೆ ಮತ್ತು ರಸಭರಿತ ಗುಣಗಳನ್ನು ಹೊಂದಿರುವುದರಿಂದ ಬೇಡಿಕೆ ಸೃಷ್ಟಿಸಿದ್ದು, ಪ್ರತಿ ಕೆ.ಜಿ.ಗೆ ಗರಿಷ್ಠ ₹450ರಿಂದ ₹700ರವರೆಗೆ ಮಾರಾಟವಾಗುತ್ತದೆ' ಎಂದು ಸಿ.ಜಿ.ನಾಗರಾಜ್ ಮಾಹಿತಿ ನೀಡಿದರು.



ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿಯಲ್ಲಿ ನಡೆದ ಜಾತ್ರಾ ಮಹೋತ್ಸವಕ್ಕೆ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು. ಛಾಯಾ ನರಸಿಂಹಮೂರ್ತಿ, ಎಸ್.ಅಶ್ವತಿ, ಸೋಮನಾಥ ಸ್ವಾಮೀಜಿ, ವೀರೇಶಾನಂದ ಸರಸ್ವತಿ ಸ್ವಾಮೀಜಿ, ಪ್ರತಾಪ ಸಿಂಹ ಇದ್ದರು

ಆದಿಚುಂಚನಗಿರಿ ಜಾತ್ರೆಗೆ ಚಾಲನೆ

ನಾಗಮಂಗಲ: ತಾಲ್ಲೂಕಿನ ಆದಿಚುಂಚನಗಿರಿ ಮಠದಲ್ಲಿ ಶುಕ್ರವಾರ ಜಾತ್ರಾ ಮಹೋತ್ಸವಕ್ಕೆ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಧರ್ಮ ಧ್ವಜಾರೋಹಣ ನೆರವೇರಿಸಿ, ನಾಂದಿ ಪೂಜೆ ಮೂಲಕ ಚಾಲನೆ ನೀಡಿದರು.

'ಸನಾತನ ಹಿಂದೂ ಧರ್ಮ ಅತ್ಯಂತ ಪವಿತ್ರವಾದದ್ದು. ಕಾಲಭೈರವ ನೆಲೆಸಿರುವ ಕ್ಷೇತ್ರದಲ್ಲಿ ಧರ್ಮದ ನೆಲೆಯಲ್ಲಿ ಮಾಡುವ ಪ್ರತಿ ಕಾರ್ಯ ಅಡೆತಡೆ ಇಲ್ಲದೆ ಸುಸೂತ್ರವಾಗಿ ಜರುಗಲಿ ಎಂಬ ಉದ್ದೇಶದಿಂದ ಧರ್ಮಧ್ವಜ ಸ್ಥಾಪನೆ ಮಾಡಲಾಗಿದೆ' ಎಂದರು.

ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ವೀರೇಶಾನಂದ ಸರಸ್ವತಿ ಸ್ವಾಮೀಜಿ, ಆದಿಚುಂಚನಗಿರಿ ಮಠದ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ಮೈಸೂರು ಶಾಖಾ ಮಠದ ಸೋಮನಾಥ ಸ್ವಾಮೀಜಿ, ಸಂಸದ ಪ್ರತಾಪ ಸಿಂಹ, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಛಾಯಾ ನರಸಿಂಹಮೂರ್ತಿ, ಜಿಲ್ಲಾಧಿಕಾರಿ ಎಸ್. ಅಶ್ವತಿ, ದಕ್ಷಿಣ ಕನ್ನಡ ಜಿಲ್ಲಾ ಒಕ್ಕಲಿಗರ ಯುವ ವೇದಿಕೆ ಅಧ್ಯಕ್ಷ ಡಾ.ಅಶ್ವಥ್, ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಆಡಳಿತಾಧಿಕಾರಿ ಡಾ.ಎ.ಟಿ.ಶಿವರಾಮು ಇದ್ದರು.

ಪೊಲೀಸ್ ಠಾಣೆ ಕಾಂಪೌಂಡ್‌ನಲ್ಲಿದ್ದ ವಾಹನಗಳಿಗೆ ಬೆಂಕಿ

ಬೆಂಗಳೂರು: ಕೆಂಗೇರಿ ಠಾಣೆಯ ಕಾಂಪೌಂಡ್ ಸಮೀಪದಲ್ಲಿ ಶುಕ್ರವಾರ ಮಧ್ಯಾಹ್ನ 1.30ರ ಸುಮಾರಿಗೆ ಬೆಂಕಿ ಹೊತ್ತಿಕೊಂಡಿದ್ದರಿಂದ ಒಟ್ಟು 12 ವಾಹನಗಳು ಸುಟ್ಟು ಹೋಗಿವೆ.

'ಕಾಂಪೌಂಡ್ ಪಕ್ಕದಲ್ಲೇ ರೈಲ್ವೆ ಹಳಿ ಇದ್ದು ಅಲ್ಲಿನ ಒಣ ಹುಲ್ಲಿಗೆ ಯಾರೊ ಬೆಂಕಿ ಹಚ್ಚಿದ್ದಾರೆ. ಅಗ್ನಿ ಜ್ವಾಲೆ ಕಾಂಪೌಂಡ್‌ವರೆಗೂ ವ್ಯಾಪಿಸಿ 12 ವಾಹನಗಳು ಹೆಚ್ಚಿನ ಪ್ರಮಾಣದಲ್ಲಿ ಸುಟ್ಟಿವೆ. ಈಗಾಗಲೇ ಭಾಗಶಃ ಸುಟ್ಟುಹೋಗಿದ್ದ ಎರಡು ಜೀಪು, ಆಟೊ ಹಾಗೂ ಕಾರಿಗೂ ಹಾನಿಯಾಗಿದೆ. ಅಗ್ನಿಶಾಮಕ ದಳದ ಎರಡು ವಾಹನಗಳು ಸ್ಥಳಕ್ಕೆ ಬಂದು ಬೆಂಕಿ ನಂದಿಸಿವೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ತಿಳಿಸಿದ್ದಾರೆ.

'ಕಳವು ದರೋಡೆ ಪ್ರಕರಣಗಳಲ್ಲಿ ಭಾಗಿಯಾಗಿದ್ದವರಿಂದ ಜಪ್ತಿ ಮಾಡಿದ್ದ ವಾಹನಗಳನ್ನು ಕಾಂಪೌಂಡ್‌ನಲ್ಲಿ ನಿಲ್ಲಿಸಲಾಗಿತ್ತು. ಸುಮಾರು 10 ವರ್ಷಗಳಿಂದ ಅವು ಅಲ್ಲಿದ್ದವು' ಎಂದು ತಿಳಿಸಿದ್ದಾರೆ.

ವಿದ್ಯುತ್ ತಂತಿ ತೆರವು: ಹೈಕೋರ್ಟ್‌ಗೆ ವರದಿ

ಬೆಂಗಳೂರು: 'ರಾಜ್ಯದಾದ್ಯಂತ ಎಲ್ಲ ಶಿಕ್ಷಣ ಸಂಸ್ಥೆಗಳ ಸಮೀಪದಲ್ಲಿ ಹಾದು ಹೋಗಿರುವ ವಿದ್ಯುತ್ ತಂತಿಗಳನ್ನು ತೆರವುಗೊಳಿಸುವ ಕಾರ್ಯ ಆರಂಭವಾಗಿದೆ' ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ಹೈಕೋರ್ಟ್‌ಗೆ ತಿಳಿಸಿದೆ.

ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳ ಸ್ಥಿತಿಗತಿ ಕುರಿತಂತೆ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಪಿಐಎಲ್‌ಅನ್ನು ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಕೆಪಿಟಿಸಿಎಲ್ ಪರ ವಕೀಲ ಶ್ರೀರಂಗ ಅವರು, 'ಹೈಕೋರ್ಟ್ ನಿರ್ದೇಶನದಂತೆ ಎಲ್ಲ ಎಸ್ಕಾಂಗಳು ಶಿಕ್ಷಣ ಸಂಸ್ಥೆಗಳ ಬಳಿಯ ವಿದ್ಯುತ್ ಮಾರ್ಗಗಳನ್ನು ತೆರವುಗೊಳಿಸುವ ಕಾಮಗಾರಿಯನ್ನು ಈಗಾಗಲೇ ಆರಂಭಿಸಲಾಗಿದೆ. ಎಲ್ಲೆಲ್ಲಿ ತೆರವು ಕಾರ್ಯ ನಡೆಸಬೇಕು ಎಂಬುದನ್ನು ಗುರುತಿಸಲಾಗಿದ್ದು, ಕೆಲವೆಡೆ ಟೆಂಡರ್ ಕರೆದು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಸಂಬಂಧ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂ) ಇದೇ 9ರಂದು ನ್ಯಾಯಾಲಯಕ್ಕೆ ಪ್ರತ್ಯೇಕ ವರದಿ ಸಲ್ಲಿಸಿವೆ' ಎಂದು ವಿವರಿಸಿದರು.

ಇದನ್ನು ದಾಖಲಿಸಿಕೊಂಡ ಪೀಠ, ಪ್ರಕರಣದ ಅಮಿಕಸ್ ಕ್ಯೂರಿ (ನ್ಯಾಯಾಲಯಕ್ಕೆ ಸಹಕರಿಸುವ ವಕೀಲರು)ಬಿ.ವಿ. ವಿದ್ಯುಲ್ಲತಾ ಅವರಿಗೆ, 'ಎಸ್ಕಾಂಗಳ ವರದಿ ಪರಿಶೀಲಿಸಿ ಅವುಗಳಲ್ಲಿ ಏನಾದರೂ ಆಕ್ಷೇಪಣೆಗಳಿದ್ದರೆ ಸಲ್ಲಿಸಿ' ಎಂದು ಸೂಚಿಸಿ ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಿತು.

ತುಮಕೂರಿನ ಕರೀಕೆರೆ ಗ್ರಾಮದಲ್ಲಿ ಸ್ವಾತಂತ್ರ್ಯದಿನಾಚರಣೆಗೆ ಧ್ವಜಸ್ತಂಭ ಅಳವಡಿಸುವ ವೇಳೆ ಸಂಭವಿಸಿದ ವಿದ್ಯುತ್ ಅವಘಡದಲ್ಲಿ ವಿದ್ಯಾರ್ಥಿಯೊಬ್ಬ ಮೃತಪಟ್ಟ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಶಿಕ್ಷಣ ಸಂಸ್ಥೆಗಳ ಮೇಲೆ ಹಾದು ಹೋಗಿರುವ ಎಲ್ಲ ವಿದ್ಯುತ್ ತಂತಿಗಳನ್ನುತೆರವುಗೊಳಿಸಲು ಹೈಕೋರ್ಟ್ ಈ ಹಿಂದೆಯೇ ಆದೇಶಿಸಿದೆ.

ಚುನಾವಣೆಯಲ್ಲಿ ನೌಕರರಿಗೆ ನಿರ್ಬಂಧ ಮಸೂದೆ

ಬೆಂಗಳೂರು: ಸರ್ಕಾರಿ ಸೇವೆಯಿಂದ ವಜಾಗೊಂಡವರು, ಕಡ್ಡಾಯ ನಿವೃತ್ತಿಗೆ ಒಳಗಾದ ನೌಕರರು, ಸಹಕಾರ ಸಂಘಗಳಿಂದ ಅನರ್ಹಗೊಂಡವರು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಸ್ಪರ್ಧಿಸುವುದನ್ನು ನಿರ್ಬಂಧಿಸುವ ಮಸೂದೆಗೆ ಸಚಿವ ಸಂಪುಟ ಸಭೆ ಶುಕ್ರವಾರ ಒಪ್ಪಿಗೆ ನೀಡಿದೆ.

ಅಲ್ಲದೆ, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರ ಜನಸಂಖ್ಯೆಯನ್ನು ಜನಸಂಖ್ಯೆಗೆ ಅನುಗುಣವಾಗಿ ನಿಗದಿ ಮಾಡಲು ಅನುಮತಿ ನೀಡಲಾಗಿದೆ ಎಂದು ಮೂಲಗಳು ಹೇಳಿವೆ.

ಜೈಲುಗಳಲ್ಲಿ ಮೊಬೈಲ್ ನಿರ್ಬಂಧ: ರಾಜ್ಯದ ಕಾರಾಗೃಹಗಳಲ್ಲಿ ಬಂದಿಗಳು ಮೊಬೈಲ್ ಫೋನ್ ಮತ್ತು ಸಂವಹನದ ಉದ್ದೇಶಕ್ಕಾಗಿ ಎಲೆಕ್ಟ್ರಾನಿಕ್ಸ್ ಸಾಧನಗಳ ಬಳಕೆ ಮಾಡದಂತೆ ನಿರ್ಬಂಧಿಸಲು ಕರ್ನಾಟಕ ಕಾರಾಗೃಹಗಳ ತಿದ್ದುಪಡಿ ಮಸೂದೆಗೆ ಒಪ್ಪಿಗೆ ನೀಡಲಾಗಿದೆ.

3 ಜಿಲ್ಲಾ ಆಸ್ಪತ್ರೆಗಳಿಗೆ 'ಇ–ಆಸ್ಪತ್ರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ನಿರ್ವಹಣಾ ಮಾಹಿತಿ ವ್ಯವಸ್ಥೆ ಅನುಷ್ಠಾನಕ್ಕಾಗಿ ಇ–ಆಸ್ಪತ್ರೆ (ಎಚ್‌ಎಂಐಎಸ್) ತಂತ್ರಾಂಶವನ್ನು ಜಿಲ್ಲಾ ಮಟ್ಟದ 3 ಆಸ್ಪತ್ರೆಗಳು ಮತ್ತು 157 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಅಳವಡಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಇದರ ಅನುಷ್ಠಾನಕ್ಕೆ ಅಗತ್ಯವಿರುವ ಐಸಿಟಿ ಸಲಕರಣೆಗಳು ಮತ್ತು 9 ಜಿಲ್ಲಾ ಆಸ್ಪತ್ರೆಗಳು ಹಾಗೂ 143 ತಾಲ್ಲೂಕು ಆಸ್ಪತ್ರೆಗಳಿಗೆ 701 ಡೆಸ್ಕ್ ಟಾಪ್ ಕಂಪ್ಯೂಟರ್‌ಗಳನ್ನು ಒಟ್ಟು ₹28.55 ಕೋಟಿ ವೆಚ್ಚದಲ್ಲಿ ಖರೀದಿಸಲು ಅನುಮೋದನೆ ನೀಡಲಾಗಿದೆ.

ಎಚ್‌ಎಂಐಎಸ್ ಆರೋಗ್ಯ ಸೌಲಭ್ಯಗಳು ಮತ್ತು ಆರೋಗ್ಯ ಸಂಸ್ಥೆಗಳಲ್ಲಿನ ನಿರ್ವಹಣೆ ಮತ್ತು ನಿರ್ಧಾರ ತೆಗೆದುಕೊಳ್ಳಲು ಸಹಕಾರ ನೀಡುವ ನಿರ್ದಿಷ್ಟವಾಗಿ ವಿನ್ಯಾಸಗೊಳಿಸಿದ ದತ್ತಾಂಶ ಸಂಗ್ರಹಣಾ ವ್ಯವಸ್ಥೆ.


ಪ್ರಮುಖ ನಿರ್ಧಾರಗಳು:

- ಹಾವೇರಿ ಜಿಲ್ಲೆ ಶಿಗ್ಗಾವಿ ತಾಲ್ಲೂಕಿನ 100 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನು 250 ಹಾಸಿಗೆಗಳ ಸಾಮರ್ಥ್ಯಕ್ಕೆ ಮೇಲ್ದರ್ಜೆಗೇರಿಸಲಾಗುವುದು. ಆಸ್ಪತ್ರೆಗಳ ಕಟ್ಟಡ ನಿರ್ಮಾಣ, ಶವಾಗಾರ ಮತ್ತು ಸಿಬ್ಬಂದಿ ವಸತಿ ಗೃಹಗಳ ನಿರ್ಮಾಣ ಕಾಮಗಾರಿಗೆ ₹120 ಕೋಟಿ
- ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಕಲಬುರಗಿ ಜಿಲ್ಲೆಯ ಜೇವರ್ಗಿ ಹಾಗೂ ಕೊಪ್ಪಳ ಜಿಲ್ಲೆಯ ಕುಷ್ಠಗಿಯಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ನಿರ್ಮಾಣ. ಚಿಕ್ಕಬಳ್ಳಾಪುರ ಜಿಲ್ಲೆಯ ಮಂಚೇನಹಳ್ಳಿಯಲ್ಲಿ ಸಾರ್ವಜನಿಕ ಆಸ್ಪತ್ರೆಯ ಜತೆಗೆ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕಾಗಿ ₹96.10 ಕೋಟಿ
- ಕಲಬುರಗಿ ಜಿಲ್ಲೆ ಆಳಂದ ತಾಲ್ಲೂಕಿನ ಕೋತ್ತನಹಿಪ್ಪರಗಾ ಗ್ರಾಮದ ಬಳಿ ಸಣ್ಣ ನೀರಾವರಿ ಹೊಸ ಕೆರೆ ನಿರ್ಮಾಣ ಕಾಮಗಾರಿಗಾಗಿ ₹14ಕೋಟಿ, ಇದೇ ತಾಲ್ಲೂಕಿನ ಕವಲಗಾ ಗ್ರಾಮದ ಬಳಿ ಹೊಸ ಕೆರೆ ನಿರ್ಮಾಣಕ್ಕಾಗಿ ₹16 ಕೋಟಿ
- ಕೊಪ್ಪಳ ತಾಲ್ಲೂಕಿನ ಮಾದನೂರು ಮತ್ತು ದೇವಲಾಪೂರ ನಡುವೆ ಹರಿಯುವ ಹಿರೇಹಳ್ಳಕ್ಕೆ ಬ್ಯಾರೇಜ್ ಕಂ ಬ್ರಿಡ್ಜ್ ನಿರ್ಮಾಣ ಕಾಮಗಾರಿಗೆ ಪರಿಷ್ಕೃತ ಅಂದಾಜು ₹12.36 ಕೋಟಿ
- ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಉಳುವರೆ ಮತ್ತು ಸಡಗೇರಿವರೆಗೆ ಖಾರ್ ಲ್ಯಾಂಡ್ ನಿರ್ಮಾಣ ಕಾಮಗಾರಿಗೆ ₹13 ಕೋಟಿ , ಕಾರವಾರ ತಾಲ್ಲೂಕಿನ ಕಣಸಗಿರಿ ಬಳಿ ಖಾರ್‌ಲ್ಯಾಂಡ್ ಬಂಡ್ ನಿರ್ಮಾಣ ಕಾಮಗಾರಿಗೆ ₹12 ಕೋಟಿ ಮತ್ತು ಕುಮಟಾ ತಾಲ್ಲೂಕಿನ ಬೆಟ್ಟುಳಿ ಪಡುವನಿ ಹತ್ತಿರ ಖಾರ್‌ಲ್ಯಾಂಡ್ ನಿರ್ಮಾಣ ಕಾಮಗಾರಿಗೆ ₹19 ಕೋಟಿ
- ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ, ಭೀಮನಕುಪ್ಪೆ ಗ್ರಾಮದಲ್ಲಿ ರಾಜೀವ್‌ಗಾಂಧಿ ಸಾರ್ವಜನಿಕ ಆರೋಗ್ಯ ಸಂಸ್ಥೆ ಮತ್ತು ರೋಗ ನಿಯಂತ್ರಣ ಕೇಂದ್ರ, ಸುಧಾರಿತ ಸಂಶೋಧನಾ ಕೇಂದ್ರ ಮತ್ತು ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ನಿರ್ಮಾಣಕ್ಕೆ ₹200 ಕೋಟಿ
- ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ಮಂಚೇನಹಳ್ಳಿ ಮತ್ತು ಇತರೆ 41 ಗ್ರಾಮಗಳ ಮೊದಲ ಹಂತದಲ್ಲಿ ಜಲಜೀವನ್ ಮಿಷನ್ ಯೋಜನೆ ಅಡಿ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ ₹44 ಕೋಟಿ
- ಚಿಕ್ಕಮಗಳೂರು ಜಿಲ್ಲಾ ಕಚೇರಿ ಸಂಕೀರ್ಣ ಕಟ್ಟಡ ₹30 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಅನುಮೋದನೆ
- ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಅವರಾದಿ ಮತ್ತು ಇತರ 115 ಗ್ರಾಮಗಳಿಗೆ ಮತ್ತು ಸವದತ್ತಿ ತಾಲ್ಲೂಕಿನ 17 ಗ್ರಾಮಗಳಿಗೆ ಜಲಜೀವನ್ ಮಿಷನ್ ಯೋಜನೆ ₹340 ಕೋಟಿ ವೆಚ್ಚದಲ್ಲಿ ಜಾರಿ
- ಗದಗ ಜಿಲ್ಲೆಯ ಶಿರಹಟ್ಟಿ ಮತ್ತು ಮುಂಡರಗಿ ತಾಲ್ಲೂಕಿನ 29 ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರನ್ನು ತುಂಬಿಸುವ ಜಾಲವಾಡಗಿ ಏತ ನೀರಾವರಿ ಯೋಜನೆಯ ₹197.50 ಕೋಟಿ ಡಿಪಿಆರ್‌ಗೆ ಒಪ್ಪಿಗೆ

ಚಿತ್ರಾವಳಿ



ಉತ್ತರಹಳ್ಳಿ ವಾರ್ಡ್‌ನ ಅರೆಹಳ್ಳಿಯ ತಪೋವನಕ್ಷೇತ್ರ ಹನುಮಗಿರಿಯಲ್ಲಿ ಕಬ್ಬಾಳಮ್ಮನವರ ಬ್ರಹ್ಮರಥಾರೋಹಣ ಮತ್ತು ಜಾತ್ರಾ ಮಹೋತ್ಸವಕ್ಕೆ ಶಾಸಕ ಎಂ.ಕೃಷ್ಣಪ್ಪ ಚಾಲನೆ ನೀಡಿದರು. ದೇವಸ್ಥಾನಗಳ ಅಭಿವೃದ್ಧಿ ಸಮಿತಿ ಅಧ್ಯಕ್ಷ ಡಿ.ಪುರುಷೋತ್ತಮ್, ಧರ್ಮದರ್ಶಿ ವಿ. ಆಂಜನಪ್ಪ, ಪಾಲಿಕೆಯ ಮಾಜಿ ಸದಸ್ಯ ಹನುಮಂತಯ್ಯ, ಕೆ.ಸೋಮಶೇಖರ್, ವಿಜಯ್ ಕುಮಾರ್ ಇದ್ದಾರೆ.



ಬೆಂಗಳೂರು ವಿಶ್ವವಿದ್ಯಾಲಯದ ಭೂಗೋಳ ವಿಜ್ಞಾನ ವಿಭಾಗದಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಇಸ್ರೊ ವಿಜ್ಞಾನಿ ಡಾ.ಪಿ.ಪಿ. ನಾಗೇಶ್ವರ ರಾವ್ ಅವರನ್ನು ಸನ್ಮಾನಿಸಲಾಯಿತು. ವಿಭಾಗದ ಮುಖ್ಯಸ್ಥ ಪ್ರೊ. ಅಶೋಕ್ ಡಿ. ಹಂಜಗಿ, ವಿಜ್ಞಾನಿ ಪ್ರೊ. ಟಿ.ವಿ. ರಾಮಚಂದ್ರ, ಡೀನ್ ಪ್ರೊ. ವಿ.ವಿ. ಸುರೇಶ್ ಬಾಬು ಇದ್ದಾರೆ

ಮಹಿಳೆಗೆ ಬೆಂಕಿ ಹಚ್ಚಿದವ ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಮಹಿಳೆಯೊಬ್ಬರು ಮೈಮೇಲೆ ಡೀಸೆಲ್ ಸುರಿದುಕೊಂಡಿದ್ದ ವೇಳೆ ಆಕೆಯ ಸ್ನೇಹಿತ ಕೋಪದಿಂದ ಬೆಂಕಿ ಹಚ್ಚಿರುವ ಘಟನೆ ಬೈಯಪ್ಪನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

'ತೀವ್ರ ಸುಟ್ಟಗಾಯಗಳಿಂದ ಬಳಲಿರುವ ಮೀನಾ (27) ಎಂಬುವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಸ್ಥಿತಿ ಚಿಂತಾಜನಕವಾಗಿದೆ. ಹಳೆ ಬೈಯಪ್ಪನಹಳ್ಳಿ ನಿವಾಸಿಯಾಗಿರುವ ಅವರು ಕೊರಿಯರ್ ಕೆಲಸ ಮಾಡುತ್ತಿದ್ದ ಬಾಬು (37) ಎಂಬುವನ ಜೊತೆ 'ಸಹಜೀವನ' (ಲಿವಿಂಗ್ ಟುಗೆದರ್) ನಡೆಸುತ್ತಿದ್ದರು' ಎಂದು ಪೊಲೀಸರು ಹೇಳಿದ್ದಾರೆ.

'ಕುಡಿತದ ಚಟ ಹೊಂದಿದ್ದ ಬಾಬು ಹಣಕ್ಕಾಗಿ ನಿತ್ಯವೂ ಪೀಡಿಸುತ್ತಿದ್ದ. ಈ ವಿಚಾರಕ್ಕೆ ಇಬ್ಬರ ನಡುವೆ ಆಗಾಗ ಜಗಳವಾಗುತ್ತಿತ್ತು. ಆತನ ವರ್ತನೆಯಿಂದ ಬೇಸತ್ತಿದ್ದ ಮೀನಾ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೆದರಿಸುವ ಸಲುವಾಗಿ ಮೈಮೇಲೆ ಡೀಸೆಲ್ ಸುರಿದುಕೊಂಡಿದ್ದರು. ಆಗ ಆರೋಪಿ ಬೆಂಕಿ ಕಡ್ಡಿ ಹಚ್ಚಿ ಆಕೆಯ ಮೇಲೆ ಎಸೆದಿದ್ದ. ಮೀರು ಕೂಗು ಕೇಳಿ ಪಕ್ಕದ ಮನೆಯವರು ಓಡಿ ಬಂದಿದ್ದು, ಈ ವೇಳೆ ಬಾಬು ಪರಾರಿಯಾಗಲು ಯತ್ನಿಸಿದಾಗ ಆಯ ತಪ್ಪಿ ಬಿದ್ದು, ಕಾಲಿನ ಮೂಳೆ ಮುರಿದುಕೊಂಡಿದ್ದಾನೆ. ಆತನನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ತಿಳಿಸಿದರು.

'ಮೀನಾ ಈ ಮೊದಲು ವಿಜಯಕಾಂತ್ ಎಂಬುವರನ್ನು ವಿವಾಹವಾಗಿದ್ದರು. ಮೂರು ವರ್ಷದ ಹಿಂದೆ ಪತಿ ಮೃತಪಟ್ಟಿದ್ದರು. ದಂಪತಿಗೆ ಮೂವರು ಹೆಣ್ಣುಮಕ್ಕಳಿದ್ದಾರೆ' ಎಂದು ಹೇಳಿದ್ದಾರೆ.

ಬಾಲಕಿ ಮೇಲೆ ನಾಲ್ವರಿಂದ ಆರು ದಿನ ಅತ್ಯಾಚಾರ

ಬೆಂಗಳೂರು: ಹೊಲಿಗೆ ತರಬೇತಿಗೆ ಹೋಗುತ್ತಿದ್ದ 15 ವರ್ಷದ ಬಾಲಕಿ ಮೇಲೆ ನಾಲ್ವರು ಆರು ದಿನ ಅತ್ಯಾಚಾರ ನಡೆಸಿದ್ದು, ಈ ಸಂಬಂಧ ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರು ಆರು ಮಂದಿಯನ್ನು ಬಂಧಿಸಿದ್ದಾರೆ.

'ರಾಜೇಶ್ವರಿ ಹಾಗೂ ಕಲಾವತಿ, ಹೊಸೂರಿನ ಕೇಶವಮೂರ್ತಿ, ಬೇಗೂರಿನ ರಫೀಕ್, ಯಲಹಂಕದ ಶರತ್ ಹಾಗೂ ಕೋರಮಂಗಲದ ಸತ್ಯರಾಜು ಬಂಧಿತರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಪರಾಧ ಸುದ್ದಿ

'ಕಲಾವತಿ ಹಾಗೂ ರಾಜೇಶ್ವರಿ ಹಲವು ವರ್ಷಗಳಿಂದ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದರು. ನೆರೆಹೊರೆಯವರಿಗೆ ಇದು ತಿಳಿದಿರಲಿಲ್ಲ. ಅಕ್ಕಪಕ್ಕದವರ ಜೊತೆ ಮಹಿಳೆಯರು ಉತ್ತಮ ಬಾಂಧವ್ಯ ಹೊಂದಿದ್ದರು' ಎಂದು ಮಾಹಿತಿ ನೀಡಿದ್ದಾರೆ.

'ಫೆಬ್ರುವರಿ 28ರಂದು ಮನೆಗೆ ಬಂದಿದ್ದ ರಾಜೇಶ್ವರಿ ನನ್ನ ತಾಯಿ ಕರೆಯುತ್ತಿದ್ದಾರೆ ಎಂದು ಹೇಳಿ ಆಕೆಯ ಮನೆಗೆ ಕರೆದುಕೊಂಡು ಹೋದಳು. ಅಲ್ಲಿ ಹಣ್ಣಿನ ಜ್ಯೂಸ್ ನೀಡಿದಳು. ಅದನ್ನು ಕುಡಿದ ನನಗೆ ಪ್ರಜ್ಞೆ ತಪ್ಪಿತು. ಅತ್ಯಾಚಾರದ ವಿಷಯವನ್ನು ಯಾರಿಗೂ ಹೇಳದಂತೆ ರಾಜೇಶ್ವರಿ ಹೆದರಿಸಿದ್ದಾಗಿ ಬಾಲಕಿ ದೂರಿನಲ್ಲಿ ಉಲ್ಲೇಖಿಸಿದ್ದಾಳೆ' ಎಂದು ಹೇಳಿದ್ದಾರೆ.

'ಮರುದಿನ ರಾಜೇಶ್ವರಿ ನನ್ನನ್ನು ಕಲಾವತಿ ಮನೆಗೆ ಕರೆದುಕೊಂಡು ಹೋಗಿದ್ದಳು. ಅಲ್ಲಿ ಮತ್ತೊಬ್ಬ ವ್ಯಕ್ತಿ ಬಲಾತ್ಕಾರ ನಡೆಸಿದ್ದ. ನನ್ನನ್ನು ಬೆದರಿಸಿದ ಅವರಿಬ್ಬರೂ ನಿತ್ಯವೂ ತಮ್ಮ ಮನೆಗೆ ಬರುವಂತೆ ಸೂಚಿಸಿದ್ದರು. ಹೀಗೆ ಸತತ 6 ದಿನ ನನ್ನ ಮೇಲೆ ನಾಲ್ವರು ಬಲಾತ್ಕಾರ ನಡೆಸಿದ್ದರು ಎಂದೂ ಆಕೆ ತಿಳಿಸಿದ್ದಾಳೆ' ಎಂದರು.

'ಮಾರ್ಚ್ 6ರಂದು ಬಾಲಕಿಗೆ ಕರೆ ಮಾಡಿದ್ದ ರಾಜೇಶ್ವರಿ ಮನೆಗೆ ಬರುವಂತೆ ಹಿಂಸಿಸಿದ್ದಳು. ಈ ವೇಳೆ ಗಾಬರಿಗೊಂಡ ಬಾಲಕಿ ತನ್ನ ತಾಯಿಗೆ ವಿಷಯವನ್ನು ತಿಳಿಸಿದ್ದಾಳೆ' ಎಂದೂ ಮಾಹಿತಿ ನೀಡಿದ್ದಾರೆ.

ಸೈಕಲ್ ಕಳ್ಳತನ: ಆರೋಪಿ ಬಂಧನ

ಬೆಂಗಳೂರು: ಬೈಕ್ ಹಾಗೂ ಸೈಕಲ್‌ಗಳನ್ನು ಕಳವು ಮಾಡುತ್ತಿದ್ದ ಆರೋಪಿಯನ್ನು ಹುಳಿಮಾವು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರಮೇಶ್ ಬಂಧಿತ. ಈತನಿಂದ ₹4.5 ಲಕ್ಷ ಮೌಲ್ಯದ ಸೈಕಲ್‌ಗಳು ಹಾಗೂ ₹4.4 ಲಕ್ಷ ಮೌಲ್ಯದ ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ. ಆತ ಸೈಕಲ್‌ಗಳ ಹಾಡ್‌ಲಾಕ್ ಮುರಿದು ಕಳ್ಳತನ ಮಾಡುತ್ತಿದ್ದ. ಈ ಬಗ್ಗೆ ಸೈಕಲ್ ಮಾಲೀಕರೊಬ್ಬರು ದೂರು ನೀಡಿದ್ದರು ಎಂದು ಪೊಲೀಸರು ತಿಳಿಸಿದರು.

ಕುಂದಾಪುರ: ಬಗ್ವಾಡಿ ಗ್ರಾಮದ ಸೋದರರ ಪ್ರಯತ್ನ, ಇಂದು ಉದ್ಘಾಟನೆ

ಗುಜರಿ ಬಸ್‌ಗೆ ಸ್ಮಾರ್ಟ್‌ಕ್ಲಾಸ್ ರೂಪ!

● ರಾಜೇಶ್ ಕೆ.ಸಿ., ಕುಂದಾಪುರ

ಕುಂದಾಪುರ: ಗುಜರಿಗೆ ಸೇರಬೇಕಾಗಿದ್ದ ಕೆಎಸ್‌ಆರ್‌ಟಿಸಿಯ ಹಳೆಯ ಬಸ್ ಈಗ ಗ್ರಾಮೀಣ ಮಕ್ಕಳಿಗೆ ಅಕ್ಷರ ಕಲಿಕೆಯ ತಾಣವಾಗಿದೆ. ಹಳೆಯ ಬಸ್ ಅನ್ನು ಗ್ರಾಮೀಣ ಕಲಾವಿದರು 'ಹೈಟೆಕ್ ಸ್ಮಾರ್ಟ್‌ಕ್ಲಾಸ್' ಆಗಿ ಪರಿವರ್ತಿಸಿದ್ದಾರೆ.

ಸಹೋದರರಾದ ಪ್ರಶಾಂತ್ ಆಚಾರ್ ಹಾಗೂ ಪ್ರಕಾಶ್ ಆಚಾರ್ ಬಸ್ ಅನ್ನು ಶಾಲಾ ಕೊಠಡಿಯಾಗಿ ಪರಿವರ್ತಿಸಿದ್ದಾರೆ. ಮೆಕ್ಯಾನಿಕ್ ಆದ ಪ್ರಕಾಶ್ ಅವರು ಬಸ್‌ನ ಒಳಭಾಗವನ್ನು ಶಾಲಾ ಕೊಠಡಿಯಂತೆ ರೂಪಿಸಿದ್ದಾರೆ. ಇವರ ತಮ್ಮ, ಕಲಾವಿದ ಪ್ರಶಾಂತ್ ಆಚಾರ್ ಅವರು ಬಸ್‌ನ ಹೊರಭಾಗ ಮತ್ತು ಒಳಾಂಗಣವನ್ನು ಆಕರ್ಷಕವಾಗಿ ವಿನ್ಯಾಸಗೊಳಿಸಿದ್ದಾರೆ.

ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು ಬಗ್ವಾಡಿ ಗ್ರಾಮದಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಈ ಹೈಟೆಕ್ ಸ್ಮಾರ್ಟ್ ಕ್ಲಾಸ್ ಶನಿವಾರ ಉದ್ಘಾಟನೆಗೊಳ್ಳಲಿದೆ.

ಕೋವಿಡ್, ಲಾಕ್‌ಡೌನ್ ವೇಳೆಯಲ್ಲಿ ಈ ಸಹೋದರರು ಬಸ್ ಅನ್ನು ಶಾಲಾ ಕೊಠಡಿಯಾಗಿ ಪರಿವರ್ತಿಸಿದ ಮಾದರಿ ತಯಾರಿಸಿದ್ದರು. ಆಗ, ಸಾರಿಗೆ ಸಚಿವರಾಗಿದ್ದ ಲಕ್ಷ್ಮಣ ಸವದಿ ಹಾಗೂ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ ಅವರು ಈ ಯತ್ನವನ್ನು ಶ್ಲಾಘಿಸಿ, ಇವರನ್ನು ಸನ್ಮಾನಿಸಿದ್ದರು. ಆಗ, ಗುಜರಿ ಬಸ್ ಒಂದನ್ನು ಕೊಡುಗೆ ನೀಡುವಂತೆ ಮಾಡಿದ್ದ ಮನವಿಗೆ ಸೂಕ್ತ ಸ್ಪಂದನೆ ಸಿಕ್ಕಿತ್ತು.



ಉದ್ಘಾಟನೆಗೆ ಸಿದ್ಧವಾಗಿರುವ ಸ್ಮಾರ್ಟ್ ಕ್ಲಾಸ್ ಹೊಂದಿರುವ ಬಸ್

ಬಸ್‌ನಲ್ಲಿ ಚಾಲಕನ ಆಸನ, ಇತರ ವ್ಯವಸ್ಥೆಗಳು ಮೂಲ ಸ್ವರೂಪದಲ್ಲೇ ಇವೆ. ಉಳಿದಂತೆ 25 ವಿದ್ಯಾರ್ಥಿಗಳು ಕುಳಿತುಕೊಳ್ಳುವಂತೆ ಬದಲಿಸಲಾಗಿದೆ. ಪಾಠ ಬೋಧನೆಗೆ ಪ್ರೊಜೆಕ್ಟರ್ ಇದೆ. ಕಿಟಕಿಗಳ ಮೇಲಿನ ಭಾಗದ ಗಾಜಿಗೆ ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸುಧಾರಕರು, ಸಾಹಿತಿಗಳ ಭಾವಚಿತ್ರಗಳನ್ನು ಅಳವಡಿಸಲಾಗಿದೆ. ಗ್ರಂಥಾಲಯದ ವ್ಯವಸ್ಥೆಯೂ ಇದೆ. ಫ್ಯಾನ್, ಕೈ ತೊಳೆಯಲು ಬೇಸಿನ್ ವ್ಯವಸ್ಥೆಯನ್ನು ಈ 'ಸ್ಮಾರ್ಟ್ ಕ್ಲಾಸ್'ನಲ್ಲಿ ಕಾಣಬಹುದು. ಕರಾವಳಿ ಪರಂಪರೆಯನ್ನು ಬಿಂಬಿಸುವ ರಥೋತ್ಸವ, ಯಕ್ಷಗಾನ, ಕೋಲದ ಚಿತ್ರಗಳಿವೆ. ಬಸ್ ತದ್ರೂಪು ಮಾದರಿ ಕುರಿತ ಪತ್ರಿಕಾ ವರದಿಗಳು, ಸಚಿವರು, ಅಧಿಕಾರಿಗಳ ಭೇಟಿಯ ವಿವರ ಹೊರಭಾಗದಲ್ಲಿದೆ.

ರಾಜ್ಯದಲ್ಲಿ ಮೊದಲ ಬಾರಿಗೆ ಈ ರೀತಿಯ ಪ್ರಯತ್ನ ನಡೆದಿದೆ. ವಿದ್ಯಾರ್ಥಿಗಳಲ್ಲಿ ಖುಷಿ ಇದೆ. ಮುಂಬರುವ ದಿನಗಳಲ್ಲಿ ಶಾಲೆಯಲ್ಲಿ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಾಗುವ ವಿಶ್ವಾಸ ಇದೆ

ಜಿ.ಎಂ.ಮುಂದಿನಮನಿ
ವಲಯ ಶಿಕ್ಷಣಾಧಿಕಾರಿ, ಬೈಂದೂರು

'ಗ್ರಾಮೀಣ ಭಾಗದಲ್ಲಿನ ಮಕ್ಕಳಿಗೆ ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತು ಪಾಠ ಕೇಳಬೇಕು ಎಂಬ ಆಸೆ ಇದೆ. ದಾನಿಗಳು ನೆರವು ನೀಡಿದರೆ ಸಂಪೂರ್ಣ ಡಿಜಿಟಲ್ ವ್ಯವಸ್ಥೆಯಲ್ಲಿ ಕೂತು ಪಾಠ ಕೇಳುವ ವ್ಯವಸ್ಥೆ ಮಾಡಲಾಗುವುದು

ಪ್ರಶಾಂತ್ ಆಚಾರ್, ಕಲಾವಿದ, ಬಗ್ವಾಡಿ

'ನಮ್ಮೂರ ಶಾಲೆಯಲ್ಲಿ ವಿದ್ಯಾರ್ಥಿಗಳ ಹಾಜರಾತಿ ಹೆಚ್ಚಳಕ್ಕೆ ಇದು ವಿನೂತನ ಪ್ರಯತ್ನವಾಗಿದೆ. ಪ್ಲೈವುಡ್, ಮ್ಯಾಟ್ ಜೋಡಣೆ, ಪೇಂಟಿಂಗ್ ಸೇರಿದಂತೆ ಅಂದಾಜು ₹2 ಲಕ್ಷದವರೆಗೆ ಖರ್ಚಾಗಿದೆ' ಎಂದು ಸಹೋದರರು ತಿಳಿಸಿದ್ದಾರೆ.

ಈ ಶಾಲೆಯಲ್ಲಿ ಹಿಂದೆ 40 ಮಕ್ಕಳಿದ್ದವು. ಈಗ ಇದೀಗ 87 ಮಕ್ಕಳು ಇವೆ. ಶಾಲೆಗೆ ಅಗತ್ಯ ಶಿಕ್ಷಕರ ಹಾಗೂ ಕೊಠಡಿ ಕೊರತೆ ಇದೆ. ಸರ್ಕಾರ ಇತ್ತ ಗಮನಿಸಬೇಕು ಎಂದು ಶಾಲೆಯ ಹಳೆಯ ವಿದ್ಯಾರ್ಥಿ ರಾಧಾಕೃಷ್ಣ ಗಾಣಿಗ ಅಭಿಪ್ರಾಯಪಡುತ್ತಾರೆ.

ಕಳಪೆ ಬಿತ್ತನೆ ಬೀಜ ಪೂರೈಸಿದರೆ ಕ್ರಮ: ಕೆ.ಎಸ್. ಈಶ್ವರಪ್ಪ

ಬೆಂಗಳೂರು: ರೈತರಿಗೆ ನಕಲಿ ಬಿತ್ತನೆ ಬೀಜ ಪೂರೈಸುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಬಿಜೆಪಿಯ ಎನ್. ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದ ಅವರು, ‘ನಕಲಿ, ಕಳಪೆ ಗುಣಮಟ್ಟದ ಬಿತ್ತನೆ ಬೀಜ ಪೂರೈಸುವವರು ರಕ್ಷಿಸುವ ಪ್ರಶ್ನೆಯೇ ಇಲ್ಲ. ಈ ಬಗ್ಗೆ ಸಂಬಂಧ ಕೃಷಿ ಸಚಿವರ ಜತೆ ಸಭೆ ನಡೆಸಲಾಗುವುದು’ ಎಂದರು.

‘ರಾಜ್ಯದಲ್ಲಿ 8,500 ಕ್ವಿಂಟಲ್ ನಕಲಿ ಬಿತ್ತನೆ ಬೀಜ ಪತ್ತೆಯಾಗಿದೆ. ಕೃಷಿ ಇಲಾಖೆ ಅಧಿಕಾರಿಗಳು ಇನ್ನಷ್ಟು ಸಕ್ರಿಯರಾದರೆ ಇಂತಹ ನೂರಾರು ಪ್ರಕರಣಗಳನ್ನು ಪತ್ತೆಹಚ್ಚಬಹುದು’ ಎಂದು ರವಿಕುಮಾರ್ ಹೇಳಿದರು.

‘ಕ್ರೀಡೆಗೆ ಅನುದಾನ ಹಂಚಿಕೆ ಕ್ರಮ ಬದಲಿಸಿ’

ಬೆಂಗಳೂರು: ‘ರಾಜ್ಯದಲ್ಲಿ ಒಳ್ಳೆಯ ಕ್ರೀಡಾಪಟುಗಳು ತಯಾರಾಗಬೇಕಿದ್ದರೆ ಮೊದಲು ಬಜೆಟ್‌ನಲ್ಲಿ ಕ್ರೀಡಾ ಕ್ಷೇತ್ರದ ಅನುದಾನ ಹಂಚಿಕೆ ಕ್ರಮ ಬದಲಿಸಿ. ಎಲ್ಲ ಜಿಲ್ಲೆಗಳಿಗೂ ಬಿಡಿಗಾಸು ಹಂಚುವ ಬದಲಿಗೆ ವಿಭಾಗವಾರು ಕ್ರೀಡಾ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ರೂಪಿಸಿ’ ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ಉಪ ನಾಯಕ ಕೆ. ಗೋವಿಂದರಾಜು ಒತ್ತಾಯಿಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಶನಿವಾರ ಭಾಗವಹಿಸಿ ಮಾತನಾಡಿದ ಅವರು, ‘ಪ್ರತಿ ವರ್ಷವೂ ₹ 300 ಕೋಟಿಯಿಂದ ₹ 400 ಕೋಟಿಯನ್ನು ವೆಚ್ಚ ಮಾಡಿ ಒಂದೇ ಸ್ಥಳದಲ್ಲಿ ಸಮಗ್ರ ಕ್ರೀಡಾ ಮೂಲಸೌಕರ್ಯ ಅಭಿವೃದ್ಧಿಪಡಿಸಬೇಕು. ವಿಭಾಗವಾರು ಒಂದೊಂದು ಕೇಂದ್ರಗಳಲ್ಲಿ ಇಂತಹ ಸೌಕರ್ಯ ಲಭಿಸಿದರೆ ನಮ್ಮಲ್ಲೂ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳು ಸಜ್ಜುಗೊಳ್ಳುತ್ತಾರೆ’ ಎಂದರು.



ಗೋವಿಂದರಾಜು

ಕ್ರೀಡಾ ಕ್ಷೇತ್ರಕ್ಕೆ ಈಗ ವಾರ್ಷಿಕ ₹ 500 ಕೋಟಿ ಅನುದಾನ ಒದಗಿಸಲಾಗುತ್ತಿದೆ. ಅದನ್ನು ಕನಿಷ್ಠ ₹ 1,000 ಕೋಟಿಗೆ ಹೆಚ್ಚಿಸಬೇಕು. ಕ್ರೀಡಾ ಸೆಸ್ ವಿಧಿಸುವ ಮೂಲಕ ವರಮಾನ ಸಂಗ್ರಹಿಸಬೇಕು. ಕಾರ್ಪೊರೇಟ್ ಕಂಪನಿಗಳ ನೆರವಿನಲ್ಲಿ ಕ್ರೀಡಾ ಮೂಲಸೌಕರ್ಯ ಅಭಿವೃದ್ಧಿಪಡಿಸಬೇಕು ಎಂದು ಸಲಹೆ ನೀಡಿದರು.

ವಿತ್ತೀಯ ಕುಸಿತದ ಆತಂಕ: ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಮಾತನಾಡಿ, ‘ಆರ್ಥಿಕ ಶಿಸ್ತು ಕಾಯ್ದುಕೊಂಡ ರಾಜ್ಯಗಳಲ್ಲಿ ಕರ್ನಾಟಕ ಅಗ್ರ ಸ್ಥಾನದಲ್ಲಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಸಾಲದ ಪ್ರಮಾಣ ಹೆಚ್ಚುತ್ತಿದೆ. ಇದರಿಂದಾಗಿ ರಾಜ್ಯವು ವಿತ್ತೀಯ ಶಿಸ್ತು ಕಾಯ್ದುಕೊಳ್ಳುವಲ್ಲಿ ವಿಫಲವಾಗುವ ಆತಂಕವಿದೆ’ ಎಂದರು.

ಮಠಗಳಿಗೆ ಹಣ ಕೊಡುವುದು ನಿಲ್ಲಬೇಕು. ಸಾಲದ ಪ್ರಮಾಣವನ್ನು ಕಡಿಮೆ ಮಾಡಿ, ವಿತ್ತೀಯ ಶಿಸ್ತು ಕಾಪಾಡಿಕೊಳ್ಳಬೇಕು ಎಂದರು.

ಬಿಜೆಪಿಯ ರುದ್ರೇಗೌಡ ಮಾತನಾಡಿ, ‘ರಾಜ್ಯದಲ್ಲಿ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡುತ್ತಿಲ್ಲ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯನ್ನು ಪುನಶ್ಚೇತನಗೊಳಿಸಬೇಕು. ಅದರ ಮೂಲಕ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ ನೀಡಬೇಕು’ ಎಂದರು.

‘ಕೆಐಎಡಿಬಿ ರಾಜ್ಯ ಸರ್ಕಾರದ ಪಾಲಿಗೆ ಬಿಳಿಯಾನೆಯಂತೆ ಆಗಿದೆ. ಅದರಿಂದ ರಾಜ್ಯದ ಉದ್ಯಮಿಗಳಿಗೆ ಅನುಕೂಲ ಆಗುತ್ತಿಲ್ಲ. ಕೈಗಾರಿಕಾ ಜಮೀನು ಹೊರ ರಾಜ್ಯದವರಿಗೆ ಬೇಗ ಹಂಚಿಕೆ ಆಗುತ್ತದೆ.’ ಎಂದರು.


ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆ: ಎಚ್.ಕೆ. ಪಾಟೀಲ ದೂರು

‘₹75 ಸಾವಿರ ಕೋಟಿ ಬಿಲ್ ಬಾಕಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವಿವಿಧ ಇಲಾಖೆಗಳು ನಡೆಸಿದ ಕಾಮಗಾರಿಗಳ ಸುಮಾರು ₹75 ಸಾವಿರ ಕೋಟಿಯಷ್ಟು ಮೊತ್ತದ ಬಿಲ್ ಪಾವತಿ ಬಾಕಿ ಇದೆ ಎಂದು ಕಾಂಗ್ರೆಸ್ ಶಾಸಕ ಎಚ್.ಕೆ.ಪಾಟೀಲ ದೂರಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಶುಕ್ರವಾರ ಭಾಗವಹಿಸಿ ಮಾತನಾಡಿದ ಅವರು, ಈ ರೀತಿ ಬಿಲ್ ಬಾಕಿ ಉಳಿಸಿರುವುದರಿಂದ ಸರ್ಕಾರಕ್ಕೆ ಹೊರೆ ಹೆಚ್ಚಾಗಿದೆ ಎಂದು ಹೇಳಿದರು.



ಎಚ್.ಕೆ. ಪಾಟೀಲ

ವಿವಿಧ ನೀರಾವರಿ ನಿಗಮಗಳ ಬಿಲ್ ₹10 ಸಾವಿರ ಕೋಟಿ, ಲೋಕೋಪಯೋಗಿ ₹18 ಸಾವಿರ ಕೋಟಿ, ನಗರಾಭಿವೃದ್ಧಿ ₹18 ಸಾವಿರ ಕೋಟಿ, ಬಿಡಿಎ ಮತ್ತು ಬಿಬಿಎಂಪಿ ₹10 ಸಾವಿರ ಕೋಟಿ ಹಾಗೂ ಗ್ರಾಮೀಣಾಭಿವೃದ್ಧಿ ₹12 ಸಾವಿರ ಕೋಟಿಯಷ್ಟು ಬಿಲ್ ಪಾವತಿಯಾಗಿಲ್ಲ ಎಂದರು.

ಅಷ್ಟೇ ಅಲ್ಲದೆ, ಬಜೆಟ್‌ನಿಂದ ಹೊರತಾಗಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಸುಮಾರು ₹ 2 ಲಕ್ಷ ಕೋಟಿ ಮೊತ್ತದಷ್ಟು ಕಾಮಗಾರಿಗಳು ನಡೆಯುತ್ತಿವೆ. ಉಳಿದ ಇಲಾಖೆಗಳದ್ದು ಸೇರಿದರೆ ಸುಮಾರು ₹5 ಲಕ್ಷ ಕೋಟಿಯಷ್ಟು ಕಾಮಗಾರಿಗಳು ನಡೆಯುತ್ತಿವೆ. ಈ ಕಾಮಗಾರಿಗಳಿಗೆ ಎಲ್ಲೂ ಒಪ್ಪಿಗೆ ಪಡೆದಿಲ್ಲ. ಕೆಲವು ಕಡೆ ಕಾಮಗಾರಿಗಳಿಗೆ ಸಾವಿರಾರು ಕೋಟಿ ಮುಂಗಡವನ್ನೂ ನೀಡಲಾಗಿದೆ. ಇನ್ನು ಕೆಲವು ಕಡೆಗಳಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಪಾಟೀಲ ಹೇಳಿದರು.

ಸಚಿವಾಲಯ ಮಟ್ಟದಲ್ಲಿ ವಿವಿಧ ಇಲಾಖೆಗಳಿಗೆ ಸೇರಿದ ಸುಮಾರು 51 ಸಾವಿರ ಕಡತಗಳು ವಿಲೇವಾರಿ ಆಗದೇ ಬಾಕಿ ಉಳಿದಿವೆ. ಇ–ಆಡಳಿತ ಇದೆ, ಪಾರದರ್ಶಕ ಆಡಳಿತ ನಡೆಸುತ್ತೇವೆ ಎನ್ನುತ್ತೀರಿ. ಆದರೆ ಕಡತ ಪರಿಶೀಲನೆಗೆ ಸಮಯವೇ ಇಲ್ಲವಾಗಿದೆ. ಸುಮಾರು ಒಂದು ವರ್ಷದಿಂದ ಕಡತ ಬಾಕಿ ಉಳಿಸಿಕೊಳ್ಳಲು ಕಾರಣವೇನು ಎಂದೂ ಪಾಟೀಲ ಪ್ರಶ್ನಿಸಿದರು.

ರಾಜ್ಯ ಸರ್ಕಾರದಲ್ಲಿ ಸುಮಾರು 3.50 ಲಕ್ಷ ಹುದ್ದೆಗಳು ಖಾಲಿ ಇವೆ. ಆದರೆ, ಸರ್ಕಾರ ಅದನ್ನು ಭರ್ತಿ ಮಾಡದೇ ಹೊರಗುತ್ತಿಗೆ ನೀಡಿದೆ. ಹೊರಗುತ್ತಿಗೆ ಪಡೆದವರು ಮೀಸಲಾತಿ ನೀತಿಯನ್ನು ಪಾಲಿಸುತ್ತಿಲ್ಲ. 2020ರಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಪತ್ರ ಬರೆದು, ನೇಮಕಾತಿ ಸಂಬಂಧಿಸಿದಂತೆ ಸಂವಿಧಾನದ ಉಲ್ಲಂಘನೆ ಆಗಬಾರದು ಎಂದು ತಿಳಿಸಿದೆ. ಅದನ್ನು ಸರ್ಕಾರ ಪಾಲಿಸಿದೆಯೇ ಎಂದು ಪಾಟೀಲ ಪ್ರಶ್ನಿಸಿದರು.



ಹಾಸನ ಜಿಲ್ಲೆಯಲ್ಲಿ ಆನೆದಾಳಿಯಿಂದ ಇಬ್ಬರು ಮೃತಪಟ್ಟಿದ್ದನ್ನು ಪ್ರಸ್ತಾಪಿಸಿದ ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಪ್ರತಿಭಟನೆ ನಡೆಸಿದರು. ಎಚ್.ಕೆ. ಕುಮಾರಸ್ವಾಮಿ, ಕೆ.ಎಸ್. ಲಿಂಗೇಶ್, ಸಿ.ಎನ್. ಬಾಲಕೃಷ್ಣ ಇದ್ದಾರೆ

ಆನೆ ಹಾವಳಿ: ಜೆಡಿಎಸ್ ಶಾಸಕರ ಧರಣಿ

ಬೆಂಗಳೂರು: ಬೇಲೂರು ತಾಲ್ಲೂಕು ಅರೆಹಳ್ಳಿ ಹೋಬಳಿಯಲ್ಲಿ ಆನೆ ತುಳಿತಕ್ಕೆ ಒಳಗಾಗಿ ಇಬ್ಬರು ವ್ಯಕ್ತಿಗಳು ಮೃತಪಟ್ಟಿರುವುದನ್ನು ಜೆಡಿಎಸ್ ಶಾಸಕ ಕೆ.ಎಸ್. ಲಿಂಗೇಶ್ ವಿಧಾನಸಭೆಯಲ್ಲಿ ಶೂನ್ಯವೇಳೆಯಲ್ಲಿ ಗಮನಸೆಳೆದರು.

ಸರ್ಕಾರ ಮೃತ ವ್ಯಕ್ತಿಗಳಿಗೆ ಪರಿಹಾರ ನೀಡುವುದರ ಜತೆಗೆ, ಈ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು. ಎಚ್.ಕೆ.ಕುಮಾರಸ್ವಾಮಿ, ಎ.ಟಿ.ರಾಮಸ್ವಾಮಿ ಅವರು ವಿಷಯ ಪ್ರಸ್ತಾಪಿಸಲು ಎದ್ದು ನಿಂತಾಗ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವಕಾಶ ನೀಡಲಿಲ್ಲ. ಇದನ್ನು ಪ್ರತಿಭಟಿಸಿ ಸಭಾಧ್ಯಕ್ಷರ ಪೀಠದ ಮುಂದೆ ಧಾವಿಸಿ ಧರಣಿ ನಡೆಸಿದರು. ಈ ವಿಷಯದ ಬಗ್ಗೆ ಬೇರೊಂದು ರೂಪದಲ್ಲಿ ಪ್ರಸ್ತಾಪಿಸಲು ಅವಕಾಶ ನೀಡುವುದಾಗಿ ಕಾಗೇರಿ ಸಮಾಧಾನಪಡಿಸಿದರು.

‘ವೈದ್ಯಕೀಯ ಸಂಶೋಧನೆಗೆ ಐಐಎಸ್‌ಸಿ ನೆರವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಕ್ಷೇತ್ರದಲ್ಲಿ ಜನೋಪಯೋಗಿ ಸಂಶೋಧನೆಗಳನ್ನು ಕೈಗೊಳ್ಳುವುದಕ್ಕಾಗಿ ಭಾರತೀಯ ವಿಜ್ಞಾನ ಸಂಸ್ಥೆಯ ಸಹಭಾಗಿತ್ವದಲ್ಲಿ ವೈದ್ಯಕೀಯ ಸಂಶೋಧನಾ ಕೇಂದ್ರ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಜ್ಞಾನ ಮತ್ತು ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಇಲಾಖೆಗಳು ಹಾಗೂ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ವತಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ ಸಮಾರಂಭದಲ್ಲಿ 2019ನೇ ಸಾಲಿನ ರಾಜ್ಯ ವಿಜ್ಞಾನ ಮತ್ತು ಎಂಜಿನಿಯರಿಂಗ್ ಪ್ರಶಸ್ತಿಗಳನ್ನು ಪ್ರದಾನ ಮಾಡಿ ಅವರು ಮಾತನಾಡಿದರು.

‘ರಾಜ್ಯದ ವೈಜ್ಞಾನಿಕ ಕ್ಷೇತ್ರವು ಜನರ ಶ್ರೇಯೋಭಿವೃದ್ಧಿಗಾಗಿ ಬಳಕೆಯಾಗಬೇಕು. ಈ ನಿಟ್ಟಿನಲ್ಲಿ ನಡೆಯುವ ಎಲ್ಲ ಸಂಶೋಧನೆಗಳು ಮತ್ತು ಆವಿಷ್ಕಾರಗಳಿಗೆ ಸರ್ಕಾರ ಸಹಕಾರ ನೀಡಲಿದೆ’ ಎಂದರು.

ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳು ಹೆಚ್ಚುತ್ತಿವೆ. ಅವುಗಳ ನಿಯಂತ್ರಣಕ್ಕೆ ವಿಶೇಷ ಕಾನೂನು ತರಲಾಗಿದೆ. ಯುವ ವಿಜ್ಞಾನಿಗಳು ಸೈಬರ್ ಅಪರಾಧಿಗಳನ್ನು ಮೀರಿಸುವ ಮಟ್ಟದಲ್ಲಿ ಸಂಶೋಧನೆ, ಆವಿಷ್ಕಾರ ಮಾಡಬೇಕು ಎಂದು ಸಲಹೆ ನೀಡಿದರು.

ಪರಿಸರ ಮತ್ತು ಅರಣ್ಯ ಸಂಪತ್ತು ರಕ್ಷಣೆಯ ನಿಟ್ಟಿನಲ್ಲಿ ಚಿಂತನೆ ನಡೆಯಬೇಕಿದೆ. ಸುಸ್ಥಿರ ಅಭಿವೃದ್ಧಿ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಬಳಕೆಯಲ್ಲಿ ಸುಸ್ಥಿರ ವಿಧಾನ ಅಳವಡಿಸಿಕೊಳ್ಳಬೇಕು. ಈ ದಿಸೆಯಲ್ಲಿ ಹಸಿರು ಬಜೆಟ್ ರೂಪಿಸಿ, ₹ 100 ಕೋಟಿ ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದರು.

ಪ್ರೊ.ಸಿ.ಎನ್.ಆರ್. ರಾವ್ ವರ್ಚುಯಲ್ ಮೂಲಕ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ವಿಜ್ಞಾನ ಮತ್ತು ತಂತ್ರಜ್ಞಾನ ಡಾ ಅಶ್ವತ್ಥ ನಾರಾಯಣ, ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರಾದ ಪ್ರೊ. ಗೋವಿಂದನ್ ರಂಗರಾಜನ್, ಶಾಸಕ ರಿಜ್ವಾನ್ ಅರ್ಷದ್, ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷ ಕಿರಣ್ ಕುಮಾರ್, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ.ರಮಣರೆಡ್ಡಿ, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯ ಕಾರ್ಯದರ್ಶಿ ಪ್ರೊ. ಅಶೋಕ್ ಎಂ. ರಾಯಚೂರ್ ಉಪಸ್ಥಿತರಿದ್ದರು.



ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ವಿಜ್ಞಾನ ಮತ್ತು ಎಂಜಿನಿಯರಿಂಗ್ ಪ್ರಶಸ್ತಿ ಪುರಸ್ಕೃತರಾದ ಸಾಧಕರೊಂದಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣ ರೆಡ್ಡಿ, ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ ಎ.ಎಸ್. ಕಿರಣ್‌ಕುಮಾರ್, ಸಚಿವ ಡಾ. ಅಶ್ವತ್ಥನಾರಾಯಣ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಐಐಎಸ್‌ಸಿ ನಿರ್ದೇಶಕ ಪ್ರೊ. ಗೋವಿಂದನ್ ರಂಗರಾಜನ್, ಶಾಸಕ ರಿಜ್ವಾನ್ ಅರ್ಷದ್ ಮತ್ತು ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಕಾರ್ಯದರ್ಶಿ ಪ್ರೊ. ಅಶೋಕ್ ಎಂ. ರಾಯಚೂರು –ಪ್ರಜಾವಾಣಿ ಚಿತ್ರ

ಪ್ರಶಸ್ತಿ ಪುರಸ್ಕೃತರು

ಡಾ. ಬಿ.ಎನ್. ಗಂಗಾಧರ, ಪ್ರೊ.ಗೈತಿ ಹಾಸನ್ ಅವರಿಗೆ ಸರ್.ಎಂ.ವಿ-ಶ್ವೇಶ್ವರಯ್ಯ ಪ್ರಶಸ್ತಿ, ಪ್ರೊ.ಲಲಿತ್ ಮೋಹನ್ ಪಟ್ನಾಯಕ್, ಪ್ರೊ. ಶೆಟ್ಟಿ ಹುಂತ್ರಿಕೆ ಶೇಖರ್ ಅವರಿಗೆ ಡಾ.ರಾಜಾರಾಮಣ್ಣ ಪ್ರಶಸ್ತಿ ಮತ್ತು ಪ್ರೊ. ಎಚ್. ನಾಗಭೂಷಣ, ಡಾ. ಜಿ. ವೆಂಕಟ ಸುಬ್ರಮಣಿಯನ್, ಪ್ರೊ. ರವಿ ಮಂಜಿತ್ತಾಯ, ಡಾ. ದಿನೇಶ ನಾಗೇಗೌಡ ಅವರಿಗೆ ಸರ್.ಸಿ.ವಿ.ರಾಮನ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರೊ. ಆರ್ ವೆಂಕಟೇಶ ಬಾಬು , ಪ್ರೊ. ರಾಜ್ ಮೋಹನ್ ಬಾಲಕೃಷ್ಣನ್, ಪ್ರೊ. ವಿನೋದ ಗಣಪತಿ, ಪ್ರೊ. ಹರ್ಷವರ್ಧನ ಅವರಿಗೆ ಪ್ರೊ ಸತೀಶ್ ಧವನ್ ಪ್ರಶಸ್ತಿ ಮತ್ತು ಪ್ರೊ.ಮಳಲಿ ಸಂಪೂರ್ಣ ಅವತಿ ಅವರಿಗೆ ಡಾ. ಕಲ್ಪನಾ ಚಾವ್ಲಾ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ತಾಯಂದಿರ ಮರಣ ಪ್ರಮಾಣ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಆರೋಗ್ಯ ಸಚಿವಾಲಯದ ತಾಯಿ ಮತ್ತು ಮಕ್ಕಳ ವಿಭಾಗವು ಮಾದರಿ ನೋಂದಣಿ ವ್ಯವಸ್ಥೆಯ (ಎಸ್‌ಆರ್‌ಎಸ್) ವರದಿ ಬಿಡುಗಡೆ ಮಾಡಿದ್ದು, ರಾಜ್ಯದಲ್ಲಿ ತಾಯಂದಿರ ಮರಣ ಪ್ರಮಾಣವು 92ರಿಂದ 83ಕ್ಕೆ ಇಳಿಕೆ ಕಂಡಿದೆ.

ಹೆರಿಗೆ ವೇಳೆ ತಾಯಂದಿರ ಮರಣದ ಅನುಪಾತ ಕುರಿತಂತೆ ಪ್ರತಿ ಎರಡು ವರ್ಷಕ್ಕೊಮ್ಮೆ ಎಸ್‌ಆರ್‌ಎಸ್ ವರದಿ ಬಿಡುಗಡೆ ಮಾಡಲಾಗುತ್ತಿದೆ. 2016-18ರ ವರದಿಯ ಪ್ರಕಾರ ರಾಜ್ಯದಲ್ಲಿ ಪ್ರತಿ ಒಂದು ಲಕ್ಷ ಹೆರಿಗೆಗೆ 92 ತಾಯಂದಿರು ಮೃತಪಡುತ್ತಿದ್ದರು. 2017-19ರಲ್ಲಿ ಮರಣ ಪ್ರಮಾಣ ಇಳಿಕೆಯಾಗಿದೆ. ಇದರಿಂದಾಗಿ ರಾಜ್ಯ 9ನೇ ಸ್ಥಾನದಿಂದ 8ನೇ ಸ್ಥಾನಕ್ಕೆ ಇಳಿಕೆಯಾಗಿದೆ. ವರ್ಷಕ್ಕೆ ಒಂದು ಲಕ್ಷಕ್ಕಿಂತ ಹೆಚ್ಚು ಹೆರಿಗೆ ನಡೆಯುವ ರಾಜ್ಯಗಳನ್ನು ಮಾತ್ರ ಸಮೀಕ್ಷೆಗೆ ಪರಿಗಣಿಸಲಾಗುತ್ತಿದೆ. ಹೀಗಾಗಿ, ದೇಶದ 19 ರಾಜ್ಯಗಳು ಸಮೀಕ್ಷೆಗೆ ಒಳಪಟ್ಟಿದ್ದವು.

ಕಡಿಮೆ ಮರಣ ಪ್ರಮಾಣ ಹೊಂದಿರುವ ರಾಜ್ಯಗಳಲ್ಲಿ ಕೇರಳ (30), ಮಹಾರಾಷ್ಟ್ರ (38), ತೆಲಂಗಾಣ (56), ಆಂಧ್ರಪ್ರದೇಶ (58) ಹಾಗೂ ತಮಿಳುನಾಡು (58) ಕ್ರಮವಾಗಿ ಮೊದಲ ಐದು ಸ್ಥಾನದಲ್ಲಿವೆ. ಈ ಪಟ್ಟಿಯಲ್ಲಿ ಅಸ್ಸಾಂ (205) ಕಡೆಯ ಸ್ಥಾನದಲ್ಲಿದೆ. ದಕ್ಷಿಣದ ಐದು ರಾಜ್ಯಗಳಿಗೆ ಹೋಲಿಕೆ ಮಾಡಿದಲ್ಲಿ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಾಯಂದಿರ ಮರಣ ವರದಿಯಾಗುತ್ತಿದೆ.


ಅಲೆಮಾರಿಗಳಿಗೆ ಪ್ರತ್ಯೇಕ ನಿಗಮ ಅಸಾಧ್ಯ: ಶ್ರೀನಿವಾಸ ಪೂಜಾರಿ

ಬೆಂಗಳೂರು: ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ಸ್ಥಾಪಿಸುವುದು ಅಸಾಧ್ಯ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶನಿವಾರ ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿಯ ಶಾಂತಾರಾಮ ಬುಡ್ನ ಸಿದ್ದಿ, ‘ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳ ಅಭಿವೃದ್ಧಿ ಕೋಶದ ಬದಲಿಗೆ ಪ್ರತ್ಯೇಕವಾದ ನಿಗಮ ಸ್ಥಾಪಿಸಬೇಕು. ಆ ಮೂಲಕ ಈ ಸಮುದಾಯಗಳ ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ವೇಗ ನೀಡಬೇಕು’ ಎಂದು ಒತ್ತಾಯಿಸಿದರು.

‘ಜಾತಿಗೊಂದು ನಿಗಮ ಸ್ಥಾಪಿಸುವುದಕ್ಕೆ ಹೈಕೋರ್ಟ್ ಈಗಾಗಲೇ ಆಕ್ಷೇಪ ವ್ಯಕ್ತಪಡಿಸಿದೆ. ಇನ್ನೂ ಹೆಚ್ಚಿನ ನಿಗಮಗಳ ಸ್ಥಾಪನೆ ಕಷ್ಟ’ ಎಂದು ಸಚಿವರು ಹೇಳಿದರು.

ಅಲೆಮಾರಿ, ಅಲೆಮಾರಿ ವಿದ್ಯಾರ್ಥಿಗಳಿಗಾಗಿ ₹ 30 ಕೋಟಿ ವೆಚ್ಚದಲ್ಲಿ ಒಂಬತ್ತು ವಸತಿ ನಿಲಯಗಳನ್ನು ತೆರೆಯಲಾಗುವುದು. ಈ ವರ್ಷವೇ ಈ ವಸತಿ ನಿಲಯಗಳು ಆರಂಭವಾಗಲಿವೆ. ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳ ಮಕ್ಕಳು ಉತ್ತಮ ಶಿಕ್ಷಣ ಪಡೆಯಲು ಈ ಸೌಲಭ್ಯ ನೆರವಾಗಲಿದೆ ಎಂದರು.



ಶಾಂತಾರಾಮ ಸಿದ್ದಿ

ರಾಜ್ಯದಲ್ಲಿ ಪರಿಶಿಷ್ಟ ಜಾತಿಯ 51, ಪರಿಶಿಷ್ಟ ಪಂಗಡದ 23 ಮತ್ತು ಹಿಂದುಳಿದ ವರ್ಗಗಳ 46 ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳಿವೆ. ಈ ಎಲ್ಲ ಸಮುದಾಯಗಳ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದು ತಿಳಿಸಿದರು.

ಪ್ರಜಾವಾಣಿ ಶನಿವಾರ, 12 ಮಾರ್ಚ್ 2022

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ





ರೇಷ್ಮೆ ವಸ್ತ್ರ ಕಾಳಜಿಯೂ ನವಿರಾಗಿರಲಿ

ಜಾನಕಿ ಎಸ್.

ಹೆಣ್ಣುಮಕ್ಕಳಿಗೆ ಮೊದಲ ಬಾರಿ ಸೀರೆ ಉಡುವುದೆಂದರೆ ಅದೇನೋ ಸಂಭ್ರಮ. ಅದರಲ್ಲೂ ತನ್ನ ತಾಯಿಯ ಮದುವೆಯ ರೇಷ್ಮೆ ಸೀರೆ ಉಡುವುದೆಂದರೆ ವರ್ಣಿಸಲಾಗದ ಆನಂದ. ಅಷ್ಟು ವರ್ಷಗಳಿಂದ ಕಾಪಾಡಿಕೊಂಡು ಬಂದಿರುವ ತನ್ನ ರೇಷ್ಮೆ ಸೀರೆಯನ್ನು ಮಗಳು ಉಡುತ್ತಾಳೆ ಎಂದರೆ ತಾಯಿಗೂ ಅಷ್ಟೇ ಖುಷಿ. ಹೀಗೆ ರೇಷ್ಮೆ ಸೀರೆಗೂ ಹೆಣ್ಣುಮಕ್ಕಳಿಗೂ ಬಿಡಿಸಲಾರದ ನಂಟು.

ಇಂಥ ಅನುಬಂಧವಿರುವ 'ರೇಷ್ಮೆ' ಜೊತೆಗಿನ ಒಡನಾಟಗಳನ್ನು ಮೆಲುಕು ಹಾಕುತ್ತಿದ್ದರೆ, ಎಷ್ಟೊಂದು ನವಿರಾದ ನೆನಪುಗಳು ಗರಿಬಿಚ್ಚಿಕೊಳ್ಳುತ್ತವೆ. ನನಗೆ ನೆನಪಿದ್ದ ಹಾಗೆ, ಕಾಲೇಜಿನ ಗೆಳತಿಯ ಅಕ್ಕನ ಮದುವೆಯಲ್ಲಿ ನಾನು ಮೊದಲ ಬಾರಿಗೆ ರೇಷ್ಮೆ ಸೀರೆ ಉಟ್ಟಿದ್ದೆ. ನಂತರ, ನನ್ನ ಮದುವೆಯ ಧಾರೆಯಲ್ಲಿ. ಮೊದಲ ಕಂದ ಹೊಟ್ಟೆಯಲ್ಲಿದ್ದಾಗ ಉಟ್ಟ ಹಸಿರು ಬಣ್ಣದ ರೇಷ್ಮೆ ಸೀರೆ, ಸಣ್ಣವಳಿದ್ದಾಗ ಅಮ್ಮ ಹೊಲಿಸಿದ ರೇಷ್ಮೆ ಲಂಗ.. ಹೀಗೆ ರೇಷ್ಮೆ ದಿರಿಸುಗಳನ್ನು ನೆನಪಿಸಿಕೊಂಡಾಗ ಮನಸ್ಸಿನಲ್ಲಿ ನೆನಪುಗಳು ಮೆರವಣಿಗೆ ಹೊರಡುತ್ತವೆ.

ಭಾವ ತುಂಬಿದ ನೆನಪುಗಳನ್ನು ಮೆಲುಕು ಹಾಕುವಂತೆ ಮಾಡುವ ರೇಷ್ಮೆ ದಿರಿಸುಗಳನ್ನು ಜತನದಿಂದ ಕಾಪಾಡಿಕೊಳ್ಳಬೇಕು. ಅದು ಹೇಗೆ? ಇಲ್ಲಿದೆ ಟಿಪ್ಸ್...

ಬಿಸಿಲು ಥೆರಪಿ

- ರೇಷ್ಮೆ ಸೀರೆ, ಶಾಲು, ಜರಿ ಲಂಗ, ದೋತಿ.. ಇಂಥ ರೇಷ್ಮೆ ಬಟ್ಟೆಗಳನ್ನು ವರ್ಷಕ್ಕೊಮ್ಮೆ ಎಳೆ ಬಿಸಿಲಿಗೆ (ಮುಂಜಾನೆಯ ಬಿಸಿಲು) ಹರವಿಡಿ. ಚಾಪೆ ಅಥವಾ ಚಾದರದ ಮೇಲೆ 10 ನಿಮಿಷ ಹರಡಿ. ಈ ಪ್ರಕ್ರಿಯೆಗೆ ಶ್ರಾವಣದ ಬಿಸಿಲು ಒಳ್ಳೆಯದು(ಬೇರೆ ಕಾಲದಲ್ಲಿಯೂ ಹಾಕಬಹುದು). ಈ ಅವಧಿಯಲ್ಲಿ ಎರಡು ಬದಿಗೂ ಬಿಸಿಲು ಬೀಳುವಂತೆ ತಿರುವಿ ಹಾಕಿ. ಇದರಿಂದ ವಸ್ತ್ರದ ಮೇಲೆ ಸಣ್ಣ ಕ್ರಿಮಿಗಳಿದ್ದರೂ ನಾಶವಾಗುತ್ತವೆ. ರೇಷ್ಮೆ ವಸ್ತ್ರದ ಬಿಸಿಲು ಥೆರಪಿ ಅಥವಾ ಚಿಕಿತ್ಸೆ ನಮ್ಮ ಅಜ್ಜಿ ಕಾಲದಿಂದಲೂ ಚಾಲ್ತಿಯಲ್ಲಿದೆ.
- ಮನೆಯಲ್ಲಿ ಬಿಸಿಲು ಬೀಳುವ ಅಂಗಳ ಅಥವಾ ವೈರ್‌ಮೆಷ್ ಗ್ಯಾಲರಿಯಿದ್ದರೆ (ತಂತಿಯಿಂದ ಆವೃತಗೊಂಡ ಜಾಗ) ಅಲ್ಲಿ ಹಗ್ಗ ಕಟ್ಟಿ. ಅದರ ಮೇಲೆ ರೇಷ್ಮೆ ಬಟ್ಟೆಗಳನ್ನು ಹಾಕಿ. ನೆನಪಿರಲಿ, ಈ ಬಟ್ಟೆಗಳಿಗೆ ಬಿಸಿಲು ತಾಗಬೇಕು. ಹೀಗೆ ಹತ್ತು ನಿಮಿಷ ಹಗ್ಗದ ಮೇಲೆ ಇಡಿ.

ಬೆವರಿನ ಪಸೆ ಆರಲಿ

- ಧರಿಸಿದ ರೇಷ್ಮೆ ವಸ್ತ್ರವನ್ನು ತೆಗೆದ ಕೂಡಲೇ ಮಡಿಸಿಡಬೇಡಿ. ಏಕೆಂದರೆ, ಬಟ್ಟೆಯ ಮೇಲೆ ಬೆವರಿನ ಹಸಿ ಇರುತ್ತದೆ. ಬಟ್ಟೆ ಲಡ್ಡ (ನವೆಯುವುದು, ಹಿಂಜುವುದು) ಆಗುವ ಸಾಧ್ಯತೆ ಹೆಚ್ಚು. ಹಾಗಾಗಿ, ಮೇಲೆ ಹೇಳಿದಂತೆ ಹಗ್ಗದ ಮೇಲೆ ಹರಡಿ ಒಣಗಿಸಬೇಕು.
- ರೇಷ್ಮೆ ಬಟ್ಟೆಗಳ ಒಳ ಪದರಗಳನ್ನು ಇಸ್ತ್ರಿ ಮಾಡಿ, ಗಾಳಿಯಲ್ಲಿ ಒಮ್ಮೆ ಕೊಡವಿ ಮಡಿಸಿಟ್ಟರೆ ವಸ್ತ್ರಗಳು ಹಾಳಾಗದೇ, ಹೆಚ್ಚು ಬಾಳಿಕೆ ಬರುತ್ತವೆ.

ಹತ್ತಿ ಬಟ್ಟೆಯಲ್ಲಿ ಸುತ್ತಿಡಿ

- ಯಾವುದೇ ರೇಷ್ಮೆ ಬಟ್ಟೆಯನ್ನು ಹತ್ತಿ ಬಟ್ಟೆಯಿಂದ ತಯಾರಿಸಿದ ಬ್ಯಾಗ್‌ಗಳಲ್ಲಿ ಇಡಬೇಕು ಅಥವಾ ಹತ್ತಿ ಬಟ್ಟೆಯನ್ನು ಸುತ್ತಿ ಇಡುವುದು ಸೂಕ್ತ.
- ರೇಷ್ಮೆ ವಸ್ತ್ರಗಳನ್ನಿಟ್ಟ ಚೀಲಗಳ ಮೂಲೆಗಳಲ್ಲಿ ಲಾವಂಚದ ಬೇರುಗಳನ್ನು ಇರಿಸುವುದರಿಂದ ಬಟ್ಟೆಗೆ ಪರಿಮಳ ಬರುತ್ತದೆ. ಈ ಸುವಾಸನೆ, ಕ್ರಿಮಿನಾಶಕವಾಗಿಯೂ ಕೆಲಸ ಮಾಡುತ್ತದೆ. ಇದು ನಮ್ಮ ಕುಟುಂಬದಲ್ಲಿ ತಲೆತಲಾಂತರದಿಂದ ರೂಢಿಗತವಾಗಿ ನಡೆದುಕೊಂಡು ಬಂದಿದೆ.
- ಯಾವ ಕಾರಣಕ್ಕೂ ಪ್ಲಾಸ್ಟಿಕ್ ಕವರ್‌ಗಳಲ್ಲಿ ರೇಷ್ಮೆ ಬಟ್ಟೆಯನ್ನು ಇಡಬಾರದು.
- ರೇಷ್ಮೆ ಬಟ್ಟೆ ಮೇಲೆ ಎಣ್ಣೆ ಕಲೆಗಳಿದ್ದರೆ, ಆ ಜಾಗಕ್ಕೆ ಫೇಸ್‌ಪೌಡರ್ ಸಿಂಪಡಿಸಿ. ನಂತರ ಒಣಬಟ್ಟೆಯಿಂದ ಮೃದುವಾಗಿ ಉಜ್ಜಿ. ಆಮೇಲೆ ತೇವವಿರುವ ಬಿಳಿ ಬಟ್ಟೆಯಿಂದ ಆ ಜಾಗವನ್ನು ಸ್ವಚ್ಛಗೊಳಿಸಿ, ಇಸ್ತ್ರಿ ಮಾಡಿದರೆ, ಎಣ್ಣೆ ಕಲೆ ಹೋಗುತ್ತದೆ.

ನೆನಪಿಡಿ..

- ಹೊಸ ರೇಷ್ಮೆ ಬಟ್ಟೆಗಳನ್ನು ತೆಳುವಾಗಿ ಇಸ್ತ್ರಿ ಮಾಡಿದರೆ ಮೃದುವಾಗುತ್ತದೆ. ನೆರಿಗೆ ಮಾಡಲು ಸುಲಭವಾಗುತ್ತದೆ.
- ರೇಷ್ಮೆ ರವಿಕೆ, ಡ್ರೆಸ್ ಬಳಸುವಾಗ ಅವುಗಳ ಕಂಕುಳ ಭಾಗದಲ್ಲಿ ಸ್ಟಿಕ್‌ಪ್ಯಾಡ್ ಹಚ್ಚಿ ಧರಿಸುವುದರಿಂದ ಬೆವರು ತಾಗಿ ಕಲೆ ಬೀಳುವುದು ತಪ್ಪುತ್ತದೆ.
- ಯಾವುದೇ ರೇಷ್ಮೆ ವಸ್ತ್ರಗಳನ್ನು ಪದೇ ಪದೇ ಡ್ರೈ ವಾಷ್ ಅಥವಾ ಡ್ರೈ ಕ್ಲೀನ್ ಮಾಡಿಸಬಾರದು.



ಬಿಸಿಲ ಧಗೆ ಬಾಧಿಸದಿರಲಿ

ಬಿಸಿಲಿನ ತಾಪ ಹೆಚ್ಚಿದಂತೆ ಮಹಿಳೆಯರಲ್ಲಿ ಸೋಂಕು, ನೋವು, ಬೆವರುಗುಳ್ಳೆಯಂತಹ ಹಲವು ಆರೋಗ್ಯ ಸಮಸ್ಯೆಗಳು ಬಾಧಿಸುತ್ತವೆ. ಬೇಸಿಗೆ ಆರಂಭದಲ್ಲೇ ಮುನ್ನೆಚ್ಚರಿಕೆ ತೆಗೆದುಕೊಂಡರೆ, ಈ ಸಮಸ್ಯೆಗಳು ಬಾರದಂತೆ ತಡೆಗಟ್ಟಬಹುದು.

ಡಾ. ವಸುಂಧರಾ ಭೂಪತಿ

ಕಳೆದ ಬೇಸಿಗೆಯಲ್ಲಿ ಧಗೆ ತುಸು ಹೆಚ್ಚಿತ್ತು. ಒಂದು ದಿನ ಮಧ್ಯಾಹ್ನ ದೂರವಾಣಿ ಕರೆ ಮಾಡಿದ ಗೃಹಿಣಿ ರೇಖಾ, 'ಡಾಕ್ಟ್ರೆ, ಪದೇ ಪದೇ ಮೂತ್ರಕ್ಕೆ ಹೋಗ್ಬೇಕು ಎನ್ನಿಸುತ್ತೆ. ಮೂತ್ರ ವಿಸರ್ಜನೆ ನಂತರ ಸಹಿಸಲಾಗದ ಉರಿ. ಇದಕ್ಕೆ ಏನು ಪರಿಹಾರ' ಅಂತ ಕೇಳಿದರು.

ಅಂದು ವಾಕಿಂಗ್‌ನಲ್ಲಿ ಸಿಕ್ಕಿದ ಸುಮಾ 'ಈ ಬೇಸಿಗೇಲಿ ಯಾಕಾದರೂ ಮುಟ್ಟಿನ ದಿನ ಬರುತ್ತಪ್ಪಾ ಅಂತ ಎನ್ನಿಸುತ್ತದೆ ಡಾಕ್ಟ್ರೆ. ಈ ಸಮಯದಲ್ಲಿ ತುಂಬಾ ಸುಸ್ತು, ಸಂಕಟ, ತಲೆನೋವು, ಹೊಟ್ಟೆನೋವು ಕಾಡುತ್ತದೆ. ಯಾವ ಆಹಾರ ತಿನ್ನಬೇಕು ಎನ್ನುವುದೇ ಗೊತ್ತಾಗಲ್ಲ' ಎಂದು ಅವಲತ್ತುಕೊಂಡರು.

ರೇಖಾ, ಸುಮಾ ಮಾತ್ರವಲ್ಲ, ಹಲವು ಮಹಿಳೆಯರಲ್ಲಿ ಬೇಸಿಗೆಯಲ್ಲಿ ಇಂಥ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಬೇಸಿಗೆ ಕಾಲದ ಆರಂಭದಲ್ಲೇ ಕೆಲವು ಮುನ್ನೆಚ್ಚರಿಕೆ ಕ್ರಮಗಳ ಜೊತೆಗೆ ಆಹಾರಕ್ರಮ, ಜೀವನಶೈಲಿಯಲ್ಲಿ ಬದಲಾವಣೆ ಮಾಡಿಕೊಂಡರೆ ಹೆಚ್ಚಿನ ತೊಂದರೆ ಬಾಧಿಸಿದಂತೆ ತಡೆಯಬಹುದು. ಹಾಗಾದರೆ, ಮಹಿಳೆಯರು ಯಾವ ರೀತಿಯ ಆಹಾರ ಕ್ರಮ ಅನುಸರಿಸಬೇಕು? ಇಲ್ಲಿದೆ ವಿವರ.

ಯಾವ ರೀತಿಯ ಆಹಾರ

ಹೊಟ್ಟೆ ಭಾರವಾಗುವವರೆಗೂ ಊಟ ಮಾಡಬೇಡಿ. ಸುಲಭವಾಗಿ ಜೀರ್ಣವಾಗುವ ಜವೆಗೋಧಿ, ಬಾರ್ಲಿ, ಹೆಸರುಬೇಳೆ, ಹಳೆಯ ಅಕ್ಕಿ (ವರ್ಷದ ಹಿಂದಿನದ್ದು), ರಾಗಿಯಂತಹ ಧಾನ್ಯಗಳ ಖಾದ್ಯಗಳನ್ನು ತಿನ್ನಬೇಕು. ಹೀರೇಕಾಯಿ, ಮೂಲಂಗಿ, ನುಗ್ಗೆಕಾಯಿ, ಬೆಂಡೆಕಾಯಿ, ಸೌತೆಕಾಯಿ, ಬೂದುಗುಂಬಳದಂತಹ ತರಕಾರಿಗಳನ್ನು ಹೆಚ್ಚು ಸೇವಿಸಬೇಕು.

ಬೇಸಿಗೆಯಲ್ಲಿ ದಂಟು, ಹರಿವೆ, ಸಬ್ಸಿಗೆ, ಮೆಂತ್ಯೆ, ಚಕ್ರಮುನಿ ಸೊಪ್ಪುಗಳಿಂದ ತಯಾರಿಸಿದ ಖಾದ್ಯಗಳನ್ನು ತಿನ್ನಿ. ಮೊಸರಿನ ಬದಲಿಗೆ ಜೀರಿಗೆ ಪುಡಿ, ಕೊತ್ತಂಬರಿ ಸೊಪ್ಪು, ಉಪ್ಪು, ಕರಿಬೇವು ಹಾಕಿದ ಮಜ್ಜಿಗೆಯನ್ನು ಹೆಚ್ಚು ಕುಡಿಯಿರಿ. ಕರಿದ ತಿಂಡಿ, ಜಿಡ್ಡಿನ ಪದಾರ್ಥಗಳು, ತುಪ್ಪದಲ್ಲಿ ಮಾಡಿದ ಸಿಹಿ ಪದಾರ್ಥಗಳ ಸೇವನೆ ಮಿತಿಯಲ್ಲಿದ್ದಷ್ಟು ಒಳ್ಳೆಯದು.

ಬಾಯಾರಿಕೆ ತಣಿಸಲು ಹಣ್ಣಿನ ರಸಕ್ಕೆ ಹೆಚ್ಚು ನೀರು ಬೆರೆಸಿ, ಬೆಲ್ಲ ಸೇರಿಸಿ ಕುಡಿಯಬೇಕು. ಇಲ್ಲವೇ ತುಂಡು ಬೆಲ್ಲ ಬಾಯಿಗೆ ಹಾಕಿ ನೀರು ಕುಡಿಯುತ್ತಿರಬೇಕು. ನಿಂಬೆಹಣ್ಣಿನ ರಸದ ಪಾನಕ ಸೇವನೆ ಒಳ್ಳೆಯದು. ಕುಡಿಯುವ ನೀರನ್ನು ಕುದಿಸಿ, ಆರಿಸಿ, ಕೊನ್ನಾರಿಗಡ್ಡೆ, ಸೊಗದೆಬೇರು ಅಥವಾ ಲಾವಂಚ ಇವುಗಳಲ್ಲಿ ಯಾವುದಾದರೂ ಒಂದನ್ನು ಹಾಕಿಟ್ಟುಕೊಂಡು, ಆಗಾಗ್ಗೆ ಕುಡಿಯಿರಿ.

ದ್ರಾಕ್ಷಿ, ಸೇಬು, ಬಾಳೆ, ಸಪೋಟ, ಕಲ್ಲಂಗಡಿ, ಕರಬೂಜ, ಮಾವು ಇವುಗಳಲ್ಲಿ ಯಾವುದೇ ಹಣ್ಣಿನ ರಸಕ್ಕೆ ಬೆಲ್ಲ ಬೆರೆಸಿ ಕುಡಿಯಬೇಕು. ಇದರಿಂದ ದೇಹ ನಿರ್ಜಲಗೊಳ್ಳುವುದು ತಪ್ಪುತ್ತದೆ.

ರಾಗಿಹಿಟ್ಟು, ಅಕ್ಕಿಹಿಟ್ಟಿನಿಂದ ತಯಾರಿಸಿದ ಪಾನೀಯಗಳು ಆರೋಗ್ಯಕ್ಕೆ ಒಳ್ಳೆಯದು. ಆಹಾರದೊಂದಿಗೆ ತುಪ್ಪ ಮತ್ತು ಹಾಲನ್ನು ಧಾರಾಳವಾಗಿ ಬಳಸಿ. ಹೆಸರುಬೇಳೆಯ ಪಾಯಸ ದೇಹಕ್ಕೆ ತಂಪು ನೀಡುತ್ತದೆ.

ಬೆಲ್ಲ ಬೆರೆಸಿದ ಬೇಲದ ಹಣ್ಣಿನ ಪಾನಕ ಸೇವನೆ ದಾಹ ನೀಗಿಸಿ, ಬಾಯಿಯಲ್ಲಿನ ದುರ್ಗಂಧ ವಸಡಿನ ರಕ್ತಸ್ರಾವ ನಿಲ್ಲಿಸುತ್ತದೆ. ಕಲ್ಲಂಗಡಿ ಹಣ್ಣಿಗೆ ಉಪ್ಪು ಹಾಕಿ ಸೇವಿಸಿ. ಇದರಿಂದ ದೇಹಕ್ಕೆ 'ಸಿ' ವಿಟಮಿನ್ ಸಿಗುತ್ತದೆ. ರೋಗನಿರೋಧಕ ಶಕ್ತಿ ಹೆಚ್ಚುವ ಜೊತೆಗೆ, ನೆಗಡಿಯಾಗದಂತೆ ತಡೆಯುತ್ತದೆ.

ಮಧುಮೇಹಿಗಳಿಗೆ ಪಾನೀಯಗಳು

ಮಧುಮೇಹದಿಂದ ಬಳಲುತ್ತಿರುವ ಮಹಿಳೆಯರು ಬೇಸಿಗೆಯಲ್ಲಿ ಹೆಚ್ಚು ಸಂಕಟಪಡುತ್ತಾರೆ. ಆದರೆ, ಬಳಲಿಕೆಯನ್ನು ನಿವಾರಿಸಿಕೊಳ್ಳಬೇಕಲ್ಲವೇ? ಇದಕ್ಕೆ ಏನು ಮಾಡಬೇಕು? ಚಿಂತಿಸಬೇಡಿ, ಹೀಗೆ ಮಾಡಿ.

- ಕಿತ್ತಳೆ, ಕಲ್ಲಂಗಡಿ ಮತ್ತು ನಿಂಬೆಹಣ್ಣು – ಈ ಎಲ್ಲ ಹಣ್ಣುಗಳ ರಸಕ್ಕೆ ಶುಂಠಿ, ಮೆಣಸು, ಜೀರಿಗೆ ಸಮ ಪ್ರಮಾಣದಲ್ಲಿ ಸೇರಿಸಿ ತಯಾರಿಸಿದ ಪುಡಿಯನ್ನು ಒಂದು ಚಿಟಿಕೆಯಷ್ಟು ಬೆರೆಸಿ. ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ಕುಡಿಯಬಹುದು.
- ಕರಬೂಜ ರಸ, ಸೌತೆಕಾಯಿ ರಸ, ಪುದಿನ ರಸ, ರುಚಿಗೆ ತಕ್ಕಷ್ಟು ನಿಂಬೆರಸ ಬೆರೆಸಿಟ್ಟುಕೊಳ್ಳಿ. ಒಂದು ಚಿಟಿಕೆಯಷ್ಟು ಶುಂಠಿ, ಜೀರಿಗೆ ಪುಡಿಯನ್ನು ಬೆರೆಸಿ, ರುಚಿಗೆ ತಕ್ಕ ಉಪ್ಪು ಸೇರಿಸಿ ಕುಡಿಯಬಹುದು.
- ಸೌತೆಕಾಯಿಯನ್ನು ತುರಿದು ಮಜ್ಜಿಗೆಗೆ ಹಾಕಿ. ಇಲ್ಲವೇ ಸೌತೆಕಾಯಿ ರಸ ತೆಗೆದು, ಅದಕ್ಕೆ ಉಪ್ಪು ಹಾಕಿ ಕುಡಿಯಬಹುದು.



ಬೆವರಿನ ಗುಳ್ಳೆಗೆ ಪರಿಹಾರ

ಬಿಸಿಲು ಹೆಚ್ಚಿರುವ ಎಲ್ಲ ಪ್ರದೇಶಗಳಲ್ಲೂ ಬೆವರುಗುಳ್ಳೆ ಸಮಸ್ಯೆ ಸಾಮಾನ್ಯ. ಅದರಲ್ಲೂ ಬಿಸಿಲು ಹೆಚ್ಚಿರುವ ಉತ್ತರ ಕರ್ನಾಟಕ ಭಾಗದಲ್ಲಿ ಈ ಸಮಸ್ಯೆ ಹೆಚ್ಚು.

- ಅತಿ ಬೆವರಿನಿಂದ ರಕ್ಷಿಸಿಕೊಳ್ಳಲು ದಿನಕ್ಕೆರಡು ಬಾರಿ ತಣ್ಣೀರು ಸ್ನಾನ ಮಾಡಬೇಕು. ನೀರಿನ ಅಭಾವ ಇರುವ ಪ್ರದೇಶಗಳ ನಿವಾಸಿಗಳು, ಒದ್ದೆ ಬಟ್ಟೆಯಲ್ಲಿ ಆಗಾಗ್ಗೆ ಮೈ ಒರೆಸಿಕೊಳ್ಳುತ್ತಿರಬೇಕು.
- ಅಳಲೆಕಾಯಿ, ಬೇವಿನ ಎಲೆ, ಲೋಧ್ರ, ದಾಳಿಂಬೆ ಸಿಪ್ಪೆಗಳನ್ನು ಸೇರಿಸಿ ಪುಡಿ ತಯಾರಿಸಿಟ್ಟುಕೊಳ್ಳಬೇಕು. ಈ ಪುಡಿಯನ್ನು ನೀರಿನಲ್ಲಿ ಬೆರೆಸಿ ಮೈಗೆಲ್ಲ ತೆಳುವಾಗಿ ಲೇಪಿಸಿಕೊಂಡು ಒಂದು ಗಂಟೆಯ ನಂತರ ತಣ್ಣೀರಿನಲ್ಲಿ ಸ್ನಾನ ಮಾಡಬೇಕು.
- ನೀರಿಗೆ ಸ್ವಲ್ಪ ಕರ್ಪೂರ ಹಾಕಿ ಸ್ನಾನ ಮಾಡಬೇಕು. ಮೈಗೆ ಬೇವಿನಎಲೆಯನ್ನು ಅರೆದು ಹಚ್ಚಿಕೊಂಡು ಸ್ವಲ್ಪ ಸಮಯ ಬಿಟ್ಟು ಸ್ನಾನ ಮಾಡಿದರೂ ಬೆವರು ಗುಳ್ಳೆ ಕಡಿಮೆಯಾಗುತ್ತದೆ.
- ತೆಳುವಾದ ಹತ್ತಿಬಟ್ಟೆ ಧರಿಸುವುದು, ಸಡಿಲವಾದ ದಿರಿಸು ಧರಿಸುವುದರಿಂದಲೂ ಗುಳ್ಳೆಗಳ ಸಮಸ್ಯೆ ಕಾಡುವುದಿಲ್ಲ.
- ಹಾಲಿನಲ್ಲಿ ಅರಿಸಿನ ಬೆರೆಸಿ ಮೈಗೆ ಲೇಪಿಸಿ ಒಂದು ಗಂಟೆಯ ನಂತರ ಸ್ನಾನ ಮಾಡುವುದರಿಂದ ಗುಳ್ಳೆಗಳು ನಿವಾರಣೆಯಾಗುತ್ತವೆ. ಚರ್ಮ ಕಾಂತಿಯುತವಾಗುತ್ತದೆ.

(ಲೇಖಕರು ಆಯುರ್ವೇದ ವೈದ್ಯರು)

ಬೇಸಿಗೆ ವ್ಯಾಧಿಗಳಿಗೆ ಮನೆಮದ್ದು

- **ಕಣ್ಣುರಿ ನಿಯಂತ್ರಣ:** ಗುಲಾಬಿ ಜಲ (ರೋಸ್ ವಾಟರ್) ಇಲ್ಲವೇ ಗುಲಾಬಿ ದಳಗಳಿಂದ ಮಾಡಿದ ಕಷಾಯದಿಂದ ಕಣ್ಣನ್ನು ಸ್ವಚ್ಛಗೊಳಿಸಿಕೊಳ್ಳಬೇಕು.
- **ಉರಿಮೂತ್ರ ನಿವಾರಣೆ:** ದಿನಕ್ಕೆ 3 ರಿಂದ 4 ಲೀಟರ್ ನೀರು ಕುಡಿಯಬೇಕು. ಸೌತೆಕಾಯಿ ರಸಕ್ಕೆ ಮಜ್ಜಿಗೆ ಬೆರೆಸಿ ಕುಡಿಯಬೇಕು.
- **ತಲೆನೋವು:** ಶ್ರೀಗಂಧವನ್ನು ಹಣೆಗೆ ಲೇಪಿಸಿಕೊಳ್ಳಬೇಕು. ಹುರುಳಿ ಬೇಯಿಸಿ ಕಟ್ಟು ತೆಗೆದು ಜೀರಿಗೆಪುಡಿ, ಉಪ್ಪು ಬೆರೆಸಿ ಕುಡಿಯಬೇಕು.
- **ಮೈಉರಿ:** ಬಿಸಿಲಿನ ತಾಪದಿಂದ ಬೆವರು ಹೆಚ್ಚಾಗಿ ಮೈಯಲ್ಲಿ ಉರಿ ಕಾಣಿಸಿಕೊಳ್ಳುತ್ತದೆ. ಇಂಥ ವೇಳೆ ಸ್ನಾನ ಮಾಡುವ ನೀರಿಗೆ ಸ್ವಲ್ಪ ಗುಲಾಬಿ ಜಲ ಅಥವಾ ನಿಂಬೆರಸ ಬೆರೆಸಿ ನಂತರ ಸ್ನಾನ ಮಾಡಬೇಕು.

ಬೊಜ್ಜು ಕರಗಿಸಲು ಇದು ಸಕಾಲ



- ದೇಹದ ತೂಕ ಹೆಚ್ಚಿರುವ ಮಹಿಳೆಯರು ಬೇಸಿಗೆಯಲ್ಲಿ ಒಂದೇ ಹೊತ್ತು ಊಟ ಮಾಡಿ. ಇನ್ನೆರಡು ಹೊತ್ತು ಹಣ್ಣುಗಳು ಅಥವಾ ದ್ರವಾಹಾರ ಸೇವಿಸಿ. ಆದಷ್ಟು ಸಕ್ಕರೆ ಬೆರೆಸದ ಪಾನೀಯಗಳನ್ನು ಕುಡಿಯುವುದರಿಂದ ಬೊಜ್ಜು ಕರಗುತ್ತದೆ.
- ಇದರ ಜೊತೆಗೆ, ನಡಿಗೆ, ಯೋಗ ಅಥವಾ ವ್ಯಾಯಾಮ ನಿಯಮಿತವಾಗಿ ಮಾಡಿ.ಈ ಸಮಯದಲ್ಲಿ ಸಹಜವಾಗಿಯೇ ಬೆವರು ಹೆಚ್ಚು ಬರುವುದರಿಂದ ಕ್ಯಾಲೊರಿ ಕರಗಿಸಲು ಸಹಕಾರಿ. ಹಾಗಾಗಿ ತೂಕ ಇಳಿಯುತ್ತದೆ.
- ಬೊಜ್ಜು ಕರಗಿಸಲು ಬೇಸಿಗೆ ಸೂಕ್ತ ಸಮಯ.

ಗರ್ಭನಿರೋಧಕ ಮಾತ್ರೆ: ಭವಿಷ್ಯಕ್ಕೆ ತೊಂದರೆಯೆ?

ಸ್ಪಂದನ



ಡಾ. ವೀಣಾ ಎಸ್. ಭಟ್

- **ನನಗೆ 32 ವರ್ಷ. 2017ರಲ್ಲಿ ಗಂಡು ಮಗು ಆಯ್ತು. ಕಳೆದ ಒಂದು ವರ್ಷದಿಂದ ವೈದ್ಯರ ಸಲಹೆಯಂತೆ 'ಯಾಸ್ಮಿನ್' ಎಂಬ ಗರ್ಭ ನಿರೋಧಕ ಮಾತ್ರೆಯನ್ನು ತೆಗೆದುಕೊಳ್ಳುತ್ತಿದ್ದೇನೆ. ಈ ಮಾತ್ರೆಯ ನಿರಂತರ ಸೇವನೆಯಿಂದ ಭವಿಷ್ಯದಲ್ಲಿ ಆರೋಗ್ಯ ಸಮಸ್ಯೆ ಕಾಡಬಹುದೇ?**

ಹೆಸರು, ಊರು ಬೇಡ

ಪ್ರಸ್ತುತ ಲಭ್ಯವಿರುವ ಸಂತಾನ ನಿಯಂತ್ರಣ ಕ್ರಮಗಳಲ್ಲಿ ಸಂಯುಕ್ತ ಹಾರ್ಮೋನು ಭರಿತ ಮಾತ್ರೆಗಳ ಬಳಕೆ ಅತ್ಯಂತ ಪರಿಣಾಮಕಾರಿ ವಿಧಾನ. ನೀವು ಸೇವಿಸುತ್ತಿರುವ 'ಯಾಸ್ಮಿನ್' ಎಂಬ ಗರ್ಭನಿರೋಧಕ ಮಾತ್ರೆಯು ಈಸ್ಟ್ರೋಜನ್ ಮತ್ತು ಪ್ರೊಜೆಸ್ಟಿರಾನ್‌ಗಳನ್ನೂ ಕಡಿಮೆ ಪ್ರಮಾಣದಲ್ಲಿ ಹೊಂದಿರುವ ಸಂಯೋಜನೆಯ ಮಾತ್ರೆ. ಈ ಮಾತ್ರೆಯು ನಿಮ್ಮಲ್ಲಿ ಪ್ರತಿ ತಿಂಗಳು ಹಾರ್ಮೋನುಗಳ ಮಟ್ಟವನ್ನು ನಿಯಂತ್ರಿಸಿ ಅಂಡ ಬಿಡುಗಡೆಯಾಗದಂತೆ ತಡೆಯುತ್ತದೆ. ಆದರೆ ಇದನ್ನು ಒಂದು ದಿನವೂ ಬಿಡದೇ ತೆಗೆದುಕೊಳ್ಳಬೇಕು. ನಿಮ್ಮ ಮಗುವಿಗೆ ಈಗಾಗಲೇ 5 ವರ್ಷವಾಗಿರುವುದರಿಂದ ನಿಮಗೆ ಇನ್ನೊಂದು ಮಗು ಪಡೆಯುವ ಇಚ್ಛೆ ಇದ್ದಲ್ಲಿ ಈ ಮಾತ್ರೆಗಳನ್ನು ನಿಲ್ಲಿಸಿ ಎರಡು ತಿಂಗಳುಗಳ ಕಾಲ ಫೋಲಿಕ್ ಆಸಿಡ್ ಮಾತ್ರೆಗಳನ್ನು ತೆಗೆದುಕೊಂಡು ಇನ್ನೊಂದು ಮಗುವನ್ನು ಪಡೆಯಲು ಪ್ರಯತ್ನಿಸಬಹುದು. ಇಂತಹ ಹಾರ್ಮೋನು ಮಾತ್ರೆಗಳಿಂದ ಕೆಲವರಿಗೆ ವಾಂತಿ, ತಲೆಸುತ್ತು, ತಲೆನೋವು ಬರುವುದು, ಹೊಟ್ಟೆ ಉಬ್ಬರಿಸುವುದು, ಸ್ತನಗಳ ನೋವು, ಸ್ವಲ್ಪ ಪಾದಗಳ ಊತ ಮುಂತಾದ ಸಣ್ಣ ಪುಟ್ಟ ತೊಂದರೆಗಳಾಗುವುದು. ಆರಂಭದಲ್ಲಿ ಕಡಿಮೆ ರಕ್ತಸ್ರಾವ ಆಗಬಹುದು. ದೀರ್ಘಾವದಿ ಈ ಮಾತ್ರೆಗಳನ್ನು ತಿಂದರೆ ಸ್ವಲ್ಪಮಟ್ಟಿಗೆ ತೂಕ ಏರುವಿಕೆ ಉಂಟಾಗಬಹುದು. ಆದರೆ ಏರುರಕ್ತದೊತ್ತಡ ಇರುವವರಲ್ಲಿ, ಬೊಜ್ಜು ಇರುವವರಲ್ಲಿ, ಎದೆಯಲ್ಲಿ ಗಂಟು ಇರುವವರಿಗೂ, ಸ್ತನದ ಕ್ಯಾನ್ಸರ್‌ನ ಕೌಟುಂಬಿಕ ಹಿನ್ನೆಲೆ ಇರುವವರೂ ಬಳಸದೇ ಇರುವುದು ಒಳ್ಳೆಯದು. ದೀರ್ಘಾವಧಿ ಈ ಮಾತ್ರೆಯನ್ನು ಸೇವಿಸಿದರೆ ಕೆಲವರಲ್ಲಿ ರಕ್ತಹೆಪ್ಪುಗಟ್ಟುವುದು, ಪಾರ್ಶ್ವವಾಯು ಹಾಗೂ ಹೃದಯಾಘಾತದ ಸಂಭವ ಹೆಚ್ಚಾಗಬಹುದು. ಈ ಮಾತ್ರೆಯನ್ನು ನಿಲ್ಲಿಸಿ ಕೆಲವೇ ತಿಂಗಳಲ್ಲಿ ಫಲವತ್ತತೆ ಮರಳಿ ಬರುತ್ತದೆ. ಆದ್ದರಿಂದ ನೀವು ಇನ್ನೊಂದು ಮಗು ಬೇಕೆಂದರೆ ಈ ಮಾತ್ರೆಗಳನ್ನು ನಿಲ್ಲಿಸಿ ಮಗುವನ್ನು ಪಡೆಯಲು ಪ್ರಯತ್ನಿಸಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ನಳಪಾಕ

ತಮಿಳುನಾಡಿನ ರಸಪಾಕ



ರಶ್ಮಿ ಎಸ್.ಎನ್.

ಅವಿಯಲ್

ಅವಿಯಲ್ ಅನ್ನು ತಮಿಳುನಾಡಿನಲ್ಲಿ ಶುಭ ಸಂದರ್ಭಗಳಲ್ಲಿ ತಯಾರಿಸುತ್ತಾರೆ. ಈ ರೆಸಿಪಿಗೆ ಸಂಬಂಧಿಸಿ ಹಲವು ಕಥೆಗಳಿವೆ. ಮಹಾಭಾರತದಲ್ಲಿ ಪಾಂಡವರು ವನವಾಸ ಕ್ಕೆ ಹೋದ ಸಂದರ್ಭದಲ್ಲಿ ಭೀಮಸೇನ, ವಿರಾಟ ರಾಜನಿಗೆ ಸೇವೆ ಸಲ್ಲಿಸುವಾಗ, ತನ್ನ ಸಹೋದರರೊಂದಿಗೆ ಸೇರಿ ಈ 'ಅವಿಯಲ್' ಎಂಬ ಖಾದ್ಯವನ್ನು ತಯಾರಿಸಿದ್ದ. ರಾಜನಿಗೆ ಸೇವೆ ಸಲ್ಲಿಸುವ ವೇಳೆ, ಮೇಲೋಗರಕ್ಕೆ ಸಾಕಷ್ಟು ತರಕಾರಿಗಳು ಇರಲಿಲ್ಲ ಎಂಬ ಕಾರಣಕ್ಕೆ, ಲಭ್ಯವಿದ್ದ ತರಕಾರಿ ಗಳನ್ನೇ ಬೆರೆಸಿ ತೆಂಗಿನಕಾಯಿ ತುರಿ ಸೇರಿಸಿ, ಈ ರುಚಿಕರವಾದ ಅವಿಯಲ್ ಎಂಬ ಮೇಲೋಗರವನ್ನು ಭೀಮ ತಯಾರಿಸಿದ್ದ ಎಂಬ ಕಥೆ ಇದೆ.

ಬೇಕಾಗುವ ಸಾಮಗ್ರಿಗಳು:

ತೆಂಗಿನಕಾಯಿ ಮಸಾಲ ಪೇಸ್ಟ್‌ಗೆ: ತಾಜಾ ತೆಂಗಿನಕಾಯಿ ತುರಿ – 1 ಕಪ್, ಕರಿಬೇವಿನ ಸೊಪ್ಪು – 6 ರಿಂದ 8 ಎಸಳು, ಹಸಿಮೆಣಸಿನಕಾಯಿ – 4, ನೀರು, ಉಪ್ಪು ರುಚಿಗೆ ತಕ್ಕಷ್ಟು.

ಅಗತ್ಯ ತರಕಾರಿಗಳು: ಆಲೂಗಡ್ಡೆ – ಅರ್ಧ, ಸುವರ್ಣಗಡ್ಡೆ – 1 ಕಪ್ (ಉದ್ದಕ್ಕೆ ಹೆಚ್ಚಿದ್ದು), ಬೂದುಗುಂಬಳಕಾಯಿ – 1 ಕಪ್, ನುಗ್ಗೆಕಾಯಿ – 2, ಬೀನ್ಸ್ – 1 ಕಪ್, ಕ್ಯಾರೆಟ್ – ಅರ್ಧ ಕಪ್ (ಉದ್ದಕ್ಕೆ ಹೆಚ್ಚಿದ್ದು) (ಈ ಎಲ್ಲವನ್ನೂ ಚೆನ್ನಾಗಿ ತೊಳೆದು ಕುಕರ್‌ನಲ್ಲಿ 2 ವಿಷಲ್ ಬರುವ ಹಾಗೆ ಬೇಯಿಸಿಕೊಳ್ಳಬೇಕು.)

ತಯಾರಿಸುವ ವಿಧಾನ: ಮಿಕ್ಸಿಯ ಸಣ್ಣ ಜಾರ್‌ನಲ್ಲಿ 1 ಕಪ್ ತೆಂಗಿನಕಾಯಿ ತುರಿ, ಕರಿಬೇವು, ಹಸಿಮೆಣಸಿನಕಾಯಿ ಹಾಗೂ ನೀರು ಸೇರಿಸಿ ನಯವಾಗಿ ರುಬ್ಬಿಕೊಳ್ಳಿ. ರುಬ್ಬಿಕೊಂಡಿರುವುದನ್ನು ಬೇಯಿಸಿದ ತರಕಾರಿಗೆ ಹಾಕಿ ಒಂದು ಕುದಿ ಬರುವವರೆಗೂ ಮಂದು ಉರಿಯಲ್ಲಿ ಇಡಿ. ಕೊನೆಯಲ್ಲಿ ಕಡೆದ ಮೊಸರು ಸೇರಿಸಿ, ಈಗ ಅವಿಯಲ್ ಬಡಿಸಲು ತಯಾರು.

ಮೋರ್ ಕೊಳುಂಬ



ಬೇಕಾಗುವ ಸಾಮಗ್ರಿಗಳು: ತೆಂಗಿನತುರಿ – 1 ಕಪ್, ಹಸಿಮೆಣಸಿನಕಾಯಿ – 4, ಕರಿಬೇವು – 1 ಎಸಳು, ಅಕ್ಕಿ – 1 ಚಮಚ, ಬೆಂಡೆಕಾಯಿ, ನುಗ್ಗೆಕಾಯಿ ಹಾಗೂ ಬೂದುಕುಂಬಳಕಾಯಿ, ಮೋರ್ – 1 ಕಪ್ (ಮೋರ್ ಅಂದರೆ ಮೊಸರು).

ತಯಾರಿಸುವ ವಿಧಾನ: ತೆಂಗಿನತುರಿ, ಹಸಿಮೆಣಸಿನಕಾಯಿ, ಕರಿಬೇವು, ಅಕ್ಕಿ ಹಾಗೂ ನೀರು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ಒಗ್ಗರಣೆಗೆ ಬೆಂಡೆಕಾಯಿ, ನುಗ್ಗೆಕಾಯಿ ಹಾಗೂ ಕುಂಬಳಕಾಯಿಯನ್ನು ಹೆಚ್ಚಿ ಹಾಕಬೇಕು. ತರಕಾರಿ ಬೆಂದ ಮೇಲೆ ರುಬ್ಬಿದ ಕೊಬ್ಬರಿ, ಉಪ್ಪು ಮತ್ತು ಇಂಗು ಹಾಕಿ ಮಂದ ಹದಕ್ಕೆ ಬರುವವರೆಗೂ ಕುದಿಸಿ. ಸ್ವಲ್ಪ ಹೊತ್ತು ನಂತರ ಒಂದು ಕಪ್ ಮಜ್ಜಿಗೆ ಹಾಕಿ ಒಂದು ಕುದಿ ಬರೋವರೆಗೆ ಕುದಿಸಿಕೊಳ್ಳಿ. ಇದು ಅನ್ನಕೆ ತುಂಬಾ ರುಚಿ ಕೊಡುತ್ತದೆ.

ತಕ್ಕಾಳಿ (ಟೊಮೆಟೊ) ಚಟ್ನಿ



ಬೇಕಾಗುವ ಸಾಮಗ್ರಿಗಳು: ಟೊಮೆಟೊ – 5, ಮಂತ್ಯೆಕಾಳು – 1 ಚಮಚ, ಇಂಗು – ಚಿಟಿಕೆ, ಒಣಮೆಣಸು – 8, ಉಪ್ಪು – ರುಚಿಗೆ

ತಯಾರಿಸುವ ವಿಧಾನ: ಹೆಚ್ಚಿದ ಟೊಮೆಟೊ, ಒಂದು ಚಮಚ ಮಂತ್ಯೆ, ಉಪ್ಪು, ಇಂಗು, ಒಣಮೆಣಸನ್ನು ಮಿಕ್ಸಿ ಜಾರಿಗೆ ಹಾಕಿ ನೀರು ಸೇರಿಸದೆ ರುಬ್ಬಿಕೊಳ್ಳಿ. ಬಾಣಲೆಗೆ ಮೂರು ಚಮಚ ಎಣ್ಣೆ ಹಾಕಿ ಬಿಸಿಯಾದ ಮೇಲೆ ಸಾಸಿವೆ, ಜೀರಿಗೆ, ಅರಿಸಿನ ಪುಡಿ ಹಾಗೂ ಇಂಗು ಸೇರಿಸಿ. ಸಾಸಿವೆ ಸಿಡಿದ ಮೇಲೆ ರುಬ್ಬಿಕೊಂಡ ಮಿಶ್ರಣವನ್ನು ಹಾಕಿ, ನಂತರ ರುಚಿಗೆ ತಕ್ಕಷ್ಟು ಉಪ್ಪು ಹಾಕಿ. ನೀರು ಇಂಗುವವರೆಗೂ ಚೆನ್ನಾಗಿ ಕುದಿಸಿ ಸ್ಟೌ ಆರಿಸಿ. ಈ ಚಟ್ನಿಯನ್ನು ಬಿಸಿ ಅನ್ನ, ದೋಸೆ ಮತ್ತು ಇಡ್ಲಿಗೆ ನೆಂಚಿಕೊಳ್ಳಲು ಚೆನ್ನಾಗಿರುತ್ತದೆ.

ಮೆಂತೆ ಕೊಳುಂಬ



ಬೇಕಾಗುವ ಸಾಮಗ್ರಿಗಳು: ನುಗ್ಗೆಕಾಯಿ – 2, ಬದನೆಕಾಯಿ– 1, ಸಾಂಬಾರ್ ಪುಡಿ – 2 ಚಮಚ, ಅಕ್ಕಿಹಿಟ್ಟು – ಅರ್ಧ ಕಪ್, ಕರಿಬೇವು – 1 ಎಸಳು, ಎಣ್ಣೆ – 2 ಚಮಚ, ಸಾಸಿವೆ, ಜೀರಿಗೆ– ಒಗ್ಗರಣೆಗೆ, ಅರಿಸಿನ ಪುಡಿ – ಚಿಟಿಕೆ, ಈರುಳ್ಳಿ – 1, ಮೆಂತ್ಯೆಕಾಳು– 2 ಚಮಚ, ಒಣಮೆಣಸಿನಕಾಯಿ – 2

ತಯಾರಿಸುವ ವಿಧಾನ: ಪ್ಯಾನ್‌ವೊಂದಕ್ಕೆ ಎಣ್ಣೆ ಹಾಕಿ ಬಿಸಿಯಾದ ಮೇಲೆ ಸಾಸಿವೆ, ಜೀರಿಗೆ ಅರಿಸಿನ, ಮೆಂತ್ಯೆಕಾಳು ಹಾಗೂ ಒಣಮೆಣಸು ಹಾಕಿ. ಸಾಸಿವೆ ಚಿಟುಗುಟ್ಟಿದ ಮೇಲೆ ಈರುಳ್ಳಿ ಹಾಗೂ ನುಗ್ಗೆಕಾಯಿ ಅಥವಾ ಬದನೆಕಾಯಿ ಹಾಕಿ. ಅದಕ್ಕೆ ಮೂರು ಕಪ್ ನೀರು ಹಾಕಿ. ನಂತರ ಸಂಬಾರ್ ಪುಡಿ ಸೇರಿಸಿ ಕುದಿಸಿ. ಪುನಃ ಎರಡು ಕಪ್ ನೀರು ಸೇರಿಸಿ. ಅದಕ್ಕೆ ಅಕ್ಕಿಹಿಟ್ಟು ಸೇರಿಸಿ ಕುದಿಯುತ್ತಿರುವ ಕೊಳಂಬಿಗೆ ಸೇರಿಸಿ. ಅದು ಮಂದ ಹದಕ್ಕೆ ಬರಬೇಕು. ಕರಿಬೇವು ಮತ್ತು ಕೊತ್ತಂಬರಿ ಸೊಪ್ಪು ಹಾಕಿ. ಒಂದು ಕುದಿಯ ನಂತರ ಸ್ಟೌ ಬಂದ್ ಮಾಡಿ. ಈಗ ಮೆಂತೆ ಕೊಳುಂಬ ಸಿದ್ಧ. ಈ ಖಾದ್ಯವನ್ನು ಜ್ವರ ಬಂದಾಗ ಅಥವಾ ಅಜೀರ್ಣವಾದಾಗ ಬಿಸಿ ಅನ್ನಕ್ಕೆ ಬೆರೆಸಿಕೊಂಡು ಸೇವಿಸಬಹುದು.


(ಚಿತ್ರಗಳು: ಕೃಷ್ಣಿ ಶಿರೂರ/ಮೇಘನಾ ಆರ್.ಸಿ)



❦ ಸುಭಾಷಿತ ❦
ಒಬ್ಬ ವ್ಯಕ್ತಿಯನ್ನು ಮತ್ತೊಬ್ಬ ವ್ಯಕ್ತಿಗೆ ಹತ್ತಿರವಾಗಿಸುವುದು ಅವರ ನಡುವಿನ ಆಪ್ತ ಬಂಧವೇ ವಿನಾ ಶಬ್ದಾಡಂಬರವಲ್ಲ.
-ರೂಮಿ

ಬಿಬಿಎಂಪಿ: ವಿತ್ತೀಯ ಹೊಣೆಗಾರಿಕೆ ಕಾಯ್ದೆ ಆರ್ಥಿಕ ಶಿಸ್ತು ರೂಪಿಸಲು ಸದ್ಬಳಕೆಯಾಗಲಿ

ರಾಜ್ಯ ಸರ್ಕಾರದ ಬಜೆಟ್ ಮಂಡನೆಯಾದ ಬೆನ್ನಲ್ಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) 2022–23ನೇ ಸಾಲಿನ ಬಜೆಟ್ ಮಂಡಿಸುವುದಕ್ಕೆ ಬಿರುಸಿನ ತಯಾರಿ ನಡೆದಿದೆ. ಬಿಬಿಎಂಪಿ ಬಜೆಟ್‌ನಲ್ಲಿ ಪ್ರತೀ ಸಲ ಅತಿಹೆಚ್ಚು ಚರ್ಚೆಗೆ ಗ್ರಾಸವಾಗುವುದು ಅದರ ಗಾತ್ರ. ಬಿಬಿಎಂಪಿ ಬಜೆಟ್‌ನಲ್ಲಿ ತೋರಿಸುವ ತೆರಿಗೆ ವರಮಾನಕ್ಕೂ ವಾಸ್ತವದಲ್ಲಿ ಸಂಗ್ರಹವಾಗುವ ತೆರಿಗೆಗೂ ತಾಳೆಯಾಗುವುದೇ ಇಲ್ಲ. ತೆರಿಗೆ ಸಂಗ್ರಹದ ಗುರಿ ತಲುಪಲು ಸಾಧ್ಯವಾಗದ ಕಾರಣಕ್ಕೆ ಬಿಬಿಎಂಪಿಯ ಆರ್ಥಿಕ ಹೊಣೆಗಾರಿಕೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಸಾಗಿದೆ. 2020-21ನೇ ಸಾಲಿನಲ್ಲಿ ಬಿಬಿಎಂಪಿ ₹ 11,972 ಕೋಟಿ ಗಾತ್ರದ ಬಜೆಟ್ ಅಂಗೀಕರಿಸಿತ್ತು. ವರ್ಷದ ಕೊನೆಯಲ್ಲಿ ಅದು ₹ 6,799 ಕೋಟಿಗೆ ಪರಿಷ್ಕೃತಗೊಂಡಿತ್ತು. ಪಾಲಿಕೆ ಬಜೆಟ್‌ನ ಒಟ್ಟು ಗಾತ್ರದಲ್ಲಿ ಇಷ್ಟೊಂದು ಬೃಹತ್ ಮೊತ್ತ ಕಡಿತಗೊಳ್ಳುವುದು ಸಣ್ಣ ವಿಚಾರವಲ್ಲ. 2021–22ನೇ ಸಾಲಿನಲ್ಲಿ ಬಿಬಿಎಂಪಿಯು ₹ 9,286 ಕೋಟಿ ಗಾತ್ರದ ಬಜೆಟ್ ಅನ್ನು ಅಂಗೀಕರಿಸಿತ್ತು. ಈ ಮೊತ್ತವನ್ನು ಪರಿಷ್ಕರಿಸಿದ್ದ ನಗರಾಭಿವೃದ್ಧಿ ಇಲಾಖೆಯು ಒಟ್ಟು ₹ 9,951 ಕೋಟಿ ಗಾತ್ರದ ಬಜೆಟ್‌ಗೆ ಅನುಮೋದನೆ ನೀಡಿತ್ತು. ಅದರ ಪ್ರಕಾರ, ಬಿಬಿಎಂಪಿಯು ಆರ್ಥಿಕ ವರ್ಷದಲ್ಲಿ ಆಸ್ತಿ ತೆರಿಗೆ ಮತ್ತು ಇತರ ಮೂಲಗಳಿಂದ ₹ 4 ಸಾವಿರ ಕೋಟಿಯಷ್ಟು ಹೆಚ್ಚು ಸಂಪನ್ಮೂಲವನ್ನು ಸಂಗ್ರಹಿಸಬೇಕಿದೆ. ಆದರೆ, 2022ರ ಮಾರ್ಚ್ 5ರವರೆಗೆ ಬಿಬಿಎಂಪಿ ₹ 2,838 ಕೋಟಿಯಷ್ಟು ಆಸ್ತಿ ತೆರಿಗೆಯನ್ನು ಸಂಗ್ರಹಿಸಲಷ್ಟೇ ಸಾಧ್ಯವಾಗಿದೆ.



ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವ ಮೂಲಕ ಬಿಬಿಎಂಪಿಯಲ್ಲಿ ಆರ್ಥಿಕ ಶಿಸ್ತು ರೂಪಿಸಲು ಅಧಿಕಾರಿಗಳು ಬದ್ಧರಾಗಬೇಕು

ಬಜೆಟ್‌ನಲ್ಲಿ ಮಹತ್ವದ ಕಾರ್ಯಕ್ರಮಗಳನ್ನು ಪ್ರಕಟಿಸುವುದು, ನಂತರ ಅನುದಾನ ಹೊಂದಿಸಲಾಗದೆ ಅವುಗಳನ್ನು ಅನುಷ್ಠಾನಕ್ಕೆ ತಾರದಿರುವುದು ಬಿಬಿಎಂಪಿಗೆ ರೂಢಿ ತಪ್ಪುವುದಿಲ್ಲ. ಇದನ್ನು ಮನಗಂಡೇ ಸರ್ಕಾರವು ಬಿಬಿಎಂಪಿಗೂ 'ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ವಿತ್ತೀಯ ಹೊಣೆಗಾರಿಕೆ ಕಾಯ್ದೆ-2003' ಅನ್ನು ಅನ್ವಯಗೊಳಿಸಿದೆ. ಈ ಕಾಯ್ದೆಯ ಆಶಯಗಳಿಗೆ ಅನುಗುಣವಾಗಿ, 'ಬಿಬಿಎಂಪಿ (ವಿತ್ತೀಯ ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣೆ) ನಿಯಮಗಳು- 2021' ಅನ್ನು ರೂಪಿಸಲಾಗಿದ್ದು, ಅವುಗಳು ಕೂಡಾ ಮಾರ್ಚ್ 10ರಿಂದ ಜಾರಿಗೆ ಬಂದಿವೆ. ಮುಂಬರುವ ಆರ್ಥಿಕ ವರ್ಷದ ಬಜೆಟ್ ತಯಾರಿ ನಡೆಯುತ್ತಿರುವಾಗಲೇ ಸರ್ಕಾರ ಇಂತಹದ್ದೊಂದು ಕ್ರಮ ಕೈಗೊಂಡಿದೆ. ಇನ್ನು ಮುಂದೆ ಬಿಬಿಎಂಪಿಯು ಬಜೆಟ್ ರೂಪಿಸುವಾಗ ಈ ನಿಯಮಗಳಿಗೆ ಬದ್ಧವಾಗಿರಬೇಕಾಗುತ್ತದೆ. ಪಾಲಿಕೆಯು 'ಮಧ್ಯಮಾವಧಿ ವಿತ್ತೀಯ ಯೋಜನೆ' ರೂಪಿಸುವುದನ್ನೂ ಕಡ್ಡಾಯಗೊಳಿಸಲಾಗಿದೆ. ವಾರ್ಷಿಕ ಬಜೆಟ್ ರೂಪಿಸುವುದಕ್ಕೆ ಇದರ ಅಂಕಿ-ಅಂಶಗಳನ್ನೇ ಆಧಾರವಾಗಿ ಬಳಸಬೇಕು. ವಿತ್ತೀಯ ಕೊರತೆಯು ಬಜೆಟ್ ಗಾತ್ರದ ಶೇಕಡ 3ಕ್ಕಿಂತ ಹೆಚ್ಚು ಇರುವಂತಿಲ್ಲ. ವರಮಾನ ಕೊರತೆ ನೀಗಿಸುವುದಕ್ಕೂ ಪಾಲಿಕೆ ಆದ್ಯತೆ ನೀಡಬೇಕು ಎಂದೂ ಸ್ಪಷ್ಟಪಡಿಸಲಾಗಿದೆ. ಬಿಬಿಎಂಪಿಯಲ್ಲಿ ಆರ್ಥಿಕ ಶಿಸ್ತು ರೂಪಿಸುವುದಕ್ಕೆ ಇವೆಲ್ಲ ನೆರವಾಗಬಲ್ಲವು. ರಾಜ್ಯ ಸರ್ಕಾರವು ರಾಜ್ಯದ ಒಟ್ಟು ಆಂತರಿಕ ಉತ್ಪನ್ನವನ್ನು (ಜಿಎಸ್‌ಡಿಪಿ) ಹಾಗೂ ಕೇಂದ್ರ ಸರ್ಕಾರವು ದೇಶದ ಒಟ್ಟು ಆಂತರಿಕ ಉತ್ಪನ್ನವನ್ನು (ಜಿಡಿಪಿ) ಆಧರಿಸಿ ವಿತ್ತೀಯ ಹೊಣೆಗಾರಿಕೆ ನಿಯಮಗಳನ್ನು ರೂಪಿಸಿಕೊಂಡಿವೆ. ಬೆಂಗಳೂರಿನ ಒಟ್ಟು ಆಂತರಿಕ ಉತ್ಪನ್ನ ಆಧರಿಸಿ ನಿಯಮ ರೂಪಿಸಲು ಬಿಬಿಎಂಪಿಗೆ ಅವಕಾಶ ಇರಲಿಲ್ಲ. ಹಾಗಾಗಿ, ಸಂಚಿತ ವಾರ್ಷಿಕ ಬೆಳವಣಿಗೆ ದರದ (ಸಿಎಜಿಆರ್) ಆಧಾರದಲ್ಲಿ ವಿತ್ತೀಯ ಹೊಣೆಗಾರಿಕೆ ನಿಯಮಗಳನ್ನು ರೂಪಿಸಲಾಗಿರುವುದು ಸೂಕ್ತವಾಗಿದೆ. ಇನ್ನು ಪಾಲಿಕೆಯು ಸಿಎಜಿಆರ್ ಆಧಾರದಲ್ಲೇ ಬಜೆಟ್ ಗಾತ್ರವನ್ನು ನಿರ್ಧರಿಸಬೇಕಾಗುತ್ತದೆ. ಈ ನಿಯಮಗಳಿಗೆ ಬದ್ಧವಾಗುವ ಮೂಲಕ ಬಿಬಿಎಂಪಿಯಲ್ಲಿ ಆರ್ಥಿಕ ಶಿಸ್ತು ರೂಪಿಸಲು ಅಧಿಕಾರಿಗಳು ಕಟಿಬದ್ಧರಾಗಬೇಕು.

ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು 2021ರಲ್ಲಿ ಬಿಡುಗಡೆ ಮಾಡಿರುವ 'ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕ' ಪಟ್ಟಿಯಲ್ಲಿ ಬೆಂಗಳೂರು ದೇಶದಲ್ಲೇ ಮೊದಲ ಸ್ಥಾನ ಪಡೆದಿತ್ತು. ಈ ಸಮೀಕ್ಷೆಯಲ್ಲಿ ಭಾಗವಹಿಸಿದ್ದ ನಗರಗಳು ಆರ್ಥಿಕ ಸಾಮರ್ಥ್ಯಕ್ಕೆ ಪಡೆದ ಅಂಕಗಳ ಸರಾಸರಿ 13.52ರಷ್ಟಿದ್ದರೆ, ಬೆಂಗಳೂರು ನಗರ 78.83 ಅಂಕ ಪಡೆದಿತ್ತು. ಸೂಚ್ಯಂಕ ಪಟ್ಟಿಯಲ್ಲಿ ಬೆಂಗಳೂರು ಅಗ್ರಸ್ಥಾನಕ್ಕೇರಲು ಈ ಅಂಕಗಳೇ ಕಾರಣ. ಬೆಂಗಳೂರಿನಲ್ಲಿ ಆರ್ಥಿಕ ಸಂಪನ್ಮೂಲ ಹೇರಳವಾಗಿದ್ದರೂ ಅದನ್ನು ಬಳಸಿಕೊಳ್ಳುವ ಮಾರ್ಗೋಪಾಯ ಹುಡುಕುವಲ್ಲಿ ಬಿಬಿಎಂಪಿ ವಿಫಲವಾಗಿರುವುದನ್ನು ಇದು ಬೊಟ್ಟುಮಾಡುತ್ತದೆ. ಕೆಲ ವರ್ಷಗಳ ಹಿಂದೆ ನಗರದಲ್ಲಿರುವ ಕೆಲವು ಬಹುಮಹಡಿ ವಾಣಿಜ್ಯ ಸಂಕೀರ್ಣಗಳ ಟೋಟಲ್ ಸ್ಟೇಷನ್ ಸರ್ವೆ ನಡೆಸಲಾಗಿತ್ತು. ಅವುಗಳ ಮಾಲೀಕರು ಪ್ರತಿವರ್ಷ ಆಸ್ತಿ ತೆರಿಗೆ ಕಟ್ಟುವಾಗ ಒಟ್ಟು ವಿಸ್ತೀರ್ಣವನ್ನು ತಪ್ಪಾಗಿ ತೋರಿಸಿ ನೂರಾರು ಕೋಟಿ ರೂಪಾಯಿ ತೆರಿಗೆ ವಂಚನೆ ನಡೆಸುತ್ತಿದ್ದುದು ಇದರಿಂದ ಬೆಳಕಿಗೆ ಬಂದಿತ್ತು. ಪಾಲಿಕೆಗೆ ನ್ಯಾಯೋಚಿತವಾಗಿ ಬರಬೇಕಾದ ವರಮಾನ ಈ ರೀತಿ ಸೋರಿಕೆ ಆಗುತ್ತಿರುವುದು ವಿಪರ್ಯಾಸವೇ ಸರಿ. ಇಂತಹ ಅಕ್ರಮಗಳು ಪತ್ತೆಯಾದ ಬಳಿಕವೂ ವಂಚನೆಗಳನ್ನು ಪರಿಣಾಮಕಾರಿಯಾಗಿ ತಡೆಯುವ ಬಿಗಿ ಕ್ರಮಗಳನ್ನು ಪಾಲಿಕೆ ಕೈಗೊಂಡಿಲ್ಲ. ಈ ನಿಟ್ಟಿನಲ್ಲೂ ಗಮನಹರಿಸಿ ಬಿಬಿಎಂಪಿಯನ್ನು ಆರ್ಥಿಕವಾಗಿಯೂ ಸಶಕ್ತಗೊಳಿಸುವ ಪ್ರಯತ್ನ ನಡೆಯಬೇಕಿದೆ.

ದಿನದ ಟ್ವೀಟ್

ಭರವಸೆದಾಯಕ ನಡೆ



ಭಾರತದ ಕ್ಷಿಪಣಿಯು ಆಕಸ್ಮಿಕವಾಗಿ ಉಡಾವಣೆಗೊಂಡ ವಿಷಯದಲ್ಲಿ ಭಾರತ ಮತ್ತು ಪಾಕಿಸ್ತಾನ ಸೌಹಾರ್ದಯುತವಾಗಿ ವ್ಯವಹರಿಸಿವೆ! ಇದರಿಂದ, ಈ ಪ್ರಕರಣವನ್ನು ಎರಡೂ ಅಣ್ವಸ್ತ್ರಸಜ್ಜಿತ ರಾಷ್ಟ್ರಗಳು ಪ್ರಬುದ್ಧವಾಗಿ ಬಗೆಹರಿಸಿಕೊಳ್ಳುತ್ತವೆ ಎಂಬ ವಿಶ್ವಾಸ ನನ್ನಲ್ಲಿ ಮೂಡಿದೆ.

ಹ್ಯಾಪಿಮೋನ್ ಜಾಕಬ್, ಪ್ರಾಧ್ಯಾಪಕ

ಕಿಡಿನುಡಿ

ಸಿದ್ದರಾಮಯ್ಯನವರೇ, ರಾಷ್ಟ್ರದಲ್ಲಿ ನಿಮ್ಮ ನಾಯಕರು ಯಾರು? ಅವರ ಅಡ್ರೆಸ್ಸೇ ಇಲ್ಲವಲ್ಲ. ಕರ್ನಾಟಕದಲ್ಲಿ ನಿಮ್ಮ ಪಕ್ಷ ಉಸಿರಾಡುತ್ತಿದೆ. ಮುಂದೆ ಏನು ಮಾಡಬೇಕು ಎಂಬುದನ್ನು ಜನ ತೀರ್ಮಾನ ಮಾಡುತ್ತಾರೆ.



ಬಿ.ಎಸ್.ಯಡಿಯೂರಪ್ಪ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ
ಬುಧವಾರ, 12-3-1997

● **ಜೆಎಂಎಂ ಸಂಸದರಿಗೆ ಲಂಚ: ರಾವ್ ವಿರುದ್ಧ ಪುರಾವೆ**

ನವದೆಹಲಿ, ಮಾರ್ಚ್ 11 (ಯುಎನ್‌ಐ)– ಸಂಸತ್ ಸದಸ್ಯರಿಗೆ ಹಣದ ಆಮಿಷ ಒಡ್ಡಿದ ಬಗ್ಗೆ ಮಾಜಿ ಪ್ರಧಾನಿ ಪಿ.ವಿ.ನರಸಿಂಹ ರಾವ್ ಮತ್ತು ಇತರ 20 ಆರೋಪಿಗಳ ವಿರುದ್ಧ ಸಾಕಷ್ಟು ಪುರಾವೆಗಳಿವೆ ಎಂದು ದೆಹಲಿ ನ್ಯಾಯಾಲಯಕ್ಕೆ ಸಿಬಿಐ ತಿಳಿಸುವುದರೊಂದಿಗೆ ಜೆಎಂಎಂ ಪ್ರಕರಣದಲ್ಲಿ ಆರೋಪ ದೃಢಪಡಿಸುವ ಪ್ರಕ್ರಿಯೆ ಇಂದು ಆರಂಭವಾಯಿತು.

ಹಲವಾರು ಸಾಕ್ಷಿಗಳ ಹೇಳಿಕೆಗಳನ್ನೊಳಗೊಂಡ ಆರೋಪಪಟ್ಟಿಯನ್ನು ಸಿಬಿಐ ಈಗಾಗಲೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಅಜಿತ್ ಭಾರಿಹೋಕ್ ಅವರ ನ್ಯಾಯಾಲಯದಲ್ಲಿ ಮಂಡಿಸಿದೆ. 1993ರ ಜುಲೈ 28ರಂದು ಆಗಿನ ಕಾಂಗ್ರೆಸ್ ಸರ್ಕಾರದ ವಿರುದ್ಧ ಮಂಡಿಸಲಾಗಿದ್ದ ಅವಿಶ್ವಾಸ ಗೊತ್ತುವಳಿ ಸೋಲಿಸಲು ಆರೋಪಿಗಳು ಸಂಚು ನಡೆಸಿದ್ದರು ಎನ್ನುವುದಕ್ಕೆ ದಾಖಲೆಗಳಿವೆ ಎಂದು ಸಿಬಿಐ ವಕೀಲ ಎ.ಕೆ. ದತ್ ಅವರು ನ್ಯಾಯಾಲಯಕ್ಕೆ ತಿಳಿಸಿದರು.

● **ಜೀವರಾಜ ಆಳ್ವ ಲೋಕಶಕ್ತಿಯ ರಾಜ್ಯ ಘಟಕದ ಅಧ್ಯಕ್ಷ**

ನವದೆಹಲಿ, ಮಾರ್ಚ್ 11– ಕಳೆದ ತಿಂಗಳು ಅಸ್ತಿತ್ವಕ್ಕೆ ಬಂದ ಲೋಕಶಕ್ತಿ ರಾಜಕೀಯ ಪಕ್ಷದ ರಾಷ್ಟ್ರೀಯ ಪದಾಧಿಕಾರಿಗಳನ್ನು ಮತ್ತು ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಘಟಕಗಳ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳ ನೇಮಕವನ್ನು ಅದರ ಅಧ್ಯಕ್ಷ ರಾಮಕೃಷ್ಣ ಹೆಗಡೆ ಅವರು ಇಂದು ಇಲ್ಲಿ ಪ್ರಕಟಿಸಿದರು.

ಕರ್ನಾಟಕ ಲೋಕಶಕ್ತಿಯ ಅಧ್ಯಕ್ಷರನ್ನಾಗಿ ಡಾ. ಜೀವರಾಜ ಆಳ್ವ, ಪ್ರಧಾನ ಕಾರ್ಯದರ್ಶಿಯನ್ನಾಗಿ ಡಾ. ಎಂ.ಪಿ.ನಾಡಗೌಡ ಅವರನ್ನು ನೇಮಕ ಮಾಡಲಾಗಿದೆ.

50 ವರ್ಷಗಳ ಹಿಂದೆ
ಭಾನುವಾರ, 12-3-1972

● **ರಾಜ್ಯದಲ್ಲಿ ಆಡಳಿತ ಕಾಂಗ್ರೆಸ್ ಪಕ್ಷಕ್ಕೆ ಪ್ರಚಂಡ ಜಯ**

ಬೆಂಗಳೂರು, ಮಾರ್ಚ್ 11– ಶನಿವಾರ ರಾತ್ರಿ 11 ಗಂಟೆ ಸಮಯದಲ್ಲಿ ಬಹುಮತದತ್ತ ಧಾವಿಸುತ್ತಿದ್ದುದು ಕಂಡುಬಂದ ಆಡಳಿತ ಕಾಂಗ್ರೆಸ್ 140 ಸ್ಥಾನಗಳಲ್ಲಿ ಒಟ್ಟು 105 ಸ್ಥಾನಗಳನ್ನು ಗಳಿಸಿದೆಯೆಂದು ಪಕ್ಷದ ಮೂಲಗಳು ತಿಳಿಸಿದವು.

ಇದೇ ಮೂಲಗಳ ಪ್ರಕಾರ, ಸಂಸ್ಥಾ ಕಾಂಗ್ರೆಸ್ 15, ಸೋಷಲಿಸ್ಟ್ ಪಕ್ಷ 3, ಕಮ್ಯುನಿಸ್ಟ್ ಪಕ್ಷ 1, ಮಹಾರಾಷ್ಟ್ರ ಏಕೀಕರಣ ಸಮಿತಿ 2, ಜನಸಂಘ 1 ಹಾಗೂ ಬಂಡಾಯಗಾರ ಕಾಂಗ್ರೆಸ್ಸಿಗರೂ ಸೇರಿ ಪಕ್ಷೇತರರು 12 ಸ್ಥಾನಗಳನ್ನು ಗಳಿಸಿದ್ದಾರೆ.

● **ಕಾಂಗ್ರೆಸ್– ಪೊಲೀಸ್ ಹಿಂಸೆ ವಿರುದ್ಧ ಪ್ರತಿಭಟಿಸಿ ಜ್ಯೋತಿ ಬಸು ಚುನಾವಣೆಯಿಂದ ನಿವೃತ್ತಿ**

ಕಲ್ಕತ್ತ, ಮಾರ್ಚ್ 11– ಕಾಂಗ್ರೆಸ್ಸಿಗರು ಹಾಗೂ ಪೊಲೀಸರು ಭಾರಿ ಪ್ರಮಾಣದಲ್ಲಿ ಭಯಭೀತಿಯುಂಟು ಮಾಡುತ್ತಿರುವುದರ ಹಾಗೂ ವ್ಯಾಪಕ ಪ್ರಮಾಣದ ಹಿಂಸಾಕೃತ್ಯಗಳು ನಡೆಯುತ್ತಿರುವುದರ ವಿರುದ್ಧ ಪ್ರತಿಭಟಿಸಲು ತಾವು ಚುನಾವಣೆಯಿಂದ ಹಿಂದೆ ಸರಿಯುವುದಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕ ಜ್ಯೋತಿ ಬಸು ಅವರು ಇಂದು ಹೇಳಿದರು.

ನೆಲವಾಸ್ತವ ಅರಿತು ಮುನ್ನಡೆಯಬೇಕಾದ ಬೃಹತ್ ಸವಾಲು ಸೋತ ಪಕ್ಷಗಳ ಎದುರು ಇದೆ

ವಿರೋಧ ಪಕ್ಷಗಳಿಗೆ ಚುನಾವಣಾ ಪಾಠಗಳು



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಇದೇ 10ರಂದು ಹೊರಬಿದ್ದ ಐದು ರಾಜ್ಯಗಳ ಚುನಾವಣಾ ತೀರ್ಪನ್ನು ವಿರೋಧ ಪಕ್ಷಗಳ ದೃಷ್ಟಿಯಿಂದ ನೋಡಿದವರಿಗೆಲ್ಲ ಒಂದು ಅಂಶ ಸ್ಪಷ್ಟವಾಗುತ್ತದೆ: ಪಂಜಾಬ್ ಬಿಟ್ಟರೆ ಉಳಿದ ನಾಲ್ಕು ರಾಜ್ಯಗಳಲ್ಲಿ ವಿರೋಧ ಪಕ್ಷಗಳು ಆಯಾ ನೆಲದ ಚುನಾವಣಾ ವಾಸ್ತವವನ್ನು ಅರಿಯುವಲ್ಲಿ ಮುಗ್ಗರಿಸಿವೆ. ಕಳೆದ ಸಲ ಪಂಜಾಬಿನಲ್ಲಿ ಸೋತ ಎಎಪಿ, ನಂತರದ ಐದು ವರ್ಷಗಳಲ್ಲಿ ನೆಲ ವಾಸ್ತವವನ್ನು ಸತತವಾಗಿ ಅಧ್ಯಯನ ಮಾಡಿ ಸಿದ್ಧತೆ ನಡೆಸಿ ಅಧಿಕಾರ ಹಿಡಿದಿದೆ. ಉಳಿದ ವಿರೋಧ ಪಕ್ಷಗಳು ಅಧಿಕಾರಾರೂಢ ಬಿಜೆಪಿಯ ವ್ಯವಸ್ಥಿತ ಪ್ರಚಾರ, ಯೋಜಿತ ಸಿದ್ಧತೆ ಹಾಗೂ ಹಣಬಲವನ್ನು ಎದುರಿಸಲಾರದೆ ಹಿಮ್ಮೆಟ್ಟಿವೆ.

ಅಷ್ಟೇ ಮುಖ್ಯವಾಗಿ, ಅಧಿಕಾರಸ್ಥರ ಪರವಾಗಿ ರಾಷ್ಟ್ರೀಯ ಮಾಧ್ಯಮಗಳು ತಯಾರಿಸಿದ ಪ್ರಚಾರದ ಖೆಡ್ಡಾದೊಳಕ್ಕೆ ವಿರೋಧ ಪಕ್ಷಗಳು ಬಿದ್ದಿವೆ. ಉತ್ತರಪ್ರದೇಶವನ್ನೇ ನೋಡಿ: ಆರು ಮುಖ್ಯ ಪಕ್ಷಗಳು ಸ್ಪರ್ಧಿಸಿದ್ದ ಉತ್ತರಪ್ರದೇಶದಲ್ಲಿ ಸಮಾಜವಾದಿ ಪಕ್ಷ ಮತ್ತು ಬಿಜೆಪಿ ನಡುವೆ ಮಾತ್ರ ಹಣಾಹಣಿ ಇದೆ ಎಂಬ ಪ್ರಚಾರವೇ ಮೊದಲ ಖೆಡ್ಡಾ. ಬಿಎಸ್‌ಪಿ ಕಣದಲ್ಲೇ ಇಲ್ಲವೆಂಬಂತೆ ಪ್ರಚಾರ ನಡೆಯಿತು. ಪ್ರಿಯಾಂಕಾ ಗಾಂಧಿ ಅವರು ಮಾಯಾವತಿ ಅವರಿಗಿಂತ ಜನಪ್ರಿಯ ನಾಯಕಿ ಎಂದು ಬಿಂಬಿಸಲಾಯಿತು. ಎರಡು ವರ್ಷಗಳಿಂದ ಚಂದ್ರಶೇಖರ್ ಆಜಾದ್ ರಾವಣ್‌ಗೆ ಅತಿಯಾದ ಪ್ರಚಾರ ಕೊಟ್ಟು ದಲಿತರ ಮುಂಚೂಣಿ ನಾಯಕ ಎಂದು ಬಿಂಬಿಸಿ, ಮಾಯಾವತಿ ಅವರನ್ನು ಹಿಮ್ಮೆಟ್ಟಿಸಲಾಯಿತು. ಸ್ವತಃ ರಾವಣ್ ಅದನ್ನು ನಂಬಿಬಿಟ್ಟರು. ಮಾಯಾವತಿ- ರಾವಣ್ ನಡುವೆ ಸಂವಾದವೇ ನಡೆಯದಂಥ ಸ್ಥಿತಿ ಏರ್ಪಟ್ಟಿತು.

ಬಿಹಾರದಲ್ಲಿ ತೇಜಸ್ವಿ ಯಾದವ್ ಬಿಂಬಿತವಾದಂತೆ ಉತ್ತರಪ್ರದೇಶದಲ್ಲೂ ಅಖಿಲೇಶ್ ಮಾತ್ರ ಬಿಜೆಪಿಯ ಎದುರಾಳಿಯೆಂದು ಬಿಂಬಿಸಲಾಯಿತು. ಈ ಪ್ರಚಾರ ಅಖಿಲೇಶ್ ಅವರಿಗೆ ಒಂದು ಮಟ್ಟದಲ್ಲಿ ನೆರವಾಯಿತು. ಆದರೆ ಬಿಎಸ್‌ಪಿ, ಕಾಂಗ್ರೆಸ್ ಜೊತೆ ಹೊಂದಾಣಿಕೆಯ ಮಾತನ್ನೇ ಆಡದಂಥ ಅತಿ ಆತ್ಮವಿಶ್ವಾಸವೂ ಅವರಿಗೆ ಮುಳುವಾಯಿತು. ಜೊತೆಗೆ ತನ್ನ ಏಕಮಾತ್ರ ಎದುರಾಳಿ ಅಖಿಲೇಶ್ ಅವರನ್ನು ಗುರಿಯಾಗಿಸಿಕೊಳ್ಳುವುದು ಬಿಜೆಪಿಗೆ ಸುಲಭವಾಯಿತು. ಕಾಂಗ್ರೆಸ್ ಅತ್ತ ತಮಿಳುನಾಡಿನಲ್ಲಿ ಕಲಿತಿದ್ದ ಪಾಠವನ್ನು ಉತ್ತರಪ್ರದೇಶದಲ್ಲಿ ಬಳಸಲಾಗಲಿಲ್ಲ. ತಮಿಳುನಾಡಿನಲ್ಲಿ ತನ್ನ ಮಿತಿ ಹಾಗೂ ನೆಲವಾಸ್ತವವನ್ನರಿತ ಕಾಂಗ್ರೆಸ್, ಡಿಎಂಕೆ ಕೊಟ್ಟಷ್ಟು ಸೀಟುಗಳಿಗೆ ತೃಪ್ತವಾಗಿ ಅಸ್ತಿತ್ವ ಉಳಿಸಿಕೊಂಡಿತು. ಉತ್ತರಪ್ರದೇಶದಲ್ಲಿ ಕಾಂಗ್ರೆಸ್ ಬಗ್ಗಲು ಸಿದ್ಧವಿದ್ದರೂ ಅಖಿಲೇಶ್ ಬಾಗಲಿಲ್ಲ.

ಆದರೂ ಏಕಾಂಗಿಯಾಗಿ ರಾಜ್ಯ ಸುತ್ತಿ ಪಕ್ಷವನ್ನು ಇಲ್ಲಿಯವರೆಗೂ ತಂದ ಅಖಿಲೇಶ್ ಪ್ರಬುದ್ಧ ನಾಯಕರಾಗಿ ಹೊಮ್ಮಿದ್ದಾರೆ. ರೈತ ಚಳವಳಿ ಹಬ್ಬಿಸಿದ ಹೊಸ ಎಚ್ಚರ ಕೂಡ ಎಸ್‌ಪಿಗೆ ನೆರವಾಗಿದೆ. ದುರದೃಷ್ಟವೆಂದರೆ, ಎಸ್‌ಪಿ ಕಿತ್ತುಕೊಂಡಿರುವ ಮತಗಳು ಬಿಎಸ್‌ಪಿಯವು! ಇದೇ ವಿರೋಧ ಪಕ್ಷಗಳ ರಾಜಕಾರಣದ ದುರಂತಮಯ ಬಿಕ್ಕಟ್ಟು. 2017ಕ್ಕೆ ಹೋಲಿಸಿದರೆ ಎಸ್‌ಪಿಯ ಮತ ಪ್ರಮಾಣ ಶೇ 21.8ರಿಂದ ಶೇ 32.1ಕ್ಕೆ ಏರಿದೆ; ಬಿಎಸ್‌ಪಿಯ ಮತಪ್ರಮಾಣ ಶೇ 22ರಿಂದ ಶೇ 12ಕ್ಕೆ ಇಳಿದಿದೆ.

ಆರ್‌ಎಲ್‌ಡಿಯಂಥ ಸಣ್ಣ ಪಕ್ಷಗಳ ಜೊತೆ ಹೊರಟ ಎಸ್‌ಪಿಗೆ ಲಾಭವಾಗಿದೆ. ಆದರೆ ವಿರೋಧ ಪಕ್ಷಗಳ ಮತವಿಭಜನೆಯಿಂದ ಹಲವೆಡೆ ಎಸ್‌ಪಿಗೆ ಹೊಡೆತ ಬಿದ್ದಿದೆ. ಉದಾಹರಣೆಗೆ, ನಾಕುರ್ ಕ್ಷೇತ್ರದಲ್ಲಿ ಬಿಜೆಪಿಯು 1,04,114 ಮತ ಪಡೆದು, 315 ಮತಗಳಿಂದ ಗೆದ್ದಿದೆ. ಎಸ್‌ಪಿ 1,03,799, ಬಿಎಸ್‌ಪಿ 55,112, ಒವೈಸಿ ಅವರ ಎಐಎಂಐಎಂ 3,513 ಮತಗಳನ್ನು ಪಡೆದಿವೆ. ಇದು ವಿರೋಧ ಪಕ್ಷಗಳ ಹುಂಬ ಟಕ್ಕಾಟಿಕ್ಕಿಯ ಫಲ! ಆದರೆ ಎಸ್‌ಪಿ- ಬಿಎಸ್‌ಪಿ ಹೊಂದಾಣಿಕೆ ಮಾಡಿಕೊಂಡಾಗಲೂ ಒಂದು ಸಮಸ್ಯೆಯಿದೆ: ಇಂಥ ಹೊಂದಾಣಿಕೆ ಮಾಡಿಕೊಂಡಾಗಲೆಲ್ಲ ಬಿಎಸ್‌ಪಿ ಮತಗಳು ಎಸ್‌ಪಿಗೆ ವರ್ಗಾವಣೆಯಾಗಿವೆ; ಎಸ್‌ಪಿ ಮತಗಳು ಬಿಎಸ್‌ಪಿಗೆ ಹೋಗಿಲ್ಲ. ಅಂದರೆ ಸಮಾಜವಾದಿ ಪಕ್ಷದ ಮತದಾರರು ಬಿಎಸ್‌ಪಿ ಮತದಾರರಷ್ಟು ಚುನಾವಣಾ ರಾಜಕಾರಣದಲ್ಲಿ ಪ್ರಬುದ್ಧರಾಗಿಲ್ಲ ಅಥವಾ ಜಾತಿ ಮೀರಿ ಯೋಚಿಸಿಲ್ಲ. ಈ ಅಂಶ ಇಂದಿನ ದಲಿತ ರಾಜಕಾರಣದ ದೊಡ್ಡ ಸವಾಲಿನೆಡೆಗೆ ನಮ್ಮನ್ನು ಕರೆದೊಯ್ಯುತ್ತದೆ.

ಪಂಜಾಬಿನ ಪ್ರಥಮ ದಲಿತ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ಕೊನೆಯಪಕ್ಷ ಶಾಸಕ ಸ್ಥಾನಕ್ಕೂ ಬರದಂತೆ ಎರಡೂ ಸ್ಥಾನಗಳಲ್ಲಿ ಸೋಲಿಸಿರುವ ಜಾತಿವಿಕಾರವನ್ನು ನೋಡಿದರೆ, ಭಾರತದ ಒಟ್ಟು ದಲಿತ ರಾಜಕಾರಣ ಸಂಪೂರ್ಣ ಬೇರೆ ರೀತಿಯಲ್ಲೇ ಯೋಚಿಸಬೇಕಾದ ತುರ್ತು ಎದುರಾಗಿದೆ. ದಲಿತ ಮುಖ್ಯಮಂತ್ರಿಯನ್ನು ಸಹಿಸಲಾರದ ಅಮರಿಂದರ್ ಸಿಂಗ್, ನವಜೋತ್ ಸಿಂಗ್ ಸಿಧು ಥರದ ಭಸ್ಮಾಸುರರ ಬೀದಿಜಗಳವೂ ಕಾಂಗ್ರೆಸ್ಸಿಗೆ ಹೊಡೆತ ಕೊಟ್ಟಿದೆ. ಬಾಬಾ ಸಾಹೇಬರು ಕನಸಿದಂತೆ ಒಂದು ಪ್ರಬಲ ವರ್ಗವಾಗದೆ ಒಡೆದು ಹೋಗಿರುವ ದಲಿತ ಸಮುದಾಯ ದೇಶದ ರಾಜಕೀಯ ಪಕ್ಷಗಳ, ಒಟ್ಟಾರೆಯಾಗಿ ಸವರ್ಣೀಯ ಮನಸ್ಸಿನ ಈ ಜಾತಿರೋಗವನ್ನು ಗಂಭೀರವಾಗಿ ಎದುರಿಸದಿದ್ದರೆ ಉಳಿಗಾಲವಿಲ್ಲ.

ಅತ್ತ ಗೋವಾ ನೋಡಿ: ಪಶ್ಚಿಮ ಬಂಗಾಳದ ಭಾರಿ ಗೆಲುವಿನ ಹಮ್ಮಿನಲ್ಲಿ ಟಿಎಂಸಿ ಮೊದಲ ಚುನಾವಣೆಯಲ್ಲೇ ಕಾಂಗ್ರೆಸ್ ಜೊತೆ ಹಟಮಾರಿ ಚೌಕಾಶಿ ಮಾಡಿತು. ರಾಷ್ಟ್ರೀಯ ಪಕ್ಷಕ್ಕಾಗಲಿ, ಸ್ಥಳೀಯ ಪಕ್ಷಕ್ಕಾಗಲಿ ಯಾವುದೇ ರಾಜ್ಯದಲ್ಲಿ ಹೆಚ್ಚು ಬೇರುಗಳಿರುವ ಪಕ್ಷ ಯಾವುದು ಎಂಬ ಅರಿವು ಪಕ್ಷಗಳ ಹೊಂದಾಣಿಕೆಗೆ ಅತಿಮುಖ್ಯ. 2018ರಲ್ಲಿ ಕರ್ನಾಟಕದಲ್ಲಿ 37 ಶಾಸಕರಿದ್ದ ಜೆಡಿಎಸ್, 78 ಶಾಸಕರಿದ್ದ ಕಾಂಗ್ರೆಸ್ಸಿನಿಂದ ಮುಖ್ಯಮಂತ್ರಿ ಪಟ್ಟವನ್ನು ಪಟ್ಟು ಹಿಡಿದು ಪಡೆದ ರೀತಿಯೂ ಸಮ್ಮಿಶ್ರ ಸರ್ಕಾರ ಕುಸಿಯಲು ಒಂದು ಕಾರಣ; ಶಾಸಕರ ನಿರ್ಲಜ್ಜ ಪಕ್ಷಾಂತರ ಎರಡನೆಯ ಕಾರಣ. ಆದರೆ, ಮಹಾರಾಷ್ಟ್ರದಲ್ಲಿ ನೆಲ ವಾಸ್ತವದ ನಿಖರವಾದ ಪ್ರಜ್ಞೆಯಿಂದಾಗಿ ಶಿವಸೇನೆ- ಎನ್‌ಸಿಪಿ- ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಎರಡು ವರ್ಷಗಳಿಂದ ಸುಭದ್ರವಾಗಿಯೇ ನಡೆಯುತ್ತಿದೆ. ಮುಖ್ಯವಾಗಿ, ಶಿವಸೇನೆಯು ಕೋಮುವಾದಿ ಆಟವನ್ನು ಬಿಟ್ಟಿದೆ. ಈ ಪ್ರಯೋಗದಲ್ಲಿ ಇಡೀ ದೇಶದ ವಿರೋಧ ಪಕ್ಷಗಳಿಗೆ ಮುಖ್ಯ ಪಾಠಗಳಿವೆ. ವಿರೋಧಿ ಮತಗಳು ಹಂಚಿ ಹೋಗುವುದು ಇಂಡಿಯಾಕ್ಕೆ ಹೊಸದೇನೂ ಅಲ್ಲ. ವಿರೋಧಿ ಮತಗಳು ಹಂಚಿ ಹೋಗುತ್ತಿದ್ದರಿಂದಲೇ ಕಾಂಗ್ರೆಸ್ ದಶಕಗಟ್ಟಲೆ ದರ್ಬಾರ್ ನಡೆಸುತ್ತಿತ್ತು. ಬಿಜೆಪಿ ಆ ಸ್ಥಾನವನ್ನು ಆಕ್ರಮಿಸುತ್ತಿದೆಯಷ್ಟೆ. ವಿಚಿತ್ರವೆಂದರೆ, ಈಗ ವಿರೋಧ ಪಕ್ಷಗಳು ವಿರೋಧ ಪಕ್ಷವಾದ ಕಾಂಗ್ರೆಸ್ಸನ್ನೇ ಗುರಿಯಾಗಿಸಿಕೊಂಡು ದಾಳಿ ಮಾಡುವ ಆತ್ಮಹತ್ಯಾತ್ಮಕ ರಾಜಕಾರಣದಲ್ಲಿ ಮುಳುಗಿವೆ!



ಈ ನಡುವೆ ಎಲ್ಲ ಪಕ್ಷಗಳಿಗೂ ಎಎಪಿ ಸವಾಲೆಸೆದಿದೆ! ಚಂಡೀಗಡ ಕಾರ್ಪೊರೇಷನ್‌ನ ಅಧಿಕಾರ ಹಿಡಿದಿರುವ ಎಎಪಿ ಹರಿಯಾಣದಲ್ಲೂ ಅಧಿಕಾರ ಹಿಡಿದರೆ ಅಚ್ಚರಿಯಿಲ್ಲ. ಉತ್ತಮ ಕಾರ್ಪೊರೇಷನ್ ಥರ ಮನೆ ಬಾಗಿಲಿಗೆ ಸೌಲಭ್ಯ ಒದಗಿಸುವ, ಮೇಲುನೋಟಕ್ಕೆ ಮತೀಯವಾದಿಯಲ್ಲದ, 'ಸೆಂಟ್ರಿಸ್ಟ್' ಪಕ್ಷವಾಗಿ ಎಎಪಿ ಬೆಳೆಯುತ್ತಿದೆ. ಪಂಜಾಬಿನಲ್ಲಿ ಬನಿಯಾಗಳು, ಜಾಟ್ ಸಿಖ್ಖರು, ಹಿಂದೂ ಮಧ್ಯಮ ವರ್ಗದ ಬೆಂಬಲದಿಂದ ಅಧಿಕಾರ ಹಿಡಿದಿರುವ ಎಎಪಿ, ಹೊಸ ತಲೆಮಾರಿನ ವಿದ್ಯಾವಂತರಿಗೆ, ಖಾಸಗಿ ವಲಯಕ್ಕೆ ಬೇಕಾದ 'ಮಧ್ಯಮ ಭಾಷೆ' ಬಳಸುತ್ತಾ ಮತದಾರರಿಗೆ ಒಗ್ಗತೊಡಗಿದಂತಿದೆ. ಪರಿಚಿತ ಪಕ್ಷಗಳ ಕ್ಲೀಷೆಮಯ ಭಾಷೆ, ಜನರನ್ನು ಒಡೆಯುವ ಕೋಮುವಾದಿ ಆರ್ಭಟಗಳ ನಡುವೆ ಯಾವುದಕ್ಕೂ ಪ್ರತಿಕ್ರಿಯಿಸದ, ಹಾವೂ ಸಾಯದ ಕೋಲೂ ಮುರಿಯದ ಎಎಪಿಯ 'ನಿರ್ಲಿಪ್ತ ಆಡಳಿತಾತ್ಮಕ ಭಾಷೆ'ಗೆ ಮಧ್ಯಮ ವರ್ಗ ಮುದ್ರೆಯೊತ್ತತೊಡಗಿದೆ. ಎಎಪಿ ಸದ್ಯದಲ್ಲೇ ಬೆಂಗಳೂರು ಕಾರ್ಪೊರೇಷನ್‌ನ ಅಧಿಕಾರ ಹಿಡಿದರೆ ಅಚ್ಚರಿಯಿಲ್ಲ. ಆದರೂ ಉತ್ತರಪ್ರದೇಶದಲ್ಲಿ ಎಎಪಿ 'ನೋಟಾ'ದ ಮತಪ್ರಮಾಣಕ್ಕಿಂತ (0.69) ಕಡಿಮೆ (0.34) ಮತಗಳನ್ನು ಪಡೆದಿರುವುದನ್ನು ಮರೆಯಬಾರದು. ಸೋತು ಬಸವಳಿದಿರುವ ಕಾಂಗ್ರೆಸ್ ಮೂರು ರಾಜ್ಯಗಳಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿರುವುದನ್ನೂ ಕಡೆಗಣಿಸಬಾರದು. ಅಂದರೆ, ಆಯಾ ಪ್ರದೇಶಗಳ ರಾಜಕೀಯ ವಾಸ್ತವಗಳು ಹಾಗೂ ಮತ ಪ್ರಮಾಣದ ಆಧಾರದ ಮೇಲೆ ವಿರೋಧ ಪಕ್ಷಗಳು ಹೊಂದಾಣಿಕೆ ಮಾಡಿಕೊಳ್ಳಬೇಕಾದ ಅಗತ್ಯವನ್ನು ಇವೆಲ್ಲ ಸೂಚಿಸುತ್ತವೆ.

ನೆಲ ವಾಸ್ತವದ ಖಚಿತ ಅರಿವು, ಪಕ್ಷಗಳೊಳಗಿನ ಭಿನ್ನಾಭಿಪ್ರಾಯಗಳನ್ನು ಬೀದಿ ಜಗಳವಾಗಿಸದಿರುವುದು, ತನ್ನ ಮತಪ್ರಮಾಣ ಕುರಿತ ನಿಖರ ಪ್ರಜ್ಞೆಯ ಮೂಲಕ ಹೊಂದಾಣಿಕೆಯ ಮಾತುಕತೆ ನಡೆಸುವುದು... ಮುಂತಾದ ಪ್ರಾಥಮಿಕ ಪಾಠಗಳು ಕೂಡ ವಿರೋಧ ಪಕ್ಷಗಳಿಗೆ ಹೊಸ ಹಾದಿ ತೋರಬಲ್ಲವು.

ಚುರುಮುರಿ



ಹಣಾಹಾರದ ಹಕ್ಕು!

● ಚಂದ್ರಕಾಂತ ವಡ್ಡು

ಸದನದ ಚರ್ಚೆ ತಿನ್ನುವ ವಿಷಯ ಕುರಿತಾಗಿದ್ದರೆ ಅದಕ್ಕೆ ವಿಶೇಷ ರುಚಿ. ವಾದಕ್ಕೂ ಸ್ವಾದಕ್ಕೂ ಸಮಾನವಾಗಿ ಒದಗಿಬರುವ ನಾಲಗೆಗೆ ಭರ್ಜರಿ ಉಮೇದು. ಕೆಲವು ಬಾಯಿಗಳು ಚಪ್ಪರಿಸಿದರೆ, ಉಳಿದವು ಬಾವಿಗಿಳಿದು ಅಬ್ಬರಿಸುತ್ತವೆ. ಸದಸ್ಯರೊಬ್ಬರು, 'ರಾಜಕಾರಣಿಗಳು ಹಣ ತಿನ್ನುವುದನ್ನು ನಿಲ್ಲಿಸಬೇಕು' ಎಂದು ಸದನದಲ್ಲೇ ಕರೆ ಕೊಟ್ಟರೆ ಏನಾಗಬೇಡ?

ಹಣ ತಿನ್ನುವ ವಿಷಯ ಪ್ರಸ್ತಾಪವಾಗುತ್ತಿದ್ದಂತೆ ನಾಲಗೆಯಲ್ಲಿ ನೀರೂರಿಸಿಕೊಂಡ, ಹೊಟ್ಟೆ ನೀವಿಕೊಂಡ ಸದಸ್ಯರ ನಿಖರ ಸಂಖ್ಯೆ ಪತ್ತೆ ಹಚ್ಚುವುದು ಕಷ್ಟ. ಬಹುಪಾಲು ಸದಸ್ಯರ ಬಾಯಿಗಳು ಮಾತಾಡಿ ಮಾತಾಡಿ ಒಣಗಿ, ಇನ್ನೇನು ಮಾತು ಹೊರಡದು ಎಂದೆನಿಸಿದಾಗ ಸದನಕ್ಕೆ ಊಟದ ವಿರಾಮ ಘೋಷಿಸಲಾಯಿತು.

ಊಟದ ಮೇಜಿನ ಸುತ್ತ ಕುಳಿತ ಸಮಾನ ಅಭಿರುಚಿಯ ಸದಸ್ಯರಿಗೆ ಅಂದು ಅದ್ಯಾಕೋ ತಿನ್ನುವ ಆಹಾರ ಸಪ್ಪೆ ಅನ್ನಿಸತೊಡಗಿತ್ತು. ಕೋವಿಡ್ ಕಳೆದರೂ ರುಚಿ ಮರಳದ ಪ್ರಸಂಗ. ತಟ್ಟೆ ಮುಂದೆ ಕೈಕಟ್ಟಿ ಕುಳಿತವರ ಬಗ್ಗೆ ಮರುಕ ಉಂಟಾಗಿ, 'ಬೇರೇನು ಬೇಕಿತ್ತು ಸಾರ್...?' ಎಂದು ಕೇಳಿದ ಮಾಣಿ. ಗಿರಾಕಿ, 'ಮೂರು ಪ್ಲೇಟು ಹಣ' ಎಂದು ಬಾಯಿಗೆ ಬಂದ ಆರ್ಡರ್ ನುಂಗಿಕೊಳ್ಳಬೇಕಾಯಿತು. ಹಣಾಹಾರದ ನೆನಪೇ ಇಷ್ಟೊಂದು ಪ್ರಭಾವಶಾಲಿಯಾಗಿ ಇರಬೇಕಾದರೆ ಅದರ ಸೇವನೆ ಇನ್ನೆಷ್ಟು ಚೇತೋಹಾರಿ ಆಗಿರಬಹುದು ಅನ್ನುವುದು ಎಲ್ಲರ ನಾಲಗೆಗೆ ನಿಲುಕುವ ವಿಷಯವಲ್ಲ.

ಹಸಿದು ಕುಳಿತವರ ಫಜೀತಿ ಕಂಡ ತಿಂಗಳೇಶನ ತಲೆಯನ್ನು ಹಲವು ಪ್ರಶ್ನೆಗಳು ತಿನ್ನತೊಡಗಿದವು: 'ರಾಜಕಾರಣಿಗಳು ಹಣ ತಿನ್ನುವುದನ್ನು ನಿಲ್ಲಿಸಿದರೆ ಅವರಿಗೆ ವಿಟಮಿನ್ ಎಂ ಕೊರತೆ ಕಾಡದೇ?'

'ವಿಧಾನಸೌಧದ ಒಂದು ಮಹಡಿಯನ್ನು ಶುದ್ಧ ಹಣಾಹಾರದ ಹೋಟೆಲ್ಲಿಗೆ ಮೀಸಲಿಡಬಾರದೇಕೆ?'

'ಆಹಾರ ಅವರವರ ಆಯ್ಕೆ, ಪದ್ಧತಿ ಮತ್ತು ಹಕ್ಕು ಎಂಬುದನ್ನು ಮಾನ್ಯ ಮಾಡಬೇಕಲ್ಲವೇ?'

'ಹಣಾಹಾರದ ಹಕ್ಕಿಗೆ ಚ್ಯುತಿ ತರುವ ತನಿಖಾ ಸಂಸ್ಥೆಗಳು ಏಕೆ ಬೇಕು?'

'ರಾಜಕಾರಣಿಗಳು ಹಣ ತಿನ್ನುವುದನ್ನು ನಿಲ್ಲಿಸಿದರೆ ಮತದಾರರ ಹಸಿವು ನೀಗಿಸುವುದು ಹೇಗೆ?'

ಸಂಗತ

ಗುರು ಕಾಳಜಿಯಿಂದ ಗುರಿ ಸಾಧನೆ

ವಿದ್ಯಾರ್ಥಿಗಳ ಸಮಸ್ಯೆ ಪರಿಹಾರದ ಬಗ್ಗೆ ಶಿಕ್ಷಕರು ಪಠ್ಯದ ಆಚೆಗೂ ಯೋಚಿಸಿ ನೆರವಾದರೆ ವಿದ್ಯಾರ್ಥಿಗಳು ಬೆಳೆಯಲು ಅನುಕೂಲವಾಗುತ್ತದೆ

● ಮಲ್ಲಿಕಾರ್ಜುನ ಹೆಗ್ಗಳಗಿ

ನಾನು 5ನೇ ತರಗತಿಯಲ್ಲಿ ಓದುತ್ತಿದ್ದೆ. ನಮ್ಮ ಕ್ಲಾಸ್ ಟೀಚರ್ ಬಹಳ ಬಡಿಯುತ್ತಿದ್ದರು. ಹೆದರಿ ಶಾಲೆ ಬಿಟ್ಟುಬಿಟ್ಟೆ. ಒಂದು ವಾರದ ನಂತರ 'ಶಾಲೆಯ ಮುಖ್ಯ ಅಧ್ಯಾಪಕರಾಗಿದ್ದ ಹಣಮಂತರಾವ್ ಚಿತ್ರಗಾರ ಅವರು ನಮ್ಮ ಮನೆಗೆ ಬಂದು, 'ಶಾಲೆ ತಪ್ಪಿಸಬಾರದು, ನಾಳೆಯಿಂದ ಶಾಲೆಗೆ ಬಾ' ಎಂದು ತಿಳಿವಳಿಕೆ ಹೇಳಿ ನಮ್ಮ ತಂದೆಗೂ ಸೂಚನೆ ನೀಡಿ ಹೋದರು.

ನಾನು ಹೋಗಲಿಲ್ಲ. ಪುನಃ ಮುಖ್ಯ ಅಧ್ಯಾಪಕರು ಬಂದು, 'ಶಾಲೆ ತಪ್ಪಿಸಕೂಡದು' ಎಂದು ಖಡಕ್ ಸೂಚನೆ ನೀಡಿದರು. ಆಗಲೂ ನಾನು ಹೋಗಲಿಲ್ಲ. ಮೂರನೇ ಬಾರಿ ಒಂದು ಪರಿಹಾರ ಸೂತ್ರದೊಂದಿಗೆ ಬಂದು, 'ಬೇರೆ ಶಾಲೆಗೆ ಹೋಗಲು ಸಿದ್ಧನಿದ್ದೀಯಾ?' ಎಂದು ಕೇಳಿದರು. ನಾನು ತಕ್ಷಣ ಒಪ್ಪಿಕೊಂಡೆ. ನಮ್ಮೂರಿನಲ್ಲಿಯೇ ಇರುವ ಮತ್ತೊಂದು ಶಾಲೆಗೆ ಹೋಗಲು ಟ್ರಾನ್ಸ್‌ಫರ್ ಸರ್ಟಿಫಿಕೇಟ್ ಕೊಟ್ಟರು. ನಾನು ಹೊಸ ಶಾಲೆಯಲ್ಲಿ ಓದು ಮುಂದುವರಿಸಿದೆ. ಚಿತ್ರಗಾರ ಗುರುಗಳು ತೋರಿದ ಕಾಳಜಿ ನನ್ನ ಬದುಕಿಗೆ ಬೆಳಕಾಯಿತು.

ವಿದ್ಯಾರ್ಥಿಗಳ ಸಮಸ್ಯೆ ಹಾಗೂ ಕಷ್ಟಗಳ ಪರಿಹಾರದ ಬಗ್ಗೆ ಶಿಕ್ಷಕರು ಪಠ್ಯದ ಆಚೆಗೂ ಯೋಚಿಸಿ ನೆರವಾದರೆ ವಿದ್ಯಾರ್ಥಿಗಳು ಬೆಳೆಯಲು ಅನುಕೂಲವಾಗುವುದು. ಸರ್ಕಾರ ಹಾಗೂ ಸಾರ್ವಜನಿಕರು ಈ ದಿಸೆಯಲ್ಲಿ ಶಿಕ್ಷಕರನ್ನು ಪ್ರೇರೇಪಿಸುವುದು ಅವಶ್ಯ.

ಶಾಲೆಯ ಕೋಣೆಯಲ್ಲಿ ಮಕ್ಕಳು ಪಠ್ಯದ ವಿಷಯ ಮಾತ್ರ ಕಲಿಯುತ್ತಾರೆ. ಬದುಕು ಎದುರಿಸುವ ನಿಜವಾದ ತರಬೇತಿ ಶಾಲೆಯ ಹೊರಗೆ ದೊರೆಯುತ್ತದೆ. ಬದುಕಿನಲ್ಲಿ ಬರುವ ಎಲ್ಲ ಅನಿಶ್ಚಿತತೆಯನ್ನು ಎದುರಿಸಲು ಅವರಲ್ಲಿ ಧೈರ್ಯ, ಆತ್ಮವಿಶ್ವಾಸ, ಛಲವನ್ನು ತುಂಬುವ ಕೆಲಸ ಶಿಕ್ಷಕರಿಂದ ನಡೆಯಬೇಕು ಎಂದು ಚಿಂತಕ ಡಾ. ವಿ.ಎಸ್.ಮಾಳಿ ಹೇಳುತ್ತಾರೆ.

ಅಂಥ ಮಕ್ಕಳ ಶಾಲೆಯ ಶಿಕ್ಷಕರೊಬ್ಬರು ಮಕ್ಕಳನ್ನು ದೇವಸ್ಥಾನಕ್ಕೆ ಕರೆದುಕೊಂಡು ಬಂದಿದ್ದರು. ದೇವರ ಎದುರಿನಲ್ಲಿ ನಿಂತ ಮಕ್ಕಳನ್ನು ನೋಡಿ ಪೂಜಾರೆಪ್ಪ 'ಮೇಷ್ಟರೇ ನಿಮ್ಮ ಹುಡುಗರು ದೇವರನ್ನು ನೋಡುತ್ತಾರೆಯೇ?' ಎಂದು ಕೆಣಕಿದ. 'ದೇವರು ಮಕ್ಕಳನ್ನು ನೋಡುತ್ತಾನಲ್ಲ, ಅಷ್ಟು ಸಾಕು!' ಎಂದು ಸಾವಧಾನದಿಂದ ಶಿಕ್ಷಕರು ಉತ್ತರಿಸಿದರು. ಪೂಜಾರೆಪ್ಪನ ಮನದ ಕಣ್ಣು ತೆರೆದಿರಬಹುದು. ಮಕ್ಕಳಿಗೆ ನಮಸ್ಕರಿಸಿ ಪ್ರಸಾದ ಹಂಚಿದ. ಮಕ್ಕಳ ಬಗ್ಗೆ ಬೋಧಕರು ಸಕಾರಾತ್ಮಕವಾಗಿ ಧ್ಯಾನಿಸುವುದರಿಂದ ಇಂಥ ಬೆಳಕು ಕಾಣುವುದು ಸಾಧ್ಯ. ಕೌಟುಂಬಿಕ ಕಲಹಗಳು, ಬಡತನ, ಪಾಲಕರ ಏಟು, ವಿದ್ಯಾರ್ಥಿಗಳ ನಡುವಿನ ಈರ್ಷ್ಯೆ, ಏಕಾಗ್ರತೆ ಕೊರತೆ, ಪಾಠ ಅರ್ಥವಾಗದೇ ಇರುವುದು, ತಂದೆ ಅಥವಾ ತಾಯಿಯ ಅಕಾಲಿಕ ನಿಧನ ಹೀಗೆ ಅನೇಕ ತೊಂದರೆಗಳು ವಿದ್ಯಾರ್ಥಿಗಳನ್ನು ಕಾಡುತ್ತವೆ. ವಿದ್ಯಾರ್ಥಿ ಜೀವನ ಬಹಳ ಸುಖಮಯ ಎನ್ನುವ ಕಲ್ಪನೆ ಇದೆ. ಆದರೆ ಇದು ಪೂರ್ಣ ಸತ್ಯವಲ್ಲ.

ಯುವ ಚೇತನಗಳು ಕೋಮುದ್ವೇಷ, ಅಸೂಯೆಯನ್ನು ಬಿತ್ತುವವರ ಕೈಗೊಂಬೆಯಾಗದಂತೆ ಕಾಪಾಡಬೇಕು. ಶಿಶುನಾಳ ಷರೀಫ ಮುಸ್ಲಿಮರು, ಗುರು ಗೋವಿಂದ ಭಟ್ಟರು ಬ್ರಾಹ್ಮಣರು. ಗುರು-ಶಿಷ್ಯ ಸಂಬಂಧಕ್ಕೆ ಜಾತಿಯಾಗಲೀ ಧರ್ಮವಾಗಲೀ ಅಡ್ಡಿಯಾಗಲಿಲ್ಲ. ಗೋವಿಂದ ಭಟ್ಟರು ತಮ್ಮ ಜನಿವಾರ ತೆಗೆದು ಷರೀಫರಿಗೆ ಹಾಕುತ್ತಾರೆ. 'ಹಾಕಿದ ಜನಿವಾರ ಶ್ರೀಗುರು, ಕಳೆದನು ಭವಭಾರ' ಎಂದು ಇದನ್ನೇ ಹಾಡಾಗಿ ಹಾಡಿದ್ದಾರೆ ಷರೀಫರು.

ವಿದ್ಯಾರ್ಥಿಗಳನ್ನು ಕ್ಲಾಸಿನಲ್ಲಿ ಅಪಮಾನಿಸುವುದರಿಂದ ಅವರ ಬೆಳವಣಿಗೆಗೆ ಅಡ್ಡಿಯಾಗುತ್ತದೆ. ಅವರ ಮನ ಅರಳುವಂತೆ ಸಕಾರಾತ್ಮಕವಾಗಿ ನಡೆದುಕೊಳ್ಳಬೇಕು. 'ನೀನು ಒಳ್ಳೆಯ ಹುಡುಗ ಎಂದು ಶಿಕ್ಷಕರು ಮತ್ತೆ ಮತ್ತೆ ಹೇಳಿದ್ದರಿಂದ ಶಾಲೆಯಲ್ಲಿ ನಾನು ಒಳ್ಳೆಯ ವಿದ್ಯಾರ್ಥಿಯಾಗಿದ್ದೆ' ಎಂದು ಪಿ.ಲಂಕೇಶ್ ತಮ್ಮ ಆತ್ಮಕತೆಯಲ್ಲಿ ಹೇಳಿದ್ದಾರೆ.



ಗುಜರಾತ್‌ನ ಶಿಕ್ಷಣ ತಜ್ಞ ಗೀಜುಭಾಯ್ ಬಧೇಕಾ, ಮಕ್ಕಳ ಸಮಗ್ರ ವಿಕಸನ ಕುರಿತು ಅನೇಕ ಪುಸ್ತಕಗಳನ್ನು ರಚಿಸಿದ್ದಾರೆ. ಅವರ ಒಂದು ಕವಿತೆಯ ಭಾವಾನುವಾದ ಎಲ್ಲರಿಗೂ ಕಿವಿಮಾತು ಹೇಳುವಂತಿದೆ.

ಎಲ್ಲಿಯವರೆಗೂ ಮಕ್ಕಳು
ಮನೆಯಲಿ ಪೆಟ್ಟುಗಳ ತಿನ್ನುವರೋ
ಶಾಲೆಗಳಲ್ಲಿ ಬೈಗುಳ ತಿನ್ನುವರೋ
ಪ್ರೇಮ-ಸಮ್ಮಾನಗಳು ದೊರೆಯುವುದಿಲ್ಲವೋ
ಅಲ್ಲಿಯವರೆಗೂ ನೆಮ್ಮದಿ ನನಗೆಲ್ಲಿಯದು?

ಆಟವೇ ನಿಜವಾದ ಓದು. ಪಠ್ಯಕ್ರಮದ ಮೂಲ ಉದ್ದೇಶ ಮಕ್ಕಳಲ್ಲಿ ಜ್ಞಾನ ಮತ್ತು ಜಿಜ್ಞಾಸೆ ವಿಕಸಿತಗೊಳಿಸುವುದು, ಕುತೂಹಲ, ಉತ್ಸುಕತೆ, ಸ್ವಾತಂತ್ರ್ಯ, ಸ್ವಾವಲಂಬನೆ, ಹಾಡು, ಕುಣಿತಕ್ಕೆ ಪ್ರಾಧಾನ್ಯ ಕೊಡುವುದು. ಮಕ್ಕಳಿಗೆ ಯಾವುದೇ ಕಾರಣಕ್ಕೂ ಹಿಂಸೆ ಮಾಡಕೂಡದು, ಪರೀಕ್ಷೆಯ ಬಗ್ಗೆ ಉತ್ಸುಕತೆ ಇರಬೇಕು. ಇವು ಗೀಜುಭಾಯ್ ಅವರು ಪ್ರತಿಪಾದಿಸಿದ ಮಹತ್ವದ ವಿಚಾರಗಳು.

ವಿದ್ಯಾರ್ಥಿನಿಯರಲ್ಲಿ ಭಿನ್ನ ಸಮಸ್ಯೆಗಳು ಇರುತ್ತವೆ. ಅವರು ಮನಬಿಚ್ಚಿ ಹೇಳುವುದು ಕಡಿಮೆ. ಶಿಕ್ಷಕಿಯರು ಸಮಾಲೋಚನೆ ಮೂಲಕ ಅವರ ಕಷ್ಟಗಳಿಗೆ ನೆರವಾಗುವುದು ಕೂಡ ಅವಶ್ಯ.

ವಿದ್ಯಾರ್ಥಿಗಳಲ್ಲಿ ವಿಜ್ಞಾನ, ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ ಹಾಗೂ ಸಮಾಜಸೇವೆಯ ಬಗ್ಗೆ ಅಭಿರುಚಿ ಬೆಳೆಸುವುದು ಶಿಕ್ಷಕರಿಂದ ಸಾಧ್ಯ. ಹಿಂದಿನ ಗುರುಕುಲ ಶಿಕ್ಷಣ ಪದ್ಧತಿಯಲ್ಲಿ ಮಗುವಿನ ಸಮಗ್ರ ವಿಕಾಸ ಗುರುವಿನ ಹೊಣೆಯಾಗಿತ್ತು. ಆಧುನಿಕ ಶಿಕ್ಷಣ ಈ ಆಶಯವನ್ನು ಗಟ್ಟಿಯಾಗಿ ಕಾಪಾಡಬೇಕು.

ವಾಚಕರ ವಾಣಿ

ರಾಜಕಾರಣಿಗಳು ಸರಿಯಾದರೆ...

'ನಾವು ರಾಜಕಾರಣಿಗಳು ತಿನ್ನುವುದನ್ನು ನಿಲ್ಲಿಸಿದರೆ ರಾಜ್ಯದ ಅಭಿವೃದ್ಧಿ ಆಗುತ್ತದೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿಧಾನಸಭೆಯಲ್ಲಿ ಹೇಳಿದ್ದಾರೆ (ಪ್ರ.ವಾ., ಮಾರ್ಚ್ 11). ಈ ಮಾತು ನೂರಕ್ಕೆ ನೂರರಷ್ಟು ಸತ್ಯ. ಅವರ ಈ ಹೇಳಿಕೆಯನ್ನು ಕಲ್ಲಿನಲ್ಲಿ ಕೆತ್ತಿಸಿ ವಿಧಾನಸೌಧದ ಗೋಡೆಯ ಮೇಲೆ ಹಾಕಬೇಕು. ಭ್ರಷ್ಟಾಚಾರದಿಂದ ಅಧಿಕಾರಿಗಳ ಮೂಲಕ ಕೋಟ್ಯಂತರ ರೂಪಾಯಿ ರಾಜಕಾರಣಿಗಳ ಖಜಾನೆ ಸೇರುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಇದರ ವಿರುದ್ಧ ಅಲ್ಲೊಬ್ಬರು ಇಲ್ಲೊಬ್ಬರು ದನಿ ಎತ್ತುತ್ತಾರೆ. ಅಂತಹವರನ್ನು ಬಹಳ ವ್ಯವಸ್ಥಿತವಾಗಿ ಮಟ್ಟ ಹಾಕುವುದು ಕೂಡಾ ನಡೆದೇ ಇದೆ.

ಕೆಲವು ದಿನಗಳ ಹಿಂದೆ ಗುತ್ತಿಗೆದಾರರು ಶೇಕಡ 40ರಷ್ಟು ಕಮಿಷನ್‌ಗಾಗಿ ತಮ್ಮ ಮೇಲೆ ಹಾಕುವ ಒತ್ತಡದ ಬಗ್ಗೆ ಪ್ರಧಾನಿಗೆ ದೂರು ಕೊಟ್ಟಿದ್ದರು. ಐಪಿಎಸ್ ಅಧಿಕಾರಿಯೊಬ್ಬರ ಅಕ್ರಮ ಆಸ್ತಿ ಕುರಿತ ವಿಷಯ ಸಾಮಾಜಿಕ ಜಾಲತಾಣದಲ್ಲಿ ಇತ್ತೀಚೆಗೆ ವಿಜೃಂಭಿಸಿತು. ಪೊಲೀಸ್ ಇಲಾಖೆಯ ವರ್ಗಾವಣೆ ದಂಧೆಯ ಕುರಿತು ಪತ್ರಿಕೆಯಲ್ಲಿ ವರದಿ ಪ್ರಕಟವಾಗಿದ್ದು, ಅಧಿಕಾರಿಗಳು ಮತ್ತು ರಾಜಕಾರಣಿಗಳಿಗೆ ಬಿಸಿ ಮುಟ್ಟಿಸಿತು. ಆದರೂ ಸರ್ಕಾರದ ಭಾಗವಾಗಿರುವ ಭ್ರಷ್ಟಾಚಾರಿಗಳು ಇದು ಯಾವುದೂ ಗೊತ್ತಿಲ್ಲದಂತೆ ನಟಿಸುತ್ತಾ ದುಡ್ಡು ಮಾಡುವ ಕೆಲಸದಲ್ಲಿ ಮಗ್ನರಾಗಿದ್ದಾರೆ. ಯತ್ನಾಳರ ಮಾತಿನಂತೆ ಮೊದಲು ರಾಜಕಾರಣಿಗಳು ಸರಿಯಾದರೆ ಮುಂದೆ ಎಲ್ಲವೂ ಕ್ರಮೇಣ ಸರಿಹೋಗಬಹುದು. ಈ ಬಗ್ಗೆ ಎಲ್ಲರೂ ಯೋಚಿಸಬೇಕಾದ ಸೂಕ್ತ ಸಮಯವಿದು!

ವಿ.ತಿಪ್ಪೇಸ್ವಾಮಿ, ಹಿರಿಯೂರು

ಸೂರ್ಯಕಾಂತಿ ಬೆಳೆ: ಸಿಗಲಿ ಪ್ರೋತ್ಸಾಹ

ಕೆಲವು ದಿನಗಳಿಂದ ಅಡುಗೆ ಎಣ್ಣೆಯ ಬೆಲೆ ಹೆಚ್ಚುತ್ತಿರುವುದು ಜನರ ಮೇಲೆ ಗಂಭೀರ ಪರಿಣಾಮ ಬೀರಿದೆ. ದೇಶಕ್ಕೆ ಅಗತ್ಯವಾದ ಸೂರ್ಯಕಾಂತಿ ಎಣ್ಣೆಯಲ್ಲಿ ಹೆಚ್ಚಿನ ಪಾಲನ್ನು ಉಕ್ರೇನ್, ರಷ್ಯಾ ಹಾಗೂ ಅರ್ಜೆಂಟೀನಾದಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಈ ಮೂಲಕ ಭಾರತವು ಸೂರ್ಯಕಾಂತಿ ಎಣ್ಣೆಗೆ ವಿದೇಶಗಳ ಮೇಲೆ ಹೆಚ್ಚು ಅವಲಂಬಿಸಿರುವುದು ತಿಳಿಯುತ್ತದೆ. ದೇಶದಲ್ಲಿ ಸೂರ್ಯಕಾಂತಿ ಎಣ್ಣೆ ಬಳಕೆ ಸಹ ಹೆಚ್ಚಾಗುತ್ತಿದೆ. ನಮ್ಮ ದೇಶದಲ್ಲೇ ಸೂರ್ಯಕಾಂತಿಯನ್ನು ಬೆಳೆದರೆ ರೈತರು ಆದಾಯವನ್ನು ಗಳಿಸುವುದರ ಜೊತೆಗೆ ವಿದೇಶಗಳ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ. ಈ ಬಗ್ಗೆ ಕೃಷಿ ಇಲಾಖೆಯು ರೈತರಿಗೆ ಸೂಕ್ತ ಮಾರ್ಗದರ್ಶನ ಮತ್ತು ಪ್ರೋತ್ಸಾಹವನ್ನು ನೀಡಬೇಕು.

ಚನ್ನಕೇಶವ ಜಿ.ಕೆ., ತರೀಕೆರೆ

ಕಾಂಗ್ರೆಸ್: ಅಜೆಂಡಾ ಅನುಷ್ಠಾನಕ್ಕೆ ಯತ್ನಿಸಿದೆಯೇ?

ಐದು ರಾಜ್ಯಗಳ ಚುನಾವಣಾ ಫಲಿತಾಂಶ ಪ್ರಕಟವಾದ ನಂತರ ಕಾಂಗ್ರೆಸ್ ತನ್ನ ಆತ್ಮಾವಲೋಕನಕ್ಕಾಗಿ ಸಿಡಬ್ಲ್ಯುಸಿ ಸಭೆ ಕರೆಯಲು (ಪ್ರ.ವಾ., ಮಾರ್ಚ್ 11) ಮುಂದಾಗಿದೆ. ನೂರು ವರ್ಷಕ್ಕೂ ಹಳೆಯದಾದ ಆ ಪಕ್ಷ ಒಂದು ಗಟ್ಟಿಯಾದ ಪ್ರತಿಪಕ್ಷವಾಗಿ ನಿಲ್ಲದಷ್ಟು ಶಕ್ತಿಹೀನವಾಗಿರುವುದು ಶೋಚನೀಯ. ಅಲ್ಲಿನ ಹಿರಿಯರು ಗತವೈಭವದಿಂದ ಹೊರಗೆ ಬಂದಂತಿಲ್ಲ. ಇತ್ತೀಚಿನ ಚುನಾವಣೆಗಳಲ್ಲಿ ಬೆಲೆ ಏರಿಕೆ, ಶಿಕ್ಷಣ, ಆರೋಗ್ಯ, ಉದ್ಯೋಗ, ರಸ್ತೆ, ನೀರು, ಆರ್ಥಿಕ ಸ್ಥಿತಿಯಂತಹ ಯಾವ ವಿಷಯಗಳೂ ಮುಖ್ಯ ನೆಲೆಗೆ ಬರಲಿಲ್ಲ. ಬಿಜೆಪಿ ಹಿಂದುತ್ವದ ಅಜೆಂಡಾ ಹೊಂದಿದೆ. ಅದರ ಪ್ರಚಾರಕ್ಕಾಗಿ, ಆರ್‌ಎಸ್‌ಎಸ್‌ನಂತಹ ಸಂಘಟನೆಗಳ ಕಾರ್ಯಜಾಲ ಇದೆ. ಪ್ರತಿಕ್ಷಣವೂ ಚುನಾವಣೆ ತಯಾರಿಯಲ್ಲೇ ಈ ಸಂಘಟನೆಗಳು ದುಡಿಯುತ್ತಿವೆ.

ಅಧಿಕಾರದ ಕನಸಿನಲ್ಲಿರುವ ಕಾಂಗ್ರೆಸ್ಸಿನ ಹಿರಿಯರಿಂದ ಯುವಕರಿಗೆ ಏನು ಸಂದೇಶ ಇದೆ? ಸರ್ವಧರ್ಮ ಸಮಾನತೆ, ಜಾತ್ಯತೀತ ತತ್ವವನ್ನು ತನ್ನ ಅಜೆಂಡಾ ಎಂದು ಹೇಳಿಕೊಳ್ಳುವ ಕಾಂಗ್ರೆಸ್, ಅದರ ಅನುಷ್ಠಾನಕ್ಕಾಗಿ ಯಾವ ಪ್ರಯತ್ನ ಮಾಡಿದೆ? ಅಲ್ಲಿರುವ ಸೇವಾದಳದ ಸ್ಥಿತಿ ಏನಾಗಿದೆ? ಸೇವಾದಳಕ್ಕೆ ಯುವಕರನ್ನು ಕರೆತರುವಲ್ಲಿ ಎಷ್ಟು ಸಫಲವಾಗಿದೆ? ಆಂತರಿಕ ಕಚ್ಚಾಟದಿಂದ ಕಾಂಗ್ರೆಸ್ ಹೊರಬಂದಿದೆಯೇ? ತನ್ನ ಅಜೆಂಡಾವನ್ನು ಮತದಾರನಿಗೆ ಮುಟ್ಟಿಸುವಲ್ಲಿ ಸಫಲವಾಗಿದೆಯೇ? ಇವುಗಳ ಬಗ್ಗೆ ಸಭೆ ಆತ್ಮಾವಲೋಕನ ಮಾಡಿಕೊಳ್ಳಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

'ರನ್' ಮಾಡದಿದ್ದರೆ ರಾಜ್ಯಕ್ಕೆ ಒಳಿತು!

ಅತಿ ಮುಖ್ಯ ಬದಲಾವಣೆ ಪಂಜಾಬಿನಲ್ಲಾಗಿದೆ. ಕ್ಯಾಪ್ಟನ್‌ರ ಆಟ ಮುಗಿಯಿತು- ಅವರು ಬಹು ಹಿಂದೆಯೇ ಚುನಾವಣಾ ರಾಜಕಾರಣದಿಂದ ನಿವೃತ್ತರಾಗಬೇಕಿತ್ತು, ಈಗ ಮತದಾರರು ಅವರಿಗೆ ಕಡ್ಡಾಯ ನಿವೃತ್ತಿ ನೀಡಿದ್ದಾರೆ. ಕರ್ನಾಟಕದ ಎಚ್.ಡಿ.ದೇವೇಗೌಡ, ಬಿ.ಎಸ್.ಯಡಿಯೂರಪ್ಪ ಇನ್ನಿತರ 'ವೆಟರನ್'ಗಳು ತಮ್ಮ ಕುಟುಂಬ, ಪಕ್ಷಗಳಿಗಾಗಿ ಇನ್ನು 'ರನ್' ಮಾಡದಿದ್ದರೆ ರಾಜ್ಯಕ್ಕೆ ಒಳಿತಾದೀತು. ಎಎಪಿ ಮತ್ತೆ ಮುನ್ನೆಲೆಗೆ ಬಂದಿದೆ. ಆದರೆ ದೆಹಲಿಯಂತೆ ಪಂಜಾಬ್ ಚಿಕ್ಕ ರಾಜ್ಯ. ಕೇಜ್ರಿವಾಲ್ ಇಡೀ ದೇಶಕ್ಕೇ 'ಕರೆ' ನೀಡಿದರೂ ಕೆಲವು ರಾಜ್ಯಗಳಲ್ಲಿ ಅಲ್ಪ ಪ್ರತಿಫಲ ಸಿಕ್ಕಬಹುದಷ್ಟೆ. ಎರಡು ಅವಧಿಗಿಂತ ಹೆಚ್ಚು ಯಾವುದೇ ನಾಯಕನಿಗೆ ಅಧಿಕಾರ ನೀಡಿದರೆ ಅವನು ಪುಟಿನ್, ಕ್ಸಿಗಳ ಭಾರತೀಯ ಅವತಾರ ತಾಳಬಹುದು ಎಂಬುದನ್ನು ನಾವೆಲ್ಲ 2024ರವರೆಗಾದರೂ ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗಿದೆ. ಬೇರೆ ರಾಜ್ಯಗಳಲ್ಲಿ ಅಚ್ಚರಿಯ ಪರಿಣಾಮ ಕಡಿಮೆ. ಕೆಲವು ಸ್ಥಾನಗಳ ಅಂತರದಿಂದ ರಚನೆಯಾಗುವ ಸರ್ಕಾರಗಳನ್ನು ತುದಿಗಾಲಿನಲ್ಲಿ ಇರಿಸಬಹುದು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ರಜೆ: ಮತ್ತೊಂದು ಮುಖವನ್ನೂ ನೋಡಬೇಕಿದೆ

ಶಾಲಾ ಶಿಕ್ಷಕರ ರಜೆ ಕುರಿತ ಸದಾಶಿವ್ ಸೊರಟೂರು ಅವರ ಲೇಖನದಲ್ಲಿ (ಸಂಗತ, ಮಾರ್ಚ್ 10) ವೈಜ್ಞಾನಿಕ ಮನೋಭಾವ, ಚಿಂತನೆ ಇದೆ. ಶಿಕ್ಷಣ ಎಂದರೆ ಮಗುವಿನ ಸರ್ವತೋಮುಖ ಅಭಿವೃದ್ಧಿ. ಆದರೆ ಇಂದು ನಾವು ಮಕ್ಕಳನ್ನು ದೈಹಿಕವಾಗಿ, ಮಾನಸಿಕವಾಗಿ, ಸಾಮಾಜಿಕವಾಗಿ ಗಟ್ಟಿಗೊಳಿಸದೆ ದುರ್ಬಲರನ್ನಾಗಿಸುತ್ತಿದ್ದೇವೆ, ರೋಗಿಷ್ಟರನ್ನಾಗಿಸುತ್ತಿದ್ದೇವೆ. ಮೊದಲು ರಜೆ ಬಂತೆಂದರೆ ಮಾವ ಅಥವಾ ಅಜ್ಜಿಯ ಊರಿಗೆ ಹೋಗುತ್ತಿದ್ದರು. ಅಲ್ಲೆಲ್ಲಾ ಮರ ಹತ್ತುವುದು, ಅಜ್ಜ-ಅಜ್ಜಿಯರಿಂದ ಕಥೆ ಕೇಳುವುದು, ವಿವಿಧ ಆಟ-ಪಾಠಗಳು ನಡೆಯುತ್ತಿದ್ದವು. ಇದರಿಂದ ಮಕ್ಕಳ ಸರ್ವತೋಮುಖ ಅಭಿವೃದ್ಧಿ ಆಗುತ್ತಿತ್ತು. ಆದರೆ ಇಂದು ನಾವು ಅದನ್ನೆಲ್ಲಾ ಬಿಟ್ಟು ಯಾಂತ್ರಿಕವಾಗಿ ವಿಚಾರ ಮಾಡುತ್ತಿದ್ದೇವೆ. ದೇಶದ ಸದೃಢ ನಾಗರಿಕರನ್ನಾಗಿ ರೂಪಿಸುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ಅದನ್ನು ಕೇವಲ ಒಂದು ಮುಖದಿಂದ ನೋಡಿದರೆ ಸಾಲದು.

ಜೆ.ಪಿ.ಅಗಸಿಮನಿ, ಗೌಂಡವಾಡ, ಬೆಳಗಾವಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಜ್ಯದ ವಿವಿಧ ಭಾಗಗಳಲ್ಲಿ ರೋಪ್ ವೇ ನಿರ್ಮಾಣ ಯೋಜನೆ ಸರಿಯಾದ ನಿರ್ಧಾರವೇ?

ವಿವೇಕವಿದ್ದರೆ ರೋಪ್ ವೇ ಕೈಬಿಡಿ



• ಜೋಸೆಫ್ ಹೂವರ್

ಉತ್ತರ ಕನ್ನಡದ ಯಾಣವು ಅತ್ಯಂತ ಆಕರ್ಷಕ ತಾಣ. ಪಶ್ಚಿಮ ಘಟ್ಟದ ಮಡಿಲಿನ ಹಸಿರು ಕಾನನದ ನಡುವೆ ಇರುವ ಶಿಲಾ ರಚನೆಯನ್ನು ನೋಡಿ ಆನಂದಿಸಲು ಜನರು ಮುಗಿ ಬೀಳುತ್ತಾರೆ. ಸಂವೇದನೆಯೇ ಇಲ್ಲದ ಸರ್ಕಾರವೊಂದು ಮಾತ್ರ ಇಲ್ಲಿನ ಪರಿಸರ ವ್ಯವಸ್ಥೆಯನ್ನು ಹಾಳುಗೆಡವಲು ಬಯಸಬಹುದು. ಇಂತಹ ಪ್ರಯತ್ನವು ಪರಿಸರ ಬಿಕ್ಕಟ್ಟನ್ನು ಇನ್ನಷ್ಟು ಗಾಢಗೊಳಿಸಬಹುದು ಮತ್ತು ಈಗಾಗಲೇ ಜರ್ಜರಿತಗೊಂಡಿರುವ ಜೀವವೈವಿಧ್ಯವನ್ನು ಇನ್ನಷ್ಟು ಗಂಡಾಂತರಕ್ಕೆ ಒಡ್ಡಬಹುದು

ಅರಣ್ಯದ ಪ್ರಮಾಣವನ್ನು ಹೆಚ್ಚಿಸಲೇಬೇಕಾದ ಅನಿವಾರ್ಯ ಸ್ಥಿತಿ ನಿರ್ಮಾಣವಾಗಿರುವ ಈ ಸಂದರ್ಭದಲ್ಲಿ, ಉಳಿದಿರುವ ಅತ್ಯಲ್ಪ, ಅತ್ಯಂತ ಸೂಕ್ಷ್ಮವಾದ ಜೈವಿಕ ವ್ಯವಸ್ಥೆಯನ್ನೂ ನಾಶ ಮಾಡಲು ಕರ್ನಾಟಕ ಸರ್ಕಾರವು ಮುಂದಾಗಿದೆ.

ಜಾಗತಿಕ ತಾಪಮಾನದಿಂದಾಗುವ ಪ್ರಕೃತಿ ವಿಕೋಪಗಳು ಈಚಿನ ದಿನಗಳಲ್ಲಿ ನೆಗಡಿಯ ರೀತಿಯಲ್ಲಿ ಸಾಮಾನ್ಯ ಎಂಬಂತಾಗಿದೆ. ಆದರೆ, ಇಂತಹ ವಿಕೋಪಗಳು ಒಟ್ಟು ಆಂತರಿಕ ಉತ್ಪನ್ನವನ್ನು ನೆಚ್ಚಿಕೊಂಡಿರುವ ಸರ್ಕಾರವನ್ನು ಹೈರಾಣು ಮಾಡಿವೆ.

ಅರ್ಥ ಮಾಡಿಕೊಳ್ಳಲು ಸಾಧ್ಯವೇ ಆಗದ ರೀತಿಯ ಮೇಘಸ್ಫೋಟಗಳಿಂದ ಉಂಟಾಗುವ ದಿಢೀರ್ ಪ್ರವಾಹಗಳು, ಅರಣ್ಯ ಮತ್ತು ಕೃಷಿ ಜಮೀನಿನ ಸ್ವರೂಪವನ್ನು ಬದಲಾಯಿಸಿವೆ. ಭೂ ಕುಸಿತಗಳು ಆಗಾಗ ನಡೆಯುತ್ತಿವೆ. ಇಂತಹ ಭೂ ಕುಸಿತಗಳು ಎಲ್ಲರನ್ನೂ ಕಾಡುತ್ತವೆಯಾದರೂ ಅದರಿಂದ ಹೆಚ್ಚು ತೊಂದರೆಗೆ ಒಳಗಾಗುವುದು ರೈತ ಸಮುದಾಯ. ವಿಸ್ತಾರವಾದ ಭೂಪ್ರದೇಶಗಳು ಬರಗಾಲದಿಂದಾಗಿ ಬರಡಾಗಿವೆ ಮತ್ತು ಮಳೆಯನ್ನೇ ಆಧರಿಸಿ ಕೃಷಿ ನಡೆಸುತ್ತಿರುವ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಜೀವ ವೈವಿಧ್ಯದ ಕೊರತೆಯು ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ; ಅತ್ಯಂತ ಅಪಾಯಕಾರಿಯಾಗಿ ಪರಿಣಮಿಸಿದ ಕೋವಿಡ್ ಸಾಂಕ್ರಾಮಿಕದ ರೂಪದಲ್ಲಿ ಅದು ಕಾಣಿಸಿಕೊಂಡಿದೆ. ಜೀವ ವೈವಿಧ್ಯದ ಕೊರತೆಯೇ ಕೊರೊನಾ ವೈರಾಣುವಿನ ಸೃಷ್ಟಿಗೆ ಕಾರಣ ಎಂದು ಸಂಶೋಧಕರು ಮತ್ತು ಪರಿಸರ ವಿಜ್ಞಾನಿಗಳು ಹೇಳಿದ್ದಾರೆ. ಜಾಗತಿಕ ತಾಪಮಾನ ಏರಿಕೆಯನ್ನು ತಡೆಯಲು ಸರ್ಕಾರವು ಗಂಭೀರವಾಗಿ ಏನನ್ನಾದರೂ ಮಾಡದೇ ಇದ್ದರೆ ಪರಿಸ್ಥಿತಿ ಇನ್ನಷ್ಟು ವಿಷಮಗೊಳ್ಳಬಹುದು.

ಏನು ಆಗಿದೆ, ಏನು ಆಗುತ್ತಿದೆ ಮತ್ತು ಏನು ಆಗಲಿದೆ ಎಂಬುದರ ಬಗ್ಗೆ ಸರ್ಕಾರಕ್ಕೆ ಸರಿಯಾದ ಅರಿವು ಇದೆ. ಹಾಗಿದ್ದರೂ ಸೂಕ್ಷ್ಮವಾದ ಪರಿಸರ ವ್ಯವಸ್ಥೆಯನ್ನು ನಾಶ ಮಾಡಲು ಸರ್ಕಾರ ಸಜ್ಜಾಗಿದೆ.

ಅತ್ಯಂತ ಮಹತ್ವದ್ದಾದ ಪಶ್ಚಿಮ ಘಟ್ಟಗಳ ಮೇಲೆ ರೈಲು ಮಾರ್ಗ, ಜಲವಿದ್ಯುತ್ ಮತ್ತು ಗಣಿಗಾರಿಕೆ ಯೋಜನೆಗಳ ಮೂಲಕ ನಡೆಯುತ್ತಿರುವ ದಾಳಿ ಮುಂದುವರಿದಿದೆ. ಆರ್ಥಿಕ ಅಭಿವೃದ್ಧಿಯ ಉದ್ದೇಶದಿಂದ ಅಂದಾಜು 27 ಲಕ್ಷ ಮರಗಳನ್ನು ಕಡಿಯಲು ಉದ್ದೇಶಿಸಲಾಗಿದೆ. ಇವು ಹತ್ತಾರು ವರ್ಷ ಹಳೆಯ ಮರಗಳು. ಇದರ ಜತೆಗೆ, ಕೆಲವು ಜನರ ಧನ ದಾಹಕ್ಕಾಗಿ ಒಂದು ಕೋಟಿಗೂ ಹೆಚ್ಚು ಸಣ್ಣ ಮರಗಳನ್ನೂ (30 ಸೆಂ. ಮೀ.ಗೂ ಕಡಿಮೆ ಸುತ್ತಳತೆಯಿದ್ದರೆ ಅಂಥವುಗಳನ್ನು ಗಿಡ ಎಂದೇ ಪರಿಗಣಿಸಲಾಗುತ್ತದೆ) ಕಡಿಯಲು ನಿರ್ಧರಿಸಲಾಗಿದೆ. ಪಶ್ಚಿಮ ಘಟ್ಟಗಳ ಮೇಲಿನ ದಾಳಿ ಮುಂದುವರಿದಿರುವುದರ ನಡುವೆಯೇ, ಜೋಗ ಜಲಪಾತ, ಮುಳ್ಳಯ್ಯನಗಿರಿ, ಯಾಣ, ನಂದಿ ಬೆಟ್ಟ ಮತ್ತು ಚಾಮುಂಡಿ ಬೆಟ್ಟಗಳಲ್ಲಿ ರೋಪ್ ವೇ ನಿರ್ಮಾಣದ ಪ್ರಸ್ತಾವವನ್ನು ಸರ್ಕಾರ ಮುಂದಿಟ್ಟಿದೆ. ಪ್ರವಾಸೋದ್ಯಮದ ಮೂಲಕ ಹಣ ಗಳಿಸುವುದು ಇದರ ಉದ್ದೇಶ. ಇದು ಕೋಟ್ಯಂತರ ರೂಪಾಯಿ ವರಮಾನದ ವಹಿವಾಟು. ಪ್ರವಾಸಿಗರಿಗೆ ಅತ್ಯಾಧುನಿಕ ಸೌಕರ್ಯಗಳನ್ನು ಒದಗಿಸಬೇಕಾದುದು ಅತ್ಯಂತ ಅಗತ್ಯ. ಆದರೆ, ರೋಪ್‌ವೇ ನಿರ್ಮಾಣದ ಹೆಸರಿನಲ್ಲಿ ಅತ್ಯಂತ ಸೂಕ್ಷ್ಮ ಪರಿಸರ ವ್ಯವಸ್ಥೆಯನ್ನು ಹಾಳು ಮಾಡುವುದನ್ನು ತಪ್ಪಿಸಲು ಸಾಧ್ಯವಿದೆ.

ಜೋಗ ಜಲಪಾತದ ರೋಪ್‌ವೇ ಬಹುತೇಕ ಸಿದ್ಧವಾಗಿದೆ. ನಿಯಮ ಪ್ರಕಾರ ಪಡೆಯಬೇಕಿರುವ ಪರಿಸರ ಅನುಮತಿಗಳನ್ನು ಪಡೆಯದೆಯೇ ಕೆಲಸ ಮುಗಿಸಲಾಗಿದೆ ಎಂಬುದು ವಿಷಾದನೀಯ. ಶರಾವತಿ ಸಿಂಹಬಾಲದ ಕೋತಿ ವನ್ಯಜೀವಿ ಧಾಮಕ್ಕೆ ತಾಗಿಕೊಂಡಿರುವ ಸ್ಥಳದಲ್ಲಿ ಪಂಚತಾರಾ ಹೋಟೆಲ್ ನಿರ್ಮಾಣವಾಗುತ್ತಿದೆ. ಜಲಪಾತಕ್ಕೆ ಹೋಗುವ ರಮಣೀಯ ದಾರಿಯ ಸಮೀಪ ಜಮೀನು ಖರೀದಿಸಿರುವ ಕೆಲವು ರಾಜಕಾರಣಿಗಳನ್ನು ಓಲೈಸುವುದಕ್ಕಾಗಿ ಈಗಾಗಲೇ ಬಹಳ ಹಾನಿ ಮಾಡಲಾಗಿದೆ.

ಸರ್ಕಾರವು ತನ್ನ ಆಡಂಬರದ ಯೋಜನೆಗಳ ಬಗ್ಗೆ ಮರು ಚಿಂತನೆ ನಡೆಸಬೇಕಿದೆ. ಕನಿಷ್ಠ ಪಕ್ಷ, ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಇನ್ನೂ ಕಾಮಗಾರಿ ಆರಂಭವಾಗಿಲ್ಲದ ಯೋಜನೆಗಳ ಬಗ್ಗೆ ಮರು ಚಿಂತನೆ ಅಗತ್ಯವಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಹಚ್ಚ ಹಸಿರಿನ ಮಳ್ಳಯ್ಯನಗಿರಿಯ ಮೇಲೆ ಪ್ರವಾಸಿಗರ ದಾಳಿ ಈಗಾಗಲೇ ನಡೆಯುತ್ತಿದೆ. ಗಿರಿ ಮತ್ತು ಸುತ್ತಲಿನ ಅರಣ್ಯ ಪ್ರದೇಶದ ಮೇಲೆ ಪ್ರವಾಸಿಗರು ಭಾರಿ ಪ್ರಮಾಣದಲ್ಲಿ ಕಸ ತಂದು ಸುರಿಯುತ್ತಿದ್ದಾರೆ.

ಈ ಬೆಟ್ಟವು ಅತ್ಯಂತ ಸೂಕ್ಷ್ಮವಾಗಿದೆ ಮತ್ತು ಭೂಕುಸಿತದ ಅಪಾಯವನ್ನು ಎದುರಿಸುತ್ತಿದೆ. ಇದು ಪಶ್ಚಿಮ ಘಟ್ಟಗಳ ಪರಿಸರಸೂಕ್ಷ್ಮ ವಲಯದಲ್ಲಿಯೇ ಇದೆ.

ಗಿರಿಯನ್ನು ಏರುವ ದಾರಿಯಲ್ಲಿ ವಾಹನ ಚಲಾಯಿಸುವಾಗಲೇ ಪ್ರವಾಸಿಗರಿಗೆ ಭಾರಿ ಆನಂದ ದೊರೆಯುತ್ತದೆ. ಬೆಟ್ಟದ ಮೇಲಿನಿಂದ ಸಿಗುವ ನೋಟವು ಅದ್ಭುತವಾಗಿದೆ. ನಿಸರ್ಗದ ಮಡಿಲಲ್ಲಿ ಸಮಾಧಾನ ಪಡೆಯಲು ಬಯಸುವವರಿಗೆ ಇದು ಧಾರಾಳ.

ಪ್ರವಾಸಿಗರು ರೋಪ್ ವೇ ಬೇಕು ಎಂದಿಲ್ಲ ಎಂಬುದು ನಮಗೆಲ್ಲ ತಿಳಿದಿದೆ. ಇದು ಕೈಗಾರಿಕಾ ಕೇಂದ್ರಿತ ಅಧಿಕಾರಶಾಹಿಯು ರೂಪಿಸಿದ ಯೋಜನೆ. ವಿವೇಕ ಇದ್ದರೆ, ಅತ್ಯಂತ ಸೂಕ್ಷ್ಮವಾದ ಈ ಪ್ರದೇಶದಲ್ಲಿ ರೋಪ್ ವೇ ನಿರ್ಮಾಣವನ್ನು ಸರ್ಕಾರವು ಕೈಬಿಡಬೇಕು. ಆದರೆ, ಯೋಜನೆಯನ್ನು ಮುಂದಿಟ್ಟವರು ಮತ್ತು ದುರಾಸೆಯ ರಾಜಕಾರಣಿಗಳಿಗೆ ಇದರಿಂದ ಭಾರಿ ನಷ್ಟ ಉಂಟಾಗುತ್ತದೆ. ಜನರ ಶ್ರೇಯಸ್ಸಿಗಿಂತ ಯೋಜನೆಯಿಂದ ದೊರೆಯುವ ಲಂಚವೇ ಹೆಚ್ಚು ಆಕರ್ಷಕ.

ನಂದಿ ಬೆಟ್ಟದಲ್ಲಿ ರೋಪ್ ವೇ ನಿರ್ಮಿಸುವುದಕ್ಕಾಗಿ ₹100 ಕೋಟಿಯಷ್ಟು ಜನರ ಹಣವನ್ನು ವೆಚ್ಚ ಮಾಡಲಾಗಿದೆ. ಬೆಟ್ಟದಲ್ಲಿ ಇತ್ತೀಚೆಗೆ ಆಗಿರುವ ಭೂಕುಸಿತವು ಸರ್ಕಾರವು ಯೋಜನೆಯಿಂದ ಹಿಂದೆ ಸರಿಯುವಂತೆ ಮಾಡಿಲ್ಲ. ಈ ಯೋಜನೆಯನ್ನು ಕೈಬಿಟ್ಟು ಅದಕ್ಕೆ ನಿಗದಿ ಮಾಡಿದ ಹಣದಲ್ಲಿ ಈ ಪ್ರದೇಶದ ಜನರಿಗೆ ಕುಡಿಯುವ ನೀರು ಒದಗಿಸಬಹುದು, ಆಸ್ಪತ್ರೆಗಳು ಮತ್ತು ಶಾಲೆಗಳಲ್ಲಿ ಉತ್ತಮ ಸೌಲಭ್ಯ ಕಲ್ಪಿಸಬಹುದು.

ಮೈಸೂರು ನಗರದಲ್ಲಿ ಪ್ರವಾಸಿಗರ ಆಕರ್ಷಣೆಯ ಹಲವು ತಾಣಗಳಿವೆ. ಹಾಗಾಗಿ, ಚಾಮುಂಡಿ ಬೆಟ್ಟದ ರೋಪ್‌ವೇ ಯೋಜನೆಯನ್ನು ಕೈಬಿಡಬಹುದು. ಇತ್ತೀಚೆಗೆ ಇಲ್ಲಿ ಆಗಿರುವ ಭೂ ಕುಸಿತವು ಅಧಿಕಾರಿಗಳ ಕಣ್ಣು ತೆರೆಸಬಹುದು ಎಂದು ಆಶಿಸೋಣ.

ಉತ್ತರ ಕನ್ನಡದ ಯಾಣವು ಅತ್ಯಂತ ಆಕರ್ಷಕ ತಾಣ. ಪಶ್ಚಿಮ ಘಟ್ಟದ ಮಡಿಲಿನ ಹಸಿರು ಕಾನನದ ನಡುವೆ ಇರುವ ಶಿಲಾ ರಚನೆಯನ್ನು ನೋಡಿ ಆನಂದಿಸಲು ಜನರು ಮುಗಿ ಬೀಳುತ್ತಾರೆ. ಸಂವೇದನೆಯೇ ಇಲ್ಲದ ಸರ್ಕಾರವೊಂದು ಮಾತ್ರ ಇಲ್ಲಿನ ಪರಿಸರ ವ್ಯವಸ್ಥೆಯನ್ನು ಹಾಳುಗೆಡವಲು ಬಯಸಬಹುದು. ಇಂತಹ ಪ್ರಯತ್ನವು ಪರಿಸರ ಬಿಕ್ಕಟ್ಟನ್ನು ಇನ್ನಷ್ಟು ಗಾಢಗೊಳಿಸಬಹುದು ಮತ್ತು ಈಗಾಗಲೇ ಜರ್ಜರಿತಗೊಂಡಿರುವ ಜೀವವೈವಿಧ್ಯವನ್ನು ಇನ್ನಷ್ಟು ಗಂಡಾಂತರಕ್ಕೆ ಒಡ್ಡಬಹುದು.

ಹವಾಮಾನ ಬದಲಾವಣೆಯಿಂದ ತೀವ್ರವಾದ ಸಂಕಷ್ಟವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಸುಸ್ಥಿರವಾದ ಪ್ರವಾಸೋದ್ಯಮವು ಈಗಿನ ಅಗತ್ಯ.

ಜನರ ದೈಹಿಕ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ಸರ್ಕಾರಕ್ಕೆ ಕಾಳಜಿ ಇದ್ದರೆ, ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಕೈಗೆತ್ತಿಕೊಂಡಿರುವ ಸುಸ್ಥಿರವಲ್ಲದ ಯೋಜನೆಗಳನ್ನು ಕೈಬಿಡಬೇಕು. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದ ರೋಪ್‌ವೇ ಯೋಜನೆಯನ್ನು ವನ್ಯಜೀವಿ ಸಂರಕ್ಷಣೆಯ ಹಿತಾಸಕ್ತಿಗಾಗಿ ಕೈಬಿಟ್ಟದ್ದು ಸರ್ಕಾರಕ್ಕೆ ಮಾದರಿ ಆಗಬೇಕು.

ಪ್ರಿಯ ಸರ್ಕಾರವೇ, ಜಾಗತಿಕ ತಾಪಮಾನ ಏರಿಕೆಯ ಈ ಹೊತ್ತಿನಲ್ಲಿ ಸಂಪತ್ತಿಗಿಂತ ಆರೋಗ್ಯವೇ ಮುಖ್ಯ.

ಲೇಖಕ: ವನ್ಯಜೀವಿ ಸಲಹಾ ಮಂಡಳಿಯ ಮಾಜಿ ಸದಸ್ಯ



ಪ್ರಜಾವಾಣಿ ಚರ್ಚೆ



ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 66

ಭಸ್ಮ ಧರಿಸದ ಜನ್ಮ ವ್ಯರ್ಥ

ಮಧ್ಯಮ ಮತ್ತು ಅನಾಮಿಕ ಬೆರಳುಗಳಿಂದ, ಮಧ್ಯದಲ್ಲಿ ಹೆಬ್ಬೆರಳಿನಿಂದ ಅಡ್ಡವಾಗಿ ಮಾಡುವ ಮೂರು ಭಸ್ಮದ ಗೆರೆಗಳಿಗೆ ತ್ರಿಪುಂಡ್ರವೆಂದು ಹೆಸರು. ಭಸ್ಮದ ಮೂರು ರೇಖೆಗಳ ಪ್ರತಿ ರೇಖೆಗೆ ಒಂಬತ್ತು ಅಂಗದೇವತೆಗಳಿದ್ದಾರೆ. ಓಂಕಾರದಲ್ಲಿನ ಅಕಾರ, ಗಾರ್ಹಪತ್ಯಾಗ್ನಿ, ಭೂಮಿ, ಧರ್ಮ, ರಜೋಗುಣ, ಋಗ್ವೇದ, ಕ್ರಿಯಾಶಕ್ತಿ, ಯಜ್ಞದಲ್ಲಿನ ಪ್ರಾತಸ್ಸವನಗಳು ಮತ್ತು ಮಹಾದೇವ. ಇವು ಮೊದಲನೆ ರೇಖೆಯ ದೇವತೆಗಳು. ಓಂಕಾರದಲ್ಲಿನ ಉಕಾರ, ದಕ್ಷಿಣಾಗ್ನಿ, ಆಕಾಶತತ್ವ, ಸತ್ವ, ಯಜುರ್ವೇದ, ಮಧ್ಯಾಹ್ನದ ಸವನ, ಇಚ್ಛಾಶಕ್ತಿ, ಅಂತರಾತ್ಮರು ಮತ್ತು ಮಹೇಶ್ವರ. ಇವರು ಎರಡನೆಯ ರೇಖೆಯ ದೇವತೆಗಳು; ಓಂಕಾರದಲ್ಲಿನ ಮಕಾರ, ಆಹವನೀಯಾಗ್ನಿ, ಪರಮಾತ್ಮ, ತಮೋಗುಣ, ಸ್ವರ್ಗಲೋಕ, ಜ್ಞಾನಶಕ್ತಿ, ಸಾಮವೇದ, ಯಜ್ಞದ ಮೂರನೆಯ ಸವನಗಳು ಮತ್ತು ಶಿವ. ಇವರು ಮೂರನೆಯ ರೇಖೆಯ ದೇವತೆಗಳು.

ವಾನಪ್ರಸ್ಥರು, ಕನ್ಯೆಯರು, ಸಾಮಾನ್ಯ ಜನರು ಬೆಳಿಗ್ಗೆಯಿಂದ ಮಧ್ಯಾಹ್ನದ ವರೆಗಿನ ಕಾಲಾವಧಿಯಲ್ಲಿ ನೀರಿನಿಂದ ಕಲಸಿದ ಭಸ್ಮವನ್ನು ಹಚ್ಚಿಕೊಳ್ಳಬೇಕು. ಮಧ್ಯಾಹ್ನದ ನಂತರ ನೀರಿಲ್ಲದೆ ಹಚ್ಚಿಕೊಳ್ಳಬೇಕು. ಮೂವತ್ತೆರಡು ಸ್ಥಾನಗಳಲ್ಲಿ ಇಲ್ಲವೇ ಹದಿನಾರು ಸ್ಥಾನಗಳಲ್ಲಿ ಅಥವಾ ಎಂಟು ಸ್ಥಾನಗಳಲ್ಲಿ ಅಥವಾ ಐದು ಸ್ಥಾನಗಳಲ್ಲಿಯಾದರೂ ಭಸ್ಮವನ್ನು ಧರಿಸಬೇಕು. ಶಿರಸ್ಸು, ಹಣೆ, ಕಿವಿಗಳು, ಕಣ್ಣು, ಮೂಗು, ಬಾಯಿ, ಕತ್ತು, ಕೈಗಳು, ಕೂರ್ಪರ (ಕೈಗಳ ಮಧ್ಯಸಂಧಿಗಳ ಭಾಗ ಅಥವಾ ಮಣಿಕಟ್ಟು), ಹೃದಯ, ಎರಡು ಪಕ್ಕೆಗಳು, ನಾಭಿ, ಮುಷ್ಕಗಳೆರಡು, ತೊಡೆಗಳು, ಕಾಲುಗಂಟು, ಮೊಳಕಾಲು, ಜಂಘೆ, ಕಾಲುಗಳು ಎಂಬ ಮೂವತ್ತೆರಡು ಅಂಗಗಳು ಭಸ್ಮವನ್ನು ಧರಿಸುವ ಸ್ಥಾನಗಳು.

ಅಗ್ನಿ, ಜಲ, ಭೂಮಿ, ವಾಯು, ದಿಕ್ಕು, ದಿಕ್ಪಾಲಕರು ಮತ್ತು ಅಷ್ಟವಸುಗಳ ಹೆಸರಿನಿಂದ ಭಸ್ಮವನ್ನು ಧರಿಸಬೇಕು. ಅಷ್ಟವಸುಗಳು ಯಾವುವೆಂದರೆ ಧರಾ, ಧ್ರುವ, ಸೋಮ, ಜಲ, ಅನಿಲ (ವಾಯು), ಅನಲ (ಅಗ್ನಿ), ಪ್ರತ್ಯೂಷ, ಪ್ರಭಾಸ; ತ್ರಿಪುಂಡ್ರಭಸ್ಮವನ್ನು ಶಿರಸ್ಸು, ಹಣೆ, ಕತ್ತು, ಭುಜಶಿರಸ್ಸುಗಳೆರಡು, ಭುಜಗಳೆರಡು, ಕೈಗಳ ಮಧ್ಯಸಂಧಿಯ ಪ್ರದೇಶ, ಮಣಿಕಟ್ಟು, ಹೃದಯ, ನಾಭಿ, ಪಕ್ಕೆಗಳು, ಬೆನ್ನು ಈ ಹದಿನಾರು ಸ್ಥಾನಗಳಲ್ಲಿ ಧರಿಸಬೇಕು.

ಅಶ್ವಿನಿದೇವತೆಗಳು, ಶಿವ, ಶಕ್ತಿದೇವಿ, ರುದ್ರ, ಈಶ್ವರ, ನಾರದ, ವಾಮಾದೇವಿ, ನಾಸತ್ಯ ಮತ್ತು ದಸ್ರಕ ಎಂಬ ಒಂಬತ್ತು ಶಕ್ತಿದೇವಿಯರು ಸೇರಿ ಹದಿನಾರು ಸ್ಥಾನಗಳ ದೇವತೆಗಳು. ದೇಹದ ಹದಿನಾರು ಭಾಗಗಳಾದ ಶಿರಸ್ಸು, ತಲೆಗೂದಲು, ಕಿವಿಗಳೆರಡು, ಮುಖ, ಬಾಹುಗಳೆರಡು, ಹೃದಯ, ನಾಭಿ, ತೊಡೆಗಳೆರಡು, ಮೊಳಕಾಲುಗಳೆರಡು, ಕಾಲುಗಳೆರಡು, ಬೆನ್ನುಗಳಲ್ಲಿ ಭಸ್ಮವನ್ನು ಧರಿಸಬೇಕು. ಆ ಸ್ಥಾನಗಳಿಗೆ ಕ್ರಮವಾಗಿ ಶಿವ, ಚಂದ್ರ, ರುದ್ರ, ಗಣೇಶ, ವಿಷ್ಣು, ಲಕ್ಷ್ಮೀ ಮತ್ತು ಹೃದಯದಲ್ಲಿ ಶಂಭು, ನಾಭಿಯಲ್ಲಿ ಪ್ರಜಾಪತಿ, ಎರಡು ಪಕ್ಕೆಗಳಲ್ಲಿ ನಾಗಕನ್ಯೆಯರು ಮತ್ತು ಋಷಿಕನ್ಯೆಯರು, ಪಾದಗಳಲ್ಲಿ ಸಮುದ್ರಗಳು, ಬೆನ್ನಿನಲ್ಲಿ ತೀರ್ಥದೇವತೆಗಳು ಇರುತ್ತಾರೆ.

ಹಣೆ, ಕಿವಿಗಳೆರಡು, ಭುಜಶಿರಸ್ಸುಗಳೆರಡು, ಹೃದಯ, ನಾಭಿಗಳು ಎಂಟು ಭಸ್ಮಸ್ಥಾನಗಳು. ಇವುಗಳಿಗೆ ಬ್ರಹ್ಮ ಮತ್ತು ಏಳು ಋಷಿಗಳು ಕ್ರಮ ವಾಗಿರುವ ದೇವತೆಗಳು. ಶಿರಸ್ಸು, ಬಾಹುಗಳೆರಡು, ಹೃದಯ, ನಾಭಿ ಈ ಐದು ಸ್ಥಾನಗಳಲ್ಲಿ ಭಸ್ಮವನ್ನು ಧರಿಸಬಹುದು. ದೇಶಕಾಲಗಳಿಗೆ ಅನುಗುಣವಾಗಿ ಯೋಗ್ಯವಾದ ಪಕ್ಷವನ್ನಾಶ್ರಯಿಸಬೇಕು. ಭಸ್ಮೋದ್ಧೂಲನದಲ್ಲಿ ಅಶಕ್ತನಾದವನು ತ್ರಿಪುಂಡ್ರಾದಿಗಳನ್ನು ಧರಿಸಬೇಕು.

ಮೂರು ಕಣ್ಣುಗಳುಳ್ಳವನೂ, ಸತ್ವರಜಸ್ತಮಸ್ವರೂಪವಾದ ಪ್ರಕೃತಿಗೆ ಆಧಾರನೂ, ಬ್ರಹ್ಮ-ವಿಷ್ಣು-ರುದ್ರರಿಗೆ ಜನಕನೂ ಆದಂತಹ ಶಿವನನ್ನು 'ನಮಃ ಶಿವಾಯ' ಎಂದು ಸ್ಮರಿಸುತ್ತಾ ಹಣೆಯಲ್ಲಿ ಭಸ್ಮತ್ರಿಪುಂಡ್ರವನ್ನು ಧರಿಸಬೇಕು. 'ಈಶಾಭ್ಯಾಂ ನಮ' ಎಂದು ಪಕ್ಕೆಗಳಲ್ಲಿ, 'ಬೀಜಾಭ್ಯಾಂ ನಮ' ಎಂದು ಬಾಹುಗಳ ಮಧ್ಯಸಂಧಿಗಳಲ್ಲಿ, 'ಪಿತೃಭ್ಯಾಂ ನಮಃ ಉಮೇಶಾಭ್ಯಾಂ ನಮಃ' ಎಂದು ಮೇಲುಭಾಗ ಮತ್ತು ಕೆಳಭಾಗದಲ್ಲಿ, 'ಭೀಮಾಯ ನಮಃ' ಎಂದು ಬೆನ್ನಿನಲ್ಲಿ ಮತ್ತು ಶಿರಸ್ಸಿನ ಹಿಂಭಾಗದಲ್ಲಿ ತ್ರಿಪುಂಡ್ರವನ್ನು ಧರಿಸಬೇಕು ಎಂದು ಸೂತಮುನಿ ಭಸ್ಮಧಾರಣೆ ವಿವರವನ್ನು ಹೇಳುವುದರೊಂದಿಗೆ ವಿದ್ಯೇಶ್ವರ ಸಂಹಿತೆಯ ಇಪ್ಪತ್ತನಾಲ್ಕನೆಯ ಅಧ್ಯಾಯ ಮುಕ್ತಾಯವಾಗುತ್ತದೆ.

ಪ್ರವಾಸೋದ್ಯಮ ಉತ್ತೇಜನಕ್ಕೆ 'ರೋಪ್‌ವೇ'

• ಪ್ರಕಾಶ್ ಶೇಷರಾಘವಾಚಾರ್



ಪರ್ವತಗಳ ನಡುವೆ ನಿರ್ಮಿಸುವ ರೋಪ್ ವೇ ಯೋಜನೆಗಳು ಅತಿ ಸುರಕ್ಷಿತ ಮತ್ತು ಪರಿಸರಕ್ಕೆ ಹೆಚ್ಚಿನ ಹಾನಿಯನ್ನು ಮಾಡುವುದಿಲ್ಲ. ಪ್ರವಾಸಿಗರು ಪರ್ವತದ ಸುತ್ತಮುತ್ತಲಿನ ರಮಣೀಯ ದೃಶ್ಯಗಳನ್ನು ಕಣ್ತುಂಬಿಸಿಕೊಳ್ಳಲು ಮತ್ತು ರೋಮಾಂಚಕಾರಿ ಅನುಭವ ಪಡೆಯಲು ಸಹಕಾರಿ. ಹೀಗಾಗಿ, ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ರೋಪ್‌ವೇಗಳ ಪಾತ್ರ ಹೆಚ್ಚು ಪ್ರಮುಖವಾದುದು

ಪ್ರವಾಸಿ- ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಮೂಲಕ ದೇಶದ ಭೂಪಟದಲ್ಲಿ ಔನ್ನತ್ಯಕ್ಕೆ ಏರಿ, ವಿಶ್ವದ ಜನರನ್ನು ತನ್ನ ಕಡೆಗೆ ಸೆಳೆಯುವ ಸೂಜಿಗಲ್ಲಾಗಬಹುದಾದ ಅಪೂರ್ವ ಅವಕಾಶ ನಮ್ಮ ಹೆಮ್ಮೆಯ ನಾಡು ಕರ್ನಾಟಕಕ್ಕೆ ಇದೆ. ಜೀವವೈವಿಧ್ಯ- ಖಗ-ಮೃಗಗಳ ನೆಲೆವೀಡಾದ ಗಿರಿಶೃಂಗಗಳು, ಕಣ್ಮನ ಸೆಳೆಯುವ ಕಡಲ ಕಿನಾರೆ, ಬಾದಾಮಿ-ಪಟ್ಟದಕಲ್ಲು, ಹಂಪಿ, ಮೈಸೂರು, ಶ್ರವಣಬೆಳಗೊಳ, ಗೋಲಗುಂಬಜ್‌ನಂತಹ ವಿಶಿಷ್ಟ ತಾಣಗಳು, ದೈವಾರಾಧನೆಯ ಜತೆಗೆ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ನೂರಾರು ಪುಣ್ಯಕ್ಷೇತ್ರಗಳು ಕರ್ನಾಟಕದ ಒಡಲಿನಲ್ಲಿ ತುಂಬಿಕೊಂಡಿವೆ. 'ಒಂದು ರಾಜ್ಯ ಹಲವು ಜಗತ್ತು' ಎಂಬ ಟ್ಯಾಗ್‌ಲೈನ್ ಅನ್ನು ಪ್ರವಾಸೋದ್ಯಮ ಇಲಾಖೆ ದಶಕದ ಹಿಂದೆ ಹಾಕಿಕೊಂಡಿದೆಯಾದರೂ ಅದರ ಅನುಷ್ಠಾನದಲ್ಲಿ ನಿರೀಕ್ಷಿತ ಮಟ್ಟದ ಆಸಕ್ತಿ ತೋರಲಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ದೂರದರ್ಶಿತ್ವ, ಮಾರ್ಗದರ್ಶನವನ್ನೇ ನೆಚ್ಚಿಕೊಂಡು ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ, ಪ್ರವಾಸೋದ್ಯಮಕ್ಕೆ ಆದ್ಯತೆ ನೀಡುವ ಕೆಲಸವನ್ನು ಶುರು ಮಾಡಿದೆ.

ದಕ್ಷಿಣ ಭಾರತದಲ್ಲೇ ಮೊದಲ ಬಾರಿಗೆ ಕರ್ನಾಟಕ ರಾಜ್ಯವು ಪ್ರವಾಸಿ ಹಾಗೂ ಧಾರ್ಮಿಕ ಕ್ಷೇತ್ರಗಳನ್ನು ಹೆಚ್ಚು ಜನಪ್ರಿಯ ಮತ್ತು ಆಕರ್ಷಣೀಯವನ್ನಾಗಿಸಲು 'ರೋಪ್ ವೇ ಭೂಪಟ'ದಲ್ಲಿ ಕರ್ನಾಟಕದ ಛಾಪನ್ನು ಮೂಡಿಸುವ ಸಂಕಲ್ಪ ಮಾಡಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಡಿಸಿದ 2022-23ರ ಬಜೆಟ್‌ನಲ್ಲಿ ನಾಲ್ಕು ಪ್ರವಾಸಿ ಸ್ಥಳಗಳಲ್ಲಿ ಕೇಂದ್ರದ ಪರ್ವತಮಾಲಾ ಯೋಜನೆಯನ್ನು ಬಳಸಿಕೊಂಡು ರೋಪ್ ವೇ ನಿರ್ಮಾಣ ಮಾಡಲಾಗುವುದು ಎಂದು ಘೋಷಿಸಿದ್ದಾರೆ.

ಬೆಂಗಳೂರು ಸಮೀಪದ ನಂದಿಬೆಟ್ಟಕ್ಕೆ ₹93 ಕೋಟಿ ವೆಚ್ಚದಲ್ಲಿ ರೋಪ್ ವೇ ನಿರ್ಮಿಸಲು ಸಂಪುಟದ ಅನುಮೋದನೆಯು ಈಗಾಗಲೇ ದೊರೆತಿದೆ. ಚಿತ್ರನಟ ಶಂಕರ್ ನಾಗ್ ಅವರು 80ರ ದಶಕದಲ್ಲಿ ಈ ಯೋಜನೆಯನ್ನು ಮುಂದಿರಿಸಿದ್ದರು. ಅವರು ಯೋಜನೆಯ ಪ್ರಸ್ತಾವವನ್ನು ಸರ್ಕಾರಕ್ಕೂ ಸಲ್ಲಿಸಿದ್ದರು.

ಶ್ರೀರಾಮನ ಬಂಟ ಹನುಮನ ಜನ್ಮಸ್ಥಳವಾದ ಕೊಪ್ಪಳದ ಅಂಜನಾದ್ರಿ ಬೆಟ್ಟ, ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನ ಗಿರಿ ಬೆಟ್ಟ ಮತ್ತು ಮೈಸೂರು ಚಾಮುಂಡಿ ಬೆಟ್ಟಕ್ಕೂ ರೋಪ್ ವೇ ನಿರ್ಮಿಸಲು ಸರ್ಕಾರ ನಿರ್ಧರಿಸಿದೆ.

ರೋಪ್ ವೇ ಪ್ರವಾಸಿಗರ ಬಹುದೊಡ್ಡ ಆಕರ್ಷಣೆಯ ಕೇಂದ್ರ ಮತ್ತು ಕಡಿದಾದ ಪ್ರದೇಶಗಳಿಗೆ ಸಂಪರ್ಕ ಸಾಧಿಸಲು ಹಾಗೂ ನಗರಗಳಲ್ಲಿ ಸಾರಿಗೆ ಸಂಪರ್ಕವಾಗಿಯೂ ಬಳಕೆಯಾಗುತ್ತಿದೆ. ಕೇಂದ್ರ ಸರ್ಕಾರ ಈ ಯೋಜನೆಯ ಸಂಭಾವ್ಯ ಲಾಭವನ್ನು ಗುರುತಿಸಿದೆ. ರೋಪ್ ವೇಯನ್ನು ಸಾರ್ವಜನಿಕ ಸಾರಿಗೆ ವ್ಯವಸ್ಥೆಯಾಗಿ ಬಳಸುವ ಉದ್ದೇಶದಿಂದ ಪರ್ವತ ರಾಜ್ಯಗಳಾದ ಹಿಮಾಚಲ ಪ್ರದೇಶ, ಈಶಾನ್ಯ ರಾಜ್ಯಗಳು, ಉತ್ತರಾಖಂಡ ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿ ಈ ಯೋಜನೆ ಜಾರಿ ಮಾಡಲು ನಿರ್ಧರಿಸಿದೆ. 60 ಕಿ.ಮೀ. ರೋಪ್ ವೇ ನಿರ್ಮಾಣ ಮಾಡಲಾಗುವುದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಘೋಷಿಸಿದ್ದಾರೆ.

ಮೆಕ್ಸಿಕೊ ನಗರದಲ್ಲಿರುವ 10.55 ಕಿ.ಮೀ ಉದ್ದದ ಕೇಬಲ್ ಕಾರ್ ಪ್ರಪಂಚದ ಅತಿ ಉದ್ದದ ರೋಪ್ ವೇ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಆದರೆ, ನಮ್ಮ ದೇಶದ ವಿಷಯಕ್ಕೆ ಬಂದರೆ 1971ರಲ್ಲಿ ನಿರ್ಮಿಸಿದ ಮುಸ್ಸೂರಿ ರೋಪ್ ವೇ ಭಾರತದ ಮೊದಲ ರೋಪ್ ವೇ ಯೋಜನೆಯಾಗಿದೆ. ಉತ್ತರಾಖಂಡದ 4 ಕಿ.ಮೀ. ಉದ್ದದ ಔಲಿ ಕೇಬಲ್ ಕಾರ್ ಭಾರತದ ಅತಿ ಉದ್ದನೆಯ ರೋಪ್ ವೇ.

ಬ್ರಹ್ಮಪುತ್ರ ನದಿಯ ಮೇಲೆ ನಿರ್ಮಿಸಿರುವ 1.82 ಕಿ.ಮೀ ರೋಪ್ ವೇಯು ನದಿಯ ಮೇಲೆ ನಿರ್ಮಾಣ ಮಾಡಿರುವ ದೇಶದ ಅತಿ ಉದ್ದವಿರುವ ರೋಪ್ ವೇ. ಉತ್ತರ ಪ್ರದೇಶದ ವಾರಾಣಸಿಯಲ್ಲಿ ₹400 ಕೋಟಿ ವೆಚ್ಚದಲ್ಲಿ ರೋಪ್ ವೇಯನ್ನು ನಗರ ಸಾರಿಗೆಯಾಗಿ ಉಪಯೋಗಿಸಲು ಯೋಗಿ ಆದಿತ್ಯನಾಥ ನೇತೃತ್ವದ ಬಿಜೆಪಿ ಸರ್ಕಾರ ಯೋಜನೆ ರೂಪಿಸಿದೆ.

ಪರ್ವತಗಳ ನಡುವೆ ನಿರ್ಮಿಸುವ ರೋಪ್ ವೇ ಯೋಜನೆಗಳು ಅತಿ ಸುರಕ್ಷಿತ ಮತ್ತು ಪರಿಸರಕ್ಕೆ ಹೆಚ್ಚಿನ ಹಾನಿಯನ್ನು ಮಾಡುವುದಿಲ್ಲ. ಪ್ರವಾಸಿಗರು ಪರ್ವತದ ಸುತ್ತಮುತ್ತಲಿನ ರಮಣೀಯ ದೃಶ್ಯಗಳನ್ನು ಕಣ್ತುಂಬಿಸಿಕೊಳ್ಳಲು ಮತ್ತು ರೋಮಾಂಚಕಾರಿ ಅನುಭವ ಪಡೆಯಲು ಸಹಕಾರಿ. ಹೀಗಾಗಿ, ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ರೋಪ್‌ವೇಗಳ ಪಾತ್ರ ಹೆಚ್ಚು ಪ್ರಮುಖವಾದುದು. ಆದರೆ, ಕರ್ನಾಟಕದಲ್ಲಿ ಹಲವಾರು ಪ್ರೇಕ್ಷಣೀಯ ಸ್ಥಳಗಳು ಮತ್ತು ಬೆಟ್ಟಗಳು ಇದ್ದರೂ ಪ್ರವಾಸೋದ್ಯಮ ಉತ್ತೇಜನಕ್ಕೆ ರೋಪ್ ವೇ ಯೋಜನೆಯನ್ನು ಜಾರಿಗೊಳಿಸುವ ಆಲೋಚನೆಯನ್ನು ಹಿಂದಿನ ಸರ್ಕಾರವು ಮಾಡಿರಲಿಲ್ಲ. ಈಗ ರೋಪ್ ವೇ ಯೋಜನೆಗಳನ್ನು ಮುನ್ನೆಲೆಗೆ ತಂದ ಶ್ರೇಯಸ್ಸು ಬೊಮ್ಮಾಯಿಯವರಿಗೆ ಸಲ್ಲಬೇಕು.

ರಾಜ್ಯದಲ್ಲಿ ನೂರಾರು ಪ್ರವಾಸಿ ತಾಣಗಳಿವೆ. ಈ ತಾಣಗಳಲ್ಲಿ ಹಲವಾರು ಬಗೆಯ ಆಕರ್ಷಣೆಯನ್ನು ನಿರ್ಮಿಸುವುದರಿಂದ ಪ್ರವಾಸಿಗರನ್ನು ಅತಿ ಹೆಚ್ಚು ಸಂಖ್ಯೆಯಲ್ಲಿ ಸೆಳೆಯಬಹುದು. ಪ್ರವಾಸಿಗರ ಸಂಖ್ಯೆ ಹೆಚ್ಚಿದರೆ ಹೋಟೆಲ್, ವಸತಿಗೃಹ, ಆ ಪ್ರದೇಶದಲ್ಲಿನ ವಿವಿಧ ಅಂಗಡಿಗಳಲ್ಲಿನ ವಹಿವಾಟು ಹೆಚ್ಚುತ್ತದೆ. ಇದಕ್ಕೆ ಪೂರಕವಾಗಿ, ಸ್ಥಳೀಯ ಸಂಸ್ಕೃತಿ ಹಾಗೂ ಕೈಗಾರಿಕೆ ಆಧಾರಿತ ಉದ್ಯಮಕ್ಕೆ ಪ್ರೋತ್ಸಾಹವೂ ಸಿಗುತ್ತದೆ. ಸರ್ಕಾರದ ಆದಾಯ ಗಳಿಕೆ ಮತ್ತು ಉದ್ಯೋಗ ಸೃಷ್ಟಿಗೆ ಪೂರಕ ವಾತಾವರಣ ಸೃಷ್ಟಿಯಾಗಲಿದೆ.

ಬೆಂಗಳೂರು ಸಮೀಪದ ನಂದಿಬೆಟ್ಟಕ್ಕೆ ಸಾವಿರಾರು ಪ್ರವಾಸಿಗರು ಭೇಟಿ ಕೊಡುತ್ತಿದ್ದಾರೆ. ಈಗ ರೋಪ್ ವೇ ಯೋಜನೆಯ ಜಾರಿಯಿಂದ ಈ ಸಂಖ್ಯೆಯಲ್ಲಿ ಎರಡರಿಂದ ಮೂರುಪಟ್ಟು ವೃದ್ಧಿಯಾಗುವ ನಿರೀಕ್ಷೆ ಇದೆ.

ಹನುಮನ ಜನ್ಮಸ್ಥಳವಾದ ಅಂಜನಾದ್ರಿ ಬೆಟ್ಟಕ್ಕೆ ರೋಪ್ ವೇ ಹಾಕುವ ತೀರ್ಮಾನ ಅತ್ಯಂತ ಸೂಕ್ತ. ರೋಪ್ ವೇ ಅಭಿವೃದ್ಧಿ ಯೋಜನೆಯಿಂದ ಅಂಜನಾದ್ರಿ ಬೆಟ್ಟಕ್ಕೆ ಭೇಟಿ ನೀಡುವವರ ಸಂಖ್ಯೆಯು ದುಪ್ಪಟ್ಟಾಗುತ್ತದೆ. ಸುತ್ತಮುತ್ತಲಿನ ಜಿಲ್ಲೆಯವರಿಗೆ ಉದ್ಯೋಗಾವಕಾಶದ ಬಾಗಿಲನ್ನು ಇದು ತೆರೆಯಬಹುದು.

ರಾಜ್ಯದಲ್ಲಿ ಇದೇ ಮೊದಲಿಗೆ ಇಷ್ಟು ದೊಡ್ಡ ಸಂಖ್ಯೆಯಲ್ಲಿ ರೋಪ್ ವೇ ಯೋಜನೆಗಳು ಆರಂಭವಾಗುತ್ತಿವೆ. ಇದು ಪ್ರಾರಂಭ ಮಾತ್ರ; ಮುಂದಿನ ದಿನಗಳಲ್ಲಿ ಮತ್ತಷ್ಟು ಯೋಜನೆ ಕೈಗೊಳ್ಳಲು ಸರ್ಕಾರ ಬದ್ಧವಾಗಿದೆ ಎಂದು ಪ್ರವಾಸೋದ್ಯಮ ಸಚಿವ ಆನಂದ್‌ಸಿಂಗ್ ಪ್ರತಿಪಾದಿಸಿದ್ದಾರೆ.

ಮುಳ್ಳಯ್ಯನಗಿರಿ ಬೆಟ್ಟಕ್ಕೆ ರೋಪ್ ವೇ ಹಾಕುವುದಕ್ಕೆ ಪರಿಸರವಾದಿಗಳು ಅಪಸ್ವರ ತೆಗೆದಿದ್ದಾರೆ. ಆದರೆ ಜಿಲ್ಲೆಯ ಜನಪ್ರತಿನಿಧಿಗಳು, ಜನರು ಈ ಯೋಜನೆಯ ಪರವಾಗಿ ಇದ್ದಾರೆ. 'ನಮ್ಮೆಲ್ಲರ ಬೇಡಿಕೆ ಮನ್ನಿಸಿ ಈ ಯೋಜನೆ ಜಾರಿಗೆ ತರಲಾಗುತ್ತಿದೆ. ವಾರಾಂತ್ಯದ ಪ್ರವಾಸಿಗರು ಪ್ರಕೃತಿಯನ್ನು ಆಸ್ವಾದಿಸಲು ಉತ್ತಮ ಅವಕಾಶ' ಎಂದು ವಿಧಾನ ಪರಿಷತ್ತಿನ ಸದಸ್ಯ ಎಂ.ಕೆ. ಪ್ರಾಣೇಶ್ ಹೇಳುತ್ತಾರೆ.

ಪಶ್ಚಿಮ ಘಟ್ಟವು ಹೊಂದಿರುವ ಹೊಸ ಯೋಜನೆಗಳ ಭಾರ ತಡೆಯುವ ಸಾಮರ್ಥ್ಯ ಮತ್ತು ತದನಂತರ ಉಂಟಾಗುವ ಬೆಳವಣಿಗೆಗಳಿಂದ ಬೀರುವ ದುಷ್ಪರಿಣಾಮಗಳ ಅಧ್ಯಯನ ಮಾಡದೆ ಯೋಜನೆ ಕೈಗೆತ್ತಿಕೊಳ್ಳುವುದು ಸರಿಯಲ್ಲ ಎಂಬ ವಾದವೂ ಇದೆ.

'ಪರಿಸರವಾದಿಗಳ ಜೊತೆಯಲ್ಲಿ ಸಮಾಲೋಚನೆ ನಡೆಸಿ ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ಯೋಜನೆ ಅನುಷ್ಠಾನ ಮಾಡುವುದು ನಮ್ಮ ಸರ್ಕಾರದ ಆದ್ಯತೆ. ಇದರಿಂದಾಗಿ, ಟ್ರಾಫಿಕ್ ಒತ್ತಡ ಕಡಿಮೆಯಾಗುತ್ತದೆ. ಇಂತಹ ಪ್ರದೇಶಗಳಲ್ಲಿ, ವಾಣಿಜ್ಯ ಚಟುವಟಿಕೆಗಳಿಗೆ ಕಡಿವಾಣ ಹಾಕಿ ಪ್ರಕೃತಿ ಸೌಂದರ್ಯವನ್ನು ರೋಪ್‌ವೇ ಮೂಲಕ ಜನರು ಆಸ್ವಾದಿಸುವ ಅವಕಾಶ ನೀಡಬೇಕಾಗಿದೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು' ಎನ್ನುತ್ತಾರೆ ಶಾಸಕ ಸಿ.ಟಿ. ರವಿ.

ಮುಖ್ಯಮಂತ್ರಿ ಬೊಮ್ಮಾಯಿಯವರು ಕರ್ನಾಟಕ ರಾಜ್ಯದ ಪ್ರವಾಸೋದ್ಯಮ ಕ್ಷೇತ್ರವನ್ನು ರೋಪ್ ವೇ ಯೋಜನೆಯ ಮೂಲಕ ಮತ್ತೊಂದು ಹಂತಕ್ಕೆ ತೆಗೆದುಕೊಂಡು ಹೋಗಲಿದ್ದಾರೆ ಎಂದರೆ ತಪ್ಪಾಗಲಾರದು. ಪ್ರವಾಸೋದ್ಯಮ ಕ್ಷೇತ್ರಕ್ಕೆ ಬೂಸ್ಟರ್ ಡೋಸ್ ಅವಶ್ಯಕತೆ ಇತ್ತು ಅದನ್ನು ರೋಪ್ ವೇ ಮೂಲಕ ನೀಡಲಾಗಿದೆ.

ಲೇಖಕರು: ಬಿಜೆಪಿ ಮುಖಂಡ

ಪದಬಂಧ 4895

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವೀರಶೈವರ ಸ್ಮಶಾನವಿದು (4)
3.ಅಭಿನಯ ಪ್ರಧಾನವಾದ ದೃಶ್ಯ ಪ್ರಬಂಧ (3)
5.ತಿರುಗಿದಾಗ ಕಾಣಿಸಿದ ವಿಸ್ತಾರವಾದ ಜಾಗ (3)
7.ನಾಕದಲ್ಲಿ ತೂರಿಸಿದ ಮೂಗು! (3)
8.ಮಾನಸಿಕ ಪ್ರಭಾವ ಬೀರಿ ವಶಪಡಿಸಿಕೊಳ್ಳುವುದು (5)
11.ಇದು ಪುಷ್ಪದ ಶರ (3)
12.ಎಂಟು ಕಾಲುಳ್ಳ ಕಾಲ್ಪನಿಕ ಪ್ರಾಣಿ (3)
15.ಮಂದಿ ಬಳಿಯಿರುವ ತಾಯಿ (3)
16. ಸೋತು ಹೋದವನು (4)

ಮೇಲಿಂದ ಕೆಳಕ್ಕೆ

1.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)
2.ಸತ್ಯವಲ್ಲ!ಇದು ಅಪ್ಪಟ ಸುಳ್ಳು! (2)
3.ದೇವರು ಧರ್ಮವನ್ನು ನಂಬದವನು (3)
4.ಬಾಯಿಯ ಮೂಲೆ (4)
6.ಈತ ದುಡ್ಡಿಲ್ಲದವನು (3)
7.ಹೆಸರಿಡುವ ಶಾಸ್ತ್ರ (5)
9.ಬಾಣ ಹಿಡಿದ ಶೈವಭಕ್ತನಿಲ್ಲಿ ತಿರುಗಿದ್ದಾನಲ್ಲಾ? (3)
10.ಶ್ರೀಗಂಧವನ್ನು ಹೀಗೂ ಹೇಳುವರು (4)
11.ಸುಮಗಳನ್ನು ಜೋಡಿಸಿಡುವ ಕರಂಡಕ (3)
13.ನಾಟ್ಯಶಾಸ್ತ್ರವನ್ನು ಬರೆದ ಮುನಿ (3)
14.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)

1			2	■	■	3		4
	■	■		■	■		■	
5		6	■	7			■	
■	■		■		■	■	■	
■	■	8				9	■	■
10	■	■	■		■		■	■
	■	11			■	12		13
	■		■	■	14	■	■	
15			■	■	16			

4894ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪೂರ್ಣವಿರಾಮ
3.ಪ್ರಪಾತ 5.ವನವಾಸ
8.ಹಯವದನ 11.ಪಶುಪತಿ
13.ಯದೃಚ್ಛೆ
14.ಆಸೆಬುರುಕ

ಮೇಲಿಂದ ಕೆಳಕ್ಕೆ:
1.ಪೂರ್ವಗ್ರಹ 2.ರಾವುತ
4.ತಪಾಸಣೆ 6.ನಯನ
7.ನವಣೆ 8.ಹಡಪ
9.ತಾಪತ್ರಯ 10.ಆಕಸ್ಮಿಕ
12.ವರಸೆ

ಸುಡೊಕು 5281

			4		3	9	6	
		8						5
		3	5		8	7	2	1
		9						7
	3	7	1	8	6	4	5	
8						2	1	
6		5		2				4
3						5		2
	8	2		5			7	

5280 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮಾರ್ಚ್ 12, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಕುಂಭ ಮಾಸದ 28 ನೇ ದಿನ ತಿಥಿ: (ಫಾಲ್ಗುಣ ಶುಕ್ಲ) ನವಮಿ ಗಂ. 08-08 ನಕ್ಷತ್ರ: ಆರ್ದ್ರಾ ಗಂ. 17-32 ಯೋಗ: ಸೌಭಾಗ್ಯ ಗಂ. 27-54, ಕರಣ: ಕೌಲವ ಗಂ. 08-08.

ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 06-43 ಸೂರ್ಯಾಸ್ತ : 06-37

ಮುಸ್ಲಿಂ ದಿನಾಂಕ : 08 ಶಬನ್ ಅದೃಷ್ಟ ಸಂಖ್ಯೆ: 3, 9

ಮೇಷ: ಕಾರ್ಯಕ್ಷೇತ್ರದಲ್ಲಿ ಸಾಕಷ್ಟು ಎಚ್ಚರ ವಹಿಸದೇ ಅತಿಯಾದ ವಿಶ್ವಾಸದಿಂದ ಮುಂದುವರೆದರೆ ಕಷ್ಟ-ನಷ್ಟಗಳು, ಸ್ಥಾನಮಾನಕ್ಕೆ ಹಾನಿ ಸಂಭವಿಸಬಹುದು. ವ್ಯಾಪಾರಿಗಳಿಗೆ ಬಂಡವಾಳ ಹೂಡಿಕೆಯಲ್ಲಿ ಲಾಭ.

ವೃಷಭ: ರಾಜಕಾರಣಿಗಳಿಗೆ ರಾಜಕೀಯದಲ್ಲಿ ಸೂಕ್ತ ಸ್ಥಾನಮಾನ ಅಥವಾ ಕಾಲಾವಕಾಶ ದೊರೆಯಲಿದೆ. ನೂತನ ಭೂ ಖರೀದಿಗೆ ಚಿಂತನೆ ನಡೆಸಬಹುದು. ನವದಂಪತಿಗಳಿಗೆ ಸಂತತಿ ವಿಚಾರದಲ್ಲಿ ಶುಭ ಸೂಚನೆ ಕಾಣಲಿದೆ.

ಮಿಥುನ: ಉದ್ಯೋಗದಲ್ಲಿ ರಾಸಾಯನಿಕ ಪದಾರ್ಥಗಳ ಬಳಕೆ ಮಾಡುವವರು ಜಾಗ್ರತರಾಗಿರಿ. ಮಕ್ಕಳಿಂದ ಅಹಿತಕರ ಘಟನೆಗಳು ನಡೆದು ಪಾಲಕರಿಗೆ ಭವಿಷ್ಯದ ಬಗ್ಗೆ ಯೋಚನೆ ಬರಲಿದೆ. ಚಿನ್ನಾಭರಣ ಮಾರಾಟಗಾರರಿಗೆ ಶುಭದಿನ.

ಕರ್ಕಾಟಕ: ನಿರುದ್ಯೋಗಿಗಳಿಗೆ ಪ್ರತಿಷ್ಠಿತರ ಪರಿಚಯದಿಂದ ಗೌರವಾನ್ವಿತ ಜಾಗದಲ್ಲಿ ಉದ್ಯೋಗ ಪ್ರಾಪ್ತಿಯಾಗಲಿದೆ. ಯೋಚಿಸಿದ ಕಾರ್ಯಗಳಿಗೆ ಪತ್ನಿ ಮಕ್ಕಳಿಂದ ಸಹಕಾರ ದೊರೆಯುವುದು. ಬಂಧುಗಳ ಆಗಮನದಿಂದ ಸಂತಸ.

ಸಿಂಹ: ಕಲಾಕಾರರಿಗೆ ಕಲೆಯ ಪ್ರದರ್ಶನದಿಂದ ಪ್ರಶಂಸೆ ಮತ್ತು ಗೌರವಾದರಗಳಿಂದ ಮನೋಲ್ಲಾಸ. ವೈಯಕ್ತಿಕ ಜೀವನದ ಸಮಸ್ಯೆ ಬಗೆಹರಿದು ಮನಸ್ಸಿಗೆ ನೆಮ್ಮದಿ ಮೂಡಲಿದೆ. ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಗೆ ಸುಸಮಯ.

ಕನ್ಯಾ: ಭವಿಷ್ಯದ ಕುರಿತು ಯೋಜನೆಗಳನ್ನು ರೂಪಿಸಲು ಸುದಿನ. ಆತ್ಮೀಯರ ಮನೆಯಲ್ಲಿ ವಿಶೇಷ ಸಮಾರಂಭಗಳಲ್ಲಿ ಭಾಗವಹಿಸುವಿರಿ. ಪತ್ರಿಕೋದ್ಯಮಿಗಳಿಗೆ ಬಿಡುವಿಲ್ಲದ ಕೆಲಸ. ಪಾದರಕ್ಷೆ ಮಾರಾಟಗಾರರಿಗೆ ಲಾಭ ಉಂಟಾಗುವುದು.

ತುಲಾ: ಲಾಭ ತರುವ ಅವಕಾಶ ನೀಡುವ ವ್ಯಕ್ತಿಗಳ ಸ್ನೇಹ ಸಂಪಾದಿಸುವಿರಿ. ಆದಾಯ ತೆರಿಗೆ ಇಲಾಖೆಯವರಿಗೆ ಲೆಕ್ಕ ಪತ್ರಗಳು ಸಮರ್ಪಕವಾಗಿ ಕಂಡು ಬರುವುದು. ಉದ್ಯೋಗಾಪೇಕ್ಷಿಗಳಿಗೆ ಗುತ್ತಿಗೆ ಆಧಾರಿತ ಉದ್ಯೋಗ ಸಿಗಲಿದೆ.

ವೃಶ್ಚಿಕ: ಮನೆಯಲ್ಲಿ ನಡೆಯಬೇಕಾಗಿರುವ ಮಂಗಳಕಾರ್ಯಕ್ಕೆ ವಿಘ್ನವಾಗದಂತೆ ದೇವರ ಮೊರೆ ಹೋಗಿ. ಇಂದು ಬಂಧುಗಳಲ್ಲಿ ಮಾಡಿದ ಲೇವಾದೇವಿ ವ್ಯವಹಾರವು ಬಹಳಷ್ಟು ಲಾಭದಾಯಕವಾಗಿರುವುದು.


ಧನು: ಆರ್ಥಿಕ ಸ್ಥಿತಿಯಲ್ಲಿ ಮತ್ತು ಉದ್ಯೋಗದಲ್ಲಿ ಏರಿಳಿತದ ನಡುವೆ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ ಇದೆ. ವಾಹನ ಮಾರಾಟಗಾರರಿಗೆ ಹಾಗೂ ರಿಪೇರಿ ಮಾಡುವವರಿಗೆ ಉದ್ಯೋಗದಲ್ಲಿ ಬಿಡುವಿಲ್ಲದ ಕಾರ್ಯ.

ಮಕರ: ಸ್ವ ಸಾಮರ್ಥ್ಯದ ಬಗ್ಗೆ ಈ ದಿನ ನಿಮಗೇ ಅರಿವಾಗುವುದು. ಉದ್ಯೋಗದಲ್ಲಿ ಸಿಗುವಂತಹ ವರ್ಗಾವಣೆಯ ಅವಕಾಶಗಳನ್ನು ಬಿಟ್ಟುಕೊಳ್ಳಬೇಡಿ. ಈ ದಿನ ಸರ್ವರಂಗದಲ್ಲೂ ಜಯಶಾಲಿಯ ಪಟ್ಟ ಹೊಂದುವ ಯೋಗ.

ಕುಂಭ: ಹೂವು-ಹಣ್ಣು, ತರಕಾರಿ ಮಾರಾಟಗಾರರಿಗೆ ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಲಾಭವನ್ನು ವ್ಯಾಪಾರದಲ್ಲಿ ಪಡೆದುಕೊಳ್ಳುವುದರಿಂದ ಸಂತೋಷ ಇರುವುದು. ಹಲವು ದಿನಗಳಿಂದ ಇದ್ದಂತಹ ಮಾನಸಿಕ ವ್ಯಥೆಗಳು ನಿವಾರಣೆಯಾಗುತ್ತದೆ.

ಮೀನ: ಋಣಬಾಧೆಯಿಂದ ಮುಕ್ತರಾಗಲು ಹೆಚ್ಚಿನ ಗಮನ ನೀಡಿ. ಆಸ್ತಿಗೆ ಸಂಬಂಧಿಸಿದಂತೆ ಕೌಟುಂಬಿಕ ಕಲಹಗಳು ಆಗಾಗ ಗೋಚರಕ್ಕೆ ಬಂದಾವು. ನ್ಯಾಯಾಲಯದ ಮೊರೆ ಹೋಗುವಂತಹ ಕೃತ್ಯಗಳು ನಡೆಯಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,595
ಇಂದಿನ ಅಂತ್ಯ	16,630
▲	35
ದಿನದ ಗರಿಷ್ಠ	16,694

ವಿನಿಮಯ ದರ

$ ಡಾಲರ್	76.60
£ ಪೌಂಡ್	100.42
€ ಯುರೊ	84.25
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹385
12 ಮೊಟ್ಟೆಗೆ ₹52
ಮೈಸೂರು
100 ಮೊಟ್ಟೆಗೆ ₹385

ಕೈಗಾರಿಕೆ: ಶೇ 1.3ರಷ್ಟು ಬೆಳವಣಿಗೆ



ನವದೆಹಲಿ (ಪಿಟಿಐ): ಗಣಿಗಾರಿಕೆ ಮತ್ತು ತಯಾರಿಕಾ ವಲಯದ ಉತ್ತಮ ಬೆಳವಣಿಗೆಯಿಂದಾಗಿ ದೇಶದ ಕೈಗಾರಿಕಾ ಉತ್ಪಾದನೆಯು ಜನವರಿಯಲ್ಲಿ ಶೇ 1.3ಕ್ಕೆ ಏರಿಕೆ ಆಗಿದೆ.

2021ರ ಜನವರಿಯಲ್ಲಿ ಕೈಗಾರಿಕಾ ಉತ್ಪಾದನಾ ಸೂಚ್ಯಂಕವು (ಐಐಪಿ) ಶೇ (–) ಶೇ 0.6ಕ್ಕೆ ಇಳಿಕೆ ಕಂಡಿತ್ತು ಎಂದು ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಮಾಹಿತಿ ನೀಡಿದೆ.

ಗಣಿಗಾರಿಕೆ ವಲಯದ ಬೆಳವಣಿಗೆಯು ಶೇ 2.4ರಿಂದ ಶೇ 2.8ಕ್ಕೆ ಏರಿಕೆ ಆಗಿದೆ. ಅದೇ ರೀತಿ ತಯಾರಿಕಾ ವಲಯದ ಬೆಳವಣಿಗೆಯು ಶೇ 0.9ರಿಂದ ಶೇ 1.1ಕ್ಕೆ ಏರಿಕೆ ಆಗಿದೆ. ಆದರೆ, ವಿದ್ಯುತ್ ಉತ್ಪಾದನೆ ಶೇ 5.5ರಿಂದ ಶೇ 0.9ಕ್ಕೆ ಕುಸಿತ ಕಂಡಿದೆ.

ಬಂಡವಾಳ ಸರಕು ಮತ್ತು ಗ್ರಾಹಕ ಬಳಕೆ ವಸ್ತುಗಳ ವಲಯಗಳ ಬೆಳವಣಿಗೆಯು ಇಳಿಕೆ ಕಂಡಿದೆ. ಐಐಪಿಗೆ ಶೇ 34ರಷ್ಟು ಕೊಡುಗೆ ನೀಡುವ ಪ್ರಾಥಮಿಕ ಸರಕುಗಳ ವಲಯವು ಶೇ 1.6ರಷ್ಟು ಬೆಳವಣಿಗೆ ಕಂಡಿದೆ. ಹಿಂದಿನ ವರ್ಷದ ಜನವರಿಯಲ್ಲಿ ಶೇ 0.7ರಷ್ಟು ಬೆಳವಣಿಗೆ ಕಂಡಿತ್ತು.

ಕೋವಿಡ್ ಕಾರಣದಿಂದಾಗಿ ಹಲವು ತಿಂಗಳವರೆಗೆ ಕುಸಿತ ಕಂಡಿದ್ದ ಐಐಪಿ ಬೆಳವಣಿಗೆಯು 2021ರ ಮಾರ್ಚ್ ತಿಂಗಳಿನಿಂದ ಸಕಾರಾತ್ಮಕ ಹಾದಿಯಲ್ಲಿ ಸಾಗುತ್ತಿದೆ.

ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜನವರಿ ಅವಧಿಯಲ್ಲಿ ಐಐಪಿ ಶೇ 12ರಿಂದ ಶೇ 13.7ಕ್ಕೆ ಏರಿಕೆ ಆಗಿದೆ.

ಸಂಕ್ಷಿಪ್ತ ಸುದ್ದಿ

‘ತೈಲ ದರ ಏರಿಕೆ; ಭಾರತದ ಮೇಲೆ ಕೆಟ್ಟ ಪರಿಣಾಮ’

ವಾಷಿಂಗ್ಟನ್ (ಪಿಟಿಐ): ಭಾರತವು ತನ್ನ ಆರ್ಥಿಕ ನಿರ್ವಹಣೆಯಲ್ಲಿ ಉತ್ತಮವಾಗಿದೆ. ಆದರೆ, ರಷ್ಯಾವು ಉಕ್ರೇನ್ ಮೇಲೆ ಆಕ್ರಮಣ ಮಾಡಿದ ನಂತರದಲ್ಲಿ ಕಚ್ಚಾತೈಲ ದರದಲ್ಲಿ ಆಗಿರುವ ಏರಿಕೆಯು ಭಾರತದ ಆರ್ಥಿಕತೆಯ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲೀನಾ ಜಾರ್ಜೀವಾ ಹೇಳಿದ್ದಾರೆ.

ಭಾರತದ ಆರ್ಥಿಕತೆಯ ಮೇಲೆ ಇಂಧನ ದರವು ಅತಿ ಹೆಚ್ಚಿನ ಪ್ರಭಾವ ಬೀರುತ್ತದೆ ಎಂದು ಅವರು ತಿಳಿಸಿದ್ದಾರೆ.

ಚಿನ್ನದ ದರ ಇಳಿಕೆ, ಬೆಳ್ಳಿ ಏರಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರ ಸತತ ಎರಡನೇ ದಿನವೂ ಇಳಿಕೆ ಕಂಡಿದೆ.

10 ಗ್ರಾಂ ಚಿನ್ನದ ದರ ಶುಕ್ರವಾರ ₹ 200ರಷ್ಟು ಕಡಿಮೆ ಆಗಿದ್ದು ₹ 53,033ರಂತೆ ಮಾರಾಟ ಗೊಂಡಿತು. ಬೆಳ್ಳಿ ಧಾರಣೆ ಕೆ.ಜಿಗೆ ₹ 193ರಷ್ಟು ಹೆಚ್ಚಾಗಿ ₹ 70,449ಕ್ಕೆ ತಲುಪಿತು.

ಐಪಿಒ ಮೌಲ್ಯಮಾಪನದ ವಿವರ ಕೇಳಿದ ಮಂಡಳಿ

ಐಪಿಒ: ಪರಿಶೀಲನೆ ಬಿಗಿಗೊಳಿಸಿದ ಸೆಬಿ



ನವದೆಹಲಿ (ರಾಯಿಟರ್ಸ್): ಆರಂಭಿಕ ಸಾರ್ವಜನಿಕ ಕೊಡುಗೆಗೆ (ಐಪಿಒ) ಸಿದ್ಧವಾಗುತ್ತಿರುವ ಕಂಪನಿಗಳ ಅರ್ಜಿಗಳ ಪರಿಶೀಲನೆ ಪ್ರಕ್ರಿಯೆಯನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಬಿಗಿಗೊಳಿಸಿದೆ. ಕಂಪನಿಗಳ ಮೌಲ್ಯಮಾಪನವನ್ನು ಹೇಗೆ ಮಾಡಲಾಯಿತು ಎಂಬ ವಿಚಾರವಾಗಿ ಕೆಲವು ಪ್ರಶ್ನೆಗಳನ್ನು ಸೆಬಿ ಕೇಳುತ್ತಿದೆ ಎಂದು ಮೂಲಗಳು ತಿಳಿಸಿವೆ.

ಐಪಿಒಗೆ ಸಿದ್ಧವಾಗಿರುವ ಕಂಪನಿಗಳು ಹೆಚ್ಚಿನ ಮಾಹಿತಿ ನೀಡಬೇಕು ಎಂಬ ಪ್ರಸ್ತಾವನೆಯನ್ನು ಸೆಬಿ ಹಿಂದಿನ ತಿಂಗಳು ಸಿದ್ಧಪಡಿಸಿತ್ತು. ಅಲ್ಲದೆ, ‘ಹೊಸ ಕಾಲದ ತಂತ್ರಜ್ಞಾನ ಕಂಪನಿಗಳು ಬಹುಕಾಲದವರೆಗೆ ನಷ್ಟದಲ್ಲಿ ಇರುತ್ತವೆ. ಇವು ಐಪಿಒಗೆ ಅರ್ಜಿ ಸಲ್ಲಿಸುತ್ತಿವೆ. ಹಣಕಾಸಿನ ವಿವರಗಳನ್ನು ಬಹಿರಂಗಪಡಿಸುವ ಸಾಂಪ್ರದಾಯಿಕ ವಿಧಾನಗಳು ಹೂಡಿಕೆದಾರರಿಗೆ ನೆರವಾಗಲಿಕ್ಕಿಲ್ಲ’ ಎಂದು ಸೆಬಿ ಅಭಿಪ್ರಾಯಪಟ್ಟಿತ್ತು.

ಪ್ರಸ್ತಾವ ಅಂತಿಮಗೊಳ್ಳುವುದಕ್ಕೂ ಮೊದಲೇ ಸೆಬಿ, ಈಚೆಗಿನ ವಾರಗಳಲ್ಲಿ ಹಲವು ಕಂಪನಿಗಳಿಗೆ ತಮ್ಮ ಹಣಕಾಸೇತರ ಮಾನದಂಡಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸುವಂತೆ ಸೂಚಿಸುತ್ತಿದೆ. ಅಲ್ಲದೆ, ಐಪಿಒ ಮೌಲ್ಯವನ್ನು ನಿಗದಿ ಮಾಡುವ ಸಂದರ್ಭದಲ್ಲಿ ಈ ಮಾನದಂಡಗಳನ್ನು ಯಾವ ರೀತಿಯಲ್ಲಿ ಪರಿಗಣಿಸಲಾಗಿದೆ ಎಂಬುದನ್ನು ವಿವರಿಸುವಂತೆಯೂ ಸೂಚಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಈ ವಿಚಾರವಾಗಿ ಸೆಬಿ ಪ್ರತಿಕ್ರಿಯೆ ಸಿಕ್ಕಿಲ್ಲ. ಸೆಬಿ ಕೇಳುತ್ತಿರುವ ಇಂತಹ ಪ್ರಶ್ನೆಗಳು ಫಾರ್ಮ್‌ಈಸಿ ಕಂಪನಿಗೂ ಎದುರಾಗಿವೆ ಎಂದು ಮೂಲಗಳು ಸ್ಪಷ್ಟಪಡಿಸಿವೆ. ಕಂಪನಿಯು ಐಪಿಒಗೆ ಸಜ್ಜಾಗುತ್ತಿದೆ.

ಪೇಟಿಎಂ ಕಂಪನಿಯು ಷೇರುಪೇಟೆಯಲ್ಲಿ ನೋಂದಾಯಿತ ಆದ ನಂತರದಲ್ಲಿ, ಕಂಪನಿಗಳ ಮೌಲ್ಯಮಾಪನದ ಬಗ್ಗೆ ಕಳವಳಗಳು ವ್ಯಕ್ತವಾಗಿದ್ದವು. ಪೇಟೆಯಲ್ಲಿ ಷೇರುಗಳ ವಹಿವಾಟು ಆರಂಭವಾದ ದಿನವೇ ಅದರ ಮೌಲ್ಯವು ಕುಸಿದಿತ್ತು. ಈಗ ಅದು ಐಪಿಒ ಸಂದರ್ಭದ ಮೌಲ್ಯಕ್ಕಿಂತ ಶೇಕಡ 64ರಷ್ಟು ಕಡಿಮೆ ಮಟ್ಟದಲ್ಲಿ ಷೇರುಪೇಟೆಯಲ್ಲಿ ವಹಿವಾಟು ನಡೆಸುತ್ತಿದೆ.

‘ಎಲ್‌ಐಸಿ ಐಪಿಒ: ಶೀಘ್ರವೇ ಅಂತಿಮ ದಾಖಲೆ ಪತ್ರ’



ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಐಪಿಒಗೆ ಸಂಬಂಧಿಸಿದ ಅಂತಿಮ ದಾಖಲೆ ಪತ್ರಗಳನ್ನು ಕೇಂದ್ರ ಸರ್ಕಾರವು ಶೀಘ್ರವೇ ‘ಸೆಬಿ’ಗೆ ಸಲ್ಲಿಸಲಿದೆ. ಇದರಲ್ಲಿ ಷೇರಿನ ಬೆಲೆ, ಪಾಲಿಸಿದಾರರು ಮತ್ತು ರಿಟೇಲ್ ಹೂಡಿಕೆದಾರರಿಗೆ ಇರುವ ರಿಯಾಯಿತಿ ಸೇರಿದಂತೆ ಕೆಲವು ಮಾಹಿತಿ ಇರಲಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಷ್ಯಾ – ಉಕ್ರೇನ್ ಸಂಘರ್ಷದಿಂದಾಗಿ ಮಾರುಕಟ್ಟೆಯು ಅಸ್ಥಿರವಾಗಿದೆ. ಹೀಗಾಗಿ ಕೇಂದ್ರ ಸರ್ಕಾರವು ಎಲ್‌ಐಸಿ ಐಪಿಒಗೆ ಕಾದು ನೋಡುವ ತಂತ್ರ ಅನುಸರಿಸುತ್ತಿದೆ.

ಕರಡು ದಾಖಲೆ ಪತ್ರಗಳಿಗೆ ಒಪ್ಪಿಗೆ ದೊರೆತಿದೆ. ಮುಂದಿನ ಹಂತದಲ್ಲಿ ಅಂತಿಮ ದಾಖಲೆ ಪತ್ರಗಳನ್ನು ಸಲ್ಲಿಸಬೇಕಿದೆ. ಇದರಲ್ಲಿ ಷೇರಿನ ಬೆಲೆ ಮತ್ತು ಎಷ್ಟು ಷೇರುಗಳು ಮಾರಾಟಕ್ಕೆ ಇರುತ್ತವೆ ಎನ್ನುವ ಮಾಹಿತಿ ಇರಲಿದೆ. ಪರಿಸ್ಥಿತಿಯನ್ನು ಗಮನಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಎಲ್‌ಐಸಿಯು ಫೆಬ್ರುವರಿ 13ರಂದು ಕರಡು ದಾಖಲೆ ಪತ್ರಗಳನ್ನು ಸೆಬಿಗೆ ಸಲ್ಲಿಸಿತ್ತು. ಮಾರ್ಚ್ 9ರಂದು ಸೆಬಿ ಅದಕ್ಕೆ ಒಪ್ಪಿಗೆ ನೀಡಿದೆ. ಕೇಂದ್ರ ಸರ್ಕಾರವು ಎಲ್‌ಐಸಿಯಲ್ಲಿ ಹೊಂದಿರುವ ಷೇರುಗಳಲ್ಲಿ ಶೇ 5ರಷ್ಟನ್ನು ಮಾರಾಟ ಮಾಡುವ ಮೂಲಕ ₹ 60 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ನಿರೀಕ್ಷೆ ಇಟ್ಟುಕೊಂಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	510
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಹೊಸನಗರ	
ಬಿಳಿಗೋಟು	19889-24009
ಚಾಲಿ	31199-36469
ಕೆಂಪುಗೋಟು	26099-34099
ರಾಶಿ	44299-46499
ಕುಮಟ	
ಚಿಪ್ಪು	25019-30109
ಕೋಕ	16019-26019
ಹಳೆಚಾಲಿ	42099-47399
ಹೊಸಚಾಲಿ	34019-39619
ಪುತ್ತೂರು	
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	23108-30809
ಚಾಲಿ	43499-43599
ಕೋಕ	20609-28339
ಹೊಸಚಾಲಿ	35899-39009
ಕೆಂಪುಗೋಟು	25609-38019
ರಾಶಿ	42499-46599
ತಟ್ಟಿಬೆಟ್ಟೆ	36889-45099
ಶಿರಸಿ	
ಬೆಟ್ಟೆ	12919-44209
ಬಿಳಿಗೋಟು	22899-32681
ಚಾಲಿ	31499-40409
ರಾಶಿ	39399-47509
ಯಲ್ಲಾಪುರ	
ಬಿಳಿಗೋಟು	26299-32899
ಕೋಕ	18899-29899
ಚಾಲಿ	35869-40311
ಕೆಂಪುಗೋಟು	26919-34390
ರಾಶಿ	46899-52919
ತಟ್ಟಿಬೆಟ್ಟೆ	38399-45819
ಶಿವಮೊಗ್ಗ	
ಬೆಟ್ಟೆ	47009-50599
ಗೊಬರಲು	19069-33859
ರಾಶಿ	43000-45658
ಸರಕು	51069-75393
ರಾಮನಗರ ರೇಷ್ಮೆ	
ಮಿಶ್ರತಳಿ	400-778
ದ್ವಿತಳಿ	667-997

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15750	15500	15600	224.20 ಸೆಂಟ್ಸ್
ಎಸಿ	7560	7700	8800	
ಆರ್‌ಪಿ	8250	8250	8500	ಲಂಡನ್
ಆರ್‌ಸಿ	4000	3900	3925	2093 ಡಾಲರ್ಸ್

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ಆರ್‌ಬಿಐ ನಿರ್ಬಂಧ

ಮುಂಬೈ (ಪಿಟಿಐ/ರಾಯಿಟರ್ಸ್): ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ಹೊಸ ಖಾತೆಗಳನ್ನು ತೆರೆಯುವುದನ್ನು ನಿಲ್ಲಿಸುವಂತೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೂಚಿಸಿದೆ. ಇದು ತಕ್ಷಣದಿಂದ ಜಾರಿಗೆ ಬರಬೇಕು ಎಂದು ಹೇಳಿದೆ.

ಪೇಮೆಂಟ್ಸ್ ಬ್ಯಾಂಕ್‌ನ ಐ.ಟಿ. ವ್ಯವಸ್ಥೆಯ ಆಮೂಲಾಗ್ರ ಪರಿಶೋಧನೆಗಾಗಿ ಐ.ಟಿ. ಕಂಪನಿಯೊಂದನ್ನು ನೇಮಕ ಮಾಡುವಂತೆಯೂ ಆರ್‌ಬಿಐ ತಾಕೀತು ಮಾಡಿದೆ. ‘ಐ.ಟಿ. ಪರಿಶೋಧನೆಯ ವರದಿಯನ್ನು ಪರಿಶೀಲಿಸಿದ ನಂತರ, ಆರ್‌ಬಿಐ ಕಡೆಯಿಂದ ನಿರ್ದಿಷ್ಟ ಒಪ್ಪಿಗೆ ದೊರೆತ ನಂತರ ಹೊಸದಾಗಿ ಗ್ರಾಹಕರನ್ನು ತನ್ನತ್ತ ಸೆಳೆಯಲು ಅವಕಾಶ ಕೊಡಲಾಗುತ್ತದೆ’ ಎಂದು ಆರ್‌ಬಿಐ ಪ್ರಕಟಣೆ ತಿಳಿಸಿದೆ.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ 2017ರ ಮೇ ತಿಂಗಳಿನಿಂದ ಕಾರ್ಯಾಚರಿಸುತ್ತಿದೆ.

ಪೇಟಿಎಂ ಕಂಪನಿಯ ಸಂಸ್ಥಾಪಕ ಆಗಿರುವ ವಿಜಯ್ ಶೇಖರ್ ಶರ್ಮ ಅವರು ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ನಲ್ಲಿ ಶೇ 51ರಷ್ಟು ಷೇರುಪಾಲು ಹೊಂದಿದ್ದಾರೆ. ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ನ ಮಾತೃಸಂಸ್ಥೆಯಾಗಿರುವ ಒನ್97 ಕಮ್ಯುನಿಕೇಷನ್ಸ್ ಷೇರುಪೇಟೆಯಲ್ಲಿ ನೋಂದಣಿ ಆದ ಕೆಲವೇ ತಿಂಗಳುಗಳಲ್ಲಿ ಈ ಬೆಳವಣಿಗೆ ನಡೆದಿದೆ.


ತಾಂತ್ರಿಕ ಸಮಸ್ಯೆಗಳ ಕಾರಣಕ್ಕಾಗಿ ಆರ್‌ಬಿಐ 2020ರ ಡಿಸೆಂಬರ್‌ನಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್ ವಿರುದ್ಧ ಕೆಲವು ಕಠಿಣ ಕ್ರಮಗಳನ್ನು ಜರುಗಿಸಿತ್ತು. ಈ ಬ್ಯಾಂಕ್ ಹೊಸದಾಗಿ ಡಿಜಿಟಲ್ ಉತ್ಪನ್ನಗಳನ್ನು ಅಥವಾ ಸೇವೆಗಳನ್ನು ಬಿಡುಗಡೆ ಮಾಡುವಂತಿಲ್ಲ, ಹೊಸದಾಗಿ ಕ್ರೆಡಿಟ್ ಕಾರ್ಡ್ ವಿತರಣೆ ಮಾಡುವಂತೆ ಇಲ್ಲ ಎಂದು ಆರ್‌ಬಿಐ ತಾಕೀತು ಮಾಡಿತ್ತು.

ಸೆಮಿಕಂಡಕ್ಟರ್ ಕೊರತೆ, ವಾಹನಗಳ ಬೆಲೆ ಹೆಚ್ಚಳ

ಪ್ರಯಾಣಿಕ ವಾಹನ ಸಗಟು ಮಾರಾಟ ಶೇ 23ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಸೆಮಿಕಂಡಕ್ಟರ್ ಚಿಪ್ ಕೊರತೆ, ತಯಾರಿಕಾ ವೆಚ್ಚ ಹೆಚ್ಚಳ ಹಾಗೂ ವಾಹನಗಳ ಬೆಲೆ ಏರಿಕೆಯ ಕಾರಣಗಳಿಂದಾಗಿ 2021ರ ಫೆಬ್ರುವರಿಗೆ ಹೋಲಿಸಿದರೆ 2022ರ ಫೆಬ್ರುವರಿಯಲ್ಲಿ ಪ್ರಯಾಣಿಕ ವಾಹನಗಳ ಸಗಟು ಮಾರಾಟವು ಶೇಕಡ 23ರಷ್ಟು ಇಳಿಕೆ ಆಗಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟ (ಎಸ್‌ಐಎಎಂ) ಶುಕ್ರವಾರ ತಿಳಿಸಿದೆ.

2021ರ ಫೆಬ್ರುವರಿಯಲ್ಲಿ 17.35 ಲಕ್ಷ ವಾಹನಗಳು ಮಾರಾಟ ಆಗಿದ್ದವು. 2022ರ ಫೆಬ್ರುವರಿಯಲ್ಲಿ 13.28 ಲಕ್ಷ ವಾಹನಗಳು ಮಾರಾಟ ಆಗಿವೆ ಎಂದು ಅದು ಮಾಹಿತಿ ನೀಡಿದೆ.



‘ಕೋವಿಡ್: ಭಾರತದಲ್ಲೇ ಹೆಚ್ಚು ಸಾವು’

ಲಂಡನ್/ನವದೆಹಲಿ (ಪಿಟಿಐ): 2020ರ ಜನವರಿಯಿಂದ 2021ರ ಡಿಸೆಂಬರ್‌ವರೆಗೆ ಕೋವಿಡ್‌ನಿಂದಾಗಿ ಭಾರದಲ್ಲಿ 40.7 ಲಕ್ಷ ಮಂದಿ ಸಾವಿಗೀಡಾಗಿದ್ದಾರೆ. ಇತರೆ ದೇಶಗಳಿಗಿಂತ ಭಾರತದಲ್ಲಿ ಅತಿಹೆಚ್ಚು ಮಂದಿ ಕೋವಿಡ್‌ಗೆ ಬಲಿಯಾಗಿದ್ದಾರೆ. ಅಲ್ಲದೆ ಭಾರತದಲ್ಲಿ ವರದಿಯಾಗಿದ್ದಕ್ಕಿಂತ ಸುಮಾರು 8 ಪಟ್ಟು ಮಂದಿ ಸೋಂಕಿನಿಂದ ಸಾವಿಗೀಡಾಗಿದ್ದಾರೆ ಎಂದು ಲ್ಯಾನ್ಸೆಟ್ ವಿಶ್ಲೇಷಣಾ ವರದಿ ತಿಳಿಸಿದೆ.

ಈ ವರದಿಯನ್ನು ಊಹಾತ್ಮಕ ಎಂದಿರುವ ಕೇಂದ್ರ ಆರೋಗ್ಯ ಇಲಾಖೆ, ಈ ಅಧ್ಯಯನ ವರದಿಯಲ್ಲಿ ಬೇರೆ-ಬೇರೆ ದೇಶಗಳಿಗೆ ಬೇರೆ ರೀತಿಯ ವಿಧಾನಗಳನ್ನು ಅನುಸರಿಸಲಾಗಿದೆ. ಉದಾಹರಣೆಗೆ ಭಾರತದಲ್ಲಿ ದಿನಪತ್ರಿಕೆಗಳ ವರದಿಗಳನ್ನು ಪರಿಗಣಿಸಲಾಗಿದೆ ಎಂದಿದೆ.

ಭಾರತದಲ್ಲಿ 4.89 ಲಕ್ಷ ಸೇರಿದಂತೆ ವಿಶ್ವದಾದ್ಯಂತ ಕೋವಿಡ್‌ಗೆ ಸುಮಾರು 60 ಲಕ್ಷ ಮಂದಿ ಬಲಿಯಾಗಿದ್ದಾರೆ ಎಂದು ವರದಿಗಳು ತಿಳಿಸಿವೆ. ಆದರೆ ಲ್ಯಾನ್ಸೆಟ್ ವರದಿ ಪ್ರಕಾರ ವಿಶ್ವದಲ್ಲಿ 1.8 ಕೋಟಿ ಮಂದಿ ಸಾವಿಗೀಡಾಗಿದ್ದಾರೆ. ಅಂದರೆ ವಿಶ್ವದಲ್ಲಿ ವರದಿಯಾಗಿದ್ದಕ್ಕಿಂತಲೂ 3 ಪಟ್ಟು ಹೆಚ್ಚು ಸಾವು ಸಂಭವಿಸಿದೆ.

ಮುಂಬೈ ಧಾರಣೆ

ಶೇಂಗಾ

11-3-2022

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10550-10600
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1620)
ಒಂದು ವಾರದ ಡೆಲಿವರಿ	1615 (1615)
ಸೋಯಾ ಕಚ್ಚಾ	1570 (1570)
ಪಾಮ್ ವಾರದ ಡೆಲಿವರಿ	1600(1600)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,600 (52,600)
ಬೆಳ್ಳಿ ಕೆ.ಜಿ 69,800 (69,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ





ಯುದ್ಧಪೀಡಿತ ಉಕ್ರೇನ್‌ನಿಂದ ನಾಗರಿಕರನ್ನು ಸುರಕ್ಷಿತವಾಗಿ ಸ್ಥಳಾಂತರಿಸಿದ 'ಆಪರೇಷನ್ ಗಂಗಾ'

ಮರಳಿ ಬಂದ ಭಾರತೀಯರ ಕೊನೆ ತಂಡ

ನವದೆಹಲಿ(ಪಿಟಿಐ): ಯುದ್ಧಪೀಡಿತ ಉಕ್ರೇನ್‌ನ ಸುಮಿ ನಗರದಿಂದ ತೆರವುಗೊಳಿಸಲ್ಪಟ್ಟ ಭಾರತೀಯ ವಿದ್ಯಾರ್ಥಿಗಳಿದ್ದ ಕೊನೆಯ ತಂಡ ಶುಕ್ರವಾರ ದೆಹಲಿಗೆ ಬಂದಿದೆ.

ಪೋಷಕರು ತಮ್ಮ ಮಕ್ಕಳನ್ನು ಕಾಣಲು ಐದಾರು ತಾಸು ವಿಮಾನ ನಿಲ್ದಾಣದಲ್ಲಿ ಕಾತರದಿಂದ ಕಾಯುತ್ತಿದ್ದರು. ಯಾತನಾಮಯ ಪರಿಸ್ಥಿತಿಯಿಂದ ಪಾರಾದ ವಿದ್ಯಾರ್ಥಿಗಳು ತಾಯ್ನಾಡಿಗೆ ಬಂದು ಸೇರುತ್ತಿದ್ದಂತೆ ತಮ್ಮ ಹೆತ್ತವರನ್ನು ಕಂಡು ಕಣ್ಣೀರಾದರು. ಪೋಷಕರೂ ಅಷ್ಟೇ, ಯುದ್ಧಭೂಮಿಯಿಂದ ಜೀವಂತವಾಗಿ ಮರಳಿ ಬಂದ ಮಕ್ಕಳನ್ನು ಕಂಡು ಆಲಂಗಿಸಿ, ಆನಂದಬಾಷ್ಪ ಸುರಿಸಿದರು.

ಉಕ್ರೇನಿನಿಂದ ವಾಪಸಾದ ವಿದ್ಯಾರ್ಥಿಗಳು ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಗೇಟ್ ಸಂಖ್ಯೆ 4 ಮತ್ತು 5ಕ್ಕೆ ಬರುತ್ತಿದ್ದಂತೆ ಅವರಿಗೆ ಪೋಷಕರು ಮತ್ತು ಕುಟುಂಬ ಸದಸ್ಯರು ಹೂವಿನ ಹಾರ ಹಾಕಿ, ಹೂಗುಚ್ಛ ನೀಡಿ, ಕೆಲವರು ಸಿಹಿ ಹಂಚಿ ಸಂಭ್ರಮದಿಂದ ಸ್ವಾಗತಿಸಿದರು.

ತಮ್ಮ ಪುತ್ರ ಧೀರಜ್‌ಕುಮಾರ್ ಅವರನ್ನು ಸ್ವಾಗತಿಸಲು ಅವರ ತಂದೆ ಲಲಿತ್ ಕುಮಾರ್ ಹಿಮಾಚಲಪ್ರದೇಶದ ಚಂಬದಿಂದ 600 ಕಿ.ಮೀ. ದೂರ ಕ್ರಮಿಸಿ ಬಂದಿದ್ದರು. ಅವರು ಮಧ್ಯರಾತ್ರಿಯಿಂದಲೇ ವಿಮಾನ ನಿಲ್ದಾಣದಲ್ಲಿ ಕಾದು ಕುಳಿತಿದ್ದರು. ಧೀರಜ್, ತನ್ನ ಹೆತ್ತವರು ಮತ್ತು ಸಹೋದರಿಯನ್ನು ಕಂಡೊಡನೆ ಅವರನ್ನು ಬಿಗಿದಪ್ಪಿಕೊಂಡು ಬಿಕ್ಕಿಬಿಕ್ಕಿ ಅತ್ತರು. ಲಲಿತ್ ಕುಮಾರ್, ತಮ್ಮ ಮಗನಿಗೆ ಹೂವಿನ ಹಾರ ಹಾಕಿ, ಅಲ್ಲಿ ನೆರೆದಿದ್ದವರೆಲ್ಲರಿಗೂ ಸಿಹಿ ಹಂಚಿ ಸಂಭ್ರಮಿಸಿದರು.

ಇಂಡಿಗೊ ವಿಮಾನದಲ್ಲಿ ಬಂದಿಳಿದ ಮತ್ತೊಬ್ಬ ವಿದ್ಯಾರ್ಥಿನಿ ಇಷಿತಾ ಪಂಡಿತಾ ಅವರನ್ನು ಕಾಣಲು ಅವರ ಸಹೋದರ ಐದು ತಾಸು ಕಾತರದಿಂದ ಕಾಯುತ್ತಿದ್ದರು.

ಮತ್ತೊಬ್ಬ ವಿದ್ಯಾರ್ಥಿ ತಾನ್ವಿ ಚೌಧರಿ ತನ್ನನ್ನು ಸ್ವಾಗತಿಸಲು ಉತ್ತರಾಖಂಡದ ರುದ್ರಪುರದಿಂದ ಬಂದಿದ್ದ ತನ್ನ ಅಣ್ಣನನ್ನು ಎಷ್ಟು ಬೇಗ ಕಾಣುವೆ ಎನ್ನುವ ಕಾತರದಿಂದ ಓಡೋಡಿ ಹೋಗಿ ತಬ್ಬಿಕೊಂಡು ಬಿಕ್ಕಿಬಿಕ್ಕಿ ಅತ್ತರು.

ದೇಶಕ್ಕೆ ಮರಳಿ ಬಂದ ಕೊನೆ ತಂಡದಲ್ಲಿ ಉತ್ತರಪ್ರದೇಶ, ಉತ್ತರಾಖಂಡ, ಛತ್ತೀಸಗಡ, ರಾಜಸ್ಥಾನ, ಗುಜರಾತ್, ಪಂಜಾಬ್ ಹಾಗೂ ಹರಿಯಾಣದ ವಿದ್ಯಾರ್ಥಿಗಳಿದ್ದರು.

ಈಶಾನ್ಯ ಉಕ್ರೇನ್ ಸುಮಿ ನಗರದಿಂದ ತೆರವುಗೊಳಿಸಿದ್ದ 600 ಭಾರತೀಯ ವಿದ್ಯಾರ್ಥಿಗಳನ್ನು ಹೊತ್ತ ಮೂರು ವಿಮಾನಗಳು ಪೋಲೆಂಡ್‌ನ ಜೆಜವ್ ಮತ್ತು ಇಸ್ತಾನ್‌ಬುಲ್‌ನ ಪಿಟ್‌ಸ್ಟಾಪ್‌ನಿಂದ ಶುಕ್ರವಾರ ಭಾರತಕ್ಕೆ ಸುರಕ್ಷಿತವಾಗಿ ಬಂದಿಳಿದವು.

ಜೆಜವ್‌ನಿಂದ ಹೊರಟಿದ್ದ ಭಾರತೀಯ ವಾಯು ಪಡೆಯ ವಿಮಾನವು ಶುಕ್ರವಾರ ಮಧ್ಯಾಹ್ನ 12.15ಕ್ಕೆ ಗಾಜಿಯಾಬಾದ್‌ನ ಹಿಂಡನ್ ವಾಯುನೆಲೆಯಲ್ಲಿ ಇಳಿಯಿತು. ಇಸ್ತಾನ್‌ಬುಲ್‌ನ ಪಿಟ್‌ಸ್ಟಾಪ್‌ನಿಂದ ಹೊರಟಿದ್ದ ಇಂಡಿಗೊ ವಿಮಾನವು ದೆಹಲಿ ವಿಮಾನ ನಿಲ್ದಾಣದಲ್ಲಿ ಮಧ್ಯಾಹ್ನ 12.20ಕ್ಕೆ ಇಳಿಯಿತು ಎಂದು ಅಧಿಕಾರಿಗಳು ತಿಳಿಸಿದರು.

ಇದಕ್ಕೂ ಮೊದಲು, ಗುರುವಾರ ರಾತ್ರಿ 11.30ರ ಸುಮಾರಿಗೆ (ಭಾರತೀಯ ಕಾಲಮಾನ) ಜೆಜವ್‌ನಿಂದ ಹೊರಟಿದ್ದ ಏರ್ ಇಂಡಿಯಾ ವಿಮಾನ 240 ವಿದ್ಯಾರ್ಥಿಗಳನ್ನು ಹೊತ್ತು, ಶುಕ್ರವಾರ ಬೆಳಿಗ್ಗೆ 5.45ಕ್ಕೆ ದೆಹಲಿಗೆ ಬಂದಿಳಿಯಿತು.

ರಷ್ಯಾ ಸೇನಾ ಕಾರ್ಯಾಚರಣೆಯಿಂದಾಗಿ ಫೆಬ್ರುವರಿ 24ರಿಂದ ಉಕ್ರೇನ್ ವಾಯುಪ್ರದೇಶ ಮುಚ್ಚಲಾಗಿದೆ. ಇದರಿಂದಾಗಿ ಯುದ್ಧಪೀಡಿತ ದೇಶದ ನೆರೆಯ ರಾಷ್ಟ್ರಗಳಾದ ರೊಮೇನಿಯಾ, ಹಂಗೆರಿ, ಸ್ಲೋವಾಕಿಯಾ ಮತ್ತು ಪೋಲೆಂಡ್‌ನಿಂದ ಭಾರತೀಯ ನಾಗರಿಕರನ್ನು 'ಆಪರೇಷನ್ ಗಂಗಾ' ಕಾರ್ಯಾಚರಣೆಯಡಿ ಭಾರತಕ್ಕೆ ಕರೆತರಲಾಗಿದೆ.



ಯುದ್ಧಪೀಡಿತ ಉಕ್ರೇನ್ ನಗರದ ಸುಮಿಯಿಂದ ಸ್ಥಳಾಂತರಗೊಂಡು ಐಎಎಫ್ ವಿಮಾನದಲ್ಲಿ ಶುಕ್ರವಾರ ಗಾಜಿಯಾಬಾದ್‌ನ ಹಿಂಡನ್ ವಾಯುನೆಲೆಗೆ ಬಂದಿಳಿದ ವಿದ್ಯಾರ್ಥಿನಿ ವರದಾ ಲಕ್ಷ್ಮಿ ತನ್ನ ಬೆಕ್ಕಿನೊಂದಿಗೆ ಸಂತಸದ ನಗು ಬೀರಿದರು– ಪಿಟಿಐ ಚಿತ್ರ

'ಭಾರತೀಯರ ರಕ್ಷಣೆಗೆ ಸಹಕರಿಸಿದವರಿಗೆ ಕೃತಜ್ಞತೆ'

ನವದೆಹಲಿ(ಪಿಟಿಐ): ಆಪರೇಷನ್ ಗಂಗಾ ಮೂಲಕ ಯುದ್ಧಪೀಡಿತ ಉಕ್ರೇನ್‌ನ ಹಲವು ನಗರಗಳಲ್ಲಿ ಸಿಲುಕಿದ್ದ ಭಾರತೀಯ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲು ನೆರವಾದ ಉಕ್ರೇನ್, ರಷ್ಯಾ ಮತ್ತು ಇತರ ಹಲವು ದೇಶಗಳಿಗೆ ಕೇಂದ್ರ ಸರ್ಕಾರ ಕೃತಜ್ಞತೆ ಸಲ್ಲಿಸಿದೆ.

ಈ ಸಂಬಂಧ ಶುಕ್ರವಾರ ಟ್ವೀಟ್ ಮಾಡಿರುವ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು, 'ಈಶಾನ್ಯ ಭಾಗದ ಸುಮಿ ನಗರದಲ್ಲಿದ್ದ ಭಾರತೀಯ ವಿದ್ಯಾರ್ಥಿಗಳನ್ನು ರಕ್ಷಿಸುವುದು ಸವಾಲಿನ ಕೆಲಸವೇ ಆಗಿತ್ತು. ಆದರೆ ಉಕ್ರೇನ್, ಉಕ್ರೇನ್‌ನ ಸುತ್ತಮುತ್ತಲ ದೇಶಗಳಾದ ರೊಮೇನಿಯಾ, ಹಂಗೆರಿ, ಪೋಲೆಂಡ್, ಸ್ಲೋವಾಕಿಯಾ ಹಾಗೂ ಮೊಲ್ಡೊವಾ ದೇಶಗಳು ನೀಡಿದ ಸಹಕಾರದಿಂದಾಗಿ ಅಪರೇಷನ್ ಗಂಗಾ ಕಾರ್ಯಾಚರಣೆ ಮೂಲಕ ಭಾರತೀಯರನ್ನು ಸ್ವದೇಶಕ್ಕೆ ಕರೆತರುವಲ್ಲಿ ಯಶಸ್ವಿಯಾಗಿದ್ದೇವೆ. ಇದಕ್ಕಾಗಿ ಈ ಎಲ್ಲಾ ದೇಶಗಳಿಗೂ ಕೃತಜ್ಞತೆಗಳು' ಎಂದು ಹೇಳಿದ್ದಾರೆ.

ಫೆ.26ರಂದು ಆರಂಭಿಸಲಾಗಿದ್ದ ಆಪರೇಷನ್ ಗಂಗಾ ಕಾರ್ಯಾಚರಣೆ ಮೂಲಕ ಒಟ್ಟಾರೆ 18 ಸಾವಿರ ಭಾರತೀಯರನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರಲಾಗಿದೆ. ಈ ಮಹತ್ವದ ಕಾರ್ಯಕ್ಕೆ ಹಗಲಿರುಳು ದಣಿವರಿಯದೆ ಶ್ರಮಿಸಿದ ಸರ್ಕಾರೇತರ ಸಂಸ್ಥೆಗಳು, ಸ್ವಯಂಸೇವಕರು, ಕಾರ್ಪೊರೇಟ್ ಸಂಸ್ಥೆಗಳು, ವಿಮಾನಯಾನ ಸಂಸ್ಥೆಗಳು ಹಾಗೂ ಭಾರತದ ವಾಯುಸೇನೆಗೆ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.



ಎಸ್ ಜೈಶಂಕರ್

ಯುದ್ಧಪೀಡಿತ ಉಕ್ರೇನ್ ಸ್ಥಿತಿಗೆ ಚೀನಾ ಕಳವಳ

ಬೀಜಿಂಗ್(ಪಿಟಿಐ): ಯುದ್ಧಪೀಡಿತ ಉಕ್ರೇನ್‌ನಲ್ಲಿ ಹದಗೆಡುತ್ತಿರುವ ಪರಿಸ್ಥಿತಿ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಚೀನಾ, ಶಾಂತಿ ಪುನರ್ ಸ್ಥಾಪನೆಗೆ ನೆರವಾಗುವ ನಿಟ್ಟಿನಲ್ಲಿ ಧನಾತ್ಮಕ ಪಾತ್ರ ವಹಿಸಿಕೊಳ್ಳುವುದಾಗಿ ಹೇಳಿದೆ. ಆದರೆ ರಷ್ಯಾ ಮೇಲೆ ಅಮೆರಿಕ ಮತ್ತು ಯುರೋಪ್ ದೇಶಗಳು ಹೇರಿರುವ ಆರ್ಥಿಕ ನಿರ್ಬಂಧಗಳನ್ನು ವಿರೋಧಿಸಿದೆ.

ರಷ್ಯಾ ಮೇಲಿನ ಅಮೆರಿಕ ಮತ್ತು ಯುರೋಪ್ ದೇಶಗಳ ನಿರ್ಬಂಧದಿಂದಾಗಿ ಈಗಾಗಲೇ ಕೊರೊನಾ ಬಿಕ್ಕಟ್ಟಿನಿಂದ ಚೇತರಿಸಿಕೊಳ್ಳುತ್ತಿರುವ ವಿಶ್ವ ಆರ್ಥಿಕತೆಗೆ ದೊಡ್ಡ ಹಾನಿಯಾಗಲಿದೆ ಎಂದು ಚೀನಾ ಹೇಳಿದೆ.



ಲಿ ಕಿಕ್ವಿಯಾಂಗ್

ಚೀನಾ ಸಂಸತ್ತಿನ ವಾರ್ಷಿಕ ಅಧಿವೇಶನದ ಕೊನೆ ದಿನವಾದ ಶುಕ್ರವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಚೀನಾದ ಪ್ರಧಾನಿ ಲಿ ಕಿಕ್ವಿಯಾಂಗ್ ಅವರು, ಉಕ್ರೇನ್‌ನಲ್ಲಿ ಸೃಷ್ಟಿಯಾದ ಮಾನವೀಯ ಬಿಕ್ಕಟ್ಟು ನಿಯಂತ್ರಣಕ್ಕಾಗಿ ತಟಸ್ಥ ನೀತಿ ಅನುಸರಿಸಬೇಕು ಎಂದು ಹೇಳಿದರು.

ಇನ್ನು ಉಕ್ರೇನ್ ಮೇಲೆ ದಾಳಿ ನಡೆಸುತ್ತಿರುವ ರಷ್ಯಾವನ್ನು ಚೀನಾ ಟೀಕಿಸುತ್ತಿಲ್ಲ ಎಂಬ ಪ್ರಶ್ನೆಗೆ, ಈ ಎರಡೂ ದೇಶಗಳು ಶಾಂತಿ ಮಾತುಕತೆಗೆ ಮುಂದಾಗುವ ನಿಟ್ಟಿನಲ್ಲಿ ಸಹಕಾರ ನೀಡಬೇಕು. ಶೀಘ್ರದಲ್ಲೇ ಉಕ್ರೇನ್‌ನಲ್ಲಿ ಶಾಂತಿ ಮರುಕಳಿಸಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.


ದೇಶದ ಸಾರ್ವಭೌಮತ್ವ ಮತ್ತು ಪ್ರಾಂತೀಯ ಸಮಗ್ರತೆಯನ್ನು ಗೌರವಿಸಬೇಕು. ದೇಶಗಳ ಭದ್ರತೆ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದರು. ಉಕ್ರೇನ್ ನ್ಯಾಟೊ ಒಕ್ಕೂಟದ ಭಾಗವಾಗಬಹುದು ಎಂಬ ರಷ್ಯಾದ ಕಳವಳವನ್ನು ಬೆಂಬಲಿಸಿದರು.

328 ಕ್ರೂಸ್ ಕ್ಷಿಪಣಿ ಉಡಾಯಿಸಿದ ರಷ್ಯಾ

ಎಲ್‌ವಿವ್(ರಾಯಿಟರ್ಸ್): ಉಕ್ರೇನ್ ಮೇಲೆ ಆಕ್ರಮಣ ಆರಂಭವಾದಾಗಿನಿಂದ ಈವರೆಗೆ ರಷ್ಯಾದ ಸೇನೆಯು ಉಕ್ರೇನ್ ಪ್ರಮುಖ ನಗರಗಳು, ಪಟ್ಟಣಗಳು ಮತ್ತು ಗ್ರಾಮಗಳನ್ನು ಗುರಿಯಾಗಿಸಿ 328 ಕ್ರೂಸ್ ಕ್ಷಿಪಣಿಗಳ ದಾಳಿ ನಡೆಸಿದೆ ಎಂದು ಉಕ್ರೇನ್ ಸೇನಾಪಡೆಗಳ ಮುಖ್ಯಸ್ಥ ವೆಲೇರಿ ಝಲುಝ್ನಿ ಆರೋಪಿಸಿದ್ದಾರೆ. ರಷ್ಯಾ ಅಧ್ಯಕ್ಷ ಪುಟಿನ್ ಅವರ ಈ ಅಪರಾಧವು ಅಂತರರಾಷ್ಟ್ರೀಯ ಮಾನವೀಯ ಕಾನೂನುಗಳ ಉಲ್ಲಂಘನೆಯಾಗಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಾತುಕತೆಯಲ್ಲಿ ಸಕಾರಾತ್ಮಕ ಬದಲಾವಣೆ ಆಗಿದೆ: ಪುಟಿನ್

ಮಾಸ್ಕೊ(ಎಎಫ್‌ಪಿ): 'ಉಕ್ರೇನ್ ಮೇಲೆ ವಿಶೇಷ ಮಿಲಿಟರಿ ಕಾರ್ಯಾಚರಣೆ ಕೈಗೊಂಡ ಎರಡು ವಾರಗಳಲ್ಲಿ ಉಭಯ ರಾಷ್ಟ್ರಗಳ ನಡುವಿನ ಮಾತುಕತೆಗಳಲ್ಲಿ ಕೆಲವು ಸಕಾರಾತ್ಮಕ ಬದಲಾವಣೆಗಳು ಆಗಿವೆ' ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಶುಕ್ರವಾರ ಹೇಳಿದ್ದಾರೆ.



ಮಾಸ್ಕೊದಲ್ಲಿ ಪುಟಿನ್ ಟೆಲಿವಿಷನ್ ಮೂಲಕ ಬೆಲರೂಸ್ ಅಧ್ಯಕ್ಷ ಅಲೆಕ್ಸಾಂಡರ್ ಲುಕಾಶೆಂಕೊ ಅವರೊಂದಿಗೆ ಸಭೆ ನಡೆಸಿದರು.

'ಕೆಲವು ಸಕಾರಾತ್ಮಕ ಬದಲಾವಣೆಗಳಾಗಿವೆ. ನಮ್ಮ ಕಡೆಯ ಸಮಾಲೋಚಕರು ಈ ಬಗ್ಗೆ ನನಗೆ ವರದಿ ಸಲ್ಲಿಸಿದ್ದಾರೆ. ಮಾತುಕತೆಗಳು ಈಗ ಪ್ರತಿ ದಿನವೂ ನಡೆಯುತ್ತಿವೆ' ಎಂದು ಪುಟಿನ್, ಲುಕಾಶೆಂಕೊಗೆ ತಿಳಿಸಿದರು.

ಸಂಧಾನದ ಪ್ರತಿ ಬೆಳವಣಿಗೆಯ ಮಾಹಿತಿಯನ್ನು ಮಿತ್ರ ರಾಷ್ಟ್ರ ಬೆಲರೂಸ್ ಜತೆ ಹಂಚಿಕೊಳ್ಳುವುದಾಗಿ ಪುಟಿನ್, ಲುಕಾಶೆಂಕೊಗೆ ಭರವಸೆ ನೀಡಿದರು.

ಯುದ್ಧ ಕೊನೆಗೊಳಿಸಲು ಉಕ್ರೇನ್ ಮತ್ತು ರಷ್ಯಾದ ಸಂಧಾನಕಾರರ ನಡುವೆ ಹಲವು ಸುತ್ತಿನ ಮಾತುಕತೆಗಳು ನಡೆದಿವೆ.

ಉಕ್ರೇನ್ ಮೇಲೆ ದಾಳಿ ತೀವ್ರಗೊಳಿಸಿದ ರಷ್ಯಾ



ಉಕ್ರೇನ್‌ನ ನಿಪ್ರೊ ನಗರದ ಮೇಲೆ ರಷ್ಯಾ ಪಡೆಗಳು ಶುಕ್ರವಾರ ನಡೆಸಿದ ವಾಯು ದಾಳಿ ಮತ್ತು ಶೆಲ್ ದಾಳಿಗೆ ಶೂ ಕಾರ್ಖಾನೆ ಸುಟ್ಟು ಭಸ್ಮವಾಯಿತು– ಎಎಫ್‌ಪಿ ಚಿತ್ರ

ಕೀವ್ (ಎಎಫ್‌ಪಿ): ಉಕ್ರೇನ್ ಮೇಲೆ ಆಕ್ರಮಣ ನಡೆಸುತ್ತಿರುವ ರಷ್ಯಾ ಪಡೆಗಳು ಶುಕ್ರವಾರ ಉಕ್ರೇನ್‌ನ ಕೇಂದ್ರಸ್ಥಾನದಲ್ಲಿರುವ ನಿಪ್ರೊ ನಗರದಲ್ಲಿ ನಾಗರಿಕರನ್ನು ಗುರಿಯಾಗಿಸಿ ದಾಳಿ ನಡೆಸಿದವು. ರಾಜಧಾನಿ ಕೀವ್ ವಶಕ್ಕಾಗಿ ವಾಯು ದಾಳಿಯನ್ನೂ ತೀವ್ರಗೊಳಿಸಿರುವ ರಷ್ಯಾ ಪಡೆಗಳು, ಕೀವ್ ನಗರಕ್ಕೆ ಹತ್ತಿರವಾಗುತ್ತಿವೆ.

ರಾಜಧಾನಿಯನ್ನು ರಕ್ಷಿಸಿಕೊಳ್ಳಲು ಇಡೀ ನಗರವನ್ನು ಕೋಟೆಯಂತೆ ಪರಿವರ್ತಿಸಲಾಗಿದೆ ಎಂದು ಉಕ್ರೇನ್ ಅಧಿಕಾರಿಗಳು ಹೇಳಿದ್ದಾರೆ.

ಉಕ್ರೇನ್‌ನ ಪ್ರಮುಖ ಮೂರು ನಗರಗಳನ್ನು ಸುತ್ತುವರಿದಿರುವ ರಷ್ಯಾ ಪಡೆಗಳು, ಕೀವ್‌ನ ಉತ್ತರ ಮತ್ತು ಪಶ್ಚಿಮದ ಪ್ರದೇಶಗಳ ಕಡೆಗೆ ನುಗ್ಗುತ್ತಿವೆ. ಕೆಲವು ಉಪನಗರಗಳಲ್ಲಿ ಭಾರಿ ಬಾಂಬ್ ದಾಳಿ ನಡೆಸಿವೆ ಎಂದು ಉಕ್ರೇನ್ ಸೇನೆ ಹೇಳಿದೆ.

ಪೂರ್ವ ಉಕ್ರೇನ್ ಇಝಿಯಂ ನಗರದ ಬಳಿ ಮನೋವೈದ್ಯಕೀಯ ಆಸ್ಪತ್ರೆ ಮೇಲೂ ದಾಳಿ ನಡೆದಿದೆ. ಆದರೆ, ಯಾರಿಗೂ ಅಪಾಯವಾಗಿಲ್ಲ. ಈ ಆಸ್ಪತ್ರೆಯಲ್ಲಿದ್ದ ಸಿಬ್ಬಂದಿ ಮತ್ತು ರೋಗಿಗಳನ್ನು ಮುಂಜಾಗ್ರತೆಯಿಂದ ಬಾಂಬ್ ಶೆಲ್ಟರ್‌ಗೆ ಕಳಿಸಲಾಗಿತ್ತು ಎಂದು ಉಕ್ರೇನಿನ ತುರ್ತು ಸೇವೆಗಳ ವಿಭಾಗ ಹೇಳಿದೆ.

ಇರ್ಪಿನ್, ಬುಕಾ ಸೇರಿ ವಾಯುವ್ಯದಲ್ಲಿರುವ ಉಪನಗರಗಳ ಮೇಲೆ ಭಾರಿ ಬಾಂಬ್ ದಾಳಿ ನಡೆದಿದೆ. ಪ್ರತಿ ಬೀದಿ, ಪ್ರತಿ ಕಟ್ಟಡ, ಪ್ರತಿ ತಪಾಸಣಾ ಕೇಂದ್ರವು ದಾಳಿಗೆ ತುತ್ತಾಗಿವೆ.

ರಷ್ಯಾ ಮತ್ತು ಉಕ್ರೇನ್ ವಿದೇಶಾಂಗ ಸಚಿವರ ನಡುವೆ ಗುರುವಾರ ಟರ್ಕಿಯ ಅಂಟಾಲಿಯಾದಲ್ಲಿ ಮೊದಲ ಬಾರಿ ನಡೆದ ಉನ್ನತ ಮಟ್ಟದ ಮಾತುಕತೆಯೂ ಫಲ ನೀಡಿರಲಿಲ್ಲ. ಇದರ ಬೆನ್ನಲ್ಲೇ ರಷ್ಯಾ ಪಡೆಗಳು ದಾಳಿಯನ್ನು ಮತ್ತಷ್ಟು ತೀವ್ರಗೊಳಿಸಿವೆ. ಬಾಂಬ್, ಕ್ಷಿಪಣಿ, ಶೆಲ್ ದಾಳಿಯಿಂದ ಮರಿಯುಪೋಲ್ ಸೇರಿದಂತೆ ಉಕ್ರೇನ್‌ನ ಹಲವು ನಗರಗಳು ಹೊತ್ತಿ ಉರಿಯುತ್ತಿವೆ. ಯುದ್ಧದ ಬೆಂಕಿಯ ಕೆನ್ನಾಲಿಗೆಯಡಿ ಲಕ್ಷಾಂತರ ನಾಗರಿಕರು ಸಿಲುಕಿಕೊಂಡಿದ್ದಾರೆ. ಜೀವ ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ.

ಶುಕ್ರವಾರ ನಸುಕಿನಲ್ಲಿ ರಷ್ಯಾದ ಯುದ್ಧ ವಿಮಾನಗಳು ನಿಪ್ರೊ ನಗರದ ಮೇಲೆ ಮೊದಲ ಬಾಂಬ್ ದಾಳಿ ನಡೆಸಿದವು. ಇದರಿಂದ ಒಬ್ಬ ವ್ಯಕ್ತಿ ಮೃತಪಟ್ಟರು ಎಂದು ತುರ್ತು ಸೇವೆ ಸಚಿವಾಲಯ ತಿಳಿಸಿದೆ.

ಶಿಶುವಿಹಾರ, ಅಪಾರ್ಟ್‌ಮೆಂಟ್ ಕಟ್ಟಡ ಮತ್ತು ಶೂ ಫ್ಯಾಕ್ಟರಿಯನ್ನು ಗುರಿಯಾಗಿಸಿಕೊಂಡು ರಷ್ಯಾ ಯುದ್ಧ ವಿಮಾನಗಳು ಬಾಂಬ್ ದಾಳಿ ಮಾಡಿವೆ. ಉಕ್ರೇನ್‌ನ ವಾಯುವ್ಯದ ಲಟ್‌ಸ್ಕ್ ವಾಯುನೆಲೆ ಮೇಲೆ ರಷ್ಯಾದ ಯುದ್ಧ ವಿಮಾನಗಳು ನಡೆಸಿರುವ ಬಾಂಬ್ ದಾಳಿಯಿಂದ ಇಬ್ಬರು ಉಕ್ರೇನ್ ಸೈನಿಕರು ಸಾವನ್ನಪ್ಪಿದ್ದು, ಆರು ಮಂದಿ ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ರಾಜಧಾನಿಯ ಪಶ್ಚಿಮ ಮತ್ತು ವಾಯವ್ಯದತ್ತ ಪಡೆಗಳನ್ನು ನುಗ್ಗಿಸುತ್ತಿರುವ ರಷ್ಯಾ ಕೀವ್‌ಗೆ ದಿಗ್ಬಂಧನ ವಿಧಿಸಲು ಪ್ರಯತ್ನಿಸುತ್ತಿದೆ. ಇದರಿಂದ ಬ್ರೊವರಿ ನಗರಕ್ಕೂ ಅಪಾಯವಿದೆ ಎಂದು ಉಕ್ರೇನ್ ಸೇನೆ ಹೇಳಿದೆ.

'ಕೆಪಿಎಸ್‌ಸಿ: ಅಂಕ ಕಡಿತ ಸಂವಿಧಾನಬಾಹಿರ'

'ಸಾಂವಿಧಾನಿಕ ಸಂಸ್ಥೆಗಳ ಮೇಲೆ ಸರ್ಕಾರದ ಸವಾರಿ' –ಸಿದ್ದರಾಮಯ್ಯ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ಆಯ್ಕೆಗಾಗಿ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸುವ ಪರೀಕ್ಷೆಯಲ್ಲಿನ ವ್ಯಕ್ತಿತ್ವ ಪರೀಕ್ಷೆಯ (ಸಂದರ್ಶನ) ಅಂಕಗಳನ್ನು 25ಕ್ಕೆ ಇಳಿಸುವ ರಾಜ್ಯ ಸರ್ಕಾರದ ತೀರ್ಮಾನ ಸಂವಿಧಾನಬಾಹಿರ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಈ ಕುರಿತು ಪತ್ರ ಬರೆದಿರುವ ಅವರು, 'ಸಂದರ್ಶನದ ಅಂಕ ಕಡಿತದ ನಿರ್ಧಾರ ಮತ್ತು ಅದಕ್ಕೆ ಪೂರಕವಾಗಿ ಹೊರಡಿಸಿರುವ ಅಧಿಸೂಚನೆಯನ್ನು ತಕ್ಷಣ ಹಿಂಪಡೆಯಬೇಕು. ಕೇಂದ್ರ ಲೋಕ ಸೇವಾ ಆಯೋಗದ ಮಾದರಿಯಲ್ಲಿ ಒಟ್ಟು ಅಂಕದ ಶೇ 12.5ರಷ್ಟು ಅಂಕಗಳನ್ನು ಸಂದರ್ಶನಕ್ಕೆ ನಿಗದಿಪಡಿಸಬೇಕು' ಎಂದು ಆಗ್ರಹಿಸಿದ್ದಾರೆ.



ಸಿದ್ದರಾಮಯ್ಯ

ಸರ್ಕಾರಿ ಹುದ್ದೆಗಳ ಭರ್ತಿಗೆ ನಡೆಸುವ ಆಯ್ಕೆ ಪ್ರಕ್ರಿಯೆಲ್ಲಿ ಸಂದರ್ಶನದ ಅಂಕಗಳ ಪ್ರಮಾಣ ಒಟ್ಟು ಅಂಕಗಳ ಶೇ 12.2ರಷ್ಟಿರಬೇಕು ಎಂದು ಅಶೋಕ್ ಕುಮಾರ್ ಯಾದವ್ ಮತ್ತು ಇತರರು ಹಾಗೂ ಹರ್ಯಾಣ ಸರ್ಕಾರದ ಮಧ್ಯದ ಪ್ರಕರಣದಲ್ಲಿ ಸುಪ್ರೀಂಕೋರ್ಟ್ 1987ರಲ್ಲಿ ತೀರ್ಪು ನೀಡಿತ್ತು. ಆದರೆ, ರಾಜ್ಯ ಸರ್ಕಾರವು ಸಂದರ್ಶನದ ಅಂಕಗಳನ್ನು ಶೇ 2ಕ್ಕೆ ಇಳಿಸಿದೆ. ಇದು ಸಮಂಜಸವಲ್ಲ ಎಂದು ವಿರೋಧ ವ್ಯಕ್ತಪಡಿಸಿದ್ದಾರೆ.

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಆಯ್ಕೆಯಾಗುವವರು ಸರ್ಕಾರದ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಬೇಕು. ಅವರು ಅನೇಕ ವಿಚಾರಗಳ ಕುರಿತು ಜ್ಞಾನ ಹೊಂದಿರಬೇಕಾಗುತ್ತದೆ. ಅಭ್ಯರ್ಥಿ ವ್ಯಕ್ತಿತ್ವ ಅರಿಯಲು ಸಂದರ್ಶನವೇ ಮುಖ್ಯ. ಇತರ ರಾಜ್ಯಗಳು ಸಂದರ್ಶನಕ್ಕೆ 100ರಿಂದ 275 ಅಂಕಗಳವರೆಗೂ ನಿಗದಿಪಡಿಸಿವೆ. ಹೀಗಿರುವಾಗ ರಾಜ್ಯದಲ್ಲಿ 25 ಅಂಕ ನಿಗದಿಪಡಿಸಿರುವುದರಿಂದ ಪ್ರತಿಕೂಲ ಪರಿಣಾಮಗಳಾಗಲಿವೆ ಎಂದು ಹೇಳಿದ್ದಾರೆ.

ಕೇಂದ್ರ ಮತ್ತು ರಾಜ್ಯ ಲೋಕಸೇವಾ ಆಯೋಗಗಳು ಸಾಂವಿಧಾನಿಕ ಸಂಸ್ಥೆಗಳು. ಆಯೋಗದ ಜತೆ ಸಮಾಲೋಚಿಸದೇ ಸಂದರ್ಶನದ ಅಂಕಗಳನ್ನು ಕಡಿತಗೊಳಿಸುವ ನಿರ್ಧಾರ ಮಾಡಲಾಗಿದೆ. ರಾಜ್ಯ ಸರ್ಕಾರವು ಸಾಂವಿಧಾನಿಕ ಸಂಸ್ಥೆಗಳ ಮೇಲೆ ಸವಾರಿ ಮಾಡುತ್ತಿದೆ ಎಂಬ ಆರೋಪಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ ಎಂದಿದ್ದಾರೆ.

'ಕೆಪಿಎಸ್‌ಸಿಯಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ, ಪಾರದರ್ಶಕತೆ ತರಲು ನಮ್ಮ ಸರ್ಕಾರ ಯತ್ನಿಸಿತ್ತು. ಪಿ.ಸಿ. ಹೋಟಾ ಸಮಿತಿ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವ ಕೆಲಸವನ್ನು ಸರ್ಕಾರ ಮಾಡಬೇಕಿತ್ತು. ಬದಲಿಗೆ ಸಂದರ್ಶನದ ಅಂಕ ಕಡಿತಕ್ಕೆ ಹೊರಟಿದ್ದು ಸರಿಯಲ್ಲ. ಇದರ ದುಷ್ಪರಿಣಾಮ ರಾಜ್ಯದ ಭವಿಷ್ಯದ ಮೇಲೆ ಆಗಲಿದೆ' ಎಂದು ಎಚ್ಚರಿಸಿದ್ದಾರೆ.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ ಆರೋಪ

'ಮೀಸಲಾತಿಗೆ ವಚನಾನಂದ ಶ್ರೀಗಳೇ ವಿರೋಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡುವುದಕ್ಕೆ ಹರಿಹರದ ವಚನಾನಂದ ಶ್ರೀಗಳೇ ನಿಜವಾದ ವಿರೋಧಿಯಾಗಿದ್ದಾರೆ' ಎಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಆರೋಪಿಸಿದರು.

'ಮಾರ್ಚ್ 6ರಂದು ಹರಿಹರದಲ್ಲಿ ನಡೆದ ಪಂಚಮಸಾಲಿ ಪದಾಧಿಕಾರಿಗಳ ಸಭೆಯಲ್ಲಿ ಮೀಸಲಾತಿಗೆ ಅವಸರ ಬೇಡ ಎಂದು ಶ್ರೀಗಳು ಹೇಳಿದ್ದಾರೆ. ಮೀಸಲಾತಿ ಕಲ್ಪಿಸುವಂತೆ ಒತ್ತಾಯಿಸುವ ಬದಲು ವಿಳಂಬ ಮಾಡುವಂತೆ ಹೇಳಿಕೆ ನೀಡಿದ್ದಾರೆ' ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

'ಮೀಸಲಾತಿ ವಿರೋಧಿಯಾಗಿರುವ ಸ್ವಾಮೀಜಿ ಅವರ ಬಗ್ಗೆ ಸಮುದಾಯ ಎಚ್ಚರವಹಿಸಬೇಕು. ಮರಾಠ ಮೀಸಲಾತಿಗೂ ನಮಗೂ ಯಾವುದೇ ಸಂಬಂಧ ಇಲ್ಲ. ಮರಾಠ ಸಮುದಾಯ ಪ್ರತ್ಯೇಕ ಮೀಸಲಾತಿ ಕೇಳಿದ್ದರಿಂದ ಅವಕಾಶ ದೊರೆತಿಲ್ಲ. ಈ ಸಾಮಾನ್ಯ ಜ್ಞಾನ ಶ್ರೀಗಳಿಗೆ ಇನ್ನೂ ತಿಳಿದಿಲ್ಲ. ಲಿಂಗಾಯತ ಪಂಚಮಸಾಲಿ ಸಮುದಾಯ ಮೀಸಲಾತಿಯ ಒಳಗಿನ ನಮ್ಮ ಪಾಲನ್ನು ಮಾತ್ರ' ಎಂದು ಹೇಳಿದರು.

'ವಚನಾನಂದ ಶ್ರೀಗಳು ಸುಳ್ಳು ಹೇಳಿ ಸಮಾಜಕ್ಕೆ ದ್ರೋಹ ಮಾಡುತ್ತಿದ್ದಾರೆ. ಮೀಸಲಾತಿ ಅವರಿಗೆ ಬೇಡವಾಗಿದ್ದರೆ ಮೌನವಹಿಸಲಿ. ಆದರೆ, ಹೋರಾಟ ಹತ್ತಿಕ್ಕುವ ಹೇಳಿಕೆಗಳನ್ನು ನೀಡಬಾರದು. ಸಮುದಾಯ ಸಹ ಮೀಸಲಾತಿ ಹೋರಾಟದ ದಾರಿ ತಪ್ಪಿಸುವ ಹೇಳಿಕೆಗಳಿಗೆ ಕಿವಿಗೊಡಬಾರದು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅವಧಿಯಲ್ಲಾದರೂ ಮೀಸಲಾತಿ ದೊರೆಯಲಿದೆ ಎನ್ನುವ ಆಶಾಭಾವ ಹೊಂದಿದ್ದೇವೆ. ಸರ್ಕಾರದ ಮೇಲೆ ವಿಶ್ವಾಸ ಇರಿಸಬೇಕು. ಕೊಟ್ಟ ಮಾತಿನಂತೆ ಸರ್ಕಾರ ಕ್ರಮಕೈಗೊಳ್ಳದಿದ್ದರೆ ಮತ್ತೆ ಹೋರಾಟ ತೀವ್ರಗೊಳಿಸಲಾಗುವುದು' ಎಂದು ವಿವರಿಸಿದರು.

15ಕ್ಕೆ ದುಂಡು ಮೇಜಿನ ಸಭೆ

'ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ '2ಎ' ಮೀಸಲಾತಿ ಕಲ್ಪಿಸುವಂತೆ ಸರ್ಕಾರಕ್ಕೆ ಒತ್ತಾಯಿಸುವ ನಿಟ್ಟಿನಲ್ಲಿ ಮಾರ್ಚ್ 15ರಂದು ದುಂಡು ಮೇಜಿನ ಸಭೆಯನ್ನು ಬೆಂಗಳೂರಿನಲ್ಲಿ ಕರೆಯಲಾಗಿದೆ' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

'ಈ ಅಧಿವೇಶನ ಮುಗಿಯುವ ಮುನ್ನವೇ ಸಮುದಾಯಕ್ಕೆ ಮೀಸಲಾತಿ ಘೋಷಿಸಬೇಕು. ಸರ್ಕಾರ ಈ ಹಿಂದೆ ನೀಡಿದ ಮಾತಿನಂತೆ ಮಾರ್ಚ್ 15ಕ್ಕೆ ಒಂದು ವರ್ಷವಾಗಲಿದೆ. ಹೀಗಾಗಿ, ಅದೇ ದಿನ ಪಂಚಮಸಾಲಿ ಹೋರಾಟಗಾರರ ಸಭೆ ನಡೆಸಲಾಗುವುದು' ಎಂದು ವಿವರಿಸಿದರು.

'ಇಂದು ಜೆಡಿಎಸ್‌ಗೆ ಸೇರ್ಪಡೆ'

ಪ್ರಜಾವಾಣಿ ವಾರ್ತೆ

ಕೋಲಾರ: 'ನನಗೆ ಪಕ್ಷಕ್ಕಿಂತ ಮಾಜಿ ಪ್ರಧಾನಿ ದೇವೇಗೌಡರು ಮುಖ್ಯ. ಈಗಾಗಲೇ ಸಮುದಾಯದ ಮುಖಂಡರ ಜೊತೆ ಚರ್ಚಿಸಿದ್ದೇನೆ. ಶನಿವಾರ (ಮಾರ್ಚ್. 12) ಅಧಿಕೃತವಾಗಿ ಜೆಡಿಎಸ್ ಪಕ್ಷಕ್ಕೆ ಸೇರುತ್ತೇನೆ' ಎಂದು ವಿಧಾನಪರಿಷತ್ ಸದಸ್ಯ ಸಿ.ಎಂ.ಇಬ್ರಾಹಿಂ ಹೇಳಿದರು.



ಸಿ.ಎಂ. ಇಬ್ರಾಹಿಂ

ಇಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ ಅವರು,, 'ನನ್ನ ರಾಜಕೀಯ ನಿರ್ಧಾರದಂತೆ ಮುಂದೆ ರಾಜ್ಯದಲ್ಲಿ ಸರ್ಕಾರ ರಚನೆಯಾಗಲಿದೆ. ನಾನು ಇರುವ ಪಕ್ಷ ಎಂದೆಂದಿಗೂ ನಂ.1 ಸ್ಥಾನದಲ್ಲಿರುತ್ತದೆ' ಎಂದು ಪ್ರತಿಪಾದಿಸಿದರು.

'ಐದು ರಾಜ್ಯಗಳ ಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯವಾಗಿ ಸೋತಿದೆ. ದೇಶದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಕಾಂಗ್ರೆಸ್‌ಗೆ ಎರಡೇ ಸ್ಥಾನ ಸಿಕ್ಕಿದೆ. ಇದೇ ಮಾದರಿ ಮುಂದೆ ರಾಜ್ಯಕ್ಕೂ ಅನ್ವಯಿಸುತ್ತದೆ' ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

'ನಾವು ಮೂಲ ಕಾಂಗ್ರೆಸಿಗರು. ನನ್ನ ತಂದೆ, ತಾಯಿ, ಅಜ್ಜ ಎಲ್ಲರೂ ಸ್ವಾತಂತ್ರ್ಯ ಹೋರಾಟಗಾರರು. ಆದರೆ, ಈಗ ಕಾಂಗ್ರೆಸ್ ಪಕ್ಷದಲ್ಲಿ ಮೂಲ ಕಾಂಗ್ರೆಸಿಗರು ಯಾರೂ ಇಲ್ಲ. 1970ರಿಂದ ಈಚೆಗೆ ಪಕ್ಷಕ್ಕೆ ಬಂದವರು ಮೂಲ ಕಾಂಗ್ರೆಸಿಗರೇ ಅಲ್ಲ' ಎಂದರು.

'ರಾಜ್ಯದಲ್ಲಿ ಕಾಂಗ್ರೆಸ್ ಖಂಡಿತ ಅಧಿಕಾರಕ್ಕೆ ಬರೋಲ್ಲ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಸಿ.ಎಂ ಕುರ್ಚಿಗೆ ಕಿತ್ತಾಡುವುದರಲ್ಲಿ ಅರ್ಥವಿಲ್ಲ. ಕಾಂಗ್ರೆಸ್ ಮುಂದಿನ ಚುನಾವಣೆಯಲ್ಲಿ ಮೂರನೇ ಸ್ಥಾನಕ್ಕೆ ಕುಸಿಯಲಿದೆ' ಎಂದು ವ್ಯಂಗ್ಯವಾಡಿದರು.

ಲಂಚ: ಉಪ ತಹಶೀಲ್ದಾರ್ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಕೋಲಾರ: ಜಮೀನುಗಳ ಭೂ ಪರಿವರ್ತನೆ ಆದೇಶದ ನಕಲು ಪ್ರತಿ ನೀಡಲು ಲಂಚ ಪಡೆಯುತ್ತಿದ್ದ ವೇಳೆ ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯ ಕಂದಾಯ ಶಾಖೆ ಉಪ ತಹಶೀಲ್ದಾರ್ ಎಂ.ಪ್ರಭಾಕರನ್ ಸೇರಿದಂತೆ ಮೂವರು ನೌಕರರು ಎಸಿಬಿ ಅಧಿಕಾರಿಗಳಿಗೆ ಸಿಕ್ಕಿಬಿದ್ದಿದ್ದಾರೆ.

ಬೆಂಗಳೂರಿನ ಕಾಮಾಕ್ಷಿಪಾಳ್ಯದ ವ್ಯಕ್ತಿಯೊಬ್ಬರು ಕೋಲಾರ ಹಾಗೂ ಮಾಲೂರು ತಾಲ್ಲೂಕು ವ್ಯಾಪ್ತಿಯ ವಿವಿಧ ಸರ್ವೆ ನಂಬರ್‌ಗಳಲ್ಲಿನ ಜಮೀನುಗಳ ಭೂ ಪರಿವರ್ತನೆ ಆದೇಶದ ನಕಲು ಪ್ರತಿ ಕೋರಿ ಫೆ.4 ಮತ್ತು 22ರಂದು ಕಂದಾಯ ಶಾಖೆಗೆ 56 ಅರ್ಜಿ ಸಲ್ಲಿಸಿದ್ದರು.

ಇವುಗಳಿಗೆ ಸಂಬಂಧಿಸಿದ ದಾಖಲಾತಿ ನೀಡಲು ಪ್ರತಿ ಅರ್ಜಿಗೆ ತಲಾ ₹ 5 ಸಾವಿರದಂತೆ ₹ 2.80 ಲಕ್ಷ ಲಂಚ ನೀಡುವಂತೆ ಪ್ರಭಾಕರನ್ ಬೇಡಿಕೆ ಇಟ್ಟಿದ್ದರು. ಜಿಲ್ಲಾಧಿಕಾರಿ ಕಚೇರಿಯ ಪ್ರಥಮದರ್ಜೆ ಸಹಾಯಕ (ಎಫ್‌ಡಿಎ) ಜನಾರ್ದನ ಗೌಡ ಮುಂಗಡವಾಗಿ ಅರ್ಜಿದಾರರಿಂದ ₹ 10 ಸಾವಿರ ಪಡೆದಿದ್ದರು. ಈ ಸಂಬಂಧ ಅರ್ಜಿದಾರರು ಬೆಂಗಳೂರಿನ ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರು ಕೊಟ್ಟಿದ್ದರು.

ಕಾರ್ಯಾಚರಣೆ ನಡೆಸಿದ ಎಸಿಬಿ ಅಧಿಕಾರಿಗಳು ಪ್ರಭಾಕರನ್, ಜನಾರ್ದನಗೌಡ ಹಾಗೂ ಅವರಿಗೆ ನೆರವಾಗಿದ್ದ ಜಿಲ್ಲಾಧಿಕಾರಿ ಕಚೇರಿಯ ಗುತ್ತಿಗೆ ನೌಕರ ಮನೋಜ್ ಅವರನ್ನು ಲಂಚ ಪಡೆಯುವಾಗಲೇ ಜಿಲ್ಲಾಡಳಿತ ಭವನದಲ್ಲಿ ಬಂಧಿಸಿದ್ದಾರೆ. ಆರೋಪಿಗಳಿಂದ ಲಂಚದ ಹಣ ವಶಪಡಿಸಿಕೊಳ್ಳಲಾಗಿದೆ.

ಹತ್ಯೆಯಾದ ಹರ್ಷ, ವಿಶ್ವನಾಥ್ ಮನೆಗೆ ಭೇಟಿ, ಕುಟುಂಬದವರಿಗೆ ಸಾಂತ್ವನ

ಹತ್ಯೆಯಿಂದ ಸೌಹಾರ್ದ ಹಾಳು: ಪೇಜಾವರಶ್ರೀ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಹತ್ಯೆಯಾದ ಬಜರಂಗದಳದ ಕಾರ್ಯಕರ್ತ ಹರ್ಷನ ಮನೆಗೆ ಹಿಂದೂ ಸಮಾಜದ ಮಠಾಧಿಪತಿಗಳು ಮತ್ತು ರಾಜಕೀಯ ವ್ಯಕ್ತಿಗಳ ದಂಡೇ ಹರಿದು ಬರುತ್ತಿರುವುದು ಹಿಂದೂ ಸಮಾಜದ ಏಕತೆಗೆ ಸಾಕ್ಷಿಯಾಗಿದೆ ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಶುಕ್ರವಾರ ಹರ್ಷನ ಮನೆಗೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹರ್ಷ ಸಾವು ದೇಶಕ್ಕಾಗಿ ಮಾಡಿರುವ ಬಲಿದಾನ. ಇಂತಹ ಘಟನೆಗಳು ಯಾವತ್ತೂ ಮರುಕಳಿಸಬಾರದು. ಕೊಲೆಯಿಂದ ಸಮಾಜದ ಸೌಹಾರ್ದ ಹದಗೆಡುವುತ್ತದೆ' ಎಂದರು.

'ಹಿಂದೂ ವೀರರ ತಾಯಂದಿರ ಬದುಕನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಸಮಾಜ ತೆಗೆದುಕೊಳ್ಳಬೇಕು. ಸಂವಿಧಾನದ ಅಂಗಗಳಾದ ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗ ಜಾಗೃತವಾಗಿದ್ದು, ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸುವ ಮೂಲಕ ಸಮಾಜದಲ್ಲಿ ಹತ್ಯೆಯಂಥ ಘಟನೆ ಮರುಕಳಿಸದಂತೆ ತಡೆಯಬಹುದು' ಎಂದರು.

ಈ ವೇಳೆ ಶ್ರೀಮಠದಿಂದ ಪರಿಹಾರಧನ ನೀಡಿದರು. ಬೆಂಗಳೂರು ಮರಾಠ ಜನಾಂಗದ ಗೋಸಾಯಿ ಮಠದ ಮಂಜುನಾಥ ಶ್ರೀಗಳು ಹರ್ಷನ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿದರು.

ಶ್ರೀಗಳ ಮುಂದೆ ಅಳಲು ತೋಡಿಕೊಂಡ ಮೀನಾಕ್ಷಮ್ಮ: ಆಲ್ಕೊಳ ವೃತ್ತದ ಬಳಿ ಇರುವ ವಿಶ್ವನಾಥ ಶೆಟ್ಟಿ ಅವರ ಮನೆಗೆ ತೆರಳಿ ಮೀನಾಕ್ಷಮ್ಮನ ಯೋಗಕ್ಷೇಮ ವಿಚಾರಿಸಿದರು.

₹ 1 ಲಕ್ಷ ಸಹಾಯಧನ ನೀಡಿದ ಪೇಜಾವರ ಶ್ರೀಗಳಿಗೆ ವಿಶ್ವನಾಥ ಶೆಟ್ಟಿ ತಾಯಿ ಮೀನಾಕ್ಷಮ್ಮ ಬಟ್ಟೆ ಇಟ್ಟುಕೊಳ್ಳಲು ಕಪಾಟು ಅಥವಾ ಬೀರುವಿನ ವ್ಯವಸ್ಥೆ ಇಲ್ಲ ಎಂದು ಕೇಳಿಕೊಂಡರು. ಅಲ್ಲಿಯೇ ಇದ್ದ ಆಲ್ಕೊಳದ ಬಿಜೆಪಿ ಬೂತ್ ಅಧ್ಯಕ್ಷರಿಗೆ ನಾಳೆಯೇ ಬೀರುವಿನ ವ್ಯವಸ್ಥೆ ಮಾಡಲು ಸ್ವಾಮೀಜಿ ಸೂಚಿಸಿದರು.

ಮೊನ್ನೆಯವರೆಗೆ ಚಪ್ಪಲಿಯೂ ಇಲ್ಲದ ಸ್ಥಿತಿಯಲ್ಲಿದ್ದ ಮೀನಾಕ್ಷಮ್ಮ ಅವರ ಮುಖದಲ್ಲಿ ಇಂದು ಮಂದಹಾಸ ಮೂಡಿತ್ತು. ಲವಲವಿಕೆಯಿಂದ ಮಾತನಾಡುತ್ತಿದ್ದರು. ತಮ್ಮ ಕಷ್ಟಕ್ಕೆ ಸ್ಪಂದಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸಿದ ರೀತಿ ಮನ ಕಲಕುವಂತಿತ್ತು.



ಹತ್ಯೆಯಾದ ಬಜರಂಗದಳ ಕಾರ್ಯಕರ್ತ ಹರ್ಷನ ಮನೆಗೆ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಭೇಟಿ ನೀಡಿ ಸಾಂತ್ವನ ಹೇಳಿದರು.

ಕಟ್ಟಿ ಸೇರಿ ಮೂವರಿಗೆ ಪುಸ್ತಕ ಬಹುಮಾನ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಜಾನಪದ ಅಕಾಡೆಮಿಯು 2020ನೇ ಸಾಲಿನ ಪುಸ್ತಕ ಬಹುಮಾನ ಘೋಷಿಸಿದ್ದು, ಸಿಂದಗಿಯ ಚನ್ನಪ್ಪ ಕಟ್ಟಿ ಅವರ 'ಅಮೋಘ ಸಿದ್ಧ ಜನಪದ ಮಹಾಕಾವ್ಯ' ಸೇರಿದಂತೆ ಮೂವರು ಲೇಖಕರ ಕೃತಿಗಳು ಆಯ್ಕೆಯಾಗಿವೆ.

ತುಮಕೂರಿನ ಪಾವಗಡದ ಸುರೇಶ್ ನಾಗಲಮಡಿಕೆ ಅವರ 'ಹಾಡು ಕಲಿಸಿದ ಹರ' (ಜನಪದ ಮಹಾಕಾವ್ಯಗಳು: ಸಂಸ್ಕೃತಿ ಸಂಕಥನ) ಹಾಗೂ ಉಡುಪಿಯ ತಲ್ಲೂರು ಶಿವರಾಮ ಶೆಟ್ಟಿ ಅವರ 'ಕಲಾ ಸಂಚಯ ದಕ್ಷಿಣ ಭಾರತದ ಕೆಲವು ಅನುಷ್ಠಾನ ಕಲೆಗಳು' ಕೃತಿ ಪುಸ್ತಕ ಬಹುಮಾನಕ್ಕೆ ಭಾಜನವಾಗಿವೆ.

ಈ ಬಹುಮಾನವು ತಲಾ ₹ 25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಏಪ್ರಿಲ್ ತಿಂಗಳಲ್ಲಿ ವಿಜಯನಗರದ ಹೊಸಪೇಟೆಯಲ್ಲಿ ನಡೆಯುವ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿಯೇ ಪುಸ್ತಕ ಬಹುಮಾನ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ವರದಿ ನಂತರ ವೇತನ ಪರಿಷ್ಕರಣೆ –ಶ್ರೀರಾಮುಲು

ಪ್ರಜಾವಾಣಿ ವಾರ್ತೆ

ಶಿಡ್ಲಘಟ್ಟ: ವಿವಿಧ ಸಾರಿಗೆ ನಿಗಮಗಳ ನೌಕರರ ವೇತನ ಪರಿಷ್ಕರಣೆ ಕುರಿತು ನಿವೃತ್ತ ಐಎಎಸ್ ಅಧಿಕಾರಿ ಶ್ರೀನಿವಾಸಮೂರ್ತಿ ನೇತೃತ್ವದ ಸಮಿತಿ ವರದಿ ನೀಡಿದ ನಂತರ ನಿರ್ಧರಿಸಲಾಗುವುದು ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ಶುಕ್ರವಾರ ತಿಳಿಸಿದರು.



ಕೆಎಸ್‌ಆರ್‌ಟಿಸಿ ನೂತನ ಬಸ್ ಘಟಕ ಉದ್ಘಾಟಿಸಿದ ಅವರು, ಡೀಸೆಲ್ ದರ ತುಟ್ಟಿ ಆಗಿದೆ. ಸಂಸ್ಥೆಗೆ ಆರ್ಥಿಕ ನಷ್ಟ ತಪ್ಪಿಸಲು ಎಲೆಕ್ಟ್ರಿಕ್ ಬಸ್‌ಗಳು, ಪರಿಸರ ಸ್ನೇಹಿ ಬಸ್‌ಗಳ ಸಂಖ್ಯೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

'ನೌಕರರ ಸಮಸ್ಯೆಗಳನ್ನು ಹಂತ ಹಂತವಾಗಿ ಪರಿಹರಿಸಲು ಸರ್ಕಾರ ಸಿದ್ಧವಿದೆ. , ನೌಕರರು ಮುಷ್ಕರಕ್ಕೆ ಮುಂದಾಗಬಾರದು' ಎಂದರು. ದುಡಿಯುವ ಮಹಿಳೆಯರು, ಕಟ್ಟಡ ಕಾರ್ಮಿಕರಿಗೆ ಉಚಿತ ಬಸ್‌ಪಾಸ್ ನೀಡುವ ಚಿಂತನೆ ಇದೆ ಎಂದು ತಿಳಿಸಿದರು.

ಶ್ರೀರಂಗಪಟ್ಟಣ: ಹರಕೆ ತೀರಿಸಿದ ಜಯಲಲಿತಾ ಆಪ್ತೆ ಶಶಿಕಲಾ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿವಂಗತ ಜೆ.ಜಯಲಲಿತಾ ಅವರ ಆಪ್ತೆ ಶಶಿಕಲಾ ನಟರಾಜನ್ ಹಾಗೂ ಅವರ ಬೆಂಬಲಿಗರು ಶುಕ್ರವಾರ ಇಲ್ಲಿನ ಗಂಜಾಂ ನಿಮಿಷಾಂಬಾ ಸೇರಿದಂತೆ ವಿವಿಧ ದೇಗುಲಗಳಿಗೆ ಭೇಟಿ ನೀಡಿ ಹರಕೆ ತೀರಿಸಿದರು.

ನಿಮಿಷಾಂಬಾ ದೇವಿಗೆ ಸೀರೆ ಸಮರ್ಪಿಸಿದರು. ದೇವಾಲಯದಲ್ಲಿ ಶಶಿಕಲಾ ಹೆಸರಿನಲ್ಲಿ ಅರ್ಚನೆ ಮಾಡಿದರು.

ಬಳಿಕ ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದಲ್ಲಿ ದರ್ಶನ ಪಡೆದರು. ಅರ್ಚಕರೊಬ್ಬರ ಸಲಹೆಯಂತೆ ತಾಲ್ಲೂಕಿನ ಆರತಿ ಉಕ್ಕಡದ ಅಹಲ್ಯಾದೇವಿ ಮಾರಮ್ಮನ ದೇಗುಲಕ್ಕೂ ಭೇಟಿ ನೀಡಿದ್ದರು. ಕಂಟಕ ನಿವಾರಣೆಗಾಗಿ ಅಲ್ಲಿ 'ತಡೆ' ಒಡೆಸಿದರು.



ಶಶಿಕಲಾ

'ಶಶಿಕಲಾ ಅವರು ಜೈಲಿನಲ್ಲಿದ್ದಾಗ ಅವರ ಬಿಡುಗಡೆಗೆ ಪ್ರಾರ್ಥಿಸಿ ಅವರ ಬೆಂಬಲಿಗರು ನಿಮಿಷಾಂಬಾ ದೇವಿಗೆ ಹರಕೆ ಹೊತ್ತಿದ್ದರು. ಶಶಿಕಲಾ ಅವರು ಶುಕ್ರವಾರ ಬಂದು ಹರಕೆ ತೀರಿಸಿದ್ದಾರೆ' ಎಂದು ನಿಮಿಷಾಂಬಾ ದೇವಾಲಯದ ಅರ್ಚಕ ಸೂರ್ಯನಾರಾಯಣ ಭಟ್ ಹೇಳಿದರು.

ಆಡಳಿತಾರೂಢ ಪಕ್ಷ ಗೆದ್ದ ಕ್ಷೇತ್ರಗಳ ಸಂಖ್ಯೆ ಕುಸಿದಿದೆ, ಇನ್ನಷ್ಟು ಕುಸಿಯಲಿದೆ: ಅಖಿಲೇಶ್ ಯಾದವ್

‘ಬಿಜೆಪಿಯನ್ನು ಸೋಲಿಸುವುದು ಸಾಧ್ಯ’

ಪ್ರಜಾವಾಣಿ ವಾರ್ತೆ

ಲಖನೌ: ‘ಬಿಜೆಪಿಯನ್ನು ಸೋಲಿಸಬಹುದು ಎಂಬುದನ್ನು ತೋರಿಸಿಕೊಟ್ಟಿದ್ದೇವೆ. ಆ ಪಕ್ಷವು ಗೆದ್ದ ಕ್ಷೇತ್ರಗಳ ಸಂಖ್ಯೆ ಕಡಿಮೆ ಆಗಿದೆ. ಅದು ಇನ್ನೂ ಕಡಿಮೆ ಆಗಲಿದೆ. ನಾವು ಈಗಾಗಲೇ ಅರ್ಧದಾರಿ ಕ್ರಮಿಸಿದ್ದೇವೆ. ಮುಂದಿನ ದಿನಗಳಲ್ಲಿ ಉಳಿದದ್ದನ್ನೂ ಸಾಧಿಸುತ್ತೇವೆ’ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಹೇಳಿದ್ದಾರೆ.

ಉತ್ತರ ಪ್ರದೇಶ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ 111 ಸ್ಥಾನಗಳನ್ನು ಗೆದ್ದಿರುವ ಎಸ್‌ಪಿ, ಅತಿಹೆಚ್ಚು ಸ್ಥಾನಗಳನ್ನು ಗೆದ್ದ ಎರಡನೇ ಪಕ್ಷ ಎನಿಸಿದೆ. 255 ಕ್ಷೇತ್ರಗಳಲ್ಲಿ ಆರಿಸಿಬಂದಿರುವ ಬಿಜೆಪಿ ಹೊಸ ಸರ್ಕಾರ ರಚಿಸಲಿದೆ.

ಈ ಚುನಾವಣೆಯಲ್ಲಿ ಅಖಿಲೇಶ್ ಅವರ ಸಮಾಜವಾದಿ ಪಕ್ಷವು, ಜಯಂತ್ ಚೌಧರಿ ಅವರ ಆರ್‌ಎಲ್‌ಡಿ ಮತ್ತು ಓಂ ಪ್ರಕಾಶ್ ರಾಜಭರ್ ಅವರ ಎಸ್‌ಬಿಎಸ್‌ಪಿ ಪಕ್ಷಗಳ ಜತೆ ಮೈತ್ರಿ ಮಾಡಿಕೊಂಡಿತ್ತು. ಬಿಜೆಪಿ ವಿರುದ್ಧ ರೈತರ ಆಕ್ರೋಶ ತೀವ್ರವಾಗಿದ್ದ ರಾಜ್ಯದ ಪಶ್ಚಿಮಾಂಚಲ ಪ್ರಾಂತ್ಯದಲ್ಲಿ ಈ ಮೈತ್ರಿಕೂಟವು ನಿರೀಕ್ಷಿತ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿಲ್ಲ. ಹೀಗಾಗಿ ಬಿಜೆಪಿ ಸರ್ಕಾರವನ್ನು ಉರುಳಿಸುವ ಪ್ರಯತ್ನಕ್ಕೆ ಯಶಸ್ಸು ದೊರೆಯಲಿಲ್ಲ.


ಈ ಬಾರಿ ಸರ್ಕಾರ ರಚಿಸಲು ಸಾಧ್ಯವಾಗದೇ ಇದ್ದರೂ, ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುವುದನ್ನು ಮುಂದುವರಿಸಬೇಕು ಎಂದು ಅಖಿಲೇಶ್ ತಮ್ಮ ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ. ‘ಬಿಜೆಪಿ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧದ ಹೋರಾಟವನ್ನು ನಾವು ಮುಂದುವರಿಸುತ್ತೇವೆ. ಯಶಸ್ಸು ದೊರೆಯುವವರೆಗೂ ನಾವು ಹೋರಾಡುತ್ತೇವೆ’ ಎಂದು ಅವರು ಹೇಳಿದ್ದಾರೆ.

‘ಆಜಂಗಡ ಲೋಕಸಭಾ ಕ್ಷೇತ್ರದ ಸಂಸದರೂ ಆಗಿರುವ ಅಖಿಲೇಶ್, ಈ ಚುನಾವಣೆಯಲ್ಲಿ ಕರ್ಹಾಲ್ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಚುನಾಯಿತರಾಗಿದ್ದಾರೆ. ಅವರು ಸಂಸದನ ಸ್ಥಾನಕ್ಕೆ ರಾಜೀನಾಮೆ ನೀಡಿ, ಶಾಸಕನಾಗಿ ಮುಂದುವರಿಯಲಿದ್ದಾರೆ. ಉತ್ತರ ಪ್ರದೇಶ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕನಾಗಿ ಅಖಿಲೇಶ್ ಅವರು ಬಿಜೆಪಿ ವಿರುದ್ಧ ಹೋರಾಡಲಿದ್ದಾರೆ’ ಎಂದು ಸಮಾಜವಾದಿ ಪಕ್ಷದ ನಾಯಕರೊಬ್ಬರು ಮಾಹಿತಿ ನೀಡಿದ್ದಾರೆ.



ಉತ್ತರ ಪ್ರದೇಶ ಉಪಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರನ್ನು ಪ್ರಯಾಗ್‌ರಾಜ್ ವಿಧಾನಸಭಾ ಕ್ಷೇತ್ರದಲ್ಲಿ ಸೋಲಿಸಿದ ಸಮಾಜವಾದಿ ಪಕ್ಷದ ಪಲ್ಲವಿ ಪಟೇಲ್ ಅವರು, ಗೆಲುವಿನ ಪ್ರಮಾಣಪತ್ರವನ್ನು ಪ್ರದರ್ಶಿಸಿದರು –ಪಿಟಿಐ ಚಿತ್ರ

ಬಿಜೆಪಿ–ಎಸ್‌ಪಿ ಬಲಾಬಲ ಏರಿಳಿತ



- ಸರಳ ಬಹುಮತಕ್ಕಿಂತಲೂ ಹೆಚ್ಚು ಕ್ಷೇತ್ರಗಳನ್ನು ಗೆದ್ದಿದ್ದರೂ, 2017ಕ್ಕೆ ಹೋಲಿಸಿದರೆ ಈ ಬಾರಿ ಕಡಿಮೆ ಕ್ಷೇತ್ರಗಳಲ್ಲಿ ಬಿಜೆಪಿ ಆರಿಸಿ ಬಂದಿದೆ
- 2017ಕ್ಕಿಂತ 2022ರಲ್ಲಿ ಬಿಜೆಪಿ ಹೆಚ್ಚು ಮತಗಳನ್ನು ಪಡೆದಿದೆ. ಪಕ್ಷದ ಮತ ಪ್ರಮಾಣ ಏರಿಕೆಯಾಗಿದೆ. ಆದರೆ ಈ ಮತಗಳೆಲ್ಲವೂ ಬಿಜೆಪಿಗೆ ಗೆಲುವಾಗಿ ಮಾರ್ಪಾಡಾಗಿಲ್ಲ
- ಸಮಾಜವಾದಿ ಪಕ್ಷದ ಪ್ರಾತಿನಿಧ್ಯವು 2017ರಲ್ಲಿ 47 ಕ್ಷೇತ್ರಗಳಲ್ಲಿ ಇದ್ದದ್ದು, ಈ ಬಾರಿ 111ಕ್ಕೆ ಏರಿಕೆಯಾಗಿದೆ
- ಸಮಾಜವಾದಿ ಪಕ್ಷದ ಮತಪ್ರಮಾಣವು 10 ಶೇಕಡಾವಾರು ಅಂಶಗಳಷ್ಟು ಏರಿಕೆಯಾಗಿದೆ. ಇದು ಶೇ 51ರಷ್ಟು ಏರಿಕೆ


‘ಬಿಜೆಪಿಗೆ ದೊರೆತದ್ದು ಜನಾದೇಶವಲ್ಲ’

ಕೋಲ್ಕತ್ತ (ಪಿಟಿಐ): ‘ಬಿಜೆಪಿಗೆ ದೊರೆತಿರುವ ಗೆಲುವು ನಿಜವಾದ ಜನಾದೇಶವಲ್ಲ. ಬದಲಿಗೆ ಆಡಳಿತಯಂತ್ರವನ್ನು ಬಳಸಿಕೊಂಡು ಮತಗಳನ್ನು ಲೂಟಿ ಮಾಡಿದ್ದರಿಂದ ದೊರೆತ ಗೆಲುವು’ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಆರೋಪಿಸಿದ್ದಾರೆ.

‘ಜನರು ಮತ ಹಾಕದೇ ಇದ್ದ ಕಾರಣಕ್ಕೆ ಅಖಿಲೇಶ್ ಯಾದವ್ ಅವರ ಪಕ್ಷ ಸೋತಿಲ್ಲ. ಬದಲಿಗೆ ಅವರ ಪಕ್ಷಕ್ಕೆ ಬಂದ ಮತಗಳನ್ನು ಲೂಟಿ ಮಾಡಲಾಗಿದೆ. ಈ ಮೂಲಕ ಅವರು ಸೋಲುವಂತೆ ಮಾಡಲಾಗಿದೆ’ ಎಂದು ಮಮತಾ ಆರೋಪಿಸಿದ್ದಾರೆ.

‘ವಾರಾಣಸಿಯಲ್ಲಿ ಮತಯಂತ್ರಗಳನ್ನು ಸಾಗಿಸುವಾಗ ಲೋಪ ಎಸಗಿದ ಅಧಿಕಾರಿಯನ್ನು ಚುನಾವಣಾ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ. ಅಷ್ಟು ಮಾಡಿದರೆ ಸಾಲದು. ಅಲ್ಲಿ ಬಳಕೆಯಾಗಿದ್ದ ಎಲ್ಲಾ ಮತಯಂತ್ರಗಳನ್ನು ವಿಧಿವಿಜ್ಞಾನ ಪರೀಕ್ಷೆಗೆ ಒಳಪಡಿಸಬೇಕು. ಜನರು ಮತ ಒತ್ತಿದ್ದ ಯಂತ್ರಗಳೇ, ಎಣಿಕೆ ಕೇಂದ್ರಕ್ಕೆ ಬಂದಿವೆ ಎಂಬುದನ್ನು ಖಾತರಿ ಮಾಡಿಕೊಳ್ಳಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

ನುಡಿ–ಕಿಡಿ



ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರ ನಾಲ್ಕೂವರೆ ವರ್ಷಗಳ ದುರಾಡಳಿತದ ಪರಿಣಾಮವಾಗಿ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಬೇಕಾಯಿತು

ರಣದೀಪ್ ಸಿಂಗ್ ಸುರ್ಜೇವಾಲಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ



ಉತ್ತರಾಖಂಡ, ಮಣಿಪುರ ಮತ್ತು ಗೋವಾದಲ್ಲಿ ಕಾಂಗ್ರೆಸ್ ಸೋಲಲು ಕಾರಣವೇನು? ಸತ್ಯ ಎದುರಿಗೆ ಕಾಣುತ್ತಿದ್ದರೂ ಕಾಂಗ್ರೆಸ್ ನಾಯಕರು ಅದನ್ನು ನೋಡುವುದಿಲ್ಲ. ಕಾಂಗ್ರೆಸ್ ನಾಯಕತ್ವವು ಎಂದಿಗೂ ಪಾಠ ಕಲಿಯುವುದಿಲ್ಲ

ಕ್ಯಾಪ್ಟನ್ ಅಮರಿಂದರ್ ಸಿಂಗ್, ಪಂಜಾಬ್ ಲೋಕ ಕಾಂಗ್ರೆಸ್ ಮುಖ್ಯಸ್ಥ



ಮುಂದೆ ಏನು ಮಾಡಬೇಕು ಎಂಬುದನ್ನು ಕಾಂಗ್ರೆಸ್ ಪಕ್ಷವೇ ನಿರ್ಧರಿಸಬೇಕು. ಆದರೆ ಬಿಜೆಪಿಯನ್ನು ಸೋಲಿಸಲು ಎಲ್ಲಾ ವಿರೋಧ ಪಕ್ಷಗಳೂ ಒಟ್ಟಾಗಬೇಕು. ಕಾಂಗ್ರೆಸ್‌ಗಾಗಿ ಕಾದುಕೂರುವ ಅವಶ್ಯಕತೆ ಇಲ್ಲ

ಮಮತಾ ಬ್ಯಾನರ್ಜಿ, ಟಿಎಂಸಿ ಮುಖ್ಯಸ್ಥೆ ಮತ್ತು ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಶೀಘ್ರ ಸಿಡಬ್ಲ್ಯುಸಿ ಸಭೆ

ಪ್ರಜಾವಾಣಿ ಚಿತ್ರ

ನವದೆಹಲಿ: ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಹೀನಾಯ ಸೋಲಿಗೆ ಕಾರಣಗಳೇನು ಎಂದು ಚರ್ಚಿಸಲು ಪಕ್ಷವು ಶೀಘ್ರವೇ ಕಾರ್ಯಕಾರಿ ಸಮಿತಿ ಸಭೆ (ಸಿಡಬ್ಲ್ಯುಸಿ) ಕರೆಯಲಿದೆ. ಪಕ್ಷದ ನಾಯಕತ್ವ ಮತ್ತು ಸಂಘಟನೆಯಲ್ಲಿ ಬದಲಾವಣೆ ಬೇಕು ಎಂದು ಒತ್ತಾಯಿಸಲು ಹಿರಿಯ ಮುಖಂಡರಲ್ಲಿ ಹಲವರು ಸಿದ್ಧತೆ ನಡೆಸಿದ್ದಾರೆ.

ಸಿಡಬ್ಲ್ಯುಸಿಯ ಕಾರ್ಯಸೂಚಿ ಏನಾಗಿರಬೇಕು ಎಂದು ಚರ್ಚಿಸಲು ಪಕ್ಷದ ಹಲವು ಮುಖಂಡರು ಶುಕ್ರವಾರ ಅನೌಪಚಾರಿಕ ಸಭೆ ನಡೆಸಿದ್ದಾರೆ. ಈ ಹಿಂದೆ, ಪಕ್ಷದ ನಾಯಕತ್ವ ಬದಲಾಗಬೇಕು ಮತ್ತು ಪೂರ್ಣ ಪ್ರಮಾಣದ ಅಧ್ಯಕ್ಷರು ಬೇಕು ಎಂದು ಪತ್ರ ಬರೆದಿದ್ದ 23 ನಾಯಕರಲ್ಲಿ (ಜಿ–23) ಹಲವರು ಶುಕ್ರವಾರ ಸಭೆ ನಡೆಸಿದ್ದಾರೆ. ಜಿ–23 ನಾಯಕರಲ್ಲಿ ಒಬ್ಬರಾದ ಗುಲಾಂ ನಬಿ ಆಜಾದ್ ಅವರ ಮನೆಯಲ್ಲಿ ಕಪಿಲ್ ಸಿಬಲ್, ಆನಂದ್ ಶರ್ಮಾ ಮತ್ತು ಮನೀಷ್ ತಿವಾರಿ ಅವರು ಸಭೆ ನಡೆಸಿದ್ದಾರೆ. ಉಳಿದ ನಾಯಕರಲ್ಲಿ ಹಲವರು ಆನ್‌ಲೈನ್ ಮೂಲಕ ಸಭೆಯಲ್ಲಿ ಭಾಗಿಯಾಗಿದ್ದಾರೆ.

ಆದರೆ ಸಭೆಯ ವಿವರಗಳು ಬಹಿರಂಗವಾಗಿಲ್ಲ. ಪಕ್ಷದ ಆಂತರಿಕ ವಿಚಾರಗಳನ್ನು ಮಾಧ್ಯಮಗಳ ಎದುರು ಬಿಚ್ಚಿಡದೇ ಇರಲು ಈ ನಾಯಕರು ತೀರ್ಮಾನಿಸಿದ್ದಾರೆ ಎಂದು ಮೂಲಗಳು ಹೇಳಿವೆ.



ನಾವು ಸೋತಿದ್ದೇವೆ, ಆದರೆ ನೆಲಕಚ್ಚಿಲ್ಲ. ನಮ್ಮ ಮೌಲ್ಯಗಳು ಮತ್ತು ಪರಂಪರೆಗೆ ಭದ್ರ ಬುನಾದಿಯಿದೆ. ನಾವು ಮತ್ತೆ ಮೇಲುಗೈ ಸಾಧಿಸುತ್ತೇವೆ

ಶಶಿ ತರೂರ್, ಕಾಂಗ್ರೆಸ್ ಸಂಸದ

ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ಉತ್ತರ ಪ್ರದೇಶ ಹೊರತುಪಡಿಸಿ ಉಳಿದ ನಾಲ್ಕು ರಾಜ್ಯಗಳ ಚುನಾವಣೆ ಪ್ರಚಾರ ಮತ್ತು ಸಂಘಟನೆಯ ರೂಪರೇಷೆಯ ರೂವಾರಿಯಾಗಿದ್ದರು. ಈ ಎಲ್ಲಾ ರಾಜ್ಯಗಳಲ್ಲಿ ಪಕ್ಷವು ಈ ಹಿಂದಿಗಿಂತ ಕಳಪೆ ಸಾಧನೆ ಮಾಡಿದೆ. ಹೀನಾಯವಾಗಿ ಸೋತಿದೆ. ಇದಕ್ಕೆ ರಾಹುಲ್ ಗಾಂಧಿ ಅವರನ್ನೇ ಹೊಣೆ ಮಾಡಬೇಕು ಎಂದು ಆಗ್ರಹಿಸಲು ಜಿ–23 ನಾಯಕರು ಸಿದ್ಧತೆ ನಡೆಸಿದ್ದಾರೆ. ಉತ್ತರ ಪ್ರದೇಶ ಚುನಾವಣೆಯನ್ನು ‘ಬ್ರ್ಯಾಂಡ್ ಪ್ರಿಯಾಂಕಾ’ ಹೆಸರಿನಲ್ಲಿ ಎದುರಿಸಲಾಗಿತ್ತು. ಆದರೆ ಈ ತಂತ್ರವು ಸಹ ವಿಫಲವಾಗಿದೆ ಎಂದು ಪ್ರಿಯಾಂಕಾ ಅವರನ್ನೂ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಗುರಿ ಮಾಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಪಕ್ಷದ ನಾಯಕತ್ವದ ಬದಲಾವಣೆಗೆ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಒತ್ತಾಯ ಕೇಳಿಬರುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.



ಆಶೀರ್ವಾದ

ಪಂಜಾಬ್‌ನಲ್ಲಿ ಎಎಪಿಯ ಮುಖ್ಯಮಂತ್ರಿ ಅಭ್ಯರ್ಥಿ ಭಗವಂತ ಮಾನ್ ಅವರು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಶುಕ್ರವಾರ ಭೇಟಿಯಾಗಿ ಆಶೀರ್ವಾದ ಪಡೆದರು

–ಪಿಟಿಐ ಚಿತ್ರ

ಗೂಂಡಾರಾಜ್ ಭಯದಿಂದ ಎಸ್‌ಪಿಯಿಂದ ದೂರಸರಿದ ಮತದಾರರು

‘ಬಿಎಸ್‌ಪಿ ಮತ ಬಿಜೆಪಿಗೆ ಸಿಕ್ಕಿದ್ದು ಏಕೆ?’

ಲಖನೌ (ಪಿಟಿಐ): ‘ಸಮಾಜವಾದಿ ಪಕ್ಷವು ಅಧಿಕಾರಕ್ಕೆ ಬಂದರೆ ಉತ್ತರ ಪ್ರದೇಶದಲ್ಲಿ ಮತ್ತೆ ಗೂಂಡಾರಾಜ್ ಬರುತ್ತದೆ ಎಂಬ ಭಯದಿಂದ, ಬಿಎಸ್‌ಪಿಯ ಬೆಂಬಲಕ್ಕಿದ್ದ ಮೇಲ್ಜಾತಿಯ ಮತದಾರರು ಮತ್ತು ದಲಿತರು ನಮ್ಮಿಂದ ದೂರ ಸರಿದರು. ಬಿಜೆಪಿಗೆ ಮತ ನೀಡಿದರು’ ಎಂದು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರು ಹೇಳಿದ್ದಾರೆ.

ಉತ್ತರ ಪ್ರದೇಶ ಚುನಾವಣೆಯಲ್ಲಿ ಶೇ12.8ರಷ್ಟು ಮತಗಳನ್ನು ಪಡೆದಿದ್ದರೂ, ಬಿಎಸ್‌ಪಿ ಗೆದ್ದದ್ದು ಒಂದು ಕ್ಷೇತ್ರದಲ್ಲಿ ಮಾತ್ರ. ಇದು ಬಿಎಸ್‌ಪಿಯ ಈವರೆಗಿನ ಅತ್ಯಂತ ಕಳಪೆ ಸಾಧನೆ. ಬಿಜೆಪಿಯೇತರ ಮತಗಳನ್ನು ಬಿಎಸ್‌ಪಿ ವಿಭಜನೆ ಮಾಡಿದ್ದರಿಂದಲೇ, ಎಸ್‌ಪಿ ಹಲವು ಕ್ಷೇತ್ರಗಳಲ್ಲಿ ಸೋಲಬೇಕಾಯಿತು ಎಂದು ವಿಶ್ಲೇಷಿಸಲಾಗುತ್ತಿದೆ. ಬಿಎಸ್‌ಪಿಯು, ಬಿಜೆಪಿಯ ಬಿ ಟೀಂ ಎಂದು ಕೆಲವರು ಟೀಕಿಸಿದ್ದಾರೆ. ಇದರ ಮಧ್ಯೆಯೇ ಬಿಎಸ್‌ಪಿ ಬೆಂಬಲಿಗರು ಬಿಜೆಪಿಗೆ ಮತ ನೀಡಿದ್ದಾರೆ ಎಂದು ಮಾಯಾವತಿ ಹೇಳಿದ್ದಾರೆ.

‘ಬಿಎಸ್‌ಪಿಯು ಬಿಜೆಪಿಯ ಬಿ ಟೀಂ ಎಂದು ಜಾತಿವಾದಿ ಮಾಧ್ಯಮಗಳು ಪದೇ ಪದೇ ಹೇಳಿದವು. ಇದರಿಂದ ಮುಸ್ಲಿಂ ಮತದಾರರು ಬಿಎಸ್‌ಪಿಯಿಂದ ದೂರವಾದರು. ಮುಸ್ಲಿಂ ಮತದಾರರು ಎಸ್‌ಪಿಯನ್ನು ನಂಬಿಕೆಟ್ಟರು. ಇದು ತ್ರಿಕೋನ ಸ್ಪರ್ಧೆಯಾಗಿದ್ದಿದ್ದರೆ, ಬಿಜೆಪಿ ಅಧಿಕಾರಕ್ಕೆ ಮರಳುವುದನ್ನು ತಡೆಯಬಹುದಿತ್ತು’ ಎಂದು ಹೇಳಿದ್ದಾರೆ.

‘ಬಿಜೆಪಿ ವಿರುದ್ಧದ ನಮ್ಮ ಹೋರಾಟ ಕೇವಲ ರಾಜಕೀಯದ್ದು ಆಗಿರಲಿಲ್ಲ. ಜತೆಗೆ ಅದು ಸೈದ್ಧಾಂತಿಕ ಹೋರಾಟವೂ ಹೌದು. ಚುನಾವಣೆಯಲ್ಲಿ ಎಸ್‌ಪಿ ಸ್ಪರ್ಧಿಸುತ್ತಿರುವಷ್ಟು ಪ್ರಬಲವಾಗಿ ಬಿಎಸ್‌ಪಿ ಸ್ಪರ್ಧಿಸುತ್ತಿಲ್ಲ ಎಂಬ ಸುಳ್ಳನ್ನೂ ಜಾತಿವಾದಿ ಮಾಧ್ಯಮಗಳು ಹರಡಿದವು. ಇದರಿಂದ ಹೆದರಿದ ಬಿಜೆಪಿ ವಿರೋಧಿ ಹಿಂದೂ ಮತದಾರರು ಬಿಎಸ್‌ಪಿಯಿಂದ ದೂರ ಸರಿದರು’ ಎಂದು ಅವರು ಆರೋಪಿಸಿದ್ದಾರೆ.

ಮಾಯಾವತಿ ಹೇಳಿದ್ದು

- ಮತವಿಭಜನೆಗೆ ಜಾತಿವಾದಿ ಮಾಧ್ಯಮಗಳೇ ಕಾರಣ
- ಮುಸ್ಲಿಂ ಮತದಾರರು ಎಸ್‌ಪಿ ನಂಬಿ ಕೆಟ್ಟರು
- ಬಿಜೆಪಿ ವಿರುದ್ಧ ನಮ್ಮದು ಸೈದ್ಧಾಂತಿಕ ಹೋರಾಟ



ಈ ಸೋಲಿನಿಂದ ನಮ್ಮ ಕಾರ್ಯಕರ್ತರು ಧೃತಿಗೆಡಬಾರದು. ಬದಲಿಗೆ ಸೋಲಿನಿಂದ ಪಾಠ ಕಲಿಯಬೇಕು. ಪಕ್ಷವನ್ನು ಮುನ್ನಡೆಸಬೇಕು

ಮಾಯಾವತಿ, ಬಿಎಸ್‌ಪಿ ಮುಖ್ಯಸ್ಥೆ



ಉತ್ತರ ಪ್ರದೇಶದಲ್ಲಿ ಬಿಜೆಪಿ ಗೆಲುವಿಗೆ ಮಾಯಾವತಿ ಮತ್ತು ಅಸಾದುದ್ದೀನ್ ಒವೈಸಿ ಭಾರಿ ಕೊಡುಗೆ ನೀಡಿದ್ದಾರೆ. ಅವರಿಗೆ ಪದ್ಮ ವಿಭೂಷಣ ಮತ್ತು ಭಾರತ ರತ್ನ ನೀಡಬೇಕು

ಸಂಜಯ್ ರಾವುತ್, ಶಿವಸೇನಾ ವಕ್ತಾರ

ಗುಜರಾತ್: ಪ್ರಧಾನಿ ರೋಡ್ ಷೋ

ಅಹಮದಾಬಾದ್ (ಪಿಟಿಐ): ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಜಯಭೇರಿಯ ಹಿಂದೆಯೇ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ತಮ್ಮ ತವರು ರಾಜ್ಯ ಗುಜರಾತ್‌ನಲ್ಲಿ ರೋಡ್ ಷೋ ನಡೆಸಿದರು

ಕೇಸರಿ ಬಣ್ಣದ ಟೋಪಿ ಧರಿಸಿದ್ದ ಪ್ರಧಾನಿ ಸುಮಾರು 10 ಕಿ.ಮೀ.ನಷ್ಟು ದೂರ ತೆರೆದ ವಾಹನದಲ್ಲಿ ನಿಂತು ಜನಸಮೂಹದತ್ತ ಕೈಬೀಸಿ ವಿಜಯದ ಸಂಕೇತ ತೋರಿದರು. ವಿಮಾನನಿಲ್ದಾಣದಿಂದ, ಬಿಜೆಪಿಯ ಮುಖ್ಯ ಕಚೇರಿ ‘ಕಮಲಂ’ವರೆಗೂ ಮೆರವಣಿಗೆ ನಡೆಯಿತು.

ಕೇಸರಿ ಬಣ್ಣದ ರುಮಾಲು ತೊಟ್ಟಿದ್ದ ಮುಖಂಡರು ಭಾಗವಹಿಸಿದ್ದರು. ವಿವಿಧ ಕಲಾವಿದರು ಸಾಂಪ್ರದಾಯಿಕ ನೃತ್ಯ, ಗೀತೆ ಪ್ರಸ್ತುತಪಡಿಸಿದರು. ಪ್ರಧಾನಿ ಭಾವಚಿತ್ರವಿದ್ದ ಭಿತ್ತಿಪತ್ರಗಳು, ಬ್ಯಾನರ್‌ಗಳು ದಾರಿಯುದ್ದಕ್ಕೂ ರಾರಾಜಿಸಿದವು.

ಕಾರ್ಯಕರ್ತನೊಬ್ಬ, ‘ಗುಜರಾತ್‌ನಲ್ಲಿ ಗೆಲ್ಲುವುದು ಬಿಜೆಪಿ ಮಾತ್ರ. ಕಾಂಗ್ರೆಸ್ ಅಥವಾ ಆಮ್ ಆದ್ಮಿ ಪಕ್ಷಕ್ಕೆ ಇಲ್ಲಿ ಭವಿಷ್ಯವಿಲ್ಲ’ ಎಂದು ಹೇಳಿದರು. ಇದನ್ನು ಅನುಮೋದಿಸುವಂತೆ ಮುಖ್ಯಮಂತ್ರಿ ವಿಜಯ್ ರೂಪಾಣಿ ಅವರೂ ‘ರಾಜ್ಯದಲ್ಲಿ ಗೆಲ್ಲುವುದು ನಾವೇ’ ಎಂದು ಹೇಳಿದರು.

ಬಳಿಕ, ಪ್ರಧಾನಿ ಪಕ್ಷದ ಕಚೇರಿಯಲ್ಲಿ ಗುಜರಾತ್ ವಿಧಾನಸಭೆ ಚುನಾವಣೆಯ ಕಾರ್ಯತಂತ್ರ ಕುರಿತು ಮುಖಂಡರ ಜೊತೆಗೆ ಚರ್ಚಿಸಿದರು.

ಬಿಜೆಪಿ ಕಚೇರಿಗೆ ತೆರಳಿದ ಪ್ರಧಾನಿ ಮೋದಿ ಅವರು ಸಂಸದರು, ಶಾಸಕರು ಸೇರಿದಂತೆ ಪಕ್ಷದ ಕಾರ್ಯಕರ್ತರ ಜತೆ ಸಮಾಲೋಚನೆ ನಡೆಸಿದರು. ಭೂಪೇಂದ್ರ ಪಟೇಲ್ ಅವರು ಗುಜರಾತ್ ಮುಖ್ಯಮಂತ್ರಿಯಾದ ಬಳಿಕ ಮೋದಿ ಅವರು ಪಕ್ಷದ ಕಚೇರಿಗೆ ಭೇಟಿ ನೀಡಿರುವುದು ಇದೇ ಮೊದಲು.

‘ಅಭಿವೃದ್ಧಿಗೆ ಸಂದ ಜಯ’

ಜನತೆ ಅಭಿವೃದ್ಧಿ ಪರ ಮತ ಹಾಕುವುದರಿಂದ ಉತ್ತರಪ್ರದೇಶ ಸೇರಿದಂತೆ ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ತವರು ರಾಜ್ಯ ಗುಜರಾತ್ ಪ್ರವಾಸದಲ್ಲಿರುವ ಪ್ರಧಾನಿ ಮೋದಿ ಅವರು ಶುಕ್ರವಾರ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರನ್ನುದ್ದೇಶಿಸಿ ಮಾತನಾಡಿದರು. ಈ ವೇಳೆ ಪ್ರಜಾಪ್ರಭುತ್ವದ ಕಾರಣದಿಂದಾಗಿ ಈ ಹಿಂದೆ ಅಧಿಕಾರದಲ್ಲಿದ್ದ ಪಕ್ಷ ಮತ್ತೆ ಅಧಿಕಾರಕ್ಕೆ ಬರಲು ಕಷ್ಟವಿದ್ದ ಕಡೆಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಮರಳಿದೆ. ಜನತೆ ಅಭಿವೃದ್ಧಿ ಪರ ಮತ ಹಾಕುತ್ತಾರೆ. ಇದರಿಂದ ಇದು ಸಾಧ್ಯವಾಗಿದೆ ಎಂದು ಹೇಳಿದರು.

ಗುಜರಾತ್ ಬಾಪು(ರಾಷ್ಟ್ರ ಪಿತ ಮಹಾತ್ಮ ಗಾಂಧಿ) ಹಾಗೂ ಸರ್ದಾರ್ ಪಟೇಲ್ ಅವರ ಭೂಮಿಯಾಗಿದೆ. ಬಾಪು ಸದಾಕಾಲ ಸ್ವಾವಲಂಬಿ ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡುತ್ತಿದ್ದರು. ಅಜಾದಿ ಕಾ ಅಮೃತ ಮಹೋತ್ಸವದ ಹೊತ್ತಿನಲ್ಲಿ ನಾವು ಬಾಪು ಅವರ ಗ್ರಾಮೀಣಾಭಿವೃದ್ಧಿ ಕನಸನ್ನು ನನಸು ಮಾಡಬೇಕು ಎಂದು ಹೇಳಿದರು.

ಚಾರ್‌ಧಾಮ್: ಉನ್ನತಾಧಿಕಾರ ಸಮಿತಿಗೆ ಸಿಕ್ರಿ ಅಧ್ಯಕ್ಷ

ನವದೆಹಲಿ(ಪಿಟಿಐ): ಹಿಮಾಲಯ ಕಣಿವೆಯುದ್ದಕ್ಕೂ ಚಾರ್‌ಧಾಮ್ ಯೋಜನೆಯಿಂದ ಆಗಬಹುದಾದ ಸಂಚಿತ ಪರಿಣಾಮವನ್ನು ಅಂದಾಜಿಸುವ ಉನ್ನತಾಧಿಕಾರ ಸಮಿತಿಯ ಅಧ್ಯಕ್ಷರಾಗಿ ನಿವೃತ್ತ ನ್ಯಾಯಮೂರ್ತಿ ಎ.ಕೆ.ಸಿಕ್ರಿ ಅವರನ್ನು ಸುಪ್ರೀಂ ಕೋರ್ಟ್ ನೇಮಕ ಮಾಡಿದೆ.

ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಪ್ರೊ.ರವಿ ಚೋಪ್ರಾ ನೀಡಿದ್ದ ರಾಜೀನಾಮೆಯನ್ನು ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಸೂರ್ಯಕಾಂತ್ ಅವರಿದ್ದ ಪೀಠವು ಇದೇ ಸಂದರ್ಭದಲ್ಲಿ ಅಂಗೀಕರಿಸಿತು. ಚೋಪ್ರಾ ಜನವರಿಯಲ್ಲಿ ರಾಜೀನಾಮೆ ನೀಡಿದ್ದರು. ಕೇಂದ್ರ ವನ್ನು ಪ್ರತಿನಿಧಿಸಿದ್ದ ಅಟಾರ್ನಿ ಜನರಲ್ ಕೆ.ಕೆ.ವೇಣುಗೋಪಾಲ್ ಅವರು, ‘ಸುಪ್ರೀಂ ಕೋರ್ಟ್ ಈಗಾಗಲೇ ಸಿಕ್ರಿ ಅವರನ್ನು ಯೋಜನೆಗೆ ಕುರಿತಾದ ಪರಿಸರ ಸಂಬಂಧಿತ ವಿಷಯಗಳ ಗಮನಿಸುವ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರಾಗಿ ನೇಮಿಸಿದೆ.

ಸೇನಾ ಹೆಲಿಕಾಪ್ಟರ್ ಪತನ: ಸಹ ಪೈಲಟ್ ದುರ್ಮರಣ

ಪ್ರಜಾವಾಣಿ ವಾರ್ತೆ

ಶ್ರೀನಗರ: ಉತ್ತರ ಕಾಶ್ಮೀರದ ಬಂಡಿಪೋರಾ ಜಿಲ್ಲೆಯ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಬಳಿಯ ತುಲೈಲ್ ಸೆಕ್ಟರ್‌ನಲ್ಲಿ ಶುಕ್ರವಾರ ಭಾರತೀಯ ಸೇನೆಯ ಚೀತಾ ಹೆಲಿಕಾಪ್ಟರ್ ಪತನಗೊಂಡು, ಸಹಪೈಲಟ್ ಸಾವನ್ನಪ್ಪಿದ್ದಾರೆ.

ಮೇಜರ್ ಸಂಕಲ್ಪ್ ಯಾದವ್ ಮೃತಪಟ್ಟ ಸಹ ಪೈಲಟ್. ಗಂಭೀರವಾಗಿ ಗಾಯಗೊಂಡಿರುವ ಪೈಲಟ್ ಉಧಂಪುರ ಸೇನಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ರಾಜಸ್ತಾನದ ಜೈಪುರ ನಿವಾಸಿಯಾದ ಸಂಕಲ್ಪ ಯಾದವ್ ಅವರು 2015ರಲ್ಲಿ ಸೇವೆಗೆ ಸೇರಿದ್ದರು.

‘ಅನಾರೋಗ್ಯ ಪೀಡಿತ ಯೋಧರೊಬ್ಬರನ್ನು ಕರೆತರುವ ಸಲುವಾಗಿ ತೆರಳುತ್ತಿದ್ದ ವೇಳೆ ತುಲೈಲ್ ಸೆಕ್ಟರ್‌ನ ಬರೂಬ್ ಪ್ರದೇಶದ ಗುಜ್ರಾನ್ ಎಂಬಲ್ಲಿ ಹೆಲಿಕಾಪ್ಟರ್ ಸಂಪರ್ಕ ಕಡಿದುಕೊಂಡಿತು. ತಕ್ಷಣ ರಕ್ಷಣಾ ಹೆಲಿಕಾಪ್ಟರ್ ಬಳಸಿ ಶೋಧ ಕಾರ್ಯಾಚರಣೆ ಆರಂಭಿಸಿದಾಗ ಹಿಮಚ್ಛಾದಿತ ಗುಜ್ರಾನ್ ನಲ್ಲಾ ಪ್ರದೇಶದಲ್ಲಿ ಅಪಘಾತಕ್ಕೀಡಾದ ಹೆಲಿಕಾಪ್ಟರ್ ಅವಶೇಷಗಳು ಪತ್ತೆಯಾಯಿತು. ಪೈಲಟ್ ಹಾಗೂ ಸಹ ಪೈಲಟ್ ಇಬ್ಬರನ್ನು ಉಧಂಪುರದ ಕಮಾಂಡ್ ಆಸ್ಪತ್ರೆಗೆ ದಾಖಲಿಸಲಾಯಿತು. ತೀವ್ರ ಗಾಯಗೊಂಡಿದ್ದ ಸಂಕಲ್ಪ ಯಾದವ್ ಆಸ್ಪತ್ರೆಯಲ್ಲಿ ಮೃತಪಟ್ಟರು. ಮತ್ತೊಬ್ಬ ಗಾಯಾಳು ಸ್ಥಿತಿ ಚಿಂತಾಜನಕವಾಗಿದೆ’ ಎಂದು ಸೇನಾ ಅಧಿಕಾರಿಯೊಬ್ಬರು ತಿಳಿಸಿದರು.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಇಲ್ಲಿನ ಉಧಂಪುರ ಜಿಲ್ಲೆಯ ಶಿವಧಾರಾ ಬೆಟ್ಟದಲ್ಲಿ ಸೇನಾ ಹೆಲಿಕಾಪ್ಟರ್ ಭೂಸ್ಪರ್ಶ ಮಾಡುವಾಗ ಅಪಘಾತಕ್ಕೀಡಾಗಿ ಇಬ್ಬರು ಪೈಲಟ್‌ಗಳು ಮೃತಪಟ್ಟಿದ್ದರು.

ಚೀತಾ ಹೆಲಿಕಾಪ್ಟರ್ ಅತ್ಯಂತ ಕಾರ್ಯಕ್ಷಮತೆ ಹೊಂದಿದ್ದು, ಗುರುತ್ವಾಕರ್ಷಣೆ ಕೇಂದ್ರ ಹಾಗೂ ಅತಿ ಎತ್ತರದ ಪ್ರದೇಶಗಳಲ್ಲಿ ಕಾರ್ಯಾಚರಣೆ ಮಾಡುವ ಜತೆಗೆ ಹೆಚ್ಚು ತೂಕ ಹೊರುವ ಸಾಮರ್ಥ್ಯವನ್ನು ಹೊಂದಿತ್ತು. ಇತರೆ ಎಲ್ಲ ವರ್ಗಗಳ ಹೆಲಿಕಾಪ್ಟರ್‌ಗಳಿಗಿಂತ ಹೆಚ್ಚು ಎತ್ತರದಲ್ಲಿ ಹಾರುವ ಹೆಗ್ಗಳಿಕೆಯನ್ನು ಹೊಂದಿದೆ.

ಅಗಸ್ಟಾ ವೆಸ್ಟ್‌ಲ್ಯಾಂಡ್ ಹಗರಣ: ಮೈಕೆಲ್ ಜೇಮ್ಸ್ ಅರ್ಜಿ ವಜಾ

ನವದೆಹಲಿ: ಕೇಂದ್ರ ತನಿಖಾ ದಳ (ಸಿಬಿಐ) ಮತ್ತು ಜಾರಿ ನಿರ್ದೇಶನಾಲಯವು (ಇ.ಡಿ) ತನಿಖೆ ನಡೆಸುತ್ತಿರುವ ಅಗಸ್ಟಾ ವೆಸ್ಟ್‌ಲ್ಯಾಂಡ್ ಹಗರಣದ ಮಧ್ಯವರ್ತಿ ಕ್ರಿಶ್ಚಿಯನ್ ಮೈಕೆಲ್ ಜೇಮ್ಸ್ ಅವರ ಜಾಮೀನು ಅರ್ಜಿಯನ್ನು ದೆಹಲಿ ಹೈಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

‘ಜೇಮ್ಸ್ ಅವರ ಜಾಮೀನು ಅರ್ಜಿಯನ್ನು ವಜಾಗೊಳಿಸಲಾಗಿದೆ’ ಎಂದು ನ್ಯಾಯಮೂರ್ತಿ ಮನೋಜ್ ಕುಮಾರ್ ಓಹ್ರಿ ಅವರು ಹೇಳಿದರು. ‘ಸಿಬಿಐ ಮತ್ತು ಇ.ಡಿ ನಡೆಸುತ್ತಿರುವ ತನಿಖೆಯಲ್ಲಿ ನನ್ನ ಅಗತ್ಯವಿಲ್ಲ. ಹಾಗಾಗಿ, ನನಗೆ ಜಾಮೀನು ನೀಡಬೇಕು’ ಎಂದು ಕೋರಿ ಜೇಮ್ಸ್ ಅರ್ಜಿ ಸಲ್ಲಿಸಿದ್ದರು.

‘ಆರೋಪಿಯು ಎಂದಿಗೂ ಕಾನೂನಿನ ಪ್ರಕ್ರಿಯೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿಲ್ಲ ಮತ್ತು ಅವರನ್ನು ಕಸ್ಟಡಿಯಲ್ಲಿ ಇರಿಸುವುದರಿಂದ ಯಾವುದೇ ಉದ್ದೇಶವನ್ನು ಪೂರೈಸಲಾಗುವುದಿಲ್ಲ’ ಎಂದೂ ಅರ್ಜಿಯಲ್ಲಿ ಹೇಳಲಾಗಿತ್ತು.

ಆದರೆ, ಸಿಬಿಐ ಮತ್ತು ಇ.ಡಿ ಜಾಮೀನು ನೀಡುವುದನ್ನು ವಿರೋಧಿಸಿದ್ದವು.

‘ಅಗಸ್ಟಾ ವೆಸ್ಟ್‌ಲ್ಯಾಂಡ್‌ನಿಂದ ₹ 3,600 ಕೋಟಿ ಮೊತ್ತದ 12 ವಿವಿಐಪಿ ಹೆಲಿಕಾಪ್ಟರ್‌ಗಳ ಖರೀದಿಗೆ ಸಂಬಂಧಿಸಿದಂತೆ ಭ್ರಷ್ಟಾಚಾರ ಹಗರಣ ನಡೆದಿದ್ದು, ಇದರಲ್ಲಿ ಮಧ್ಯವರ್ತಿಯಾಗಿದ್ದ ಜೇಮ್ಸ್ ಅಗಸ್ಟಾ ವೆಸ್ಟ್‌ಲ್ಯಾಂಡ್‌ನಿಂದ ಸುಮಾರು ₹ 225 ಕೋಟಿ ಪಡೆದಿದ್ದಾರೆ’ ಎನ್ನುವ ಆರೋಪವಿದೆ.

ಜಯದೇವ ಹೃದ್ರೋಗ ಆಸ್ಪತ್ರೆ ವೈದ್ಯರ ಸಾಧನೆ

ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸದೆ ಕವಾಟ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ 17 ವರ್ಷದ ಬಾಲಕನಿಗೆ ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸದೇ ಯಶಸ್ವಿಯಾಗಿ ಕವಾಟ ಬದಲಾವಣೆ ಮಾಡಲಾಗಿದೆ. ₹15 ಲಕ್ಷ ವೆಚ್ಚದ ಈ ಶಸ್ತ್ರಚಿಕಿತ್ಸೆಯನ್ನು ದಾನಿಗಳ ನೆರವಿನಿಂದ ಉಚಿತವಾಗಿ ಒದಗಿಸಲಾಗಿದೆ.

ಬಾಲಕನಿಗೆ ಈ ಮೊದಲು ಎರಡು ಬಾರಿ ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ಮೂರನೇ ಬಾರಿ ಈ ಶಸ್ತ್ರಚಿಕಿತ್ಸೆ ನಡೆಸಿದರೆ ಜೀವಕ್ಕೆ ಅಪಾಯವಾಗುವ ಸಾಧ್ಯತೆಯಿತ್ತು. ಹಾಗಾಗಿ, ಸಂಸ್ಥೆಯ ಮಕ್ಕಳ ಹೃದ್ರೋಗ ತಜ್ಞರಾದ ಡಾ. ಜಯರಂಗನಾಥ್ ಎಂ. ಮತ್ತು ಡಾ. ಜಾನ್ ಜೋಸೆಫ್ ನೇತೃತ್ವದ ವೈದ್ಯರ ತಂಡವು ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸದೆ 19 ಮಿಲಿ ಮೀಟರ್ ಅಂಗಾಂಶ ಕವಾಟ ಅಳವಡಿಸಿದೆ. ಈ ಮಾದರಿಯ ಶಸ್ತ್ರಚಿಕಿತ್ಸೆ ರಾಜ್ಯದಲ್ಲೇ ಮೊದಲು ಎಂದು ಸಂಸ್ಥೆ ಹೇಳಿದೆ.

ಬೆಂಗಳೂರಿನಲ್ಲಿ ವಾಸವಿರುವ ಬಾಲಕನ ತಂದೆ ಐದು ವರ್ಷಗಳ ಹಿಂದೆ ಮೃತಪಟ್ಟಿದ್ದರು. ಅವರು ಪೇಂಟಿಂಗ್ ಕೆಲಸ ಮಾಡುತ್ತಿದ್ದರು. ಮನೆ ಕೆಲಸ ಮಾಡಿ ಜೀವನ ನಿರ್ವಹಿಸುತ್ತಿದ್ದ ತಾಯಿ, ಇಬ್ಬರ ಮಕ್ಕಳ ಜವಾಬ್ದಾರಿ ಹೊಂದಿದ್ದರು.



ಚಿಕಿತ್ಸೆ ಪಡೆದ ಬಾಲಕನೊಂದಿಗೆ (ಎಡದಿಂದ ಬಲಕ್ಕೆ) ಡಾ.ಸಿ.ಎನ್. ಮಂಜುನಾಥ್, ಡಾ. ಜಯರಂಗನಾಥ್ ಎಂ., ಸಂಸ್ಥೆಯ ಸಹ ಪ್ರಾಧ್ಯಾಪಕರಾದ ಡಾ. ಉಷಾ ಎಂ.ಕೆ., ಡಾ. ಪ್ರಿಯದರ್ಶಿನಿ, ಡಾ. ಸೌಮ್ಯಾ ಕಸ್ತೂರಿ, ಡಾ. ಹರಿತಾ, ಡಾ. ಸುಧೀರ್ ಇದ್ದಾರೆ.

‘ಬಾಲಕನಿಗೆ 2012ರಲ್ಲಿ ಹೃದಯ ಸಮಸ್ಯೆ ಕಾಣಿಸಿಕೊಂಡಿತ್ತು. ಜಯದೇವ ಆಸ್ಪತ್ರೆಯಲ್ಲಿ ತಪಾಸಣೆಗೆ ಒಳಪಡಿಸಿದಾಗ ಹೃದಯದ ಬಲಭಾಗದಲ್ಲಿ ಸೋಂಕು ದೃಢಪಟ್ಟಿತ್ತು. ಆ ವೇಳೆ ಸೋಂಕು ಕವಾಟವನ್ನು ಸಂಪೂರ್ಣವಾಗಿ ನಾಶಮಾಡಿತ್ತು. ಸೂಕ್ತ ಚಿಕಿತ್ಸೆ ನೀಡಿ, ತೆರೆದ ಶಸ್ತ್ರಚಿಕಿತ್ಸೆಗೆ ನಡೆಸಿ ಕವಾಟ ಸರಿಪಡಿಸಲಾಗಿತ್ತು ಎಂದು ವೈದ್ಯರು ತಿಳಿಸಿದ್ದಾರೆ.

ನಿರಂತರ ಸಮಸ್ಯೆ: ‘ಒಂದು ವರ್ಷದ ನಂತರ ಪುನಃ ಅದೇ ಕವಾಟದ ಸೋರಿಕೆಯಾಗಿತ್ತು. ಆಗ ಚಿಕಿತ್ಸೆ ಒದಗಿಸಿ, 2017ರಲ್ಲಿ ಸೋರಿಕೆಯನ್ನು ತಡೆಯಲು ಎರಡನೇ ಬಾರಿಗೆ ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಎರಡು ವರ್ಷಗಳ ನಂತರ ಸೋರಿಕೆ ಮತ್ತಷ್ಟು ತೀವ್ರಗೊಂಡಿತು. 2020ರಲ್ಲಿ ಪರೀಕ್ಷೆಗೆ ಒಳಪಡಿಸಿದಾಗ ಆತನ ಹೃದಯದಲ್ಲಿ ಏರುಪೇರು ಕಂಡುಬಂದಿತು. ಆದ್ದರಿಂದ ಅವನನ್ನು ಪುನಃ ಚಿಕಿತ್ಸೆಗೆ ಒಳಪಡಿಸಿ, ‘ರೇಡಿಯೋ ಫ್ರೀಕ್ವೆನ್ಸಿ ಅಬ್ಲೇಶನ್’ ಮೂಲಕ ಕಡಿಮೆ ಇದ್ದ ಹೃದಯದ ಬಡಿತವನ್ನು ಹೆಚ್ಚಿಸಲಾಯಿತು’ ಎಂದು ಹೇಳಿದ್ದಾರೆ.

‘ಸರಿಪಡಿಸಲಾದ ಕವಾಟದಿಂದ ಮತ್ತೆ ಸೋರಿಕೆ ಕಂಡು ಬಂದು, ದೈನಂದಿನ ಕೆಲಸ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೇ, ಹೆಚ್ಚು ಆಯಾಸ ಮತ್ತು ಪಾದಗಳಲ್ಲಿ ಊತ ಕಂಡುಬರುತ್ತಿತ್ತು. ಈಗಾಗಲೇ ಎರಡು ಬಾರಿ ತೆರೆದ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಬಾಲಕನಿಗೆ ಮೂರನೇ ಬಾರಿ ಶಸ್ತ್ರಚಿಕಿತ್ಸೆ ಮಾಡುವುದು ಅಪಾಯಕಾರಿಯಾಗಿತ್ತು. ಆದ್ದರಿಂದ ಹೊಸ ಮಾದರಿಯನ್ನು ಅನುಸರಿಸಿ ಶಸ್ತ್ರಚಿಕಿತ್ಸೆ ನಡೆಸಲಾಯಿತು’ ಎಂದು ವೈದ್ಯರು ತಿಳಿಸಿದ್ದಾರೆ.

ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್, ‘ಈ ಹೃದಯ ಶಸ್ತ್ರಚಿಕಿತ್ಸೆಗೆ ಕವಾಟ ವೆಚ್ಚ ಸೇರಿ ₹ 15 ಲಕ್ಷ ಆಗಿದೆ. ರೋಗಿಯ ಆರ್ಥಿಕ ಪರಿಸ್ಥಿತಿ ಪರಿಗಣಿಸಿ, ದಾನಿಗಳಿಂದ ₹ 6.5 ಲಕ್ಷ ಸಂಗ್ರಹಿಸಲಾಗಿದೆ. ಬಾಕಿ ಮೊತ್ತವನ್ನು ಸಂಸ್ಥೆ ಮತ್ತು ಕವಾಟ ತಯಾರಿಕಾ ಕಂಪನಿಯಿಂದ ಭರಿಸಲಾಗಿದೆ’ ಎಂದು ಹೇಳಿದ್ದಾರೆ.

ಏ. 26ರಿಂದ ಸಿಬಿಎಸ್‌ಇ 10, 12ನೇ ತರಗತಿ ಪರೀಕ್ಷೆ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 10 ಮತ್ತು 12ನೇ ತರಗತಿಯ ಎರಡನೇ ಅವಧಿಯ ಬೋರ್ಡ್ ಪರೀಕ್ಷೆಗಳು ಏಪ್ರಿಲ್ 26ರಿಂದ ಪ್ರಾರಂಭವಾಗಲಿವೆ ಎಂದು ಸಿಬಿಎಸ್‌ಇ ಶುಕ್ರವಾರ ತಿಳಿಸಿದೆ.

‘ಈಗಾಗಲೇ ಮೊದಲ ಅವಧಿಯ ಬೋರ್ಡ್ ಪರೀಕ್ಷೆ ಮುಕ್ತಾಯವಾಗಿದ್ದು, ಏ.26ರಿಂದ 10 ಮತ್ತು 12ನೇ ತರಗತಿಗೆ ಎರಡನೇ ಅವಧಿಯ ಪರೀಕ್ಷೆಗಳು ನಡೆಯಲಿವೆ. 10ನೇ ತರಗತಿ ಪರೀಕ್ಷೆ ಮೇ 24ರಂದು ಹಾಗೂ 12ನೇ ತರಗತಿ ಪರೀಕ್ಷೆ ಜೂನ್ 15ರಂದು ಮುಕ್ತಾಯವಾಗಲಿದೆ.

ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ ಶಾಲೆಗಳು ಬಂದ್ ಆಗಿದ್ದನ್ನು ಗಮನದಲ್ಲಿಟ್ಟುಕೊಂಡು ಮೊದಲ ಮತ್ತು ಎರಡನೇ ಅವಧಿಯ ಪರೀಕ್ಷೆಗಳ ನಡುವೆ ಸಾಕಷ್ಟು ಅಂತರ ನೀಡಲಾಗಿದೆ’ ಎಂದು ಸಿಬಿಎಸ್‌ಇ ಪ್ರಕಟಣೆಯಲ್ಲಿ ತಿಳಿಸಿದೆ.

‘ಜೆಇಇ ಮುಖ್ಯಪರೀಕ್ಷೆ ಸೇರಿದಂತೆ ಇತರ ಸ್ಪರ್ಧಾತ್ಮಕ ಪರೀಕ್ಷೆಗಳ ವೇಳಾಪಟ್ಟಿಯನ್ನು ಸಿದ್ಧಪಡಿಸುವಾಗ ಕಾಳಜಿಯನ್ನು ವಹಿಸಲಾಗಿದ್ದು, ಯಾವುದೇ ಎರಡು ವಿಷಯಗಳ ಪರೀಕ್ಷೆ ಒಂದೇ ದಿನಾಂಕದಂದು ಬಾರದಂತೆ ಎಚ್ಚರಿಕೆ ವಹಿಸಲಾಗಿದೆ’ ಎಂದೂ ಹೇಳಿದೆ. ಬೋರ್ಡ್ ಪರೀಕ್ಷೆಗಳನ್ನು ಎರಡು ಅವಧಿಗಳಲ್ಲಿ ನಡೆಸಲಾಗುವುದು ಎಂದು ಸಿಬಿಎಸ್‌ಇ ಕಳೆದ ವರ್ಷ ತಿಳಿಸಿತ್ತು.

ಸಂಕ್ಷಿಪ್ತ ಸುದ್ದಿ

ವಯೋಮಿತಿ ಏರಿಕೆ ರದ್ದುಪಡಿಸಿ: ಶಶಿ ತರೂರ್

ತಿರುವನಂತಪುರ: ಕೇಂದ್ರೀಯ ವಿದ್ಯಾಲಯಗಳಲ್ಲಿ 2022–23ನೇ ಸಾಲಿನಿಂದ ಒಂದನೇ ತರಗತಿ ಪ್ರವೇಶಕ್ಕೆ ವಯೋಮಿತಿಯನ್ನು ಐದರಿಂದ ಆರಕ್ಕೆ ಏರಿಕೆ ಮಾಡಿರುವ ನಿರ್ಧಾರವನ್ನು ಕೇಂದ್ರ ಸರ್ಕಾರ ವಾಪಸ್ ಪಡೆಯಬೇಕು ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಒತ್ತಾಯಿಸಿದ್ದಾರೆ.

ಈ ಬಗ್ಗೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಿಗೆ ಪತ್ರ ಬರೆದಿರುವ ಅವರು, ವಯೋಮಿತಿ ಬದಲಾವಣೆಯಿಂದ ಐದರಿಂದ ಆರು ವರ್ಷದವರೆಗಿನ ಸಾಕಷ್ಟು ಮಕ್ಕಳು ಕೇಂದ್ರೀಯ ವಿದ್ಯಾಲಯಕ್ಕೆ ಪ್ರವೇಶ ಪಡೆಯಲು ಅನರ್ಹರಾಗುತ್ತಾರೆ. ಆದ್ದರಿಂದ ಈ ನಿರ್ಧಾರದಿಂದ ಕೇಂದ್ರ ಸರ್ಕಾರ ಹಿಂದೆ ಸರಿಯಬೇಕೆಂದು ಆಗ್ರಹಿಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ ಪ್ರಕಾರ ವಯೋಮಿತಿ ಏರಿಕೆ ನಿರ್ಧಾರವನ್ನು ಮುಂಚಿತವಾಗಿಯೇ ತಿಳಿಸದ ಕೇಂದ್ರೀಯ ವಿದ್ಯಾಲಯ ಸಂಘಟನೆ ವಿರುದ್ಧ ಪೋಷಕರಿಂದ ಅಸಮಾಧಾನ ವ್ಯಕ್ತವಾಗಿದೆ. ಹಲವು ಶಾಲೆಗಳು ಈ ನೀತಿಯನ್ನು ಇನ್ನೂ ಜಾರಿಗೆ ತಂದಿಲ್ಲ.

ಆಶಿಶ್ ಮಿಶ್ರಾ ಜಾಮೀನು ಅರ್ಜಿ: 15ಕ್ಕೆ ವಿಚಾರಣೆ

ನವದೆಹಲಿ(ಪಿಟಿಐ): ಲಖಿಂಪುರ ಖೇರಿ ಪ್ರಕರಣದ ಪ್ರಮುಖ ಆರೋಪಿ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾಗೆ ಅಲಹಾಬಾದ್ ಹೈಕೋರ್ಟ್ ಮಂಜೂರು ಮಾಡಿರುವ ಜಾಮೀನು ರದ್ದು ಮಾಡುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆ ಮಾರ್ಚ್ 15ರಂದು ನಡೆಸಲು ಸುಪ್ರೀಂ ಕೋರ್ಟ್ ಒಪ್ಪಿಗೆ ಸೂಚಿಸಿದೆ.

ಮಿಶ್ರಾಗೆ ನೀಡಲಾದ ಜಾಮೀನು ರದ್ದು ಕೋರಿ ರೈತರಾದ ಜಗಜೀತ್ ಸಿಂಗ್, ಪವನ್ ಕಶ್ಯಪ್ ಮತ್ತು ಸುಖ್ವಿಂದರ್ ಸಿಂಗ್ ಅವರು ಪ್ರಶಾಂತ್ ಭೂಷಣ ಮೂಲಕ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಉಕ್ರೇನ್‌ನಿಂದ ಮರಳಿದವರ ಶಿಕ್ಷಣಕ್ಕೆ ₹ 10 ಕೋಟಿ

ತಿರುವನಂತಪುರ: ಉಕ್ರೇನ್‌ನಿಂದ ಮರಳಿರುವ ಕೇರಳದ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಮುಂದುವರಿಸಲು ನೆರವಾಗುವ ಸಂಬಂಧ ಅಗತ್ಯ ಕ್ರಮವಹಿಸಬೇಕು ಎಂದು ಕೇರಳ ಸರ್ಕಾರವು, ರಾಜ್ಯದ ಅನಿವಾಸಿ ವ್ಯವಹಾರಗಳ ಇಲಾಖೆಗೆ ಸೂಚಿಸಿದೆ.

ಉಕ್ರೇನ್‌ನಿಂದ ಮರಳಿದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗಲು ₹ 10 ಕೋಟಿ, ಶಾಂತಿ ಸ್ಥಾಪನೆ ಚಟುವಟಿಕೆಗಳಿಗಾಗಿ ₹ 2 ಕೋಟಿಯನ್ನು ಸರ್ಕಾರ ಬಜೆಟ್‌ನಲ್ಲಿ ಕಾಯ್ದಿರಿಸಿದೆ.

ಪ್ರಸ್ತುತ 3,122 ಮಲಯಾಳಿಯರು ಉಕ್ರೇನ್‌ನಿಂದ ಕೇರಳಕ್ಕೆ ವಾಪಸಾಗಿದ್ದಾರೆ. ಶಿಕ್ಷಣಕ್ಕಾಗಿ ವಿದೇಶಗಳಿಗೆ ತೆರಳಿರುವವರ ವಿವರಗಳನ್ನು ಸಂಗ್ರಹಿಸಲಾಗುವುದು ಎಂದು ಸಚಿವರು ತಿಳಿಸಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇಂದಿನಿಂದ ಪಿಂಕ್ ಬಾಲ್ ಟೆಸ್ಟ್: ಭಾರತ – ಶ್ರೀಲಂಕಾ ಮುಖಾಮುಖಿ

ಉದ್ಯಾನನಗರಿಯಲ್ಲಿ ಕ್ರಿಕೆಟ್ 'ಹೊನಲು'

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈಗ ಜೀವಕಳೆ ತುಂಬಿದೆ. ಮೈದಾನದ ಹಸಿರು ಹುಲ್ಲಿನ ಮೇಲೆ ಹೊನಲು ಬೆಳಕಿನ ಕಿರಣಗಳ ಚಿನ್ನಾಟ ಮನಮುದಗೊಳಿಸುವಂತಿದೆ.

ಕೋವಿಡ್ ಬಿಕ್ಕಟ್ಟಿನಿಂದಾಗಿ ಸತತ ಎರಡು ವರ್ಷಗಳಿಂದ ಮಂಕಾಗಿದ್ದ ಈ ಅಂಗಣದಲ್ಲಿ ಈಗ ಹೊಸಕಾಂತಿ ಮೂಡಿದೆ. ಐತಿಹಾಸಿಕ ಟೆಸ್ಟ್ ಪಂದ್ಯದ ಆಯೋಜನೆಗೆ ಸಿದ್ಧವಾಗಿದೆ. ಉದ್ಯಾನನಗರಿಯ ಕ್ರಿಕೆಟ್ ಇತಿಹಾಸದಲ್ಲಿ ಇದೇ ಮೊದಲ ಸಲ ಪಿಂಕ್ ಬಾಲ್ ಟೆಸ್ಟ್ ಆಯೋಜನೆಗೊಂಡಿದ್ದು ಶನಿವಾರ ಆರಂಭವಾಗಲಿದೆ.

ಮೊಹಾಲಿಯಲ್ಲಿ ನಡೆದಿದ್ದ ಸರಣಿಯ ಮೊದಲ ಪಂದ್ಯದಲ್ಲಿ ಗೆದ್ದಿರುವ ಭಾರತ ತಂಡವು ಬೆಂಗಳೂರಿನಲ್ಲಿಯೂ ಜಯಿಸುವ ನೆಚ್ಚಿನ ತಂಡವಾಗಿದೆ. ಎಲ್ಲ ವಿಧದಿಂದಲೂ ಶ್ರೀಲಂಕಾಗಿಂತ ಭಾರತವು ಬಲಾಢ್ಯ ತಂಡವಾಗಿದೆ. ಅಲ್ಲದೇ ಇದೇ ಮೊದಲ ಬಾರಿ ರೋಹಿತ್ ನಾಯಕತ್ವದಲ್ಲಿ ಪಂದ್ಯ ನಡೆಯಲಿದೆ. ಬೆಂಗಳೂರಿನ ರಾಹುಲ್ ದ್ರಾವಿಡ್ ಕೂಡ ಕೋಚ್ ಆದ ನಂತರ ಪ್ರಥಮ ಬಾರಿಗೆ ತವರಿನಂಗಳದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅಲ್ಲದೇ ಈ ಕ್ರೀಡಾಂಗಣದಲ್ಲಿ ನಾಲ್ಕು ವರ್ಷಗಳ ನಂತರ ಟೆಸ್ಟ್ ಪಂದ್ಯ ನಡೆಯುತ್ತಿದೆ. ಅದರಿಂದಾಗಿಯೇ ಈ ವಾರಾಂತ್ಯದ ಪ್ರಮುಖ ಆಕರ್ಷಣೆಯಾಗಿ ಪ್ರೇಕ್ಷಕರನ್ನು ಮೈದಾನದತ್ತ ಸೆಳೆಯುವ ನಿರೀಕ್ಷೆ ಇದೆ.

ಮೂರೇ ದಿನಕ್ಕೆ ಮುಕ್ತಾಯವೇ?: ಮೊಹಾಲಿಯಲ್ಲಿ ನಡೆದಿದ್ದ ಮೊದಲ ಟೆಸ್ಟ್ ಪಂದ್ಯವು ಕೇವಲ ಮೂರು ದಿನಗಳಲ್ಲಿಯೇ ಮುಗಿದಿತ್ತು. ಕಳೆದ ಐದು ವರ್ಷಗಳಲ್ಲಿ ಭಾರತದಲ್ಲಿ ನಡೆದ ಟೆಸ್ಟ್ ಪಂದ್ಯಗಳ ಪೈಕಿ ಬಹಳಷ್ಟು ಮೂರು ಅಥವಾ ಮೂರುವರೆ ದಿನಗಳಲ್ಲಿ ಮುಗಿಯುತ್ತಿವೆ. ಅದರಿಂದಾಗಿ ಬೆಂಗಳೂರಿನ ಪಂದ್ಯವೂ ಮೂರು ದಿನದಲ್ಲಿ ಅಂತ್ಯವಾಗುವುದೇ ಎಂಬ ಕುತೂಹಲ ಕೆರಳಿಸಿದೆ.



ಹೊನಲು ಬೆಳಕಿನಲ್ಲಿ ಕಂಗೊಳಿಸುತ್ತಿರುವ ಚಿನ್ನಸ್ವಾಮಿ ಕ್ರೀಡಾಂಗಣ

ಅದರಿಂದಾಗಿಯೇ ಮೊದಲ ಮೂರು ದಿನಗಳ ಆಟದ ಎಲ್ಲ ಟಿಕೆಟ್‌ಗಳು ಬಿಕರಿಯಾಗಿದ್ದು, ನಾಲ್ಕು ಮತ್ತು ಐದನೇ ದಿನದ ಟಿಕೆಟ್‌ಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಲಭ್ಯ ಇವೆ ಎಂದು ಕೆಎಸ್‌ಸಿಎ ಮೂಲಗಳು ಹೇಳುತ್ತವೆ. ಮೊದಲ ದಿನ ಪಿಚ್ ವರ್ತಿಸುವ ರೀತಿಯೇ ಪಂದ್ಯದ ಫಲಿತಾಂಶಕ್ಕೆ ದಿಕ್ಸೂಚಿಯಾಗುವುದು ಖಚಿತ.

'ಪಿಚ್ ಬಹಳ ಶುಷ್ಕವಾಗಿದೆ. ಆದ್ದರಿಂದ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ನೀಡುವಂತೆ ಕಾಣುತ್ತಿದೆ' ಎಂದು ಶ್ರೀಲಂಕಾ ತಂಡದ ನಾಯಕ ದಿಮುತ ಕರುಣರತ್ನೆ ಹೇಳಿದ್ದಾರೆ. ಇದರಿಂದಾಗಿ ಟಾಸ್ ಜಯಿಸುವ ತಂಡವು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಳ್ಳುವ ಸಾಧ್ಯತೆಯೇ ಹೆಚ್ಚಿದೆ. ಮೊಹಾಲಿಯಲ್ಲಿಯೂ ಮೊದಲು ಬ್ಯಾಟಿಂಗ್ ಮಾಡಿದ್ದ ಭಾರತ ತಂಡವು ದೊಡ್ಡ ಮೊತ್ತ ಪೇರಿಸಿತ್ತು. ನಂತರ ಇನಿಂಗ್ಸ್ ಮತ್ತು 222 ರನ್‌ಗಳ ಭಾರಿ ಅಂತರದ ಜಯ ಸಾಧಿಸಿತ್ತು.

> **ವೃತ್ತಿಪರ ಕ್ರಿಕೆಟಿಗರಾಗಿರುವ ನಾವು ಯಾವುದೇ ಮಾದರಿ, ವಾತಾವರಣಕ್ಕೆ ತಕ್ಷಣ ಹೊಂದಿಕೊಳ್ಳಬೇಕು. ಅದರಿಂದ ಉತ್ತಮ ಫಲಿತಾಂಶ ಪಡೆಯಲು ಸಾಧ್ಯ**
> **ಜಸ್‌ಪ್ರೀತ್ ಬೂಮ್ರಾ**
> ಭಾರತ ತಂಡದ ಬೌಲರ್

ಈ ಪಂದ್ಯದಲ್ಲಿ ಸ್ಥಳೀಯ ಆಟಗಾರ ಮಯಂಕ್ ಅಗರವಾಲ್ ನಾಯಕ ರೋಹಿತ್ ಜೊತೆ ಇನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತ. ಮೊಹಾಲಿಯಲ್ಲಿ ಮೂರನೇ ಕ್ರಮಾಂಕದಲ್ಲಿ ಆಡಿದ್ದ ಹನುಮ ವಿಹಾರಿಗೆ ಮತ್ತೊಂದು ಅವಕಾಶ ಸಿಗಬಹುದು.

ಒಂದೊಮ್ಮೆ ಅವರಿಗೆ ವಿಶ್ರಾಂತಿ ನೀಡಿದರೆ ಯುವ ಬ್ಯಾಟರ್ ಶುಭಮನ್ ಗಿಲ್ ಆಡಬಹುದು. ನಾಲ್ಕರಲ್ಲಿ ವಿರಾಟ್ ಕೊಹ್ಲಿ ಮತ್ತು ಐದರಲ್ಲಿ ರಿಷಭ್ ಪಂತ್ ಕಣಕ್ಕಿಳಿಯುವುದು ಖಚಿತ. ಶ್ರೇಯಸ್ ಮತ್ತೊಂದು ಅವಕಾಶ ಪಡೆಯಬಹುದು. ಜಡೇಜ ಯಥಾಪ್ರಕಾರ ಏಳನೇ ಸ್ಥಾನದಲ್ಲಿ ಮತ್ತು ನಂತರದ ಕ್ರಮಾಂಕದಲ್ಲಿ ಅಶ್ವಿನ್ ಇರುವುದರಿಂದ ಕೆಳಹಂತದವರೆಗೂ ಬ್ಯಾಟಿಂಗ್ ಬಲಿಷ್ಠವಾಗಿದೆ. ಜಯಂತ್ ಯಾದವ್ ಬದಲಿಗೆ ಅಕ್ಷರ್ ಪಟೇಲ್ ಸ್ಥಾನ ಪಡೆಯುವ ಸಾಧ್ಯತೆ ಇದೆ.


ದಿಮುತ ಕರುಣರತ್ನೆ

ಇದನ್ನು ಕಟ್ಟಿಹಾಕಲು ಶ್ರೀಲಂಕಾದ ಬೌಲರ್‌ಗಳಾದ ಲಕ್ಮಲ್, ಎಂಬುಲದೆನಿಯಾ ಮತ್ತು ಫರ್ನಾಂಡೊ ಅವರು ವಿಶೇಷ ಯೋಜನೆಯೊಂದಿಗೆ ಕಣಕ್ಕಿಳಿಯುವುದು ಅನಿವಾರ್ಯವಾಗಿದೆ.

ಪ್ರವಾಸಿ ಬಳಗದ ಅಗ್ರಕ್ರಮಾಂಕದ ಬ್ಯಾಟರ್‌ಗಳು ಬೂಮ್ರಾ ನೇತೃತ್ವದ ಆತಿಥೇಯ ಬೌಲರ್‌ಗಳ ಪಡೆಯ ಸವಾಲನ್ನು ಎದುರಿಸಿ ದೀರ್ಘ ಇನಿಂಗ್ಸ್ ಆಡುವಲ್ಲಿ ಯಶಸ್ವಿಯಾದರೆ, ಪಂದ್ಯವು ರೋಚಕ ಅಂತ್ಯ ಕಾಣುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.


ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ಅಭ್ಯಾಸ ನಡೆಸಿದ ರವೀಂದ್ರ ಜಡೇಜ, ಬ್ಯಾಟರ್ ಶುಭಮನ್ ಗಿಲ್ ಮತ್ತು ನಾಯಕ ರೋಹಿತ್ ಶರ್ಮಾ ಮಾತುಕತೆ –ಪ್ರಜಾವಾಣಿ ಚಿತ್ರಗಳು: ಪಿ. ರಂಜು

ಪಿಂಕ್ ಬಾಲ್ ಟೆಸ್ಟ್ ಆಡಿರುವ ದೇಶಗಳು

ತಂಡ	ಪಂದ್ಯ	ಜಯ	ಸೋಲು
ಆಸ್ಟ್ರೇಲಿಯಾ	10	10	0
ಇಂಗ್ಲೆಂಡ್	6	1	5
ನ್ಯೂಜಿಲೆಂಡ್	3	1	2
ಪಾಕಿಸ್ತಾನ	4	1	3
ದ.ಆಫ್ರಿಕಾ	2	1	1
ಶ್ರೀಲಂಕಾ	4	2	2
ಭಾರತ	3	2	1
ವಿಂಡೀಸ್	3	0	3
ಜಿಂಬಾಬ್ವೆ	1	0	1
ಬಾಂಗ್ಲಾ	1	0	1

ಬಲಾಬಲ

45 ಪಂದ್ಯ
21 ಭಾರತ ಜಯ
7 ಶ್ರೀಲಂಕಾ ಜಯ
17 ಡ್ರಾ

ಐಸಿಸಿ ರ‍್ಯಾಂಕಿಂಗ್

ಭಾರತ 2 | ಶ್ರೀಲಂಕಾ 7

ಮತ್ತೊಂದು ದಾಖಲೆಯತ್ತ ಅಶ್ವಿನ್

ಕಪಿಲ್ ದೇವ್ ವಿಕೆಟ್ ದಾಖಲೆಯನ್ನು ಮೀರಿ ನಿಂತ ಆಫ್‌ಸ್ಪಿನ್ನರ್ ಆರ್.ಅಶ್ವಿನ್ ಈಗ ಇನ್ನೊಂದು ಸಾಧನೆಯ ಮೇಲೆ ಕಣ್ಣಿಟ್ಟಿದ್ದಾರೆ.

ಅವರು ಈ ಪಂದ್ಯದಲ್ಲಿ ನಾಲ್ಕು ವಿಕೆಟ್ ಗಳಿಸಿದರೆ, ದಕ್ಷಿಣ ಆಫ್ರಿಕಾದ ಮಾಜಿ ಬೌಲರ್ ಡೇಲ್ ಸ್ಟೇನ್ ಅವರ ದಾಖಲೆಯನ್ನು ಸರಿಗಟ್ಟುವರು. ಡೇಲ್ ಖಾತೆಯಲ್ಲಿ 439 ವಿಕೆಟ್‌ಗಳಿವೆ. ಅಶ್ವಿನ್ ಖಾತೆಯಲ್ಲಿ 434 ವಿಕೆಟ್‌ಗಳಿವೆ.

ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಸಾಧನೆ

ಬೆಂಗಳೂರು: ಭಾರತ ತಂಡವು ಇದುವರೆಗೆ ಮೂರು ಪಿಂಕ್ ಬಾಲ್ ಟೆಸ್ಟ್‌ಗಳಲ್ಲಿ ಆಡಿದೆ. ಅದರಲ್ಲಿ ಎರಡರಲ್ಲಿ ಗೆದ್ದು, ಒಂದರಲ್ಲಿ ಸೋತಿದೆ. ಭಾರತವು ಬಾಂಗ್ಲಾ ಮತ್ತು ಇಂಗ್ಲೆಂಡ್ ಎದುರು ಜಯಿಸಿದೆ. ಆದರೆ, ಆಸ್ಟ್ರೇಲಿಯಾ ಎದುರು ಸೋತಿತ್ತು.

ಹಗಲು–ರಾತ್ರಿ ಟೆಸ್ಟ್‌ನಲ್ಲಿ ಶತಕ ಬಾರಿಸಿದ ಭಾರತದ ಏಕೈಕ ಆಟಗಾರ ವಿರಾಟ್ ಕೊಹ್ಲಿ. ಕೋಲ್ಕತ್ತದಲ್ಲಿ ಬಾಂಗ್ಲಾದೇಶ ಎದುರಿನ ಪಂದ್ಯದಲ್ಲಿ ಅವರು 136 ರನ್ ಗಳಿಸಿದ್ದರು. ಶ್ರೀಲಂಕಾ ಕೂಡ 3 ಹೊನಲು–ಬೆಳಕಿನ ಟೆಸ್ಟ್‌ಗಳನ್ನು ಆಡಿದೆ. 2ರಲ್ಲಿ ಗೆದ್ದು,-1ರಲ್ಲಿ ಸೋತಿದೆ.

ಮಿಥಾಲಿ ರಾಜ್ ಬಳಗಕ್ಕೆ ಬ್ಯಾಟಿಂಗ್ ವೈಫಲ್ಯದ ಚಿಂತೆ

ವಿಶ್ವಕಪ್ ಕ್ರಿಕೆಟ್: ವಿಂಡೀಸ್ ಸವಾಲು

ಹ್ಯಾಮಿಲ್ಟನ್, ನ್ಯೂಜಿಲೆಂಡ್: ಮೊದಲ ಎರಡು ಪಂದ್ಯಗಳಲ್ಲಿ ಮಿಶ್ರ ಫಲ ಕಂಡಿರುವ ಭಾರತ ತಂಡ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಮೂರನೇ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಶನಿವಾರ ಸೆಣಸಲಿದೆ.

ಮೊದಲ ಪಂದ್ಯದಲ್ಲಿ ಪಾಕಿಸ್ತಾನದ ವಿರುದ್ಧ ಭರ್ಜರಿ ಜಯ ಸಾಧಿಸಿದ್ದ ಮಿಥಾಲಿ ರಾಜ್ ಬಳಗ ನಂತರ ನ್ಯೂಜಿಲೆಂಡ್ ಎದುರು ನೀರಸ ಆಟವಾಡಿ ಸೋತಿತ್ತು. ಅಗ್ರ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯ ಈ ಪಂದ್ಯದ ಸೋಲಿಗೆ ಪ್ರಮುಖ ಕಾರಣವಾಗಿತ್ತು. ಸತತ ಸೋಲು ಕಂಡರೆ ತಂಡದ ಮುಂದಿನ ಹಾದಿ ಕಠಿಣವಾಗಲಿದೆ.

ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ ನಿರೀಕ್ಷಿತ ಸಾಮರ್ಥ್ಯ ತೋರಲಾಗದ ಸ್ಮೃತಿ ಮಂದಾನ, ಮಿಥಾಲಿ ರಾಜ್, ಯುವ ಆಟಗಾರ್ತಿ ಯಾಸ್ತಿಕಾ ಭಾಟಿಯಾ ಮತ್ತು ಆಲ್‌ರೌಂಡರ್ ದೀಪ್ತಿ ಶರ್ಮಾ ಅವರ ಮೇಲೆ ಟೀಕಾ ಪ್ರಹಾರ ಉಂಟಾಗಿತ್ತು. ಹರ್ಮನ್‌ಪ್ರೀತ್ ಕೌರ್ 62 ಎಸೆತಗಳಲ್ಲಿ 71 ರನ್ ಗಳಿಸಿ ಮಿಂಚಿದ್ದು ಬಿಟ್ಟರೆ ಬೇರೆ ಯಾರಿಗೂ ಮಿಂಚಲು ಆಗಲಿಲ್ಲ.

ಮೊದಲ ಪಂದ್ಯದಲ್ಲಿ ವೈಫಲ್ಯ ಕಂಡಿದ್ದ ಶೆಫಾಲಿ ವರ್ಮಾ ಅವರನ್ನು ಎರಡನೇ ಪಂದ್ಯದಿಂದ ಕೈಬಿಡಲಾಗಿತ್ತು. ಆದರೆ ವೆಸ್ಟ್ ಇಂಡೀಸ್ ಎದುರಿನ ಪಂದ್ಯದಲ್ಲಿ ಅಂತಿಮ 11ರ ಬಳಗದಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆ ನಿಚ್ಚಳವಾಗಿದೆ. ಅವರಿಗಾಗಿ ಯಾಸ್ತಿಕಾ ಭಾಟಿಯ ಅವರನ್ನು ಹೊರಗಿರಿಸುವ ಸಾಧ್ಯತೆ ಇದೆ. ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ 261 ರನ್‌ಗಳ ಗುರಿ ಬೆನ್ನತ್ತಿದ ಭಾರತ ಮೊದಲ 20 ಓವರ್‌ಗಳಲ್ಲಿ 50 ರನ್ ಮಾತ್ರ ಗಳಿಸಿತ್ತು. ಪಂದ್ಯದಲ್ಲಿ ಒಟ್ಟಾರೆ 162 ಡಾಟ್ ಬಾಲ್‌ಗಳಿದ್ದವು.


ಮಿಥಾಲಿ ರಾಜ್ –ಎಎಫ್‌ಪಿ ಚಿತ್ರ

ಮಿಥಾಲಿ ಅವರಿಗೆ ಇದು ವೃತ್ತಿಜೀವನದ ಕೊನೆಯ ವಿಶ್ವಕಪ್ ಆಗಿರುವ ಸಾಧ್ಯತೆ ಇದೆ. ಆದ್ದರಿಂದ ಅವರ ಮೇಲೆ ನಿರೀಕ್ಷೆಗಳು ಹೆಚ್ಚು ಇವೆ. ಸ್ಮೃತಿ ಅವರಿಗೂ ನಿರೀಕ್ಷೆಗೆ ತಕ್ಕಂತೆ ಆಡಲು ಆಗುತ್ತಿಲ್ಲ. ಹೀಗಾಗಿ ಪೂಜಾ ವಸ್ತ್ರಕರ್ ಮತ್ತು ಸ್ನೇಹ್ ರಾಣಾ ಅವರಂಥ ಆಟಗಾರ್ತಿಯರ ಮೇಲೆ ಒತ್ತಡ ಹೆಚ್ಚಿದೆ. ಆರಂಭಿಕ ಬ್ಯಾಟರ್ ಎಸ್.ಮೇಘನಾ ಅವರನ್ನು ಆರಿಸದೇ ಇರುವುದರ ಬಗ್ಗೆ ನೀತು ಡೇವಿಡ್ ನೇತೃತ್ವದ ಆಯ್ಕೆ ಸಮಿತಿ ಮೇಲೆ ಟೀಕೆಗಳು ಕೇಳಿಬಂದಿದ್ದವು.

ಭರವಸೆಯಲ್ಲಿ ಟೇಲರ್ ಬಳಗ: ಸ್ಟೆಫಾನಿ ಟೇಲರ್ ನಾಯಕತ್ವದ ವೆಸ್ಟ್ ಇಂಡೀಸ್ ತಂಡ ಮೊದಲ ಎರಡೂ ಪಂದ್ಯಗಳನ್ನು ಗೆದ್ದು ಭರವಸೆಯಲ್ಲಿದೆ. ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಗೆದ್ದಿರುವ ತಂಡ ಎರಡನೇ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಇಂಗ್ಲೆಂಡ್‌ಗೆ ಸೋಲುಣಿಸಿತ್ತು.

ಪಂದ್ಯ ಆರಂಭ: ಬೆಳಿಗ್ಗೆ 6.30 (ಭಾರತೀಯ ಕಾಲಮಾನ)
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಪಾಕಿಸ್ತಾನಕ್ಕೆ ಸೋಲು

ಮೌಂಟ್ ಮಾಂಗನೂಯಿ, ನ್ಯೂಜಿಲೆಂಡ್ (ಎಎಫ್‌ಪಿ): ಸತತ ಮೂರನೇ ಸೋಲು ಕಂಡಿರುವ ಪಾಕಿಸ್ತಾನ ತಂಡಕ್ಕೆ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪ್ಲೇ ಆಫ್ ಹಂತದ ಹಾದಿ ಕಠಿಣವಾಗಿದೆ. ಶುಕ್ರವಾರ ನಡೆದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಎದುರು ಪಾಕಿಸ್ತಾನ ಆರು ರನ್‌ಗಳಿಂದ ಸೋತಿತು.

ಭಾರತ ಮತ್ತು ಆಸ್ಟ್ರೇಲಿಯಾ ವಿರುದ್ಧ ಮೊದಲ ಎರಡು ಪಂದ್ಯಗಳಲ್ಲಿ ಸೋತಿದ್ದ ಪಾಕಿಸ್ತಾನ ಶುಕ್ರವಾರ ಗೆಲುವಿನ ಸನಿಹ ತಲುಪಿತ್ತು. ಆದರೆ ಕೊನೆಯ ಓವರ್‌ನಲ್ಲಿ ಎರಡು ವಿಕೆಟ್ ಕಳೆದುಕೊಂಡಿದ್ದರಿಂದ ಸೋಲಿಗೆ ಶರಣಾಗಬೇಕಾಯಿತು. 224 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಪಾಕಿಸ್ತಾನ 26 ರನ್ ಗಳಿಸಿದ್ದಾಗ ಸಿದ್ರಾ ಅಮೀನ್ ಅವರ ವಿಕೆಟ್ ಕಳೆದುಕೊಂಡಿತು. ನಾಯಕಿ ಬಿಸ್ಮಾ ಮರೂಫ್ ಶೂನ್ಯಕ್ಕೆ ಮರಳಿದರು.

ಆರಂಭಿಕ ಬ್ಯಾಟರ್ ನಹಿದಾ ಖಾನ್ ಮತ್ತು ನಾಲ್ಕನೇ ಕ್ರಮಾಂಕದ ಒಮೈಮಾ ಸೊಹೇಲ್ ಅವರು ಅಮೋಘ ಜೊತೆಯಾಟದ ಮೂಲಕ ಇನಿಂಗ್ಸ್‌ಗೆ ಚೇತರಿಕೆ ತುಂಬಿದರು. ನಹಿದಾ ಔಟಾದ ನಂತರ ಒಮೈಮಾ ಮತ್ತು ನಿದಾ ದಾರ್ ಜೋಡಿಯ ಆಟ ರಂಗೇರಿತು. ಇವರಿಬ್ಬರ ವಿಕೆಟ್ ಉರುಳಿದ ನಂತರ ಯಾರಿಗೂ ಮಿಂಚಲು ಸಾಧ್ಯವಾಗಲಿಲ್ಲ.

ಮಿಂಚಿದ ಲಾರಾ ವೊಲ್ವಾರ್ಟ್, ಸೂನ್ ಲೂಜ್: ಟಾಸ್ ಗೆದ್ದ ಪಾಕಿಸ್ತಾನ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ತಂಡದ ಸ್ಪಿನ್ನರ್‌ಗಳ ದಾಳಿಗೆ ದಕ್ಷಿಣ ಆಫ್ರಿಕಾ ಬ್ಯಾಟರ್‌ಗಳು ನಲುಗಿದರು. 21 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡ ತಂಡಕ್ಕೆ ಆರಂಭಿಕ ಬ್ಯಾಟರ್ ಲಾರಾ ವೊಲ್ವಾರ್ಟ್ ಮತ್ತು ನಾಲ್ಕನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ನಾಯಕಿ ಸೂನ್ ಲೂಜ್ ಆಸರೆಯಾದರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ 50 ಓವರ್‌ಗಳಲ್ಲಿ 9ಕ್ಕೆ 223 ((ಲಾರಾ ವೊಲ್ವಾರ್ಟ್ 75, ಸೂನ್ ಲೂಜ್ 62, ಕ್ಲೋ ಟ್ರಯಾನ್ 31, ತ್ರಿಶಾ ಚೆಟ್ಟಿ 31; ಫಾತಿಮಾ ಸನಾ 43ಕ್ಕೆ 3, ಫುಲಾಮ್ ಫಾತಿಮಾ 52ಕ್ಕೆ 3). ಪಾಕಿಸ್ತಾನ: 49.5 ಓವರ್‌ಗಳಲ್ಲಿ 217 (ನಹಿದಾ ಖಾನ್ 40, ಒಮೈಮಾ ಸೋಹೈಲ್ 65, ನಿದಾ ಧರ್ 55, ಶಬ್ನಿಮ್ ಇಸ್ಮಾಯಿಲ್ 41ಕ್ಕೆ 3., ಮರಿಜಾನ್ ಕಾಪ್ 43ಕ್ಕೆ2, ಅಯಬೊಂಗ ಖಾಕ 43ಕ್ಕೆ 2). ಫಲಿತಾಂಶ: ದಕ್ಷಿಣ ಆಫ್ರಿಕಾ ಮಹಿಳೆಯರಿಗೆ 6 ರನ್‌ಗಳ ಜಯ

ಬಿಎಐ ಪ್ರಧಾನ ಕಾರ್ಯದರ್ಶಿ ಹುದ್ದೆ: ಹಿಂದೆ ಸರಿದ ಗೋಪಿಚಂದ್

ನವದೆಹಲಿ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ಸಂಸ್ಥೆಯ (ಬಿಎಐ) ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಸ್ಪರ್ಧಿಸುವುದರಿಂದ ರಾಷ್ಟ್ರೀಯ ತಂಡದ ಮುಖ್ಯ ಕೋಚ್ ಪುಲ್ಲೇಲ ಗೋಪಿಚಂದ್ ಹಿಂದೆ ಸರಿಯಲು ನಿರ್ಧರಿಸಿದ್ದು, ಜೂನಿಯರ್ ತಂಡದ ಕೋಚ್ ಸಂಜಯ್ ಮಿಶ್ರಾ ಅವರನ್ನು ಆ ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಲಿದ್ದಾರೆ.

ಉಪಾಧ್ಯಕ್ಷ ಸ್ಥಾನಕ್ಕೆ ಗೋಪಿಚಂದ್ ಶುಕ್ರವಾರ ನಾಮಪತ್ರ ಸಲ್ಲಿಸಿದ್ದು, ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಮಿಶ್ರಾ ಸ್ಪರ್ಧಿಸಿದ್ದಾರೆ. ಇದೇ 25ರಂದು ಬಿಎಐಗೆ ಚುನಾವಣೆಯು ನಿಗದಿಯಾಗಿದೆ.

'ದೀರ್ಘ ಚರ್ಚೆಯ ಬಳಿಕ ಗೋಪಿಚಂದ್ ಅವರು ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದಾರೆ. ಆದರೆ ಸಂಜಯ್ ಮಿಶ್ರಾ ಈಗ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಏಕೈಕ ಆಯ್ಕೆ ಆಗಿದ್ದಾರೆ' ಎಂದು ಹೆಸರು ಹೇಳಬಯಸದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಬ್ಯಾಡ್ಮಿಂಟನ್: ಸೆಮಿಗೆ ಲಕ್ಷ್ಯ

ಮುಲ್ಹೈಮ್ ಆ್ಯನ್ ಡರ್ ರುಹ್ರ್, ಜರ್ಮನಿ (ಪಿಟಿಐ): ಯುವ ಆಟಗಾರ ಲಕ್ಷ್ಯ ಸೇನ್ ಅವರು ಜರ್ಮನ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು. ಭಾರತದವರೇ ಆದ ಎಚ್.ಎಸ್. ಪ್ರಣಯ್ ಎದುರು ಶುಕ್ರವಾರ ರಾತ್ರಿ ನಡೆದ ಪಂದ್ಯದಲ್ಲಿ ಅವರು 21–15, 21–16ರಲ್ಲಿ ಜಯ ಗಳಿಸಿದರು.

ಜನವರಿಯಲ್ಲಿ ಇಂಡಿಯಾ ಓಪನ್ ಟೂರ್ನಿಯ ಚಾಂಪಿಯನ್ ಆಗುವ ಮೂಲಕ ಚೊಚ್ಚಲ ಸೂಪರ್ 500 ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದ ಲಕ್ಷ್ಯ ಸೇನ್ ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದು ಗಮನ ಸೆಳೆದಿದ್ದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 14ನೇ ಸ್ಥಾನದಲ್ಲಿರುವ 20 ವರ್ಷದ ಲಕ್ಷ್ಯ ಕೇವಲ 39 ನಿಮಿಷಗಳಲ್ಲಿ ಪ್ರಣಯ್ ಅವರನ್ನು ಮಣಿಸಿದರು. ಪ್ರಣಯ್ ವಿಶ್ವ ರ‍್ಯಾಂಕಿಂಗ್‌ನಲ್ಲಿ 24ನೇ ಸ್ಥಾನದಲ್ಲಿದ್ದಾರೆ. ಎರಡನೇ ಸುತ್ತಿನ ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕದ ಇಂಡೊನೇಷ್ಯಾ ಆಟಗಾರ ಆ್ಯಂಟನಿ ಸಿನಿಸುಕ ಜಿಂಟಿಂಗ್ ವಿರುದ್ಧ ಜಯ ಗಳಿಸಿದ್ದ ಲಕ್ಷ್ಯ ನಾಲ್ಕರ ಘಟ್ಟದ ಪಂದ್ಯದಲ್ಲಿ ಡೆನ್ಮಾರ್ಕ್‌ನ ವಿಕ್ಟರ್ ಅಕ್ಸೆಲ್ಸನ್ ಎದುರು ಸೆಣಸುವರು.


ಲಕ್ಷ್ಯ ಸೇನ್ –ಪ್ರಜಾವಾಣಿ ಚಿತ್ರ

ಕ್ವಾರ್ಟರ್‌ಫೈನಲ್ ಅಕ್ಸೆಲ್ಸನ್ ಭಾರತದ ಕಿದಂಬಿ ಶ್ರೀಕಾಂತ್ ಎದುರು 21–10, 23–21ರಲ್ಲಿ ಜಯ ಗಳಿಸಿದರು. ಕೇವಲ 35 ನಿಮಿಷಗಳಲ್ಲಿ ಪಂದ್ಯ ಮುಕ್ತಾಯ ಕಂಡಿತ್ತು.

ಫುಟ್‌ಬಾಲ್: ಬೆಂಗಳೂರು ಅಥ್ಲೆಟಿಕ್ಸ್ ಜಯಭೇರಿ

ಬೆಂಗಳೂರು: ಬೆಂಗಳೂರು ಅಥ್ಲೆಟಿಕ್ಸ್ ಎಫ್‌ಸಿ ತಂಡವು ಕೆಎಸ್‌ಎಫ್‌ಎ 'ಸಿ' ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ ಜಯ ಗಳಿಸಿತು.

ಶುಕ್ರವಾರ ನಡೆದ ದಕ್ಷಿಣ ವಲಯದ 'ಬಿ' ಗುಂಪಿನ ಪಂದ್ಯದಲ್ಲಿ ಬೆಂಗಳೂರು ಅಥ್ಲೆಟಿಕ್ಸ್ 4–0ಯಿಂದ ಯೂನಿವರ್ಸಲ್ ಬ್ಲ್ಯೂ ತಂಡವನ್ನು ಮಣಿಸಿತು. ಸಿದ್ದೀಕ್ 7 ಮತ್ತು 16ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ವಿಜೇತ ತಂಡದ ಪರ ಅಂದನ್ ದಾಸ್ (44ನೇ ನಿಮಿಷ) ಮತ್ತು ದೇವಶಿಸ್ ದಾಸ್ (58ನೇ ನಿ.) ತಲಾ ಒಂದು ಗೋಲು ಹೊಡೆದರು.

ಇದೇ ಗುಂಪಿನ ಮತ್ತೊಂದು ಹಣಾಹಣಿಯಲ್ಲಿ ರೇರ್ ಡೇರ್ ಎಫ್‌ಸಿ 4–0ಯಿಂದ ವಿಪಿಎಸ್ ಎಫ್‌ಸಿ ವಿರುದ್ಧ ಜಯಿಸಿತು. ನಂದು ಮೆಮೊರಿಯಲ್ ತಂಡವು ಒಲಿಂಪಿಯನ್ ಎಸ್.ರಾಮನ್ ತಂಡದೊಂದಿಗೆ ಗೋಲುರಹಿತ ಡ್ರಾ ಸಾಧಿಸಿತು. ಬಿಪಿಎಸ್‌ಎಸ್ ಎಫ್‌ಸಿ 1–0ಯಿಂದ ಬೆಂಗಳೂರು ಏರೋಸ್ ಎಫ್‌ಸಿ ಎದುರು ಜಯಿಸಿದರೆ, ಸತ್ಯ ಎಫ್‌ಸಿ ತಂಡವು ಬ್ರದರ್ಸ್ ಎಫ್‌ಸಿಯೊಂದಿಗೆ ಮತ್ತು ಫ್ರೀಲ್ಯಾನ್ಸರ್ ಎಫ್‌ಸಿ– ಸಾಮಂತ್ ಎಫ್‌ಸಿಯೊಂದಿಗೆ ಗೋಲುರಹಿತ ಡ್ರಾ ಸಾಧಿಸಿದವು.

ಅರುಣ್ ಕುಮಾರ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಬಾಷ್ ಎಫ್‌ಸಿ ತಂಡವು ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ (ಬಿಡಿಎಫ್‌ಎ) 'ಸಿ' ಡಿವಿಷನ್ ಫುಟ್‌ಬಾಲ್ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು. ಬಾಷ್ 5–1ರಿಂದ ಯಂಗ್ ಬ್ಲ್ಯೂಸ್ ತಂಡವನ್ನು ಸೋಲಿಸಿತು.

ಟೆನಿಸ್: ನಿಕ್ಷೇಪ್, ತಥಾಗತ್‌ಗೆ ವೈಲ್ಡ್‌ಕಾರ್ಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಆಟಗಾರರಾದ ಬಿ.ಆರ್. ನಿಕ್ಷೇಪ್ ಮತ್ತು ತಥಾಗತ್ ಚರಂತಿಮಠ ಅವರು ರಾಜ್ಯ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಆಯೋಜಿಸುತ್ತಿರುವ ಐಟಿಎಫ್ ಓಪನ್ ಟೆನಿಸ್ ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ.


ಬಿ.ಆರ್. ನಿಕ್ಷೇಪ್

ಭಾನುವಾರ ಅರ್ಹತಾ ಸುತ್ತಿನ ಪಂದ್ಯಗಳೊಂದಿಗೆ ಟೂರ್ನಿಯು ಆರಂಭವಾಗಲಿದೆ. ಭಾರತದ ಮಾಜಿ ಜೂನಿಯರ್ ಅಗ್ರಕ್ರಮಾಂಕದ ಆಟಗಾರ ನಿಕ್ಷೇಪ್ ಜೊತೆಗೆ ಡೇವಿಸ್ ಕಪ್ ಟೂರ್ನಿಯಲ್ಲಿ ಆಡಿದ್ದ ವಿಷ್ಣುವರ್ಧನ್, ಅನಿರುದ್ಧ ಚಂದ್ರಶೇಖರ್ ಅವರಿಗೂ ವೈಲ್ಡ್‌ಕಾರ್ಡ್ ಲಭಿಸಿದೆ.

ಈ ನಾಲ್ವರು ಆಟಗಾರರು ಎಂಟು ಮಂದಿ ಕ್ವಾಲಿಫೈಯರ್ಸ್ ಮತ್ತು ಮುಖ್ಯ ಸುತ್ತಿನಲ್ಲಿರುವ 20 ಮಂದಿಯನ್ನು ಸೇರಿಕೊಳ್ಳಲಿದ್ದಾರೆ. ನಿಕ್ಷೇಪ್ ಮತ್ತು ತಥಾಗತ್ ಅವರು ಮೊದಲ ಬಾರಿ ಐಟಿಎಫ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ಇತ್ತೀಚೆಗೆ ಎರಡು ಲೆಗ್‌ಗಳ ಬೆಂಗಳೂರು ಓಪನ್ ಬಳಿಕ ಮೂರನೇ ಟೂರ್ನಿಯು ಉದ್ಯಾನಗರಿಯಲ್ಲಿ ನಡೆಯುತ್ತಿದೆ. ಒಟ್ಟು ₹ 11.44 ಲಕ್ಷ ಬಹುಮಾನ ಮೊತ್ತದ ಟೂರ್ನಿ ಇದಾಗಿದೆ.

ಸಹಲ್ ಗೋಲು: ಕೇರಳ ಗೆಲುವು

ಐಎಸ್‌ಎಲ್ ಫುಟ್‌ಬಾಲ್ ಸೆಮಿಫೈನಲ್: ಜೆಎಫ್‌ಸಿಗೆ ನಿರಾಸೆ

ಫತೋರ್ಡ (ಪಿಟಿಐ): ಟೂರ್ನಿಯುದ್ದಕ್ಕೂ ಅಮೋಘ ಆಟವಾಡುತ್ತ ಬಂದಿರುವ ಜೆಮ್ಷೆಡ್‌ಪುರ್ ಎಫ್‌ಸಿಯನ್ನು ಕಟ್ಟಿಹಾಕಿದ ಕೇರಳ ಬ್ಲಾಸ್ಟರ್ಸ್ ತಂಡ ಗೆಲುವಿನ ನಗೆ ಸೂಸಿತು.

ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಮೊದಲ ಸೆಮಿಫೈನಲ್‌ನ ಒಂದನೇ ಲೆಗ್ ಪಂದ್ಯದಲ್ಲಿ ಬ್ಲಾಸ್ಟರ್ಸ್ 1–0ಯಿಂದ ಜಯ ಗಳಿಸಿತು. ಈ ಮೂಲಕ ಫೈನಲ್ ಪಂದ್ಯದ ಹಾದಿಯಲ್ಲಿ ಒಂದು ಹೆಜ್ಜೆ ಮುಂದಿಟ್ಟಿತು.

ಎದುರಾಳಿಗಳ ವಿರುದ್ಧ ಆರಂಭದಿಂದಲೇ ಆಧಿಪತ್ಯ ಸ್ಥಾಪಿಸಿದ ಕೇರಳ ಸತತವಾಗಿ ಆಕ್ರಮಣಕ್ಕೆ ಮುಂದಾಯಿತು. ಹೀಗಾಗಿ ಕೆಲವು ಉತ್ತಮ ಅವಕಾಶಗಳೂ ತಂಡಕ್ಕೆ ಲಭಿಸಿದವು. 28ನೇ ನಿಮಿಷದಲ್ಲಿ ಸಹಲ್ ಸಮದ್ ನೀಡಿದ ಮೋಹಕ ಕ್ರಾಸ್ ಮೂಲಕ ಗೋಲು ಗಳಿಸಲು ಉತ್ತಮ ಅವಕಾಶವಿತ್ತು. ಆದರೆ ಅಲ್ವಾರೊ ವಜ್ಕಿಜ್ ಅವರಿಗೆ ಚೆಂಡನ್ನು ನಿಯಂತ್ರಿಸಿ ಗುರಿ ಮುಟ್ಟಿಸಲು ಆಗಲಿಲ್ಲ.

38ನೇ ನಿಮಿಷದಲ್ಲಿ ಸಹಲ್ ಯಶಸ್ಸು ಕಂಡರು. ಥ್ರೋ ಇನ್ ಮೂಲಕ ಲಭಿಸಿದ ಚೆಂಡನ್ನು ಗುರಿಯತ್ತ ಡ್ರಿಬಲ್ ಮಾಡುತ್ತ ಸಾಗಿದ ವಜ್ಕಿಜ್ ಇನ್ನೊಂದು ತುದಿಯಲ್ಲಿ ಸಹಲ್ ಮುನ್ನುಗ್ಗಿ ಬರುತ್ತಿರುವುದನ್ನು ಕಂಡು ಅವರತ್ತ ಚೆಂಡನ್ನು ಸಾಗಿಸಿದರು. ಅಷ್ಟರಲ್ಲಿ ಎದುರಾಳಿ ತಂಡದ ರಿಕಿ ಲಾಲಾವ್ಮಾವ್ಮ ನುಗ್ಗಿ ಬಂದು ಹೆಡ್ ಮಾಡಿ ಚೆಂಡನ್ನು ದೂರ ಅಟ್ಟಲು ಪ್ರಯತ್ನಿಸಿದರು. ಅವರ ಪ್ರಯತ್ನ ಫಲ ಕಾಣುವುದರ ಬದಲು ಸಹಲ್ ಅವರಿಗೆ ಅನುಕೂಲ ಮಾಡಿಕೊಟ್ಟಿತು.


ಗೋಲು ಗಳಿಸಿದ ಸಹಲ್ ಅಬ್ದುಲ್ ಸಮದ್ ಅವರ ಸಂಭ್ರಮ

ಓಡುತ್ತಲೇ ಚೆಂಡನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡ ಸಹಲ್ ಗೋಲುಪೆಟ್ಟಿಗೆಯತ್ತ ನುಗ್ಗಿದರು. ಗೋಲ್ ಕೀಪರ್ ಟಿ.ಪಿ ರೆಹನೇಶ್ ಓಡಿಬಂದು ಅವರನ್ನು ತಡೆಯಲು ಪ್ರಯತ್ನಿಸಿದರು. ಈ ಸಂದರ್ಭದಲ್ಲಿ ಚಾಣಾಕ್ಷ ಆಟವಾಡಿದ ಸಹಲ್ ಚೆಂಡನ್ನು ಪುಟಿಯುವಂತೆ ಮಾಡಿ ತಲೆಯಲ್ಲಿ ಒದ್ದು ಗುರಿ ಮುಟ್ಟಿಸಿದರು. ಈ ಮುನ್ನಡೆಯನ್ನು ಕೊನೆಯ ವರೆಗೂ ಕಾಯ್ದುಕೊಂಡ ಕೇರಳ ಬ್ಲಾಸ್ಟರ್ಸ್ ಗೆಲುವು ತನ್ನದಾಗಿಸಿಕೊಂಡಿತು. 15ರಂದು ನಡೆಯಲಿರುವ ಎರಡನೇ ಲೆಗ್ ಪಂದ್ಯದಲ್ಲಿ ತಂಡಗಳು ಮತ್ತೊಮ್ಮೆ ಮುಖಾಮುಖಿಯಾಗಲಿವೆ.

ಶನಿವಾರ ನಡೆಯಲಿರುವ ಎರಡನೇ ಸೆಮಿಫೈನಲ್‌ನ ಮೊದಲ ಲೆಗ್‌ನಲ್ಲಿ ಹೈದರಾಬಾದ್ ಎಫ್‌ಸಿ ಮತ್ತು ಎಟಿಕೆ ಮೋಹನ್ ಬಾಗನ್ ಸೆಣಸಲಿವೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮಾಸ್ಟರ್ ಬ್ಲಾಸ್ಟರ್ ಮಾರ್ಗದರ್ಶನದಲ್ಲಿ 5 ದಿನಗಳ ತರಬೇತಿ

ಸಚಿನ್ ಗಮನ ಸೆಳೆದ ಶಾಹೀದ್

ಮುಂಬೈ (ಪಿಟಿಐ): ಕೋಲ್ಕತ್ತದ ಐದು ವರ್ಷದ ಪೋರ ಎಸ್.ಕೆ. ಶಾಹೀದ್‌ಗೆ ಸಂತಸ ಈಗ ಮುಗಿಲುಮುಟ್ಟಿದೆ. ತನ್ನ ನೆಚ್ಚಿನ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಮಾರ್ಗದರ್ಶನದಲ್ಲಿ ಐದು ದಿನಗಳ ಕಾಲ ತರಬೇತಿ ಪಡೆದ ಖುಷಿಯಲ್ಲಿ ಶಾಹೀದ್ ಇದ್ದಾರೆ.

ಬೆಳೆಯುವ ಸಿರಿ ಮೊಳಕೆಯಲ್ಲಿ ಎನ್ನುವಂತೆ ಚಿಕ್ಕ ವಯಸ್ಸಿನಲ್ಲಿಯೇ ಚೆಂದವಾಗಿ ಬ್ಯಾಟ್ ಬೀಸುವ ಕಲೆಯನ್ನು ಶಾಹೀದ್ ಕಲಿತಿದ್ದಾರೆ. ಅವರು ಬ್ಯಾಟಿಂಗ್ ಪ್ರಾಕ್ಟಿಸ್ ಮಾಡುವ ವಿಡಿಯೊವೊಂದನ್ನು ಈಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹಾಕಲಾಗಿತ್ತು. ಅದು ಅಪಾರವಾಗಿ ಜನಪ್ರಿಯತೆ ಗಳಿಸಿತ್ತು.

ಹೋದ ತಿಂಗಳು ಈ ವಿಡಿಯೊ ವೀಕ್ಷಿಸಿದ್ದ ಆಸ್ಟ್ರೇಲಿಯಾದ ಸ್ಪಿನ್ ದಿಗ್ಗಜ ಶೇನ್ ವಾರ್ನ್ ಕೂಡ ಮೆಚ್ಚಿಕೊಂಡಿದ್ದರು. ಅವರು ಶಾಹೀದ್‌ಗೆ ಶುಭಹಾರೈಸಿದ್ದರು. ಅಷ್ಟೇ ಅಲ್ಲ; ಸಚಿನ್ ತೆಂಡೂಲ್ಕರ್ ಅವರ ಗಮನವನ್ನೂ ಈ ವಿಡಿಯೊ ಸೆಳೆದಿತ್ತು. ಶಾಹೀದ್‌ಗೆ ಮಿಡಲ್‌ಸೆಕ್ಸ್ ಗ್ಲೋಬಲ್ ಅಕಾಡೆಮಿಯಲ್ಲಿ ಶಾಹೀದ್‌ಗೆ ಅಭ್ಯಾಸ ಮಾಡುವ ಅವಕಾಶ ನೀಡಲಾಯಿತು. ಅಲ್ಲಿ ಐದು ದಿನಗಳವರೆಗೆ ಸ್ವತಃ ಸಚಿನ್ ಹಾಜರಿದ್ದು ಶಾಹೀದ್‌ಗೆ ಮಾರ್ಗದರ್ಶನ ನೀಡಿದರು.


ಸಚಿನ್ ತೆಂಡೂಲ್ಕರ್

'ನನ್ನ ಐದು ವರ್ಷದ ಮಗನಿಗೆ ಸಚಿನ್ ಸರ್ ಎಂದರೆ ಅಚ್ಚುಮೆಚ್ಚು. ಅವರನ್ನು ಭೇಟಿಯಾಗುವ ಆಸೆ ಅವನಿಗಿತ್ತು. ಕ್ರಿಕೆಟಿಗನಾಗುವ ಗುರಿ ಹೊಂದಿದ್ದಾನೆ. ಸಚಿನ್ ಅವರು ನಮಗೆ ಈಗ ಮಾಡಿರುವ ಉಪಕಾರಕ್ಕೆ ಕೃತಜ್ಞತೆ ಹೇಳಲು ಪದಗಳು ಸಾಲುತ್ತಿಲ್ಲ' ಎಂದು ಶಾಹೀದ್ ತಂದೆ ಶೇಖ್ ಶಂಶೇರ್ ಶುಕ್ರವಾರ ಹೇಳಿದರು. ಅವರು ಕ್ಷೌರದಂಗಡಿಯೊಂದರಲ್ಲಿ ಕಾರ್ಯನಿರ್ವಹಿಸುತ್ತಾರೆ.

'ಶಾಹೀದ್ ಬ್ಯಾಟಿಂಗ್ ವಿಡಿಯೊವನ್ನು ನಾವು ಟ್ವಿಟರ್‌ನಲ್ಲಿ ಹಾಕಿದ್ದೆವು. ಅದನ್ನ ಆಸ್ಟ್ರೇಲಿಯಾದ ವಾಹಿನಿ ಫಾಕ್ಸ್ ಕ್ರಿಕೆಟ್ ಕೂಡ ಟ್ವೀಟ್ ಮಾಡಿತು. ಅಲ್ಲದೇ ಸಚಿನ್ ತೆಂಡೂಲ್ಕರ್ ಮತ್ತು ವಾರ್ನ್ ಅವರಿಗೆ ಟ್ಯಾಗ್ ಮಾಡಿತ್ತು. ಇದನ್ನು ಸಚಿನ್ ವೀಕ್ಷಿಸಿದ ನಂತರ ತಂಡವು ನಮ್ಮನ್ನು ಸಂಪರ್ಕಿಸಿತು' ಎಂದು ಶೇಖ್ ನೆನಪಿಸಿಕೊಳ್ಳುತ್ತಾರೆ.

ಶಾಹೀದ್ ಮತ್ತು ಕುಟುಂಬವು ಕೋಲ್ಕತ್ತದಿಂದ ಮುಂಬೈಗೆ ಪ್ರಯಾಣ ಮಾಡಿದ ವೆಚ್ಚವನ್ನು ಸಚಿನ್ ಅವರೇ ಭರಿಸಿದ್ದರು. ಕುಟುಂಬಕ್ಕೆ ಉಳಿದುಕೊಳ್ಳಲು ಅತಿಥಿ ಗೃಹದ ವ್ಯವಸ್ಥೆಯನ್ನೂ ಮಾಡಿಸಿಕೊಟ್ಟಿದ್ದರು.

ಸಂಕ್ಷಿಪ್ತ ಸುದ್ದಿ

ಐಪಿಎಲ್: ರಾಜಸ್ಥಾನ್‌ಗೆ ಮಾಲಿಂಗ್ ವೇಗದ ಬೌಲಿಂಗ್ ಕೋಚ್

ಮುಂಬೈ (ಪಿಟಿಐ): ಶ್ರೀಲಂಕಾ ತಂಡದ ಮಾಜಿ ವೇಗದ ಬೌಲರ್ ಲಸಿತ್ ಮಾಲಿಂಗ ಅವರು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಫ್ರಾಂಚೈಸ್ ರಾಜಸ್ಥಾನ ರಾಯಲ್ಸ್‌ಗೆ ವೇಗದ ಬೌಲಿಂಗ್ ಕೋಚ್ ಆಗಿ ನೇಮಕವಾಗಿದ್ದಾರೆ.


ಮಾಲಿಂಗ

ಇದೇ 26ರಿಂದ ಐಪಿಎಲ್ ಟೂರ್ನಿ ನಡೆಯಲಿದೆ.

ಕಬಡ್ಡಿ: ಪ್ರೀ ಕ್ವಾರ್ಟರ್‌ಗೆ ಕರ್ನಾಟಕ ಮಹಿಳೆಯರು

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಕರ್ನಾಟಕ ಮಹಿಳೆಯರು ರಾಷ್ಟ್ರೀಯ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಪ್ರೀಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಹರಿಯಾಣದಲ್ಲಿ ನಡೆಯುತ್ತಿರುವ ಟೂರ್ನಿಯ ಡಿ ಗುಂಪಿನ ಮೊದಲ ಪಂದ್ಯದಲ್ಲಿ ಕರ್ನಾಟಕ ತಂಡವು 37–36ರಿಂದ ಉತ್ತರ ಪ್ರದೇಶ ಎದುರು, ಬಳಿಕ ಮಣಿಪುರ ವಿರುದ್ಧ 31–27ರಿಂದ ಗೆದ್ದಿತು.

ಮೂರನೇ ಪಂದ್ಯದಲ್ಲಿ ಕರ್ನಾಟಕ ಮಹಿಳೆಯರು 35–22ರಿಂದ ಹರಿಯಾಣ ತಂಡಕ್ಕೆ ಸೋಲುಣಿಸಿದರು.

ಏಪ್ರಿಲ್ 12ರಿಂದ ಬ್ಯಾಸ್ಕೆಟ್‌ಬಾಲ್

ಬೆಂಗಳೂರು: ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯು ಬಾಲಕ ಮತ್ತು ಬಾಲಕಿಯರಿಗಾಗಿ ಸಬ್‌ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ಅನ್ನು ಆಯೋಜಿಸಲಿದೆ.

ಕಂಠೀರವ ಕ್ರೀಡಾಂಗಣದಲ್ಲಿ ಏ. 12ರಿಂದ 18ರವರೆಗೆ ಟೂರ್ನಿ ನಡೆಯಲಿದೆ.

ಚೀನಾ: ಹೆಚ್ಚಿದ ಕೊರೊನಾ ಚಾಂಗ್‌ಚುನ್ ಲಾಕ್‌ಡೌನ್

ಬೀಜಿಂಗ್(ಎಎಫ್‌ಪಿ): ಹೆಚ್ಚು ಕೊರೊನಾ ಪ್ರಕರಣಗಳು ದಾಖಲಾಗುತ್ತಿರುವ, 90 ಲಕ್ಷ ಜನಸಂಖ್ಯೆಯ ಚೀನಾದ ಜಿಲಿನ್ ಪ್ರಾಂತ್ಯದ ಚಾಂಗ್‌ಚುನ್ ನಗರವನ್ನು ಲಾಕ್‌ಡೌನ್ ಮಾಡಲಾಗಿದೆ.

ಹಲವು ಪ್ರಮುಖ ಉದ್ಯಮಗಳು ಈ ನಗರದಲ್ಲಿ ಇವೆ. ಜನರು ಯಾವುದೇ ಕಾರಣಕ್ಕೂ ಮನೆಯಿಂದ ಹೊರಬರಬಾರದು. ಆದರೆ ದೈನಂದಿನ ಅಗತ್ಯ ವಸ್ತುಗಳ ಖರೀದಿಗೆ 2 ದಿನಕ್ಕೊಮ್ಮೆ ಕುಟುಂಬದ ವ್ಯಕ್ತಿಯೊಬ್ಬರು ಮನೆಯಿಂದ ಹೊರಬರಬಹುದು ಎಂದು ಸರ್ಕಾರ ಹೇಳಿದೆ. ಅಲ್ಲದೆ ನಗರದಲ್ಲಿ ಸಾರ್ವಜನಿಕ ಸಾರಿಗೆ ಸೇವೆಗಳು, ಶಾಲೆಗಳು ಮತ್ತು ಉದ್ಯಮಗಳನ್ನು ಬಂದ್ ಮಾಡಲಾಗಿದೆ. ಜತೆಗೆ ಸೋಂಕಿತರ ತ್ವರಿತ ಪತ್ತೆಗೆ ಸಾಮೂಹಿಕ ಪರೀಕ್ಷೆ ನಡೆಸುವಂತೆ ಸೂಚಿಸಲಾಗಿದೆ.

ಚೀನಾದಲ್ಲಿ ಕಳೆದ ಕೆಲ ದಿನಗಳಿಂದ ದೈನಂದಿನ ಸೋಂಕಿತರ ಸಂಖ್ಯೆ 1000ಕ್ಕೂ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಈ ನಿರ್ಬಂಧ ಕ್ರಮಗಳನ್ನು ಜಾರಿಗೊಳಿಸಲಾಗಿದೆ.

ಒಮೈಕ್ರಾನ್ ಭೀತಿ, ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಗೆ ಒತ್ತು: ಒಬ್ಬರಿಂದ ಮತ್ತೊಬ್ಬರಿಗೆ ಬಹುವೇಗವಾಗಿ ಹರಡುವ ಕೊರೊನಾ ವೈರಸ್ಸಿನ ಒಮೈಕ್ರಾನ್ ತಳಿಯ ಪರಿಣಾಮ ಚೀನಾದಲ್ಲಿ ಕೋವಿಡ್ ಸೋಂಕು ಅತಿ ವೇಗವಾಗಿ ವ್ಯಾಪಿಸುತ್ತಿದೆ. ಈ ಹಿನ್ನೆಲೆಯಲ್ಲಿ ಸೋಂಕಿತರ ತ್ವರಿತ ಪತ್ತೆಗಾಗಿ ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಗಳನ್ನು ನಡೆಸಲಾಗುತ್ತದೆ ಎಂದು ಚೀನಾ ಸರ್ಕಾರ ಹೇಳಿದೆ. ತನ್ಮೂಲಕ ಸೋಂಕಿತರ ಪತ್ತೆಗಾಗಿ ಇದೇ ಮೊದಲ ಬಾರಿ ಚೀನಾ ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆ ಮೊರೆ ಹೋದಂತಾಗಲಿದೆ.

ಆನ್‌ಲೈನ್ ಮತ್ತು ಇನ್ನಿತರ ಮಾರಾಟದ ವೇದಿಕೆಗಳ ಮೂಲಕ ಜನಸಾಮಾನ್ಯರು ಸಹ ಕೋವಿಡ್ ಪರೀಕ್ಷಾ ಕಿಟ್‌ಗಳನ್ನು ಖರೀದಿಸಬಹುದಾಗಿದೆ ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗ ತಿಳಿಸಿದೆ.

ಎಫ್‌ಐಎಚ್ ಪ್ರೊ ಲೀಗ್ ಹಾಕಿ: ಜರ್ಮನಿ ವಿರುದ್ಧ ಪಂದ್ಯ

ಜಯದ ತವಕದಲ್ಲಿ ಭಾರತ

ಭುವನೇಶ್ವರ (ಪಿಟಿಐ): ಗೆಲುವಿನ ಲಯಕ್ಕೆ ಮರಳುವ ಬಯಕೆಯೊಂದಿಗೆ ಭಾರತ ಹಾಕಿ ತಂಡ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ ಶನಿವಾರ ಜರ್ಮನಿ ವಿರುದ್ಧ ಸೆಣಸಲಿದೆ. ರ‍್ಯಾಂಕಿಂಗ್‌ನಲ್ಲಿ ಭಾರತಕ್ಕಿಂತ ಮೇಲಿನ ಕ್ರಮಾಂಕದಲ್ಲಿದ್ದರೂ ಜರ್ಮನಿ ಈಚೆಗೆ ಹೆಚ್ಚು ಪಂದ್ಯಗಳನ್ನು ಆಡಿಲ್ಲ. ಇದರಿಂದ ಭಾರತದ ಮಹಿಳೆಯರು ಹುಮ್ಮಸ್ಸಿನಲ್ಲಿದ್ದಾರೆ.



ಸವಿತಾ ಪೂನಿಯಾ –ಪಿಟಿಐ ಚಿತ್ರ

ಪ್ರೊ ಲೀಗ್‌ನಲ್ಲಿ ಇದೇ ಮೊದಲ ಬಾರಿ ಆಡುತ್ತಿರುವ ಭಾರತ ಮಹಿಳಾ ತಂಡ ಮಸ್ಕತ್‌ನಲ್ಲಿ ನಡೆದ ಮೊದಲ ಹಣಾಹಣಿಯಲ್ಲಿ ಚೀನಾವನ್ನು 7–1ರಲ್ಲಿ ಮತ್ತು 2–1ರಲ್ಲಿ ಮಣಿಸಿತ್ತು. ವಿಶ್ವ ಕ್ರಮಾಂಕದಲ್ಲಿ 9ನೇ ಸ್ಥಾನದಲ್ಲಿರುವ ತಂಡ ಆರನೇ ಸ್ಥಾನದಲ್ಲಿರುವ ಸ್ಪೇನ್ ವಿರುದ್ಧ ಮೊದಲ ಪಂದ್ಯದಲ್ಲಿ 2–1ರ ಜಯ ಗಳಿಸಿತ್ತು. ಅದರೆ ಎರಡನೇ ಪಂದ್ಯದಲ್ಲಿ 3–4ರಲ್ಲಿ ಸೋತಿತ್ತು. ಹೀಗಿದ್ದೂ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನ ಗಳಿಸುವಲ್ಲಿ ತಂಡ ಯಶಸ್ವಿಯಾಗಿದೆ. ತಂಡದ ಬಳಿ ಒಟ್ಟಾರೆ 9 ಪಾಯಿಂಟ್‌ಗಳು ಇವೆ.

ಕಳಿಂಗ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ ಪಂದ್ಯದಲ್ಲಿ ಇನ್ನಷ್ಟು ಉತ್ತಮ ಸಾಮರ್ಥ್ಯ ತೋರುವ ನಿರೀಕ್ಷೆಯಲ್ಲಿದೆ. ಗಾಯಾಳು ರಾಣಿ ರಾಂಪಾಲ್ ಬದಲಿಗೆ ತಂಡವನ್ನು ಮುನ್ನಡೆಸುತ್ತಿರುವ ಸವಿತಾ ಅವರಿಗೆ ಮೊದಲ 3 ಪಂದ್ಯಗಳಲ್ಲಿ ತಂಡವನ್ನು ಗೆಲುವಿನ ಹಾದಿಯಲ್ಲಿ ಕೊಂಡೊಯ್ಯಲು ಸಾಧ್ಯವಾಗಿತ್ತು. ವಿಶ್ವ ಕ್ರಮಾಂಕದಲ್ಲಿ 5ನೇ ಸ್ಥಾನದಲ್ಲಿರುವ ಜರ್ಮನಿಯನ್ನು ಎರಡೂ ಲೆಗ್‌ಗಳ ಪಂದ್ಯಗಳಲ್ಲಿ ಸೋಲಿಸಲು ಸಾಧ್ಯವಾದರೆ ತಂಡದ ಉತ್ಸಾಹ ಇನ್ನಷ್ಟು ಹೆಚ್ಚಲಿದೆ.


ಜರ್ಮನಿಗೆ ಈ ಬಾರಿ ಹೆಚ್ಚು ಪಂದ್ಯಗಳಲ್ಲಿ ಆಡಲು ಸಾಧ್ಯವಾಗಲಿಲ್ಲ. ಪ್ರೊ ಲೀಗ್‌ನಲ್ಲಿ ಎರಡು ಪಂದ್ಯಗಳನ್ನಷ್ಟೇ ಅದು ಆಡಿದೆ. ಬೆಲ್ಜಿಯಂ ಎದುರಿನ ಆ ಪಂದ್ಯಗಳಲ್ಲಿ ಕ್ರಮವಾಗಿ 0–1 ಮತ್ತು 1–3ರಲ್ಲಿ ಸೋತಿದೆ. ಆದರೂ ಆ ತಂಡವನ್ನು ಲಘುವಾಗಿ ಪರಿಗಣಿಸಲು ಸಾಧ್ಯವಿಲ್ಲ. ಯಾವುದೇ ಸಂದರ್ಭದಲ್ಲಿ ಪುಟಿದೇಳುವ ಸಾಮರ್ಥ್ಯ ಅದಕ್ಕಿದೆ.

ಆರ್ಚರಿ: ರಾಜ್ಯ ತಂಡದ ಆಯ್ಕೆ ಟ್ರಯಲ್ಸ್ 20ರಂದು

ಬೆಂಗಳೂರು: ರಾಜಸ್ಥಾನದಲ್ಲಿ ಏ. 14ರಿಂದ ನಡೆಯಲಿರುವ ಬಾಲಕರ ಮತ್ತು ಬಾಲಕಿಯರ ಸಬ್ ಜೂನಿಯರ್ ರಾಷ್ಟ್ರೀಯ ಆರ್ಚರಿ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡದ ಆಯ್ಕೆ ಇದೇ 20ರಂದು ನಡೆಯಲಿದೆ.

ಇಂಡಿಯನ್ ರೌಂಡ್, ರಿಕರ್ವ್ ರೌಂಡ್ ಮತ್ತು ಕಾಂಪೌಂಡ್ ರೌಂಡ್ ವಿಭಾಗಗಳಲ್ಲಿ ತಂಡಗಳನ್ನು ಆರಿಸಲಾಗುವುದು. ಕಂಠೀರವ ಕ್ರೀಡಾಂಗಣದ ಆರ್ಚರಿ ಮೈದಾನದಲ್ಲಿ ಬೆಳಿಗ್ಗೆ 8.30ರಿಂದ ಟ್ರಯಲ್ಸ್ ನಡೆಯಲಿದೆ.

ಸಂಸ್ಥೆಯ ಗೌರವ ಕಾರ್ಯದರ್ಶಿ ಟಿ.ಅನಂತರಾಜು ಬಳಿ ಇದೇ 18ರ ಒಳಗೆ ಹೆಸರು ನೊಂದಾಯಿಸಿಕೊಳ್ಳಬೇಕು. ದೂರವಾಣಿ ಸಂಖ್ಯೆ–22275656; ವಿಳಾಸ: ಟಿ.ಅನಂತರಾಜು, ಗೌರವ ಕಾರ್ಯದರ್ಶಿ ಕರ್ನಾಟಕ ಅಮೆಚೂರ್ ಆರ್ಚರಿ ಸಂಸ್ಥೆ ಒಲಿಂಪಿಕ್ ಭವನ ಕಂಠೀರವ ಕ್ರೀಡಾಂಗಣ ಕಸ್ತೂರ್ಬಾ ರಸ್ತೆ ಬೆಂಗಳೂರು 560001.



ಉತ್ತರ ಪ್ರದೇಶ ಚುನಾವಣೆಯಲ್ಲಿ ಬಿ ಜೆ ಪಿ ಭರ್ಜರಿ ಜಯ ಸಾಧಿಸಿದೆ.

19ರಿಂದ ಅಖಿಲ ಭಾರತ ಓಪನ್ ಚೆಸ್ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ಓಪನ್ ಫಿಡೆ ರೇಟೆಡ್ ಚೆಸ್ ಓಪನ್ ಟೂರ್ನಿಯು ಬೆಂಗಳೂರು ಗ್ರಾಮೀಣ ಜಿಲ್ಲಾ ಚೆಸ್ ಸಂಸ್ಥೆಯ (ಬಿಆರ್‌ಡಿಸಿಎ) ಆಶ್ರಯದಲ್ಲಿ ಇದೇ 19ರಿಂದ 20ರವರೆಗೆ ಇಲ್ಲಿ ನಡೆಯಲಿದೆ.

ಆರ್. ಹನುಮಂತ ಅವರ ಸ್ಮರಣಾರ್ಥ, ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್), ಕರ್ನಾಟಕ ರಾಜ್ಯ ಚೆಸ್ ಸಂಸ್ಥೆಗಳ (ಕೆಎಸ್‌ಸಿಎ) ಸಹಯೋಗದಲ್ಲಿ ಹೊಸಕೋಟೆಯ ಸಾಯಿ ಪ್ಯಾಲೇಸ್ ಹಾಲ್‌ನಲ್ಲಿ ನಡೆಯಲಿದೆ.ಒಟ್ಟು ₹ 2 ಲಕ್ಷ ಬಹುಮಾನ ಮೊತ್ತದ ಟೂರ್ನಿಯಲ್ಲಿ ಕರ್ನಾಟಕದ ಮೊದಲ ಗ್ರ್ಯಾಂಡ್‌ಮಾಸ್ಟರ್ ತೇಜ್‌ಕುಮಾರ್ ಎಂ.ಎಸ್., ಅಂತರರಾಷ್ಟ್ರೀಯ ಮಾಸ್ಟರ್, ಉತ್ತರಾಖಂಡದ ಅರ್ಘ್ಯದೀಪ್ ದಾಸ್, ಇಂಡಿಯನ್ ಮಾಸ್ಟರ್ ರಾಮನಾಥನ್ ಬಾಲಸುಬ್ರಮಣಿಯನ್ ಮತ್ತು ಮಹಿಳಾ ಮಾಸ್ಟರ್, ತಮಿಳುನಾಡಿದ ಸಾವಿತ್ರಿಶ್ರೀ ಭಾಗವಹಿಸಲಿದ್ದಾರೆ. 400ಕ್ಕಿಂತ ಹೆಚ್ಚು ಆಟಗಾರರು ಪಾಲ್ಗೊಳ್ಳಲಿದ್ದಾರೆ ಎಂದು ಬಿಆರ್‌ಡಿಸಿಎ ಪ್ರಕಟಣೆ ತಿಳಿಸಿದೆ.

ಹೆಸರು ನೋಂದಾಯಿಸಲು ಇದೇ 16 ಕಡೆಯ ದಿನ. ಹೆಚ್ಚಿನ ಮಾಹಿತಿಗಾಗಿ www.karnatakachess.com. ಅಥವಾ ಬಿಆರ್‌ಡಿಸಿಎ ಕಾರ್ಯದರ್ಶಿ ಚಿದಾನಂದ (ಮೊ. ಸಂ. 9663405589) ಅವರನ್ನು ಸಂಪರ್ಕಿಸಬೇಕು.